ಮಂಗಳವಾರ, ಮಾರ್ಚ್ 15, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 74 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅನುಭವ ಮಂಟಪ
ಮೀಸಲಾತಿ: ಒಬಿಸಿ ಹಿತ ಕಾಯಲು ಕಾಲಹರಣವೇಕೆ?

ರಸ್ತೆ ಗುಂಡಿಯಿಂದ ಉರುಳಿದ ಬೈಕ್: ಯುವಕ ಸಾವು 3

ಚೀನಾ ನೆರವಿಲ್ಲದೆ ಗುರಿ ಸಾಧನೆ: ರಷ್ಯಾ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
56,486 ▲	16,871 ▲	₹53,750 (ಬೆಂಗಳೂರು)	₹70,700 (ಬೆಂಗಳೂರು)	76.54 ▼

60 ವರ್ಷ ದಾಟಿದ ಎಲ್ಲರಿಗೂ 'ಮುನ್ನೆಚ್ಚರಿಕೆ ಡೋಸ್': ಕೇಂದ್ರ ಸರ್ಕಾರ ನಿರ್ಧಾರ

12–14ರ ಮಕ್ಕಳಿಗೆ ನಾಳೆಯಿಂದ ಲಸಿಕೆ



ನವದೆಹಲಿ (ಪಿಟಿಐ): ಕೋವಿಡ್‌-19 ತಡೆ ಲಸಿಕೆ ಕಾರ್ಯಕ್ರಮವನ್ನು ಇನ್ನಷ್ಟು ವಿಸ್ತರಿಸಲು ಕೇಂದ್ರ ಆರೋಗ್ಯ ಸಚಿವಾಲಯ ನಿರ್ಧರಿಸಿದೆ. 12–14 ವರ್ಷ ವಯೋಮಾನದ ಎಲ್ಲ ಮಕ್ಕಳಿಗೂ ಇದೇ 16ರಿಂದ ಲಸಿಕೆ ಹಾಕಿಸಲು ತೀರ್ಮಾನಿಸಲಾಗಿದೆ. 60 ವರ್ಷ ದಾಟಿದ ಎಲ್ಲರಿಗೂ 'ಮುನ್ನೆಚ್ಚರಿಕೆ'ಯಾಗಿ ಮೂರನೇ ಡೋಸ್‌ ಹಾಕಲಾಗುವುದು. ಈವರೆಗೆ, 60 ವರ್ಷ ಮೇಲ್ಪಟ್ಟ, ಗಂಭೀರ ಕಾಯಿಲೆ ಇದ್ದವರಿಗೆ ಮಾತ್ರ ಲಸಿಕೆ ಹಾಕಿಸಿಕೊಳ್ಳಲು ಅವಕಾಶ ಇತ್ತು.

ಹೈದರಾಬಾದ್‌ನ ಬಯೊಲಾಜಿಕಲ್‌ ಇ. ಸಂಸ್ಥೆಯು ಅಭಿವೃದ್ಧಿಪಡಿಸಿರುವ 'ಕೊರ್ಬೆವ್ಯಾಕ್ಸ್‌' ಲಸಿಕೆಯನ್ನು ಮಕ್ಕಳಿಗೆ ಹಾಕಲಾಗುವುದು. 2008, 2009 ಹಾಗೂ 2010ರಲ್ಲಿ ಜನಿಸಿದ ಮಕ್ಕಳು ಲಸಿಕೆ ಪಡೆಯಲು ಅರ್ಹರಾಗಿದ್ದಾರೆ.

ಟ್ವೀಟ್‌ ಮಾಡಿರುವ ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್‌ ಮಾಂಡವೀಯ ಅವರು, 'ಮಕ್ಕಳು ಸುರಕ್ಷಿತವಾಗಿದ್ದರೆ, ದೇಶ ಸುರಕ್ಷಿತವಾಗಿದ್ದಂತೆ. 12ರಿಂದ 14 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಮಾರ್ಚ್‌ 16ರಿಂದ ಲಸಿಕೆ ನೀಡಿಕೆ ಆರಂಭವಾಗುತ್ತದೆ ಎಂಬುದನ್ನು ಘೋಷಿಸಲು ಸಂತೋಷವಾಗುತ್ತಿದೆ' ಎಂದಿದ್ದಾರೆ.

ಅರ್ಹ ಮಕ್ಕಳು ಹಾಗೂ ಹಿರಿಯರು ಲಸಿಕೆ ಪಡೆಯುವಂತೆ ಸಚಿವರು ಮನವಿ ಮಾಡಿದ್ದಾರೆ.

ಕಳೆದ ವರ್ಷದ ಜನವರಿ 16ರಂದು ಮೊದಲ ಹಂತದ ಲಸಿಕೆ ಕಾರ್ಯಕ್ರಮ ಆರಂಭವಾಗಿತ್ತು. ಆರೋಗ್ಯ ಕಾರ್ಯಕರ್ತರು ಲಸಿಕೆ ಪಡೆದಿದ್ದರು. ಕೋವಿಡ್‌ ನಿರ್ವಹಣೆಯಲ್ಲಿ ತೊಡಗಿಸಿಕೊಂಡಿದ್ದ ಮುಂಚೂಣಿ ಕಾರ್ಯಕರ್ತರಿಗೆ ಲಸಿಕೆ ನೀಡುವ ಕಾರ್ಯಕ್ರಮ ಫೆ. 2ರಿಂದ ಶುರುವಾಗಿತ್ತು. 60 ವರ್ಷ ಮೀರಿದವರು ಹಾಗೂ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವ 45 ವರ್ಷ ಮೇಲ್ಪಟ್ಟವರಿಗೆ ಮಾರ್ಚ್‌ 1ರಿಂದ ಲಸಿಕೆ ನೀಡಲು ಆರಂಭಿಸಲಾಗಿತ್ತು. 18 ವರ್ಷ ಮೀರಿದ ಎಲ್ಲರಿಗೂ ಲಸಿಕೆ ನೀಡುವುದಾಗಿ ಘೋಷಿಸಿದ್ದ ಸರ್ಕಾರ, ಮೇ 1ರಂದು ಇದಕ್ಕೆ ಚಾಲನೆ ನೀಡಿತ್ತು. 15ರಿಂದ 18 ವರ್ಷದೊಳಗಿನವರಿಗೆ ಲಸಿಕೆ ನೀಡಿಕೆ ಜನವರಿ 3ರಿಂದ ಆರಂಭಿಸಲಾಯಿತು.


ಓಮೈಕ್ರಾನ್‌ ರೂಪಾಂತರಿ ವೈರಾಣುವಿನಿಂದ ಸೋಂಕು ಪ್ರಸರಣಕ್ಕೆ ತಡೆ ಹಾಕಲು ಆರೋಗ್ಯ ಕಾರ್ಯಕರ್ತರು, ಮುಂಚೂಣಿ ಕಾರ್ಯಕರ್ತರು ಹಾಗೂ ವಿವಿಧ ಕಾಯಿಲೆಗಳಿಂದ ಬಳಲುತ್ತಿರುವ 60 ವರ್ಷ ಮೇಲ್ಪಟ್ಟವರಿಗೆ 'ಮುನ್ನೆಚ್ಚರಿಕೆ ಡೋಸ್‌' ನೀಡುವ ಕಾರ್ಯಕ್ರಮವನ್ನು ಇದೇ ಜನವರಿ 10ರಿಂದ ಶುರು ಮಾಡಲಾಗಿತ್ತು.

12–14ರ ವಯೋಮಾನದ ಮಕ್ಕಳ ಸಂಖ್ಯೆ 7.11 ಕೋಟಿ ಇದೆ. 12–18ರ ವಯೋಮಾನದ ಮಕ್ಕಳಿಗೆ ಕೊರ್ಬೆವ್ಯಾಕ್ಸ್‌ ಲಸಿಕೆಯ ತುರ್ತು ಬಳಕೆಗೆ ಕೇಂದ್ರ ಔಷಧ ನಿಯಂತ್ರಣ ಸಂಸ್ಥೆಯು ಕಳೆದ ತಿಂಗಳು ಅನುಮತಿ ನೀಡಿತ್ತು.

ಟೆಕ್ಸಾಸ್‌ ಚಿಲ್ಡ್ರನ್ಸ್‌ ಹಾಸ್ಪಿಟಲ್‌ ಮತ್ತು ಬೈಲರ್‌ ಕಾಲೇಜ್‌ ಆಫ್‌ ಮೆಡಿಸಿನ್‌ನ ಸಹಭಾಗಿತ್ವದಲ್ಲಿ ಕೊರ್ಬೆವ್ಯಾಕ್ಸ್‌ ಲಸಿಕೆ ಅಭಿವೃದ್ಧಿಪಡಿಸಲಾಗಿದೆ. ಇದು ವುಹಾನ್‌ ರೂಪಾಂತರ ತಳಿಯ ವಿರುದ್ಧ ಶೇ 90ರಷ್ಟು ಪರಿಣಾಮಕಾರಿಯಾಗಿದೆ. ಸೋಂಕು ಲಕ್ಷಣಗಳನ್ನು ತಡೆಯುವಲ್ಲಿ ಶೇ 80ರಷ್ಟು ಪರಿಣಾಮಕಾರಿಯಾಗಿದೆ. ಕೋವಿಶೀಲ್ಡ್‌ಗೆ ಹೋಲಿಸಿದರೆ ಪ್ರತಿಕೂಲ ಪರಿಣಾಮಗಳು ಶೇ 50ರಷ್ಟು ಕಡಿಮೆ ಎಂದು ಟೆಕ್ಸಾಸ್‌ ಚಿಲ್ಡ್ರನ್ಸ್‌ ಹಾಸ್ಪಿಟಲ್‌ ಹೇಳಿದೆ.

ಶೇ 84ರಷ್ಟು ಮಂದಿಗೆ ಲಸಿಕೆ: ವಯಸ್ಕ ಜನಸಮುದಾಯದಲ್ಲಿ 94.47 ಕೋಟಿ ಜನರು ಲಸಿಕೆ ಹಾಕಿಸಿಕೊಳ್ಳಲು ಅರ್ಹರಾಗಿದ್ದಾರೆ. ಅವರಲ್ಲಿ ಶೇ 84ರಷ್ಟು ಮಂದಿಗೆ ಲಸಿಕೆಯ ಎರಡೂ ಡೋಸ್‌ ಹಾಕಲಾಗಿದೆ. 15–18 ವರ್ಷ ವಯೋಮಾನದ ಮಕ್ಕಳ ಸಂಖ್ಯೆ 7.4 ಕೋಟಿ ಇದೆ. ಅವರಲ್ಲಿ ಶೇ 50ರಷ್ಟು ಮಕ್ಕಳಿಗೆ ಎರಡೂ ಡೋಸ್‌ ಲಸಿಕೆ ಹಾಕಲಾಗಿದೆ ಎಂದು ಸರ್ಕಾರ ಮಾಹಿತಿ ನೀಡಿದೆ. ಲಸಿಕೆಯ ಮೂರನೇ ಡೋಸ್‌ ಪಡೆಯಲು ಅರ್ಹರಾದ 60 ವರ್ಷ ಮೇಲ್ಪಟ್ಟವರ ಸಂಖ್ಯೆ 13.75 ಕೋಟಿ.

ಪರಿಹಾರಕ್ಕಾಗಿ ನಕಲಿ ಪ್ರಮಾಣಪತ್ರ: 'ಸುಪ್ರೀಂ' ಅತೃಪ್ತಿ



ಕೋವಿಡ್‌ನಿಂದ ಮೃತಪಟ್ಟ ವ್ಯಕ್ತಿಯ ಕುಟುಂಬಕ್ಕೆ ನೀಡುವ ₹50 ಸಾವಿರ ಪರಿಹಾರಕ್ಕಾಗಿ ನಕಲಿ ಪ್ರಮಾಣಪತ್ರ ನೀಡಲಾಗುತ್ತಿದೆ ಎಂಬುದರ ಬಗ್ಗೆ ಸುಪ್ರೀಂ ಕೋರ್ಟ್‌ ತೀವ್ರ ಕಳವಳ ವ್ಯಕ್ತಪಡಿಸಿದೆ. 'ನಮ್ಮ ನೈತಿಕತೆಯು ಇಷ್ಟೊಂದು ಕೆಳ ಮಟ್ಟಕ್ಕೆ ಕುಸಿಯಬಹುದು ಎಂಬುದನ್ನು ನಾವು ಊಹಿಸಿಯೇ ಇರಲಿಲ್ಲ' ಎಂದು ನ್ಯಾಯಮೂರ್ತಿಗಳಾದ ಎಂ.ಆರ್‌. ಶಾ ಮತ್ತು ಬಿ.ವಿ. ನಾಗರತ್ನ ಅವರಿದ್ದ ಪೀಠವು ಹೇಳಿದೆ.

ಪರಿಹಾರ ಪಡೆಯುವುದಕ್ಕಾಗಿ ನಕಲಿ ಪ್ರಮಾಣಪತ್ರ ನೀಡಿಕೆ ಬಗ್ಗೆ ಮಹಾಲೇಖಪಾಲರಿಂದ ತನಿಖೆಗೆ ಆದೇಶಿಸುವ ಸಾಧ್ಯತೆಯೂ ಇದೆ. ಅಧಿಕಾರಿಗಳು ಕೂಡ ಹಗರಣದಲ್ಲಿ ಶಾಮೀಲಾಗಿದ್ದರೆ ಅದು ಅತ್ಯಂತ ಗಂಭೀರ ವಿಚಾರ ಎಂದು ಪೀಠ ಹೇಳಿದೆ. ಅಧಿಕೃತವಾಗಿ ದೂರು ಸಲ್ಲಿಸುವ ಸುಳಿವನ್ನು ಕೇಂದ್ರ ಸರ್ಕಾರವು ಕಳೆದ ವಿಚಾರಣೆಯ ವೇಳೆಯೇ ನೀಡಿತ್ತು. ಆದರೆ, ಇನ್ನೂ ದೂರು ಸಲ್ಲಿಸಿಲ್ಲ ಎಂದು ಪೀಠವು ಅಸಮಾಧಾನವನ್ನೂ ವ್ಯಕ್ತಪಡಿಸಿತು.

ದೂರು ಸಲ್ಲಿಸಲು ಸಾಲಿಸಿಟರ್‌ ಜನರಲ್‌ ತುಷಾರ್‌ ಮೆಹ್ತಾ ಅವರಿಗೆ ಮಂಗಳವಾರದವರೆಗೆ ಸಮಯ ನೀಡಲಾಗಿದೆ.

ಹಿಜಾಬ್‌ ತೀರ್ಪು ಇಂದು ನಿಷೇಧಾಜ್ಞೆ ಜಾರಿ

ಬೆಂಗಳೂರು: ಹಿಜಾಬ್‌ ನಿರ್ಬಂಧ ವಿವಾದಕ್ಕೆ ಸಂಬಂಧಿಸಿದಂತೆ ಕಾಯ್ದಿರಿಸಲಾಗಿರುವ ತೀರ್ಪನ್ನು ಹೈಕೋರ್ಟ್‌, ಮಂಗಳವಾರ ಬೆಳಿಗ್ಗೆ 10.30ಕ್ಕೆ ಪ್ರಕಟಿಸಲಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಹಲವೆಡೆ ನಿಷೇಧಾಜ್ಞೆ ಜಾರಿ ಮಾಡಲಾಗಿದೆ. ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಕಲಬುರಗಿ ಜಿಲ್ಲೆಗಳಲ್ಲಿ ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ.

ಹಿಜಾಬ್‌ ಧರಿಸಿ ತರಗತಿ ಪ್ರವೇಶಿಸುವುದನ್ನು ನಿರ್ಬಂಧಿಸಿದ್ದ ಕೆಲ ಶಾಲೆ- ಕಾಲೇಜು ಆಡಳಿತ ಮಂಡಳಿಗಳ ನಿರ್ಧಾರ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ರಿಟ್‌ ಅರ್ಜಿ ದಾಖಲಿಸಲಾಗಿತ್ತು. ಈ ಬಗ್ಗೆ ವಿಚಾರಣೆ ನಡೆಸಿದ್ದ ಹೈಕೋರ್ಟ್‌ ಮುಖ್ಯ ನ್ಯಾಯಮೂರ್ತಿ ಋತುರಾಜ್‌ ಅವಸ್ಥಿ ನೇತೃತ್ವದ ಮೂವರು ಸದಸ್ಯರ ವಿಸ್ತೃತ ನ್ಯಾಯಪೀಠ ಫೆ. 25ಕ್ಕೆ ವಿಚಾರಣೆ ಮುಗಿಸಿ, ತೀರ್ಪು ಕಾಯ್ದಿರಿಸಿತ್ತು.

ತೀರ್ಪು ಪ್ರಕಟಣೆಗೆ ಸಮಯ ನಿಗದಿ ಮಾಡುತ್ತಿದ್ದಂತೆ ಬೆಂಗಳೂರು ನಗರ ಹಾಗೂ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ನಿಷೇಧಾಜ್ಞೆ ಜಾರಿ ಮಾಡಿ ಆಯಾ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ. ಸಂಭ್ರಮಾಚರಣೆ ನಿರ್ಬಂಧಿಸಲಾಗಿದೆ. ಪಟಾಕಿಗಳನ್ನು ಸುಡುವುದು, ಸರ್ಕಾರಿ ಬಸ್‌ ಅಥವಾ ಇತರ ವಾಹನಗಳಿಗೆ ಅಡೆತಡೆ ಉಂಟು ಮಾಡುವುದನ್ನು ಪ್ರತಿಬಂಧಿಸಲಾಗಿದೆ.

ಶಿವಮೊಗ್ಗ, ಬೆಂಗಳೂರಿನಲ್ಲಿ ಇದೇ 21ರವರೆಗೆ, ಮೈಸೂರಿನಲ್ಲಿ 20ರವರೆಗೆ, ಕಲಬುರಗಿ, ದಾವಣಗೆರೆಯಲ್ಲಿ 19ರವರೆಗೆ, ಕೊಡಗಿನಲ್ಲಿ 18ರವರೆಗೆ, ಚಿತ್ರದುರ್ಗದಲ್ಲಿ 16ರವರೆಗೆ ನಿಷೇಧಾಜ್ಞೆ ಜಾರಿಯಲ್ಲಿರುತ್ತದೆ. ಬೆಳಗಾವಿ, ಬಾಗಲಕೋಟೆ, ಧಾರವಾಡ ಜಿಲ್ಲೆಗಳಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದ್ದು, ಮುಂದಿನ ಆದೇಶದವರೆಗೆ ಜಾರಿಯಲ್ಲಿರಲಿದೆ. ಚಾಮರಾಜನಗರ, ಹಾಸನ, ರಾಮನಗರ, ಚಿಕ್ಕಬಳ್ಳಾಪುರ, ತುಮಕೂರು ಜಿಲ್ಲೆಗಳಲ್ಲೂ ನಿಷೇಧಾಜ್ಞೆ ಜಾರಿಯಾಗಿದೆ.

ಕಡಿಮೆ ದರದಲ್ಲಿ ರಷ್ಯಾ ತೈಲ: ಪ್ರಸ್ತಾವ ಪರಿಗಣಿಸುತ್ತಿರುವ ಭಾರತ



ನವದೆಹಲಿ (ರಾಯಿಟರ್ಸ್‌): ಕಚ್ಚಾ ತೈಲ ಮತ್ತು ಇತರ ಉತ್ಪನ್ನಗಳನ್ನು ಭಾರತಕ್ಕೆ ರಿಯಾಯಿತಿ ದರದಲ್ಲಿ ಒದಗಿಸುವುದಾಗಿ ರಷ್ಯಾ ಇರಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ ಎಂದು ಕೇಂದ್ರ ಸರ್ಕಾರದ ಇಬ್ಬರು ಅಧಿಕಾರಿಗಳು ತಿಳಿಸಿದ್ದಾರೆ. ಭಾರತವು ಖರೀದಿಸುವ ಉತ್ಪನ್ನಗಳಿಗೆ ಹಣ ಪಾವತಿಯನ್ನು ರೂಪಾಯಿಯಲ್ಲಿ ಮಾಡಬಹುದು ಎಂದೂ ರಷ್ಯಾ ಹೇಳಿದೆ.

ರಷ್ಯಾ ದೇಶವು ಉಕ್ರೇನ್‌ ವಿರುದ್ಧ ಸಮರ ಸಾರಿದ ನಂತರದಲ್ಲಿ ಪಾಶ್ಚಿಮಾತ್ಯ ದೇಶಗಳು ಕಠಿಣ ಆರ್ಥಿಕ ನಿರ್ಬಂಧಗಳನ್ನು ಹೇರಿವೆ. ಭಾರತವು ತನ್ನ ಅಗತ್ಯದ ಕಚ್ಚಾ ತೈಲದ ಪೈಕಿ ಶೇ 80ರಷ್ಟನ್ನು ಆಮದು ಮಾಡಿಕೊಳ್ಳುತ್ತದೆ. ಈ ಪೈಕಿ ಶೇ 2ರಿಂದ ಶೇ 3ರಷ್ಟು ಕಚ್ಚಾ ತೈಲವು ರಷ್ಯಾದಿಂದ ಪೂರೈಕೆ ಆಗುತ್ತದೆ. ಆದರೆ, ಈ ವರ್ಷದಲ್ಲಿ ಕಚ್ಚಾ ತೈಲ ಬೆಲೆಯು ಶೇ 40ರಷ್ಟು ಹೆಚ್ಚಳವಾಗಿದ್ದು, ಕಚ್ಚಾ ತೈಲಕ್ಕಾಗಿ ಮಾಡುವ ವೆಚ್ಚವು ಕಡಿಮೆ ಆಗುವುದಾದಲ್ಲಿ ರಷ್ಯಾದಿಂದ ಏಕೆ ಅದನ್ನು ಖರೀದಿಸಬಾರದು ಎಂಬ ಆಲೋಚನೆ ಕೇಂದ್ರ ಸರ್ಕಾರಕ್ಕೆ ಇದೆ.

'ರಷ್ಯಾ ದೇಶವು ಕಚ್ಚಾ ತೈಲ ಮತ್ತು ಇತರ ಉತ್ಪನ್ನಗಳನ್ನು ಭಾರಿ ರಿಯಾಯಿತಿ ದರದಲ್ಲಿ ಭಾರತಕ್ಕೆ ಮಾರಾಟ ಮಾಡಲು ಮುಂದೆ ಬಂದಿದೆ. ಅದನ್ನು ಖರೀದಿಸಲು ನಾವು ಉತ್ಸುಕರಾಗಿದ್ದೇವೆ. ಆದರೆ, ಟ್ಯಾಂಕರ್‌, ವಿಮಾ ಸುರಕ್ಷೆಯಂತಹ ವಿಷಯಗಳನ್ನು ಪರಿಗಣಿಸಬೇಕಿದೆ. ಇವು ಇತ್ಯರ್ಥಗೊಂಡ ನಂತರದಲ್ಲಿ ನಾವು ರಿಯಾಯಿತಿ ದರದ ಕೊಡುಗೆಯನ್ನು ಪರಿಗಣಿಸುತ್ತೇವೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಆರ್ಥಿಕ ನಿರ್ಬಂಧಗಳ ಕುಣಿಕೆಯಿಂದ ತಪ್ಪಿಸಿಕೊಳ್ಳಲು ಕೆಲವು ಅಂತರರಾಷ್ಟ್ರೀಯ ವ್ಯಾಪಾರಿಗಳು ರಷ್ಯಾದ ಕಚ್ಚಾ ತೈಲ ಖರೀದಿಯಿಂದ ದೂರ ಸರಿದಿದ್ದಾರೆ. ಆದರೆ, ನಿರ್ಬಂಧಗಳು ಭಾರತವು ರಷ್ಯಾದಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುವುದಕ್ಕೆ ಅಡ್ಡಿಯಾಗುವುದಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ. ತೈಲ ಮತ್ತು ಇತರ ಉತ್ಪನ್ನಗಳಿಗೆ ರೂಪಾಯಿ–ರೂಬಲ್‌ ಮೂಲಕ ಪಾವತಿ ಮಾಡುವ ವ್ಯವಸ್ಥೆ ರೂಪಿಸುವ ಯತ್ನಗಳು ನಡೆದಿವೆ.

10ನೇ ಪುಟ ನೋಡಿ

ಟೆಸ್ಟ್‌ ಕ್ರಿಕೆಟ್‌: ಭಾರತಕ್ಕೆ ಸರಣಿ

ಬೆಂಗಳೂರು: ರೋಹಿತ್‌ ಶರ್ಮಾ ನಾಯಕತ್ವದ ಭಾರತ ಕ್ರಿಕೆಟ್‌ ತಂಡ ಶ್ರೀಲಂಕಾ ಎದುರಿನ ಪಿಂಕ್‌ ಬಾಲ್‌ ಟೆಸ್ಟ್‌ ಪಂದ್ಯದಲ್ಲಿ ಸೋಮವಾರ 238 ರನ್‌ಗಳಿಂದ ಜಯ ಸಾಧಿಸಿತು. ಈ ಮೂಲಕ ಎರಡು ಪಂದ್ಯಗಳ ಸರಣಿಯನ್ನು 2–0 ಅಂತರದಲ್ಲಿ ತನ್ನದಾಗಿಸಿಕೊಂಡಿತು.

ವಿಕೆಟ್‌ ಕೀಪರ್‌ ಬ್ಯಾಟರ್‌ ರಿಷಭ್‌ ಪಂತ್‌ ಸರಣಿಯ ಶ್ರೇಷ್ಠ ಆಟಗಾರ ಎನಿಸಿಕೊಂಡರು.

11

ಏರ್ ಇಂಡಿಯಾ ಕಂಪನಿಗೆ ಎನ್. ಚಂದ್ರಶೇಖರನ್ ಅಧ್ಯಕ್ಷ 10

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಮಂಗಳವಾರದ ಉಷ್ಣಾಂಶ 34° ಗರಿಷ್ಠ 20° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮಂಜು ಮುಸುಕಿದ ವಾತಾವರಣ. ನಂತರ ಶುಭ್ರ ಆಕಾಶ ಇರಲಿದೆ.

ಹವಾಮಾನ: ಬುಧವಾರ 34° 20° | ಗುರುವಾರ 34 20 | ಶುಕ್ರವಾರ 34° 20°

ಸೂರ್ಯೋದಯ: 6 : 68 ಸೂರ್ಯಾಸ್ತ : 6:30 ಚಂದ್ರೋದಯ: ಮ. 3:14 ಚಂದ್ರಾಸ್ತ: ರಾ. 3:36 | ಸೋಮವಾರದ ಹವಾಮಾನ : ಗರಿಷ್ಠ 33° ಕನಿಷ್ಠ 19°

ಇಸ್ರೊ: ಎಸ್‌ಎಸ್‌ಎಲ್‌ವಿ ಪರೀಕ್ಷಾರ್ಥ ಪ್ರಯೋಗ ಯಶಸ್ವಿ

ಬೆಂಗಳೂರು (ಪಿಟಿಐ): ಇಸ್ರೊದ ಸಣ್ಣ ಉಪಗ್ರಹ ಉಡಾವಣಾ ವಾಹನಕ್ಕಾಗಿ (ಎಸ್‌ಎಸ್‌ಎಲ್‌ವಿ) ಹೊಸದಾಗಿ ಅಭಿವೃದ್ಧಿ ಪಡಿಸಿರುವ ವೇಗವರ್ಧಕ ಸಹಿತ ಘನ ಬೂಸ್ಟರ್ ಮೋಟಾರ್‌ನ (ಎಸ್‌ಎಸ್‌1) ಪರೀಕ್ಷಾರ್ಥ ಪ್ರಯೋಗವು ಸೋಮವಾರ ಯಶಸ್ವಿಯಾಗಿ ನೆರವೇರಿತು. 'ಆಂಧ್ರಪ್ರದೇಶದ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಲ್ಲಿ ಈ ಪ್ರಯೋಗ ನೆರವೇರಿತು' ಎಂದು ಇಸ್ರೊ ಪ್ರಕಟಣೆಯಲ್ಲಿ ತಿಳಿಸಿದೆ.

ಜಾರಕಿಹೊಳಿ ಪ್ರಕರಣ: ವಿಚಾರಣೆ ಮುಂದಕ್ಕೆ

ಬೆಂಗಳೂರು: ಮಾಜಿ ಸಚಿವ ರಮೇಶ ಜಾರಕಿಹೊಳಿ ಸಿಡಿ ಪ್ರಕರಣದ ತನಿಖೆ ನಡೆಸಿದ್ದ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿದ ಆದೇಶ ಮತ್ತು ಬ್ಲ್ಯಾಕ್‌ಮೇಲ್ ಆರೋಪ ಕುರಿತಂತೆ ಜಾರಕಿಹೊಳಿ ದೂರು ಆಧರಿಸಿ ಸದಾಶಿವನಗರ ಪೊಲೀಸರು ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಬೇಕು ಎಂದು ಸಂತ್ರಸ್ತೆ ಸಲ್ಲಿಸಿರುವ ಅರ್ಜಿಗಳ ವಿಚಾರಣೆಯನ್ನು ಹೈಕೋರ್ಟ್ ಇದೇ 22ಕ್ಕೆ ಮುಂದೂಡಿದೆ.

ಈ ಸಂಬಂಧ ಸಂತ್ರಸ್ತೆ ಸಲ್ಲಿಸಿರುವ ಎರಡು ಪ್ರತ್ಯೇಕ ಅರ್ಜಿಗಳನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆಗೆ ಕೈಗೆತ್ತಿಕೊಂಡಿತು.

ವಿಚಾರಣೆ ವೇಳೆ ಸಂತ್ರಸ್ತೆಯ ಪರ ವಕೀಲರು ಒಂದು ವಾರ ಕಾಲ ವಿಚಾರಣೆ ಮುಂದೂಡುವಂತೆ ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ವಿಚಾರಣೆಯನ್ನು ಇದೇ 22ಕ್ಕೆ ಮುಂದೂಡಿದೆ.

ಉಸ್ತುವಾರಿ ಸಮಿತಿ ಅಭಿಪ್ರಾಯ: ರೋಹಿಣಿ ಸಿಂಧೂರಿಗೆ ಕ್ಲೀನ್ ಚಿಟ್

ಚಾಮರಾಜನಗರ ದುರಂತ: ದಿವ್ಯನಿರ್ಲಕ್ಷ್ಯ ಕಾರಣ

• ಬಿ.ಎಸ್.ಷಣ್ಮುಖಪ್ಪ

ಪ್ರಜಾವಾಣಿ ವಿಶೇಷ

ಬೆಂಗಳೂರು: 'ಚಾಮರಾಜನಗರದಲ್ಲಿ 2021ರ ಮೇ 2ರಂದು ಮಧ್ಯರಾತ್ರಿ ಹಾಗೂ 3ರ ಬೆಳಗಿನ ಜಾವದಲ್ಲಿ ಕೋವಿಡ್ ಸಾಂಕ್ರಾಮಿಕದಿಂದ ಬಳಲುತ್ತಿದ್ದ 24 ಒಳರೋಗಿಗಳ ಸಾವಿಗೆ ಸರ್ಕಾರದಲ್ಲಿ ಆಮ್ಲಜನಕ ಪೂರೈಕೆ ವಿಚಾರದಲ್ಲಿ ದಿವ್ಯ ನಿರ್ಲಕ್ಷ್ಯ ತೋರಲಾಗಿದೆ. ಈ ಅಂಶವೇ ಅವರೆಲ್ಲರ ಸಾವಿಗೆ ಮುಖ್ಯ ಕಾರಣ ಎಂಬುದು ದೃಗ್ಗೋಚರವಾಗಿದೆ' ಎಂದು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ರೂಪಿಸಿದ್ದ ಉಸ್ತುವಾರಿ ಸಮಿತಿ ಅಭಿಪ್ರಾಯಪಟ್ಟಿದೆ.

ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎ.ಎನ್.ವೇಣುಗೋಪಾಲಗೌಡ ಅವರ ಅಧ್ಯಕ್ಷತೆಯಲ್ಲಿ ರೂಪಿಸಲಾಗಿದ್ದ ಈ ಸಮಿತಿಯು ತನ್ನ ವರದಿಯಲ್ಲಿ, 'ಮೈಸೂರು ಜಿಲ್ಲೆಯ ಅಗತ್ಯ ಪೂರೈಸಿದ ನಂತರ ಉಳಿದ ಜಿಲ್ಲೆಗಳಿಗೆ ಆಮ್ಲಜನಕದ ಸಿಲಿಂಡರ್ ನೀಡಬೇಕು ಎಂದು ರೋಹಿಣಿ ಸಿಂಧೂರಿ ಆಮ್ಲಜನಕ ಭರ್ತಿ ಘಟಕಗಳಿಗೆ ನಿರ್ದೇಶಿಸಿದ್ದರು ಎಂಬ ರೂಢಿಗಳಲ್ಲಿ ಯಾವುದೇ ಹುರುಳಿಲ್ಲ ಮತ್ತು ಅಂದಿನ ಸಮಯಕ್ಕೆ ಅವರು ಸೂಕ್ತವಾಗಿ ಸ್ಪಂದಿಸಿಲ್ಲ ಎಂಬ ಆರೋಪಗಳಲ್ಲಿ ಯಾವುದೇ ಹುರುಳಿಲ್ಲ' ಎಂದು ಸ್ಪಷ್ಟಪಡಿಸಿದೆ.

'ಇದೇ ವೇಳೆ ಸಮಿತಿಯು ಹಲವು ಶಿಫಾರಸುಗಳನ್ನು ವರದಿಯಲ್ಲಿ ಉಲ್ಲೇಖಿಸಿದ್ದು, ಈ ಘಟನೆಯಲ್ಲಿ ಸಾವನ್ನಪ್ಪಿದವರ ಹತ್ತಿರದ ಸಂಬಂಧಿಗಳಿಗೆ ಸೂಕ್ತ ಪರಿಹಾರವನ್ನು ಕೋರ್ಟ್ ನಿಗದಿಪಡಿಸುತ್ತದೆ' ಎಂದು ಹೇಳಿದೆ.

'ಘಟನೆ ನಡೆದ ದಿನ, ಸ್ಥಳದಲ್ಲಿನ ವಿವರ ದಾಖಲೆಯಾಗಿರುವ ಸಿಸಿಟಿವಿ ಅಥವಾ ಡಿವಿಆರ್ ದೃಶ್ಯಗಳನ್ನು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ತಮ್ಮ ವಶದಲ್ಲಿಯೇ ಇರಿಸಿಕೊಂಡಿರಬೇಕು' ಎಂದು ಸೂಚಿಸಿರುವ ಸಮಿತಿಯು, 'ಅಮ್ಲಜನಕ ನೀಡಿಕೆ ಮತ್ತು ವಿತರಣೆಯಲ್ಲಿ ಸಮನ್ವಯ ಸಾಧಿಸಲು ವಿವಿಧ ಜಿಲ್ಲಾ ಆಸ್ಪತ್ರೆಗಳಲ್ಲಿ ಆಯಾ ಜಿಲ್ಲಾಧಿಕಾರಿ ಅಥವಾ ಅವರ ಅಧೀನದಲ್ಲಿ ಉನ್ನತ ಹುದ್ದೆಯ ಅಧಿಕಾರಿಯನ್ನು ನೇಮಕ ಮಾಡಬೇಕು' ಎಂದೂ ಸಲಹೆ ನೀಡಿದೆ.

ಮೈಸೂರಿನಲ್ಲಿರುವ ಅಮ್ಲಜನಕ ಬಾಟ್ಲಿಂಗ್ ಹಾಗೂ ಪುನರ್ ಭರ್ತಿ ಘಟಕಗಳಿಂದ ಅಗತ್ಯಕ್ಕನುಗುಣವಾಗಿ ರವಾನೆ ಮಾಡುವ ನಿಟ್ಟಿನಲ್ಲಿ ಮೈಸೂರು ಪ್ರಾದೇಶಿಕ ಆಯುಕ್ತರು, ಕೇವಲ ಮೈಸೂರಿಗೆ ಮಾತ್ರವಲ್ಲದೆ, ಮಂಡ್ಯ, ಚಾಮರಾಜನಗರ, ಕೊಡಗು ಹಾಗೂ ಹಾಸನ ಜಿಲ್ಲೆಗಳ ಜೊತೆಗೂ ಸಮನ್ವಯ ಸಾಧಿಸಬೇಕು' ಎಂದು ಹೇಳಿದೆ.

ಸಮಿತಿಯ ಹೆಚ್ಚುವರಿ ಸದಸ್ಯರಾಗಿ ಕೆ.ಎಸ್.ಕೇಶವನಾರಾಯಣ, ಹೆಚ್ಚುವರಿ ಸದಸ್ಯರಾಗಿ ನಿವೃತ್ತ ಐಪಿಎಸ್ ಅಧಿಕಾರಿ ಎಸ್.ಟಿ.ರಮೇಶ್, ನಿವೃತ್ತ ಐಎಎಸ್ ಅಧಿಕಾರಿ ವಿ.ಪಿ.ಬಳಿಗಾರ ಇದ್ದರು.

ಶಿಫಾರಸಿನ ಮುಖ್ಯಾಂಶಗಳು

- ಎಲ್ಲಾ ಆಸ್ಪತ್ರೆಗಳಲ್ಲಿ ಆಮ್ಲಜನಕವನ್ನು 24 ಗಂಟೆಗಳಿಗಿಂತಲೂ ಮುಂಚೆಯೇ ಕನಿಷ್ಠ ತುರ್ತು ಸಂಗ್ರಹ ಮಾಡಿ ಅದು ಸಿಗುವಂತಾಗುವ ಭರವಸೆ ನೀಡಬೇಕು.
- ದಾಖಲೆಗಳ ನಿರ್ವಹಣೆ, ಆಮ್ಲಜನಕದ ದಾಸ್ತಾನು ಹಾಗೂ ಅದರ ಬಳಕೆ ಹಾಗೂ ಉಳಿಕೆಯ ಪ್ರಕ್ರಿಯೆಗಳು ರಾಜ್ಯದಾದ್ಯಂತ ಏಕರೂಪ ಹೊಂದಿರಬೇಕು. ಆಮ್ಲಜನಕದ ಉಳಿಕೆ, ದಾಸ್ತಾನಿನ ವಿವರಗಳು ಆಸ್ಪತ್ರೆಗಳ ಡಿಜಿಟಲ್ ಮಾಧ್ಯಮದಲ್ಲಿ ಪ್ರದರ್ಶಿಸುವಂತಾಗಬೇಕು.
- ವೈದ್ಯಕೀಯ ಉದ್ದೇಶಗಳಿಗೆ ಅನುಗುಣವಾಗಿ ಆಮ್ಲಜನಕ ಸಿಲಿಂಡರ್‌ಗಳನ್ನು ಹೊತ್ತೊಯ್ಯುವ ವಾಹನಗಳಿಗೆ ಜಿಪಿಎಸ್ ಅಳವಡಿಸಬೇಕು. ಅಂತಹ ಟ್ರಕ್ಕುಗಳು ಸಂಪರ್ಕ ಹೊಂದಿರಬೇಕು. ಟ್ರಕ್ಕುಗಳು ಹೊರಡುವ ಸ್ಥಳದಿಂದಲೇ ಸಂಪರ್ಕ ಸೀಲ್ ಆಗಿ ತೆರೆಯಬೇಕು. ರವಾನಿಸುವ ಮಾತ್ರವೇ ಅದನ್ನು ತೆರೆಯಲು ಅವಕಾಶವಿರಬೇಕು.
- ಮೈಸೂರಿನಲ್ಲಿರುವ ಮೆಸರ್ಸ್ ಸ್ಕ್ರೀನ್ ಬಾಟ್ಲಿಂಗ್ ಘಟಕ ಕಾರ್ಯನಿರ್ವಹಿಸುತ್ತಿಲ್ಲ. ಹೀಗಾಗಿ ವಿಪತ್ತಿನ ಸಮಯದಲ್ಲಿ ಸರ್ಕಾರ ಇದನ್ನು ವಶಕ್ಕೆ ಪಡೆದು ಪುನರುಜ್ಜೀವನಗೊಳಿಸುವ ಬಗ್ಗೆ ಪರಿಣಾಮಕಾರಿ ಹೆಜ್ಜೆ ಇರಿಸಬಹುದು.
- ಪ್ರತಿ ಆಸ್ಪತ್ರೆಯಲ್ಲೂ ಮಾನವ ಸಂಪನ್ಮೂಲದ ಜೊತೆಗೆ ಮೂಲಸೌಕರ್ಯ ಹೆಚ್ಚಿಸುವ ಬಗ್ಗೆ ನಿಗಾ ವಹಿಸಬೇಕು.

ರೈಲ್ವೆ ಪೊಲೀಸರಿಗೆ ₹ 1 ಲಕ್ಷ ದಂಡ

ಬೆಂಗಳೂರು: 'ದರೋಡೆ ಯತ್ನ ಆರೋಪದಲ್ಲಿ ಎರಡೂ ವರ್ಷಗಳಿಗೂ ಹೆಚ್ಚು ಸಮಯದಿಂದ ನ್ಯಾಯಾಂಗ ಬಂಧನದಲ್ಲಿದ್ದ ಆರೋಪಿಗೆ ನೀಡಲಾಗಿದ್ದ ಜಾಮೀನು ರದ್ದುಪಡಿಸಬೇಕು' ಎಂದು ಹೈಕೋರ್ಟ್ ಮೆಟ್ಟಿಲೇರಿದ್ದ ನಗರದ ರೈಲ್ವೆ ಠಾಣೆ ಪೊಲೀಸರಿಗೆ ಹೈಕೋರ್ಟ್ ಒಂದು ಲಕ್ಷ ರೂಪಾಯಿ ದಂಡ ವಿಧಿಸಿದೆ.

'ಆರೋಪಿ ಸ್ಟೀಫನ್‌ಗೆ ಜಾಮೀನು ನೀಡಿದ್ದ 52ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದ ಆದೇಶ ರದ್ದುಪಡಿಸಬೇಕು' ಎಂದು ಕೋರಿ ರೈಲ್ವೆ ಪೊಲೀಸ್ ಠಾಣಾಧಿಕಾರಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಚ್.ಪಿ. ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

ಆಯ್ಕೆ


ಬೆಂಗಳೂರು: ಮಾಧ್ಯಮ ಬಳಗ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷೆಯಾಗಿ ಶಾಂತಮ್ಮ ಹಾಗೂ ಉಪಾಧ್ಯಕ್ಷರಾಗಿ ಮಂಡಿಬೆಲೆ ರಾಜಣ್ಣ ಅವಿರೋಧ ಆಯ್ಕೆಯಾದರು.

ನಿರ್ದೇಶಕರು: ಕೆ.ಎಲ್. ಲೋಕೇಶ್, ಎಂ.ಜಯಶ್ರೀ, ಮುಳ್ಳಹಳ್ಳಿ ಸೂರಿ, ವೃಷಭರಾಜ್, ಎಂ.ಎಸ್.ನಾಗರಾಜ, ಬಿ.ಹರಿಶ್ಚಂದ್ರ ಭಟ್, ಆರ್. ಬಸಪ್ಪ, ಎಂ.ಚನ್ನಕೇಶವಮೂರ್ತಿ, ಎಚ್.ಎಂ.ನಾರಾಯಣಸ್ವಾಮಿ, ಎಂ.ಡಿ.ರಾಜು, ಆರ್.ರಮೇಶ್.

ಮೇಕೆದಾಟು: ಒಂದೇ ಹಂತದಲ್ಲಿ ಜಾರಿ ಕಷ್ಟ

ಎರಡು ಹಂತದ ಯೋಜನೆ ರೂಪಿಸಲು ಬೊಮ್ಮಾಯಿಗೆ ದೇವೇಗೌಡರ ಸಲಹೆ

ಪ್ರಜಾವಾಣಿ ವಾರ್ತೆ



ಎಚ್‌.ಡಿ. ದೇವೇಗೌಡ

ಬೆಂಗಳೂರು: 'ಮೇಕೆದಾಟು ಕುಡಿಯುವ ನೀರಿನ ಯೋಜನೆಗೆ 67.16 ಟಿಎಂಸಿ ಅಡಿ ನೀರು ಸಂಗ್ರಹಿಸುವ ರಾಜ್ಯ ಸರ್ಕಾರದ ಪ್ರಸ್ತಾವನೆಗೆ ಕೇಂದ್ರದಿಂದ ಅನುಮೋದನೆ ದೊರೆಯುವ ಸಾಧ್ಯತೆ ಕಡಿಮೆ ಇದೆ. ಎರಡು ಹಂತದಲ್ಲಿ ಯೋಜನೆ ಅನುಷ್ಠಾನಕ್ಕೆ ಡಿಪಿಆರ್(ವಿಸ್ತೃತ ಯೋಜನಾ ವರದಿ) ಸಿದ್ಧಪಡಿಸುವುದು ಸೂಕ್ತ' ಎಂದು ರಾಜ್ಯಸಭೆ ಸದಸ್ಯ ಎಚ್.ಡಿ. ದೇವೇಗೌಡ ಅವರು ರಾಜ್ಯ ಸರ್ಕಾರಕ್ಕೆ ಸಲಹೆ ನೀಡಿದ್ದಾರೆ.

ಆಲಮಟ್ಟಿ ಮಾದರಿಯಲ್ಲಿ ಎತ್ತರವಾದ ಅಣೆಕಟ್ಟೆ ನಿರ್ಮಿಸಿ 47.27 ಟಿಎಂಸಿ ಅಡಿ ನೀರು ಸಂಗ್ರಹಿಸಲು ಸೀಮಿತ ಎತ್ತರದ ಗೇಟ್‌ಗಳನ್ನು ನಿರ್ಮಿಸಿಕೊಳ್ಳುವುದು ಸೂಕ್ತ. ಈ ರೀತಿಯ ಯೋಜನೆ ರೂಪಿಸಿದರೆ ಕೇಂದ್ರ ಸರ್ಕಾರದ ಅನುಮೋದನೆ ದೊರಕಲಿದೆ ಮತ್ತು ತಮಿಳುನಾಡಿನ ಆಕ್ಷೇಪ ಕೂಡ ಇರುವುದಿಲ್ಲ ಎಂದು ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

'ಬೆಂಗಳೂರಿನ ಕುಡಿಯುವ ನೀರಿಗಾಗಿ 4.75 ಟಿಎಂಸಿ ಅಡಿ ನೀರನ್ನು ಸುಪ್ರೀಂ ಕೋರ್ಟ್ ಹಂಚಿಕೆ ಮಾಡಿದೆ. ಆದರೆ, 67.16 ಟಿಎಂಸಿ ಅಡಿ ನೀರು ಸಂಗ್ರಹ ಸಾಮರ್ಥ್ಯದ ಮೇಕೆದಾಟು ಯೋಜನೆಯನ್ನು ಕರ್ನಾಟಕ ಸರ್ಕಾರ ರೂಪಿಸಿದೆ. ಕುಡಿಯುವ ನೀರಿನ ನೆಪದಲ್ಲಿ ನೀರಾವರಿ ಯೋಜನೆಗಳಿಗೆ ನೀರು ಬಳಕೆ ಮಾಡಿಕೊಳ್ಳುವ ದುರುದ್ದೇಶವನ್ನು ಹೊಂದಿದೆ' ಎಂಬುದು ತಮಿಳುನಾಡಿನ ಪ್ರಮುಖ ಆಕ್ಷೇಪ.

'ಈಗ ಸಲ್ಲಿಕೆಯಾಗಿರುವ ಡಿಪಿಆರ್ ಪ್ರಕಾರ ಜಲಾಶಯ ನಿರ್ಮಾಣವಾದರೆ 12 ಸಾವಿರ ಎಕರೆಗೂ ಹೆಚ್ಚು ಅರಣ್ಯ ಪ್ರದೇಶ ಮತ್ತು ವನ್ಯಜೀವಿಗಳ ತಾಣ ಮುಳುಗಡೆಯಾಗುತ್ತದೆ.

ಕೇಂದ್ರ ಪರಿಸರ ಅರಣ್ಯ ಮತ್ತು ಹವಾಮಾನ ವೈಪರೀತ್ಯ ಸಚಿವಾಲಯವೂ ಇದಕ್ಕೆ ಆಕ್ಷೇಪಣೆ ಎತ್ತಿದೆ. ತಮಿಳುನಾಡು ಸರ್ಕಾರ ಮತ್ತು ಕೇಂದ್ರ ಸರ್ಕಾರದ ಆಕ್ಷೇಪಣೆಗಳನ್ನು ಹಿಮ್ಮೆಟ್ಟಿಸಲು ಇರುವುದು ಒಂದೇ ಪರಿಹಾರ. ಎರಡು ಹಂತದಲ್ಲಿ ಯೋಜನೆ ಅನುಷ್ಠಾನಗೊಳಿಸುವುದು ಅನಿವಾರ್ಯ' ಎಂದು ದೇವೇಗೌಡರು ತಮ್ಮ ಪತ್ರದಲ್ಲಿ ಪ್ರತಿಪಾದಿಸಿದ್ದಾರೆ.

ಬೆಂಗಳೂರಿಗೆ 4.75 ಟಿಎಂಸಿ ಅಡಿ ಕುಡಿಯುವ ನೀರು ತರಬೇಕೆಂದರೆ 24 ಟಿಎಂಸಿ ಅಡಿ ನೀರನ್ನು ಮೇಕೆದಾಟು ಬಳಿ ಸಂಗ್ರಹಿಸಬೇಕಾಗುತ್ತದೆ. ಅದಕ್ಕೆ ಆಕ್ಷೇಪ ಇಲ್ಲ.

'2051ನೇ ಇಸವಿ ವೇಳೆಗೆ ಬೆಂಗಳೂರಿಗೆ ಇನ್ನಷ್ಟು ನೀರು ಬೇಕಾಗಲಿದ್ದು, 67.16 ಟಿಎಂಸಿ ಅಡಿ ನೀರು ಸಂಗ್ರಹಿಸುವ ಜಲಾಶಯ ಕಟ್ಟಲಾಗುವುದು. ಹೆಚ್ಚುವರಿಯಾಗಿ ಹರಿದು ಸಮುದ್ರ ಸೇರುವ ನೀರನ್ನಷ್ಟೇ ಸಂಗ್ರಹಿಸಲಾಗುವುದು ಎಂಬ ಕರ್ನಾಟಕದ ವಾದ. ಇದಕ್ಕೆ ಮನ್ನಣೆ ಸಿಗುವ ಸಾಧ್ಯತೆ ಕಡಿಮೆ. ಏಕೆಂದರೆ, ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಹೆಚ್ಚುವರಿ ನೀರು ಬಳಕೆ ಮಾಡುವ ಹಕ್ಕು ಯಾವುದೇ ರಾಜ್ಯಕ್ಕೂ ಇಲ್ಲ. ಕಾವೇರಿ–ಗುಂಡಾರ್ ನದಿ ಜೋಡಣೆ ಮತ್ತು ಮೆಟ್ಟೂರು ಜಲಾಶಯದಿಂದ ಸೇಲಂ ಜಿಲ್ಲೆಗೆ ನೀರು ಕೊಂಡೊಯ್ಯುವ ತಮಿಳುನಾಡಿನ ಯೋಜನೆಗಳಿಗೆ ಕರ್ನಾಟಕವೇ ಆಕ್ಷೇಪ ಸಲ್ಲಿಸಿದೆ. ಈ ಸಂದರ್ಭದಲ್ಲಿ ಹೆಚ್ಚುವರಿ ನೀರು ಬಳಕೆ ಮಾಡಿಕೊಳ್ಳುವ ನಮ್ಮ ಪ್ರಸ್ತಾವನೆಗೆ ಕಾನೂನಿನ ತೊಡಕು ಎದುರಾಗುವ ಸಾಧ್ಯತೆ ಇದೆ' ಎಂದು ದೇವೇಗೌಡರು ವಿವರಿಸಿದ್ದಾರೆ.

'ಆದ್ದರಿಂದ ಇರುವ ಅವಕಾಶವನ್ನೇ ಬಳಸಿಕೊಳ್ಳುವುದು ಸೂಕ್ತ. 30.65 ಟಿಎಂಸಿ ಅಡಿ ನೀರನ್ನು ವರ್ಷಕ್ಕೆ ಪಡೆದುಕೊಳ್ಳಬೇಕೆಂದರೆ 20.42 ಟಿಎಂಸಿ ಅಡಿ ಸಂಗ್ರಹ ಸಾಮರ್ಥ್ಯ ಇದ್ದರೆ ಸಾಕಾಗುತ್ತದೆ(ವರ್ಷಕ್ಕೆ ಒಂದೂವರೆ ಪಟ್ಟು ನೀರು ಜಲಾಶಯಕ್ಕೆ ಸೇರುತ್ತದೆ). ತಮಿಳುನಾಡಿಗೆ ಜೂನ್ ಮತ್ತು ಜುಲೈನಲ್ಲಿ ಹರಿಸಬೇಕಿರುವ 13 ಟಿಎಂಸಿ ಅಡಿ ನೀರು ಸಂಗ್ರಹಕ್ಕೆ, ಪರಿಸರ ರಕ್ಷಣೆಗಾಗಿ ನದಿಗೆ ಹರಿ ಬಿಡಲು 10 ಟಿಎಂಸಿ ಅಡಿ ಮತ್ತು ಆವಿಯಾಗಲಿರುವ 3.85 ಟಿಎಂಸಿ ಅಡಿ ಸೇರಿ ಒಟ್ಟು 47.27 ಟಿಎಂಸಿ ಅಡಿ ನೀರು ಸಂಗ್ರಹಕ್ಕೆ ಯೋಜನೆ ರೂಪಿಸಿದರೆ ಸಾಕು. ಇದಕ್ಕೆ ಯಾರ ಆಕ್ಷೇಪವೂ ವ್ಯಕ್ತವಾಗಲಾರದು' ಎಂದು ಅವರು ಪ್ರತಿಪಾದಿಸಿದ್ದಾರೆ.

ಯಾವುದಕ್ಕೆ ಎಷ್ಟು ನೀರು (ಟಿಎಂಸಿ ಅಡಿಗಳಲ್ಲಿ)

- 20.42 — ಬೆಂಗಳೂರಿನ ಕುಡಿಯುವ ನೀರಿಗೆ
- 13 — ಜೂನ್ ಮತ್ತು ಜುಲೈನಲ್ಲಿ ತಮಿಳುನಾಡಿಗೆ ಹರಿಸಲು
- 10 — ಪರಿಸರ ರಕ್ಷಣೆಗೆ ನದಿಗೆ ಹರಿಸಲು
- 3.85 — ಆವಿಯಾಗುವ ಪ್ರಮಾಣ
- 47.27 — ಒಟ್ಟು

ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ 6ನೇ ಘಟಿಕೋತ್ಸವ

1,647 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ



ನಿಧಿ ಸಂತೋಷ್, ಡಾ.ಐಶ್ವರ್ಯ ಸ್ವಾತಿ, ಸಮ್ರೀನ್ ಫಾತಿಮಾ, ಬೆನೆಟ್ ಎಂ. ದರ್ಶನ್, ಕವಿತಾ ಕುಮಾರಿ ಹಾಗೂ ಹರ್ಷಿತ್ ಅಗರವಾಲ್ ಅವರು ಚಿನ್ನ ಹಾಗೂ ಬೆಳ್ಳಿ ಪದಕದೊಂದಿಗೆ ಸಂಭ್ರಮಿಸಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ (ಆರ್‌ಯುಎಎಸ್) ಹಮ್ಮಿಕೊಂಡಿದ್ದ 6ನೇ ಘಟಿಕೋತ್ಸವದಲ್ಲಿ ಒಟ್ಟು 1,647 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯ (ಎಐಸಿಟಿಇ) ಅಧ್ಯಕ್ಷ ಪ್ರೊ.ಅನಿಲ್ ಡಿ ಸಹಸ್ರಬುದ್ಧೆ ಅವರು 7 ಮಂದಿಗೆ ಪಿಎಚ್.ಡಿ, 453 ಜನರಿಗೆ ಸ್ನಾತಕೋತ್ತರ ಹಾಗೂ 1,187 ಮಂದಿಗೆ ಸ್ನಾತಕ ಪದವಿಗಳನ್ನು ಸೋಮವಾರ ಪ್ರದಾನ ಮಾಡಿದರು.

28 ವಿದ್ಯಾರ್ಥಿಗಳಿಗೆ ಅವರ ಶೈಕ್ಷಣಿಕ ಸಾಧನೆ ಗುರುತಿಸಿ ಡಾ.ಎಂ.ಎಸ್.ರಾಮಯ್ಯ ಚಿನ್ನದ ಪದಕ ನೀಡಿ ಗೌರವಿಸಲಾಯಿತು.

ವೆಂಕಟಮ್ಮ ರಾಮಯ್ಯ ಅವರ ಹೆಸರಿನಲ್ಲಿ ನೀಡಲಾಗುವ ಬೆಳ್ಳಿ ಪದಕವನ್ನು 28 ಮಂದಿ ಪಡೆದರು. ಅತ್ಯುತ್ತಮ ಸಂಶೋಧನಾ ಪ್ರಬಂಧ ಮಂಡಿಸಿದ 8 ಮಂದಿ ಸಂಶೋಧನಾರ್ಥಿಗಳಿಗೆ ಗೌರಮ್ಮ ರಾಮಯ್ಯ ಬೆಳ್ಳಿ ಪದಕ ಪ್ರದಾನ ಮಾಡಲಾಯಿತು.

ಐಶ್ವರ್ಯ ರಘು, ಸಫಿಯಾ ಫಾತಿಮಾ ಖಾನ್, ಪಿ.ಸ್ಫೂರ್ತಿ, ಬೈತಪಲ್ಲಿ ದಿವ್ಯಶ್ರೀ, ಕೆ.ಎನ್. ಶರ್ವಣಿ, ಅಥಿರಾ, ಪ್ರತೀಕ್ಷಾ ರಾಯ್, ಅನುಮುಲ ವೆಂಕಟ ಶಿವ ಸಾಯಿ ಕೃಷ್ಣ, ಸಮ್ರೀನ್ ಫಾತಿಮಾ, ಬಿ.ನೇತ್ರಾವತಿ, ಸ್ನೇಹಾ ಮುಖರ್ಜಿ, ಯಲಮಿಂಚಿಲಿ ಜಾಹ್ನವಿ ಸ್ನಾತಕೋತ್ತರ ವಿಭಾಗದಲ್ಲಿ ಚಿನ್ನದ ಪದಕ ಗಳಿಸಿದರು.

ಸ್ನಾತಕ ವಿಭಾಗದಲ್ಲಿ ಅಜಯ್‌ಕುಮಾರ್ ಅಹಿರ್ವಾರ್, ಆರ್.ಎಂ.ಶಿವಾನಿ, ಸಿ.ಕಾವ್ಯ, ಹರ್ಷಿತ್ ಅಗರವಾಲ್, ಡಿ.ನಿಶಾ, ಪಲ್ಲವಿ ಶರ್ಮಾ, ಪಿ.ಬ್ರಿಸ್ಲಿ ಜೇಕಬ್, ವಿ.ಸೂರ್ಯಕಿರಣ್, ಕೆ.ವಿ.ತೇಜಸ್, ಬಿ.ಎನ್.ಮಂಜುನಾಥ ಬಾಬು, ಕೆ.ಪೂಜಾ, ಪೊಲಾಸ್ ಬರುವಾ, ಆರತಿ ರವೀಂದ್ರನ್, ಮಿಸ್ಬಾ ಖಾನ್, ಮೊಹಮ್ಮದ್ ಅಫ್ತಾಬ್ ಹಾಗೂ ಕರೆನ್ ಡಿಸೋಜಾ ಅವರಿಗೆ ಚಿನ್ನದ ಪದಕ ಲಭಿಸಿತು.

ಪ್ರೊ.ಅನಿಲ್ ಡಿ ಸಹಸ್ರಬುದ್ಧೆ ಮಾತನಾಡಿದರು. ಕುಲಾಧಿಪತಿ ಡಾ.ಎಂ.ಆರ್.ಜಯರಾಮ್, ಕುಲಪತಿ ಪ್ರೊ.ಕುಲದೀಪ್‌ಕುಮಾರ್ ರೈನಾ, ಕುಲಸಚಿವ ಪ್ರೊ.ಎಂ.ಸಾಯಿಬಾಬಾ ಇದ್ದರು.

ಏಪ್ರಿಲ್‌ನಲ್ಲಿ ಮುಕ್ತ ವಿ.ವಿ ಎಂಬಿಎ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಎಂ.ಬಿ.ಎ ವಿದ್ಯಾರ್ಥಿಗಳಿಗೆ ಏಪ್ರಿಲ್ ತಿಂಗಳಿನಲ್ಲಿ ಎರಡು ಮತ್ತು ನಾಲ್ಕನೇ ಸೆಮಿಸ್ಟರ್ ಪರೀಕ್ಷೆಗಳನ್ನು ನಡೆಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿ ಸದಸ್ಯ ಎಚ್.ಎಸ್. ಗೋಪಿನಾಥ್ ಪ್ರಶ್ನೆಗೆ ಸೋಮವಾರ ಉತ್ತರಿಸಿದ ಅವರು, '2020ರಲ್ಲಿ ಪ್ರವೇಶ ಪಡೆದಿದ್ದ ವಿದ್ಯಾರ್ಥಿಗಳನ್ನು ಕೋವಿಡ್ ಕಾರಣದಿಂದ ಮೊದಲನೇ ವರ್ಷ ಆಂತರಿಕ ಅಂಕಗಳ ಆಧಾರದ ಮೇಲೆ ತೇರ್ಗಡೆ ಮಾಡಲಾಗಿದೆ. ಪ್ರಸಕ್ತ ಶೈಕ್ಷಣಿಕ ವರ್ಷದ ಎರಡು ಮತ್ತು ನಾಲ್ಕನೇ ಸೆಮಿಸ್ಟರ್ ಪರೀಕ್ಷೆಗಳಿಗೆ ಸಿದ್ಧತೆ ನಡೆದಿದೆ' ಎಂದರು.

ಆನ್‌ಲೈನ್ ಮೂಲಕ ಬೋಧನೆ, ಸೆಮಿನಾರ್ ಎಲ್ಲವನ್ನೂ ಪೂರ್ಣಗೊಳಿಸಲಾಗಿದೆ. ಬರಹಗಳು ಮತ್ತು ಯೋಜನಾ ವರದಿಗಳನ್ನು ಪಡೆದು, ಆಂತರಿಕ ಮೌಲ್ಯಮಾಪನ ನಡೆಸಲಾಗಿದೆ. ಎರಡು ಮತ್ತು ನಾಲ್ಕನೇ ಸೆಮಿಸ್ಟರ್‌ಗಳ ಪರೀಕ್ಷಾ ಶುಲ್ಕ ಪಾವತಿಗೆ ಅಧಿಸೂಚನೆ ಹೊರಡಿಸಲಾಗಿದೆ ಎಂದರು.

ನಗರದಲ್ಲಿ ಇಂದು

ರಾಜ್ಯಮಟ್ಟದ ಹಕ್ಕಿಪಿಕ್ಕಿ ಯುವ ಸಂಘಟನೆಯ ರಾಜ್ಯ ಸಮಾವೇಶ: ಉದ್ಘಾಟನೆ–ವಾಲ್ಮೀಕಿ ಪ್ರಸನ್ನನಂದಾಪುರ ಸ್ವಾಮೀಜಿ, ಸೇವಾಲಾಲ್ ಸರ್ದಾರ್ ಸ್ವಾಮೀಜಿ, ಅಧ್ಯಕ್ಷತೆ–ಸಚಿವ ಕೋಟ ಶ್ರೀನಿವಾಸ ಪೂಜಾರಿ, ಅತಿಥಿಗಳು–ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಸಚಿವರಾದ ಬಿ. ಶ್ರೀರಾಮುಲು, ಎಸ್.ಟಿ.ಸೋಮಶೇಖರ್, ಬಿ.ಟಿ.ಲಲಿತಾ ನಾಯಕ್, ಆಯೋಜನೆ–ಕರ್ನಾಟಕ ಹಕ್ಕಿಪಿಕ್ಕಿ ಬುಡಕಟ್ಟು ಯುವ ಸಂಘಟನೆ, ಸ್ಥಳ–ಬಿ.ಆರ್.ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 9.15

'ಜನಪದ ಗೀತಗಾಯನ–ಹೊಸ ಸಾಧ್ಯತೆಗಳು' ವಿಚಾರ ಸಂಕಿರಣ: ಅಧ್ಯಕ್ಷತೆ–ಮಂಜಮ್ಮ ಜೋಗತಿ, ಉದ್ಘಾಟನೆ–ಕೆ.ಆರ್.ಸಂಧ್ಯಾರೆಡ್ಡಿ, ಅತಿಥಿಗಳು–ಎಂ.ಪ್ರಕಾಶಮೂರ್ತಿ, ಬಿ.ವಿ.ಶ್ರೀನಿವಾಸ್, ಬಾನಂದೂರು ಕೆಂಪಯ್ಯ, ಪ್ರಬಂಧ ಮಂಡನೆ–ಬಿ.ಕೆ. ಸುಮಿತ್ರ, ಅಪ್ಪಗೆರೆ ತಿಮ್ಮರಾಜು, ಆಯೋಜನೆ–ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ–ಕೃಷ್ಣರಾಜ ಪರಿಷನ್ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

ವಿಶ್ವ ಗ್ರಾಹಕರ ದಿನಾಚರಣೆ: ಉದ್ಘಾಟನೆ–ಸಚಿವ ಉಮೇಶ್ ಕತ್ತಿ, ಅತಿಥಿಗಳು–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಎಂ.ರಾಜೀವ್ ಚಂದ್ರಶೇಖರ್, ಅಧ್ಯಕ್ಷತೆ–ರಿಜ್ವಾನ್ ಅರ್ಷದ್, ಆಯೋಜನೆ–ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆ, ಸ್ಥಳ–ರಾಜ್ಯ ಸರ್ಕಾರಿ ನೌಕರರ ಸಭಾಂಗಣ, ಕಬ್ಬನ್ ಉದ್ಯಾನ, ಬೆಳಿಗ್ಗೆ 11

ಕನ್ನಡ ಗೀತೆಗಳ ತರಬೇತಿ ಶಿಬಿರದ ಸಮಾರೋಪ: ಅತಿಥಿಗಳು–ಗೊ.ರು. ಚನ್ನಬಸಪ್ಪ, ಜೆ.ಎಚ್.ಅನಿಲ್ ಕುಮಾರ್, ಕೆ.ಬಿ.ಲೋಕೇಶ್, ಬಂಡ್ಲಹಳ್ಳಿ ವಿಜಯಕುಮಾರ್, ಆರ್.ಕೃಷ್ಣಮೂರ್ತಿ, ಆಯೋಜನೆ–ರಂಗಸಂಸ್ಥಾನ, ಸ್ಥಳ–ಹೊಂಬೇಗೌಡ ಪದವಿ ಪೂರ್ವ ಕಾಲೇಜು ಸಭಾಂಗಣ, ಗಾಯಿತ್ರಿನಗರ, ಬೆಳಿಗ್ಗೆ 11.30

ಪದವಿ ಪ್ರದಾನ ಮತ್ತು ಸಮಾರೋಪ: ಅತಿಥಿಗಳು–ಎಂ.ವೀರಪ್ಪ ಮೊಯಿಲಿ, ರೆವರೆಂಡ್ ಪಿ.ಕೆ.ಸ್ಯಾಮುಯೆಲ್, ಎನ್.ಎ.ಹ್ಯಾರೀಸ್, ಪ್ರೊ.ಎಸ್ತರ್ ಪ್ರಸನ್ನ, ಕ್ರಿಸ್ಟಿ ಗ್ಲೋರಿ ಶಾಂತಿ, ಆಯೋಜನೆ–ಕೆಥೆಡ್ರಲ್ ಕಾಂಪೋಸಿಟ್ ಪಿಯು ಕಾಲೇಜು, ಸಂಜೆ 4

ಪ್ರೊ.ಎಲ್.ಎಸ್.ಶೇಷಗಿರಿ ರಾವ್ ವಿಮರ್ಶಾ ಪ್ರಶಸ್ತಿ ಹಾಗೂ ವಿ.ನಾಗರಾಜರಾವ್ ಸಮೂಹ ಮಾಧ್ಯಮ ಪ್ರಶಸ್ತಿ ಪ್ರದಾನ: ಸಾಹಿತಿ ವಿಜಯಾ, ಅತಿಥಿ–ಶ್ರೀನಿವಾಸ್ ಜಿ.ಕಪ್ಪಣ್ಣ, ಪುರಸ್ಕೃತರು–ಬಿ.ಎನ್. ಸುಮಿತ್ರಾಬಾಯಿ, ಎಚ್.ಎನ್. ಆನಂದ, ಅಧ್ಯಕ್ಷತೆ–ಬೈರಮಂಗಲ ರಾಮೇಗೌಡ, ಆಯೋಜನೆ–ಬಿಎಂಶ್ರೀ ಪ್ರತಿಷ್ಠಾನ, ಸ್ಥಳ–ಎಂವಿಸೀ ಸಭಾಂಗಣ, ಬಿಎಂಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

ಸಂಕ್ರಮಣ–2022 ಸಾಂಸ್ಕೃತಿಕ ಉತ್ಸವ: ನೃತ್ಯ ಪ್ರದರ್ಶನ–ಕೆ.ಅನುರಾಧ, ವೀಣಾ ಗಂಗಾಧರ್–ತೇಜಸ್ವಿನಿ ಸಂದೀಪ್, ಶೀತಲ್ ಹೇಮಂತ್, ನೃತ್ಯ ಉಲ್ಲಾಸ–ನೃತ್ಯ ಕುಟೀರ ಸಂಸ್ಥೆ, ಸಂಗೀತ ನೃತ್ಯಭಾರತಿ ಅಕಾಡೆಮಿ, ಅತಿಥಿ–ಎಸ್.ಎನ್. ಸುಶೀಲ, ಆಯೋಜನೆ–ಸಪ್ತಸ್ವರ ಆರ್ಟ್ಸ್ ಆ್ಯಂಡ್ ಕ್ರಿಯೇಷನ್ಸ್, ಸ್ಥಳ–ಸಂಸ ಬಯಲು ರಂಗಮಂದಿರ, ಸಂಜೆ 5.45

'ಉದ್ವಸ್ಥ' ನಾಟಕ ಪ್ರದರ್ಶನ: ರಚನೆ–ಡಿ.ಎಸ್.ಚೌಗಲೆ, ನಿರ್ದೇಶನ–ಎ. ದಾಕ್ಷಾಯಿಣಿ ಭಟ್, ಆಯೋಜನೆ–ದೃಶ್ಯ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಸಂಜೆ 7

'ಮಂಕುತಿಮ್ಮನ ಮಾರ್ಗ' ನೃತ್ಯ ಪ್ರದರ್ಶನ ಮಾ.17ಕ್ಕೆ

ಬೆಂಗಳೂರು: ಡಿ.ವಿ.ಗುಂಡಪ್ಪ ಅವರ ಜನ್ಮದಿನದ ಅಂಗವಾಗಿ ರೋಟರಿ ಡಿ.ವಿ.ಜಿ ಬಳಗದ ಸಹಯೋಗದಲ್ಲಿ 'ಮಂಕುತಿಮ್ಮನ ಮಾರ್ಗ' ನೃತ್ಯ ಪ್ರದರ್ಶನ ಕಾರ್ಯಕ್ರಮ ಇದೇ 17 ರಂದು ಸಂಜೆ 6.30ಕ್ಕೆ ಜಯನಗರದ ಜೆಎಸ್‌ಎಸ್ ಸಭಾಂಗಣದಲ್ಲಿ ನಡೆಯಲಿದೆ. ಖ್ಯಾತ ನೃತ್ಯ ಕಲಾವಿದರಾದ ಸ್ನೇಹಾ ಕಪ್ಪಣ್ಣ ಮತ್ತು ಪದ್ಮಿನಿ ಅಚ್ಚಿ ಅವರು 'ಮಂಕುತಿಮ್ಮನ ಮಾರ್ಗ'ವನ್ನು ಭರತನಾಟ್ಯ ಶೈಲಿಯಲ್ಲಿ ಪ್ರದರ್ಶಿಸಲಿದ್ದಾರೆ.

ಅತಿಥಿಗಳಾಗಿ ಭರತನಾಟ್ಯ ಪ್ರವೀಣೆ ಶೋಭಾ ಶಶಿಕುಮಾರ್, ವಿದ್ವಾಂಸ ಬಿ.ಆರ್.ಪ್ರಭಾಕರ್, ರಂಗತಜ್ಞ ಶ್ರೀನಿವಾಸ್ ಜಿ.ಕಪ್ಪಣ್ಣ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಅಕ್ರಮವಾಗಿ ರಸ್ತೆ ಅಗೆದು ನೀರಿನ ಸಂಪರ್ಕ • ಎಎಪಿ ಪ್ರತಿಭಟನೆ: ಮುಖಂಡರು ವಶಕ್ಕೆ

ರಸ್ತೆ ಗುಂಡಿಯಿಂದ ಉರುಳಿದ ಬೈಕ್: ಯುವಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎಂ.ಎಸ್. ಪಾಳ್ಯದ ಮುನೇಶ್ವರ ಬಡಾವಣೆಯಲ್ಲಿ ರಸ್ತೆ ಗುಂಡಿಯಿಂದಾಗಿ ಬೈಕ್ ಉರುಳಿಬಿದ್ದಿದ್ದು, ಸವಾರ ಅಶ್ವಿನ್ ಜುಗ್ಗೆ (27) ಎಂಬುವವರು ಮೃತಪಟ್ಟಿದ್ದಾರೆ.

‘ಬಿ.ಕಾಂ ಪದವೀಧರರಾಗಿದ್ದ ಅಶ್ವಿನ್, ನಗರದ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ವಡೇರಹಳ್ಳಿಯಲ್ಲಿ ಪೋಷಕರ ಜೊತೆ ವಾಸವಿದ್ದರು. ಭಾನುವಾರ ರಾತ್ರಿ 9.30ರ ಸುಮಾರಿಗೆ ಬೈಕ್‌ನಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ಯಲಹಂಕ ಸಂಚಾರ ಠಾಣೆ ಪೊಲೀಸರು ಹೇಳಿದರು.

‘ಅಶ್ವಿನ್ ಪೋಷಕರು, ಹಾವೇರಿಯವರು. ಹಲವು ವರ್ಷಗಳ ಹಿಂದೆಯೇ ನಗರಕ್ಕೆ ಬಂದು ನೆಲೆಸಿದ್ದರು. ಅವರ ಒಬ್ಬನೇ ಮಗ ಅಶ್ವಿನ್. ರಸ್ತೆ ಗುಂಡಿಯಿಂದ ಅಪಘಾತ ಸಂಭವಿಸಿ ಮಗ ಮೃತಪಟ್ಟಿರುವುದಾಗಿ ಪೋಷಕರು ಹಾಗೂ ಸ್ನೇಹಿತರು ಹೇಳಿಕೆ ನೀಡಿದ್ದಾರೆ. ಅದರನ್ವಯ ಬಿಬಿಎಂಪಿ ಹಾಗೂ ಜಲಮಂಡಳಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದು ತಿಳಿಸಿದರು.

ಚಿಕಿತ್ಸೆಗೆ ಫಲಿಸದೇ ಸಾವು: ‘ರಸ್ತೆ ಹಲವೆಡೆ ಹದಗೆಟ್ಟಿದೆ. ಜಲಮಂಡಳಿಯವರು ಅಲ್ಲಲ್ಲಿ ರಸ್ತೆ ಅಗೆದು ಕೆಲವರ ಮನೆಗಳಿಗೆ ಕುಡಿಯುವ ನೀರಿನ ಸಂಪರ್ಕ ನೀಡಿದ್ದಾರೆ. ಅಗೆದ ರಸ್ತೆಯನ್ನು ಅವೈಜ್ಞಾನಿಕವಾಗಿ ಮುಚ್ಚಿದ್ದು, ಇದರಿಂದಾಗಿ ಗುಂಡಿಗಳು ಬಿದ್ದಿವೆ. ವಾಹನ ಸಂಚಾರಕ್ಕೆ



ಅಶ್ವಿನ್

ತೊಂದರೆ ಉಂಟಾಗುತ್ತಿರುವುದು ಸ್ಥಳ ಪರಿಶೀಲನೆಯಿಂದ ಗೊತ್ತಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಗುಂಡಿಗಳು ಹೆಚ್ಚಿದ್ದ ರಸ್ತೆಯಲ್ಲಿ ಅಶ್ವಿನ್ ಬೈಕ್ ಚಲಾಯಿಸಿಕೊಂಡು ಹೊರಟಿದ್ದರು. ಗುಂಡಿಯಲ್ಲಿ ಬೈಕ್ ಚಕ್ರ ಇಳಿಯುತ್ತಿದ್ದಂತೆ ಉರುಳಿ ಬಿದ್ದಿತ್ತು. ರಸ್ತೆಗೆ ಬಿದ್ದಿದ್ದ ಅಶ್ವಿನ್, ತೀವ್ರ ಗಾಯಗೊಂಡು ನರಳುತ್ತಿದ್ದರು. ಸ್ಥಳೀಯರೇ ಅವರನ್ನು ಆಸ್ಪತ್ರೆಗೆ ಕರೆದೊಯ್ದಿದ್ದರು. ತಲೆಗೆ ತೀವ್ರ ಪೆಟ್ಟು ಬಿದ್ದಿದ್ದರಿಂದ ಚಿಕಿತ್ಸೆಗೆ ಸ್ಪಂದಿಸದೇ ಅಶ್ವಿನ್ ಸೋಮವಾರ ಬೆಳಿಗ್ಗೆ ತೀರಿಕೊಂಡಿದ್ದಾರೆ’ ಎಂದೂ ತಿಳಿಸಿದರು.

‘ಬಿಬಿಎಂಪಿಗೆ ಸೇರಿದ್ದ ರಸ್ತೆಯನ್ನು ಅಕ್ರಮವಾಗಿ ಜಲಮಂಡಳಿಯವರು ಅಗೆದಿದ್ದರು. ಅದನ್ನು ಬಿಬಿಎಂಪಿ ಅಧಿಕಾರಿಗಳು ಪ್ರಶ್ನಿಸಿಲ್ಲ. ಗುಂಡಿ ಬಿದ್ದರೂ ಅದನ್ನು ಮುಚ್ಚಿಸಲು ಬಿಬಿಎಂಪಿ ಹಾಗೂ ಜಲಮಂಡಳಿ ಅಧಿಕಾರಿಗಳು ಪ್ರಯತ್ನಿಸಿಲ್ಲ. ಹೀಗಾಗಿ, ಎರಡೂ ಸಂಸ್ಥೆಗಳ ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಅಶ್ವಿನ್ ಪೋಷಕರು ದೂರಿನಲ್ಲಿ ತಿಳಿಸಿದ್ದಾರೆ’ ಎಂದೂ ಪೊಲೀಸ್ ಅಧಿಕಾರಿ ವಿವರಿಸಿದರು.

ಹೆಲ್ಮೆಟ್ ಧರಿಸದ ಅಶ್ವಿನ್: ‘ಅಪಘಾತವಾದ ಸ್ಥಳದಲ್ಲಿ ಯಾವುದೇ ಹೆಲ್ಮೆಟ್ ದೊರೆತಿಲ್ಲ. ಬೈಕ್ ಚಲಾಯಿಸುವ ವೇಳೆ ಅಶ್ವಿನ್ ಹೆಲ್ಮೆಟ್ ಧರಿಸಿರಲಿಲ್ಲವೆಂಬುದು ಗೊತ್ತಾಗಿದೆ’ ಎಂದು ಅಧಿಕಾರಿ ಹೇಳಿದರು.

‘ಅವರ ವೈದ್ಯಕೀಯ ವರದಿ ಬರಬೇಕಿದ್ದು, ಪಾನಮತ್ತರಾಗಿದ್ದು ಸಾಬೀತಾದರೆ ಪ್ರತ್ಯೇಕ ಎಫ್‌ಐಆರ್ ದಾಖಲಿಸಲಾಗುವುದು’ ಎಂದೂ ತಿಳಿಸಿದರು.

ಆಪ್ ಪ್ರತಿಭಟನೆ: ‘ರಸ್ತೆ ಗುಂಡಿಯಿಂದ ಅಶ್ವಿನ್ ಮೃತಪಟ್ಟಿದ್ದು, ₹ 1 ಕೋಟಿ ರೂಪಾಯಿ ಪರಿಹಾರ ನೀಡಬೇಕು’ ಎಂದು ಆಗ್ರಹಿಸಿ ಆಮ್ ಆದ್ಮಿ ಪಕ್ಷದ (ಎಎಪಿ) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

‘ರಸ್ತೆ ಗುಂಡಿಯಿಂದಾಗಿ ಮೇಲಿಂದ ಮೇಲೆ ಅಪಘಾತಗಳು ಸಂಭವಿಸುತ್ತಿದ್ದು, ಅಮಾಯಕರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಇದೀಗ ಅಶ್ವಿನ್ ಮೃತಪಟ್ಟಿದ್ದು, ಇದಕ್ಕೆ ಬಿಬಿಎಂಪಿ ಆಯುಕ್ತ ಹಾಗೂ ಉನ್ನತ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ. ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿಕೊಡು, ಬಂಧಿಸಬೇಕು’ ಎಂದು ಕಾರ್ಯಕರ್ತರು ಆಗ್ರಹಿಸಿದರು.

ಪೊಲೀಸರು, ‘ಪ್ರತಿಭಟನೆಗೆ ಯಾವುದೇ ಅನುಮತಿ ಪಡೆದಿಲ್ಲ’ ಎಂದು ಹೇಳಿದರು. ಇದೇ ವಿಚಾರವಾಗಿ ಪೊಲೀಸರು ಹಾಗೂ ಪ್ರತಿಭಟನಕಾರರ ನಡುವೆ ಮಾತಿನ ಚಕಮಕಿ ನಡೆಯಿತು. ಎಎಪಿಯ ಕೆಲ ಮುಖಂಡರನ್ನು ವಶಕ್ಕೆ ಪಡೆದ ಪೊಲೀಸರು, ಜೀಪಿನಲ್ಲಿ ಕರೆದೊಯ್ದರು. ವಿದ್ಯಾರಣ್ಯಪುರ ಠಾಣೆ ಎದುರು ಸೇರಿದ್ದ ಕಾರ್ಯಕರ್ತರು, ಮುಖಂಡರ ಬಿಡುಗಡೆಗಾಗಿ ಪ್ರತಿಭಟನೆ ನಡೆಸಿದರು. ಕೆಲ ಹೊತ್ತಿನ ನಂತರ, ಮುಖಂಡರನ್ನು ಪೊಲೀಸರು ಬಿಟ್ಟು ಕಳುಹಿಸಿದರು.

‘ಅಶ್ವಿನ್ ಕುಟುಂಬಕ್ಕೆ ಉಚಿತ ನಿವೇಶನ’

ಮೃತ ಅಶ್ವಿನ್ ಅವರ ಕುಟುಂಬಕ್ಕೆ ವಡೇರಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 20x30 ಅಳತೆ ನಿವೇಶನವನ್ನು ಉಚಿತವಾಗಿ ನೀಡುವುದಾಗಿ ಬಿಡಿಎ ಅಧ್ಯಕ್ಷರೂ ಆಗಿರುವ ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಭರವಸೆ ನೀಡಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು, ‘ಮುನೇಶ್ವರ ಬಡಾವಣೆ ರಸ್ತೆ ಚೆನ್ನಾಗಿದೆ. ಆದರೆ, ಒಂದು ಕಡೆ ಮ್ಯಾನ್‌ಹೋಲ್‌ನಿಂದ ನೀರು ಹೊರ ಬಂದು ಹರಿಯುತ್ತಿತ್ತು. ಅಲ್ಲಿಯೇ ಗುಂಡಿ ಬಿದ್ದಿತ್ತು. ಅದೇ ಗುಂಡಿಯಿಂದಲೇ ಅಪಘಾತ ಸಂಭವಿಸಿದೆ’ ಎಂದಿದ್ದಾರೆ.

‘ಅನುಮತಿ ಇಲ್ಲದೇ ಅನಧಿಕೃತವಾಗಿ ಮನೆಗಳಿಗೆ ನೀರಿನ ಸಂಪರ್ಕ ಸಂಪರ್ಕ ಕಲ್ಪಿಸಲಾಗಿದೆ. ಅನಧಿಕೃತ ನೀರಿನ ಸಂಪರ್ಕ ಪಡೆದವರು ಮತ್ತು ಸಂಪರ್ಕ ನೀಡಿದವರ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ನಡೆಸುವಂತೆ ಸೂಚಿಸಲಾಗಿದೆ’ ಎಂದೂ ವಿಶ್ವನಾಥ್ ಹೇಳಿದ್ದಾರೆ.

ಗುಂಡಿ ಮುಚ್ಚಿದ ಬಿಬಿಎಂಪಿ ಸಿಬ್ಬಂದಿ

ಅಪಘಾತವಾದ ಸ್ಥಳದಲ್ಲಿ ಸೋಮವಾರ ಸಂಜೆ ತುರ್ತು ಕಾಮಗಾರಿ ಕೈಗೊಂಡ ಬಿಬಿಎಂಪಿ ಸಿಬ್ಬಂದಿ, ಗುಂಡಿಗಳನ್ನು ಮುಚ್ಚಿದರು.

‘ಸಾವಿಗೆ ಕಾರಣರಾದವರ ವಿರುದ್ಧ ಕಠಿಣ ಕ್ರಮ’

‘ಗುಂಡಿಯಿಂದ ಅಪಘಾತ ಸಂಭವಿಸಿ ಯುವಕ ಮೃತಪಟ್ಟಿರುವುದು ದುರಂತದ ಸಂಗತಿ. ಇಂಥ ಘಟನೆಗಳು ನಡೆಯಬಾರದು. ಅಧಿಕಾರಿಗಳು ಅಪಘಾತದ ಸ್ಥಳ ಪರಿಶೀಲನೆ ನಡೆಸಲಿದ್ದಾರೆ. ಯುವಕನ ಸಾವಿಗೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತಾ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ಬಿಬಿಎಂಪಿಗೆ ಮಾಹಿತಿ ನೀಡದೇ ರಸ್ತೆ ಅಗೆದಿದ್ದರಿಂದ ಈ ಅನಾಹುತ ಆಗಿದೆ. ಈ ರೀತಿ ಅಕ್ರಮವಾಗಿ ರಸ್ತೆ ಅಗೆದ ವಿಚಾರಕ್ಕೆ ಸಂಬಂಧಪಟ್ಟಂತೆ ಜಲಮಂಡಳಿ, ಬೆಸ್ಕಾಂ ಸೇರಿ ಇತರೆ ಸಂಸ್ಥೆಗಳ ವಿರುದ್ಧ 5 ಎಫ್‌ಐಆರ್ ದಾಖಲು ಮಾಡಲಾಗಿದೆ’ ಎಂದೂ ತಿಳಿಸಿದರು.

ರಸ್ತೆ ಗುಂಡಿಯಿಂದ ಅಪಘಾತವಾಗಿದ್ದ ಪ್ರಕರಣಗಳು

- 2021ರ ನ. 27: ಥಣಿಸಂದ್ರ ಮುಖ್ಯರಸ್ತೆಯಲ್ಲಿ ರಸ್ತೆ ಗುಂಡಿಯಲ್ಲಿ ಆಯತಪ್ಪಿ ಬಿದ್ದ ಸ್ಕೂಟರ್ ಸವಾರ ಅಜೀಂ ಅಹ್ಮದ್ (21) ಎಂಬುವರಿಗೆ ಗೂಡ್ಸ್ ವಾಹನವೊಂದು ಡಿಕ್ಕಿ ಹೊಡೆದಿತ್ತು. ಗಂಭೀರವಾಗಿ ಗಾಯಗೊಂಡಿದ್ದ ಅಜೀಂ, ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದ್ದರು
- 2021ರ ಸೆಪ್ಟೆಂಬರ್ 7: ಕಾಮಾಕ್ಷಿಪಾಳ್ಯ ಸಂಚಾರ ಠಾಣೆ ವ್ಯಾಪ್ತಿಯ ಮಂಗನಹಳ್ಳಿ ಮುಖ್ಯರಸ್ತೆಯಲ್ಲಿ ಗುಂಡಿಯಿಂದಾಗಿ ದ್ವಿಚಕ್ರ ವಾಹನ ಉರುಳಿ ಬಿದ್ದಿದ್ದು, ಮೈಕೊ ಲೇಔಟ್‌ನ ಬಿಸ್ಮಿಲ್ಲಾ ನಗರದ ಸವಾರ ಖುರ್ಷಿದ್ ಅಹ್ಮದ್ (65) ಎಂಬುವರು ಮೃತಪಟ್ಟಿದ್ದರು
- 2022ರ ಜನವರಿ 29: ಬ್ಯಾಡರಹಳ್ಳಿ ಮುಖ್ಯರಸ್ತೆಯ ಅಂಜನಾನಗರ ವೃತ್ತದಲ್ಲಿ ರಸ್ತೆ ಗುಂಡಿಯಿಂದಾಗಿ ಅಪಘಾತ ಸಂಭವಿಸಿ ಶಿಕ್ಷಕಿ ಶರ್ಮಿಳಾ (38) ಎಂಬುವರು ಮೃತಪಟ್ಟಿದ್ದರು

‘ಪತ್ರಿಕಾ ವಿತರಕರಿಗೆ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಾದ್ಯಂತ ಕೆಲಸ ಮಾಡುತ್ತಿರುವ ಪತ್ರಿಕಾ ವಿತರಕರು, ಹಂಚಿಕೆದಾರರು ಹಾಗೂ ಪತ್ರಿಕೆ ಹಾಕುವ ಹುಡುಗರಿಗೆ ಸರ್ಕಾರ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪಿಸಿ, ₹30 ಕೋಟಿ ಅನುದಾನ ಮೀಸಲಿಡಬೇಕು’ ಎಂದು ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಅಧ್ಯಕ್ಷ ಕೆ.ಶಂಭುಲಿಂಗ ಆಗ್ರಹಿಸಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ,‘ರಾಜ್ಯದಲ್ಲಿ 70 ಸಾವಿರಕ್ಕೂ ಹೆಚ್ಚು ಮಂದಿ ಪತ್ರಿಕಾ ವಿತರಕರಿದ್ದೇವೆ. ಮನೆ ಬಾಗಿಲಿಗೆ ಪತ್ರಿಕೆ ಹಾಕುವ ಹುಡುಗರೂ ಸೇರಿ 2 ಲಕ್ಷ ಜನ ಪತ್ರಿಕೆಗಳನ್ನು ನಂಬಿಕೊಂಡು ಜೀವನ ನಡೆಸುತ್ತಿದ್ದೇವೆ. ಯೂಟ್ಯೂಬ್, ವೆಬ್ ಸೇರಿದಂತೆ ಆನ್‌ಲೈನ್ ಸುದ್ದಿ ಮಾಧ್ಯಮಗಳ ಪೈಪೋಟಿ ನಡುವೆಯೂ ಮುದ್ರಣ ಮಾಧ್ಯಮದ ಉಳಿವಿಗೆ ನಮ್ಮ ಕೈಹಿಡಿಯಬೇಕಿದೆ’ ಎಂದರು.

‘ಕೋವಿಡ್‌ನಿಂದ ಮೃತಪಟ್ಟ ಪತ್ರಿಕಾ ವಿತರಕರಿಗೆ ₹3 ಲಕ್ಷ ಪರಿಹಾರ ನೀಡಬೇಕು. ಪತ್ರಿಕೆ ವಿತರಣೆ ಸಮಯದಲ್ಲಿ ಮೃತಪಟ್ಟವರಿಗೆ ₹5 ಲಕ್ಷ ಪರಿಹಾರ ಹಾಗೂ ಅಪಘಾತವಾದಲ್ಲಿ ಉಚಿತ ವೈದ್ಯಕೀಯ ಸೇವೆ ಕಲ್ಪಿಸಬೇಕು. 60 ವರ್ಷ ಮೇಲ್ಪಟ್ಟವರಿಗೆ ಪ್ರತಿ ತಿಂಗಳು ₹5 ಸಾವಿರ ಪಿಂಚಣಿ ಹಾಗೂ ಇಎಸ್‌ಐ ಸೌಲಭ್ಯ ಒದಗಿಸಬೇಕು’ ಎಂದು ಆಗ್ರಹಿಸಿದರು.

ಉಪಾಧ್ಯಕ್ಷ ಪ್ರಶಾಂತ್ ಕುಮಾರ್,‘ಸರ್ಕಾರದ ಪ್ರತಿ ವಿಷಯವನ್ನು ಜನರಿಗೆ ತಲುಪಿಸುವಲ್ಲಿ ವಿತರಕರ ಪಾತ್ರವೂ ಇದೆ. ಆದರೂ ಪ್ರತಿ ಬಜೆಟ್‌ನಲ್ಲಿ ಪತ್ರಿಕಾ ವಿತರಕರನ್ನು ಕಡೆಗಣಿಸುತ್ತಾ ಬಂದಿದ್ದಾರೆ. ಸರ್ಕಾರದ ಮುಂದೆ ನಮ್ಮ ಬೇಡಿಕೆಗಳನ್ನು ಇಟ್ಟರೂ ಯಾವುದೇ ಪ್ರಯೋಜನವಾಗಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ಎಲೆಮರೆ ಕಾಯಂತೆ ಕೆಲಸ ಮಾಡುವ ಪತ್ರಿಕಾ ವಿತರಕರನ್ನು ಸರ್ಕಾರ ಗುರುತಿಸಬೇಕು. ವಿತರಕರ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗುವಂತೆ ಸಹಾಯಧನ ನೀಡಬೇಕು. ಒಕ್ಕೂಟದಿಂದ ಮಾನ್ಯತೆ ಪಡೆದ ಎಲ್ಲ ವಿತರಕರನ್ನು ಈ ಸೌಲಭ್ಯಗಳಿಗೆ ಒಳಪಡಿಸಬೇಕು’ ಎಂದು ಶಂಭುಲಿಂಗ ಅವರು ಒತ್ತಾಯಿಸಿದರು.

23ನೇ ಮಹಡಿಯಿಂದ ಜಿಗಿದು ವಿದ್ಯಾರ್ಥಿ ಆತ್ಮಹತ್ಯೆ

ಬೆಂಗಳೂರು: ಕೋಣನಕುಂಟೆ ಠಾಣೆ ವ್ಯಾಪ್ತಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ 23ನೇ ಮಹಡಿಯಿಂದ ಜಿಗಿದು ಪಿಯು ವಿದ್ಯಾರ್ಥಿ ಆರ್. ಅಂಜನ್ (17) ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

‘ಕೊಳ್ಳೇಗಾಲದ ಅಂಜನ್, ಬೆಂಗಳೂರಿನ ಕಾಲೇಜೊಂದರಲ್ಲಿ ಪ್ರಥಮ ಪಿಯುಸಿ ವ್ಯಾಸಂಗ ಮಾಡುತ್ತಿದ್ದ. ಭಾನುವಾರ ಸಂಜೆ ಆತ ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ನಡೆಯುತ್ತಿದ್ದ ಭಾರತ ಹಾಗೂ ಶ್ರೀಲಂಕಾ ನಡುವಿನ ಕ್ರಿಕೆಟ್ ಪಂದ್ಯ ವೀಕ್ಷಿಸಲು ಸಂಬಂಧಿಕರ ಜೊತೆ ಅಂಜನ್ ಹೋಗಿದ್ದ. ಪಂದ್ಯದ ಅರ್ಧದಲ್ಲೇ ಕ್ರೀಡಾಂಗಣದಿಂದ ಹೊರಬಂದಿದ್ದ. ಅಲ್ಲಿಂದ ನೇರವಾಗಿ ಅಪಾರ್ಟ್‌ಮೆಂಟ್ ಸಮುಚ್ಚಯಕ್ಕೆ ಬಂದು ಮಹಡಿಯಿಂದ ಜಿಗಿದಿದ್ದ. ಈ ಬಗ್ಗೆ ಸಂಬಂಧಿಕರು ಹೇಳಿಕೆ ನೀಡಿದ್ದಾರೆ’ ಎಂದೂ ತಿಳಿಸಿದರು.

‘ಆತ್ಮಹತ್ಯೆಗೆ ಮುನ್ನ ಅಂಜನ್, ಸೆಲ್ಫಿ ವಿಡಿಯೊ ಚಿತ್ರೀಕರಿಸಿದ್ದ. ಅದೇ ವಿಡಿಯೊವನ್ನು ಆಡಿಯೊ ಸಂದೇಶದ ಸಮೇತ ತಂದೆ ಹಾಗೂ ಇತರರಿಗೆ ಕಳುಹಿಸಿದ್ದ. ‘ಕ್ಷಮಿಸಿ ಅಪ್ಪ. ನಾನು ನಿಮ್ಮನ್ನು ಬಿಟ್ಟು ಹೋಗುತ್ತಿದ್ದೇನೆ’ ಎಂಬುದಾಗಿ ಹೇಳಿದ್ದ’ ಎಂದು ಪೊಲೀಸರು ವಿವರಿಸಿದರು.

‘ತಂದೆ, ಸಂಬಂಧಿಕರು ಸ್ಥಳಕ್ಕೆ ಬರುವಷ್ಟರಲ್ಲೇ ಅಂಜನ್ ಆತ್ಮಹತ್ಯೆಗೆ ಶರಣಾಗಿದ್ದ. ಆತ್ಮಹತ್ಯೆಗೆ ನಿಖರ ಕಾರಣವೇನು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ’ ಎಂದರು.

ನಗರದಲ್ಲಿ ಇಂದು ‘ಜನಜಾಗೃತಿ ಜಾಥಾ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ) ಕಾಯ್ದೆ, ಎಪಿಎಂಸಿ (ನಿಯಂತ್ರಣ ಅಭಿವೃದ್ಧಿ) ಕಾಯ್ದೆ ಹಾಗೂ ಕರ್ನಾಟಕ ಜಾನುವಾರು ಹತ್ಯೆ (ನಿಷೇಧ ಮತ್ತು ಸಂರಕ್ಷಣೆ) ಕಾಯ್ದೆಯನ್ನು ರಾಜ್ಯ ಸರ್ಕಾರ ಹಿಂಪಡೆಯಲು ಆಗ್ರಹಿಸಿ ಹಮ್ಮಿಕೊಂಡಿರುವ ‘ಜನಜಾಗೃತಿ ಜಾಥಾ’ ಮಂಗಳವಾರ (ಮಾ.15) ಬೆಂಗಳೂರು ಪ್ರವೇಶಿಸಲಿದೆ’ ಎಂದು ಜನಾಂದೋಲನ ಮಹಾಮೈತ್ರಿಯ (ಜೆಎಂಎಂ) ಸಂಚಾಲಕ ಎಸ್.ಆರ್. ಹಿರೇಮಠ ಹೇಳಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಜನಾಂದೋಲನ ಮಹಾಮೈತ್ರಿ ವತಿಯಿಂದ ಬೀದರ್ ಜಿಲ್ಲೆಯ ಬಸವ ಕಲ್ಯಾಣದಿಂದ ಮಾ.1ರಂದು ಹಾಗೂ ಚಾಮರಾಜನಗರ ಜಿಲ್ಲೆಯ ಮಲೆಮಹದೇಶ್ವರ ಬೆಟ್ಟದಿಂದ ಮಾ.8ರಂದು ಜನಜಾಗೃತಿ ಜಾಥಾ ಆರಂಭಗೊಂಡಿತ್ತು. ಸದ್ಯ ನೆಲಮಂಗಲದಲ್ಲಿ ಜಾಥಾ ಒಗ್ಗೂಡಿದ್ದು, ಬೆಂಗಳೂರಿನಲ್ಲಿ ಸಮಾವೇಶಗೊಳ್ಳಲಿದೆ’ ಎಂದರು.

‘ಉಳುವವನೇ ಭೂ ಒಡೆಯ’ನಾಗಬೇಕೆಂಬ ಪ್ರಧಾನ ಆಶಯಕ್ಕೆ ವಿರುದ್ಧವಾಗಿ ‘ಉಳ್ಳವರಿಗೆ ಎಲ್ಲ ಭೂಮಿ’ ಎಂಬ ನೀತಿ ಜಾರಿಗೊಳಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಭೂ ಸುಧಾರಣೆ ತಿದ್ದುಪಡಿ ಕಾಯ್ದೆಯ ಮೂಲಕ ಕೃಷಿಭೂಮಿ ಕಬಳಿಸಲು ಮುಕ್ತ ಅವಕಾಶವಿದೆ. ಭೂಗಳ್ಳರನ್ನು ರಕ್ಷಿಸಿ, ರಿಯಲ್ ಎಸ್ಟೇಟ್ ದಂಧೆಯನ್ನು ಪ್ರೋತ್ಸಾಹಿಸಲಿದೆ’ ಎಂದು ಆಕ್ಷೇಪ ವ್ಯಕ್ತಪಡಿಸಿದರು.

‘ಬಂಡವಾಳಶಾಹಿಗಳು ವ್ಯಾಪಾರದ ಹೆಸರಿನಲ್ಲಿ ತಾವು ನಿರ್ಧರಿಸುವ ಬೆಲೆಗೆ ರೈತರ ಉತ್ಪನ್ನಗಳನ್ನು ಕೊಳ್ಳಲು ಮುಕ್ತ ಅವಕಾಶ ಸಿಗಲಿದೆ. ಕೃಷಿ ಉತ್ಪನ್ನಗಳ ಜೂಜುಕೋರ ವ್ಯಾಪಾರಕ್ಕೆ ಮುಕ್ತ ವಾತಾವರಣ ನಿರ್ಮಿಸಲಿದ್ದಾರೆ. ಇದರಿಂದ ರೈತರು ಹಾಗೂ ಗ್ರಾಹಕರಿಬ್ಬರಿಗೂ ಮೋಸ ಮಾಡಿ ಮಧ್ಯವರ್ತಿಗಳು ಲೂಟಿ ಮಾಡಲಿದ್ದಾರೆ. ಇದು ದೇಶಕ್ಕೆ ಮಾರಕ’ ಎಂದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಸಮಾವೇಶ ಇಂದು: ‘ಜನಾಂದೋಲನ ಮಹಾಮೈತ್ರಿ ಸಂಘಟಿಸಿದ ಜನಜಾಗೃತಿ ಜಾಥಾ ಬೆಂಗಳೂರಿನಲ್ಲಿ ಮಂಗಳವಾರ ಸಮಾವೇಶಗೊಳ್ಳಲಿದೆ. ಬೆಳಿಗ್ಗೆ 10.30ಕ್ಕೆ ಸ್ವಾತಂತ್ರ್ಯ ಉದ್ಯಾನದಲ್ಲಿ ರಾಜ್ಯಮಟ್ಟದ ಸಮಾವೇಶ ನಡೆಯಲಿದೆ. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್. ಎನ್.ನಾಗಮೋಹನ್ ದಾಸ್ ಸಮಾವೇಶ ಉದ್ಘಾಟಿಸಲಿದ್ದು, ರೈತ ನಾಯಕ ಸುನೀಲಂ ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ’ ಎಂದು ಎಸ್.ಆರ್. ಹಿರೇಮಠ ಅವರು ಮಾಹಿತಿ ನೀಡಿದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ವಿವಾದದಿಂದ ಶೈಕ್ಷಣಿಕ ಮತ್ತು ಬಂಡವಾಳ ಹೂಡಿಕೆಗೆ ಹಿನ್ನಡೆ ಹೇಳಿಕೆಯಿಂದಾಗಿ ವಾಗ್ವಾದ

ಹಿಜಾಬ್: ಕಾಂಗ್ರೆಸ್– ಬಿಜೆಪಿ ಜಟಾಪಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಜಾಬ್ ವಿಚಾರವಾಗಿ ಉದ್ಭವಿಸಿದ ಪ್ರಕ್ಷುಬ್ಧ ಪರಿಸ್ಥಿತಿಯಿಂದ ರಾಜ್ಯದಲ್ಲಿ ಶೈಕ್ಷಣಿಕ ಮತ್ತು ಬಂಡವಾಳ ಹೂಡಿಕೆಗೆ ಹಿನ್ನಡೆ ಆಗಿದೆ ಎಂದು ವಿಧಾನಸಭೆ ವಿರೋಧಪಕ್ಷದ ಉಪನಾಯಕ ಯು.ಟಿ.ಖಾದರ್ ಅವರು ನೀಡಿದ ಹೇಳಿಕೆ, ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ಮಧ್ಯೆ ಬಿಸಿ ಬಿಸಿ ವಾಗ್ವಾದಕ್ಕೆ ಕಾರಣವಾಯಿತು.

ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಖಾದರ್, 'ರಾಜ್ಯದಲ್ಲಿ ಬಂಡವಾಳ ಹೂಡಿಕೆ ಸಮಾವೇಶಗಳನ್ನು ಮಾಡುವ ಬದಲು, ಸಾಮರಸ್ಯ ಸಮಾವೇಶಗಳನ್ನು ನಡೆಸಬೇಕು. ಸಮವಸ್ತ್ರ, ಹಿಜಾಬ್ ವಿಚಾರದಲ್ಲಿ ನಡೆದ ಘಟನಾವಳಿಯಿಂದ ರಾಜ್ಯಕ್ಕೆ ಕಳಂಕ ಬಂದಿದೆ. ಈ ವಿಚಾರ ನ್ಯಾಯಾಲಯಕ್ಕೆ ಹೋಗಲು ಬಿಡದೇ ಸರ್ಕಾರವೇ ಸೌಹಾರ್ದವಾಗಿ ಬಗೆಹರಿಸಬೇಕಿತ್ತು. ಸರ್ಕಾರ ಅದನ್ನು ಮಾಡಿಲ್ಲ, ಅದರಿಂದ ರಾಜ್ಯಕ್ಕೆ ನಷ್ಟವಾಗಿದೆ' ಎಂದರು.

ಈ ಮಾತುಗಳಿಂದ ಸಿಟ್ಟಿಗೆದ್ದ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ, 'ಈ ಘಟನೆಗಳಿಗೆ ಕಾರಣರು ಯಾರು? ನ್ಯಾಯಾಲಯಕ್ಕೆ ಹೋಗಿ ಎಂದು ನಾವೇನೂ ಹೇಳಿಲ್ಲ. ಅವರಾಗಿಯೇ ಹೋಗಿದ್ದಾರೆ. ಕಾನೂನು ಸುವ್ಯವಸ್ಥೆ ಸರಿಯೇ ಇದೆ. ಸಮಸ್ಯೆಗಳ ಸೃಷ್ಟಿಗೆ ಮೂಲ ಕಾರಣರು ಯಾರು ಹೇಳಿ. ನೀವೇ ಕಾರಣರು, ಅರಾಜಕತೆಯನ್ನು ನೀವೇ ಸೃಷ್ಟಿಸಿದ್ದೀರಿ' ಎಂದು ಅವರು ಖಾದರ್ ಮೇಲೆ ಮುಗಿಬಿದ್ದರು. ಇದರಿಂದ ಖಾದರ್ ಒಂದು ಕ್ಷಣ ಅಪ್ರತಿಭರಾದರು. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಇತರ ಸದಸ್ಯರು ತಕ್ಷಣವೇ ಅವರ ನೆರವಿಗೆ ಧಾವಿಸಿದರು.

ಸರ್ಕಾರ ಮೇಲೆ ಆರೋಪ ಮಾಡುತ್ತಿದ್ದಾಗ ಸುಮ್ಮನೇ ಇದ್ದ ಗೃಹ ಸಚಿವ ಆರಗ ಜ್ಞಾನೇಂದ್ರ ಅವರ ಮೇಲೂ ಗರಂ ಆದ ಮಾಧುಸ್ವಾಮಿ, 'ಏನ್ರಿ ಇಷ್ಟೇ ಹೇಳುತ್ತಿದ್ದರೂ ಸುಮ್ಮನೇ ಇದ್ದೀರಲ್ಲ, ಗೃಹ ಸಚಿವರೇ' ಎಂದರು.

ಇದರಿಂದ ಎಚ್ಚೆತ್ತ ಜ್ಞಾನೇಂದ್ರ, 'ಸರ್ಕಾರದ ಸಮವಸ್ತ್ರ ನೀತಿ ಬಗ್ಗೆ ಸವಾಲು ಹಾಕುವಂತೆ ಮಕ್ಕಳನ್ನು ತರಬೇತಿ ಮಾಡಿಲ್ಲವೇ. ಇದು ಸಮಸ್ಯೆಗೆ ಮೂಲ ಕಾರಣವಲ್ಲವೇ' ಎಂದರು.

'ರಾಜ್ಯದಲ್ಲಿ ಬಂಡವಾಳ ಹೂಡಿಕೆ ಆಗಬೇಕಿದ್ದರೆ ಪರಿಸ್ಥಿತಿ ಸಹಜವಾಗಿರಬೇಕು. ಕೋಮು ಗಲಭೆಗಳು ಆಗಬಾರದು' ಎಂದು ಕಾಂಗ್ರೆಸ್‌ನ ಆರ್‌.ವಿ.ದೇಶಪಾಂಡೆ ಹೇಳಿದರು. 'ರಾಜ್ಯದಲ್ಲಿ ಎರಡೂ ಪ್ರಕರಣಗಳಲ್ಲಿ (ಉಡುಪಿ ಮತ್ತು ಶಿವಮೊಗ್ಗ) ಸಾಮರಸ್ಯ ಕದಡಿದವರು ಯಾರು' ಎಂದು ಮಾಧುಸ್ವಾಮಿ ಮತ್ತು ಸಚಿವ ಸಿ.ಸಿ.ಪಾಟೀಲ ಮತ್ತೊಮ್ಮೆ ಪ್ರಶ್ನಿಸಿದರು.

ಶಿವಮೊಗ್ಗದಲ್ಲಿ ಹರ್ಷ ಅವರ ಕೊಲೆ ಆದಾಗ ನಿಷೇಧಾಜ್ಞೆ ಉಲ್ಲಂಘಿಸಿ ಮೆರವಣಿಗೆ ನಡೆಸಿದ ಸಚಿವರ ಮೇಲೆ ಯಾವ ಕ್ರಮ ಕೈಗೊಂಡಿದ್ದೀರಿ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

'ರಾಜ್ಯದಲ್ಲಿ ಕೋವಿಡ್ ಮೂರನೇ ಅಲೆ ಸಂದರ್ಭದಲ್ಲಿ 144 ನೇ ಸೆಕ್ಷನ್ ವಿಧಿಸಿದಾಗಲೂ ವಿರೋಧ ಪಕ್ಷದ ನಾಯಕರು ಸೇರಿ ಹಲವರು ಮೇಕೆದಾಟು ಪಾದಯಾತ್ರೆ ನಡೆಸಿದ್ದೀರಿ, ನಿಮಗೆ ಯಾವ ನೈತಿಕತೆ ಇದೆ' ಎಂದು ಮಾಧುಸ್ವಾಮಿ ಹರಿಹಾಯ್ದರು. 'ಪಾದಯಾತ್ರೆ ಮಾಡಿದ್ದಕ್ಕೆ ನಮ್ಮ ಮೇಲೆ ಪ್ರಕರಣಗಳನ್ನು ದಾಖಲಿಸಿಲ್ಲವೇ, ಶಿವಮೊಗ್ಗದ ಪ್ರಕರಣದಲ್ಲಿ ಸಚಿವರ ವಿರುದ್ಧ ಏಕೆ ಪ್ರಕರಣ ದಾಖಲಿಸಿಕೊಂಡಿಲ್ಲ. ಆಳಂದದಲ್ಲಿ ಕೇಂದ್ರ ಸಚಿವರು ನಿಷೇಧಾಜ್ಞೆ ಉಲ್ಲಂಘಿಸಿಲ್ಲವೆ' ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

'ಶಿವನ ಪೂಜೆಗೆ ಐದು ಜನ ಹೋಗಿದ್ದರು. ಅವರ ಮೇಲೆ 200 ಜನರ ಕಲ್ಲು ಹೊಡೆದರು' ಎಂದು ಆರಗ ಜ್ಞಾನೇಂದ್ರ ಹೇಳಿದಾಗ, 'ನೀವು ಸಚಿವರು ಎಂಬುದು ಮರೆಯಬೇಡಿ. ಶಾಸಕರಂತೆ ಮಾತನಾಡಬೇಡಿ' ಎಂದು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಕಿವಿ ಹಿಂಡಿದರು.

'ರಾಜ್ಯದಲ್ಲಿ ಪ್ರೀತಿ ವಿಶ್ವಾಸದ ವಾತಾವರಣ ನೆಲೆಸಬೇಕು. ವಿವಾದದ ಕಾರಣದಿಂದ ಪರೀಕ್ಷೆ ಬರೆಯಲು ಸಾಧ್ಯವಾಗದವರಿಗೆ ಮತ್ತೊಮ್ಮೆ ಪರೀಕ್ಷೆ ಬರೆಯಲು ಅವಕಾಶ ನೀಡಬೇಕು' ಎಂದು ಖಾದರ್ ಸರ್ಕಾರಕ್ಕೆ ಮನವಿ ಮಾಡಿದರು.

ಸಮವಸ್ತ್ರ ವಿವಾದ: ಎಚ್‌ಡಿಕೆ ನಿಲುವಳಿ ಸೂಚನೆ

ಬೆಂಗಳೂರು: ರಾಜ್ಯದ ಶಾಲಾ ಕಾಲೇಜುಗಳಲ್ಲಿನ ಸಮವಸ್ತ್ರ ವಿವಾದದ ಬಗ್ಗೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ವಿಧಾನಸಭೆಯಲ್ಲಿ ಸೋಮವಾರ ಪ್ರಸ್ತಾಪಿಸಿದರು.

ಪ್ರಶ್ನೋತ್ತರ ಅವಧಿಯ ಬಳಿಕ ನಿಲುವಳಿ ಸೂಚನೆ ಮಂಡಿಸಿದ ಕುಮಾರಸ್ವಾಮಿ, 'ಈ ವಿವಾದದಿಂದಾಗಿ ವಿದ್ಯಾರ್ಥಿಗಳ ಮಧ್ಯೆ ಅಪನಂಬಿಕೆ ಮೂಡುವಂತಾಗಿದೆ. ಕುವೆಂಪು ಅವರು ಸರ್ವ ಜನಾಂಗದ ಶಾಂತಿಯ ತೋಟ ಎಂದು ಹೇಳಿದ್ದರು. ಆದರೆ, ಶಿವಮೊಗ್ಗ ಜಿಲ್ಲೆಯಲ್ಲೇ ಹಲವು ಅಹಿತಕರ ಘಟನೆಗಳು ನಡೆದಿವೆ' ಎಂದರು.

ಕಾಂಗ್ರೆಸ್‌ನ ಜಮೀರ್ ಅಹ್ಮದ್ ಖಾನ್ ಆಕ್ಷೇಪಿಸಿ, 'ಶಾಲಾ ಕಾಲೇಜುಗಳಲ್ಲಿ ಹಿಜಾಬ್ ಅಗತ್ಯ ಇಲ್ಲ ಎಂದು ಕುಮಾರಸ್ವಾಮಿ ಈ ಹಿಂದೆ ಹೇಳಿದ್ದರು. ಈಗ ವಿವಾದ ತಣ್ಣಗಾದ ನಂತರ ಸದನದಲ್ಲಿ ಈ ವಿಚಾರ ಪ್ರಸ್ತಾಪಿಸಿದ್ದಾರೆ. ಇದು ಅವರ ದ್ವಂದ್ವ ನಿಲುವು' ಎಂದರು. ಈ ಮಾತಿಗೆ ಜೆಡಿಎಸ್ ಸದಸ್ಯರು ಆಕ್ಷೇಪಿಸಿದರು. ಈ ವೇಳೆ ಜಮೀರ್ ಹಾಗೂ ಜೆಡಿಎಸ್ ಸದಸ್ಯರ ನಡುವೆ ವಾಕ್ಸಮರ ನಡೆಯಿತು.

ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ, 'ಈ ಪ್ರಕರಣ ನಿಲುವಳಿ ಸೂಚನೆಗೆ ಅರ್ಹ ಅಲ್ಲ. ಇದು ಇತ್ತೀಚೆಗೆ ನಡೆದ ಘಟನೆ ಅಲ್ಲ. ಅಲ್ಲದೆ, ಈ ಪ್ರಕರಣ ನ್ಯಾಯಾಲಯದಲ್ಲಿದೆ. ಈ ಪ್ರಸ್ತಾವವನ್ನು ತಿರಸ್ಕರಿಸಬೇಕು' ಎಂದು ಸಲಹೆ ನೀಡಿದರು.

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, 'ಇದು ನಿಲುವಳಿ ಸೂಚನೆಯ ವ್ಯಾಪ್ತಿಗೆ ಬರುವುದಿಲ್ಲ. ಇದನ್ನು ನಿಯಮ 69ರಡಿ ಪರಿವರ್ತಿಸಿ ಒಂದೆರಡು ದಿನಗಳಲ್ಲಿ ಚರ್ಚೆಗೆ ಅವಕಾಶ ನೀಡುವೆ' ಎಂದರು.

ಸುದ್ದಿ 2 ನಿಮಿಷ

ಸರ್ಕಾರದ ಆದೇಶಕ್ಕೆ ಹೈಕೋರ್ಟ್ ತಡೆ

ಬೆಂಗಳೂರು: ಪೂರಕ ಪೌಷ್ಟಿಕಾಂಶ ತಯಾರಿ ಮಹಿಳಾ ತರಬೇತಿ ಕೇಂದ್ರಗಳನ್ನು (ಎಂಎಸ್‌ಪಿಟಿಸಿ) ರಚಿಸಿದ್ದ ಆದೇಶವನ್ನು ಹಿಂಪಡೆದ, ಸರ್ಕಾರದ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ.

ಸರ್ಕಾರದ ಆದೇಶ ಪ್ರಶ್ನಿಸಿ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಸಂಗೀತಾ ಗದುಗಿನ ಮತ್ತಿತರರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿ ಈ ತಡೆ ಆದೇಶ ನೀಡಿದೆ.

'ಮಕ್ಕಳು ಮತ್ತು ಗರ್ಭಿಣಿಯರಿಗೆ ಪೌಷ್ಟಿಕಾಂಶಯುಕ್ತ ಆಹಾರ ಪೂರೈಸುವ ನಿಟ್ಟಿನಲ್ಲಿ ಸೂಕ್ತ ಪರಿಹಾರ ಹುಡುಕುವ ಸಂಬಂಧ ತಾಂತ್ರಿಕ ಸಮಿತಿ ನೀಡಿರುವ ವರದಿಯನ್ನು ಒಪ್ಪಿಕೊಳ್ಳುವ ಕುರಿತಂತೆ ಸರ್ಕಾರ ತನ್ನ ನಿರ್ಧಾರ ತಿಳಿಸಬೇಕು' ಎಂದೂ ನ್ಯಾಯಪೀಠ ನಿರ್ದೇಶಿಸಿದೆ.

ಸಮಗ್ರ ಶಿಶು ಅಭಿವೃದ್ಧಿ ಸೇವೆಗಳ ಯೋಜನೆ (ಐಸಿಡಿಎಸ್) ಅಡಿ ಮಕ್ಕಳು, ಗರ್ಭಿಣಿಯರು ಮತ್ತು ಎದೆ ಹಾಲುಣಿಸುವ ತಾಯಂದಿರಿಗೆ ಪೌಷ್ಟಿಕಾಂಶ ಯುಕ್ತ ಮತ್ತು ಗುಣಮಟ್ಟದ ಆಹಾರ ಪೂರೈಸುವುದನ್ನು ಖಾತರಿಪಡಿಸುವ ದಿಸೆಯಲ್ಲಿ, ಪೂರಕ ಪೌಷ್ಟಿಕಾಂಶ ತಯಾರಿ ಮಹಿಳಾ ತರಬೇತಿ ಕೇಂದ್ರಗಳನ್ನು (ಎಂಎಸ್‌ಪಿಟಿಸಿ) ರಚಿಸಲಾಗಿತ್ತು. ಆದರೆ, ಸರ್ಕಾರ ಆದೇಶವನ್ನು ಹಿಂಪಡೆದಿತ್ತು.

'ತಳ ಸಮುದಾಯಗಳು ರಾಜಕೀಯ ಶಕ್ತಿ ಬೆಳಸಿಕೊಳ್ಳಬೇಕು'



ಬೊಮ್ಮನಹಳ್ಳಿ: 'ಶತಮಾನಗಳಿಂದ ತುಳಿತಕ್ಕೆ ಒಳಗಾದ ಸಮುದಾಯಗಳು, ಪ್ರಬಲ ರಾಜಕೀಯ ಶಕ್ತಿಯಾಗಿ ಬೆಳೆದರೆ ಮಾತ್ರ ಆರ್ಥಿಕವಾಗಿ ಶಕ್ತರಾಗಲು ಸಾಧ್ಯ' ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಹೇಳಿದರು.

ಅರಕೆರೆಯಲ್ಲಿ ಬೆಂಗಳೂರು ಬಿಲ್ಲವ ಅಸೋಸಿಯೇಷನ್ ಆಯೋಜಿಸಿದ್ದ 45ನೇ ವಾರ್ಷಿಕೋತ್ಸವ ಹಾಗೂ ಬಿಲ್ಲವ ಯುವ ಹಬ್ಬದಲ್ಲಿ ಅವರು ಮಾತನಾಡಿದರು. 'ಪ್ರತಿಭೆ ಎಂಬುದು ಪ್ರಜ್ಞೆಯಿಂದ ಉದ್ಭವಿಸುವುದಿಲ್ಲ, ಅವಕಾಶಗಳಿಂದ ಹೊರ ಹೊಮ್ಮುತ್ತದೆ. ಅವಕಾಶ ವಂಚಿತ ಸಮುದಾಯಗಳಿಗೆ ಅವಕಾಶಗಳನ್ನು ಸೃಷ್ಟಿಸಿ ಮುಖ್ಯವಾಹಿನಿಗೆ ತರುವುದು ಆಳುವ ಸರ್ಕಾರಗಳ ಜವಾಬ್ದಾರಿ' ಎಂದು ಹೇಳಿದರು.

ಹೈಕೋರ್ಟ್ ವಕೀಲ ತಾರಾನಾಥ ಪೂಜಾರಿ ಹಾಗೂ ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಗೋಪಾಲ್ ಸಿ.ಬಂಗೇರ ಅವರನ್ನು ಸನ್ಮಾನಿಸಲಾಯಿತು. ಪೋರ್ಟಿಸ್ ಆಸ್ಪತ್ರೆಯ ಡಾ.ಸ್ನೇಹಲ್ ಸುಧಾಕರ್ ಅಧ್ಯಕ್ಷತೆ ವಹಿಸಿದ್ದರು. ಸಂಘದ ಅಧ್ಯಕ್ಷ ವೇದ ಕುಮಾರ್, ಗೌರವಾಧ್ಯಕ್ಷ ಭಾಸ್ಕರ ಸಿ.ಅಮೀನ್, ಹಿರಿಯ ಉಪಾಧ್ಯಕ್ಷ ಕೇಶವ ಪೂಜಾರಿ ಇದ್ದರು. ಮಕ್ಕಳು, ಮಹಿಳಾ ತಂಡ ಹಾಗೂ ಯುವಕರು ಯಕ್ಷಗಾನ ಸೇರಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

ಕರಗಕ್ಕೆ ನೆರವಿನ ಭರವಸೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನಡೆಯುವ ಕರಗ ಉತ್ಸವಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಆರ್ಥಿಕ ನೆರವು ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಭರವಸೆ ನೀಡಿದರು.

ವಿಧಾನ ಪರಿಷತ್‌ನಲ್ಲಿ ಸೋಮವಾರ ಕಾಂಗ್ರೆಸ್‌ನ ಪಿ.ಆರ್. ರಮೇಶ್ ಪ್ರಶ್ನೆಗೆ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್ ಕುಮಾರ್ ಪರವಾಗಿ ಉತ್ತರಿಸಿದ ಅವರು, 'ರಾಜ್ಯದ 11 ಜಿಲ್ಲೆಗಳಲ್ಲಿ ಕರಗ ಆಚರಣೆ ನಡೆಯುತ್ತದೆ. 2017-18ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ₹ 1.60 ಕೋಟಿ ಅನುದಾನ ನೀಡಲಾಗಿತ್ತು. ಆ ಬಳಿಕ ಸರ್ಕಾರದಿಂದ ಕರಗ ಉತ್ಸವಕ್ಕೆ ಅನುದಾನ ನೀಡಿಲ್ಲ' ಎಂದರು.

ಕಾಯಕ ಸಮಾಜ ಮತ್ತು ಕೆಳವರ್ಗದ ಜನರಿಂದಲೇ ಸಂಸ್ಕೃತಿ ಉಳಿಯುವುದು. ಈ ವರ್ಗದ ಜನರು ನಡೆಸುವ ಉತ್ಸವ ಮತ್ತು ಕಲಾ ಪ್ರದರ್ಶನಗಳಿಗೆ ಆರ್ಥಿಕ ನೆರವು ನೀಡುವ ವಿಷಯದಲ್ಲಿ ಸರ್ಕಾರ ಮುಕ್ತ ಮನಸ್ಸು ಹೊಂದಿದೆ ಎಂದು ಹೇಳಿದರು.

'ತಿಂಗಳೊಳಗೆ ಕರಗ ಉತ್ಸವಗಳು ಮುಗಿಯಲಿವೆ. ಬೆಂಗಳೂರು ಕರಗ ಐತಿಹಾಸಿಕವಾದುದು. ಈ ಉತ್ಸವಗಳಿಗೆ ಹೆಚ್ಚು ನೆರವು ನೀಡಬೇಕು. ಅನುದಾನ ನೀಡಲು ತ್ವರಿತ ಕ್ರಮ ಕೈಗೊಳ್ಳಬೇಕು' ಎಂದು ರಮೇಶ್ ಆಗ್ರಹಿಸಿದರು.

ಬಿಜೆಪಿಯ ಎಚ್. ವಿಶ್ವನಾಥ್ ಮಾತನಾಡಿ, 'ಸಮಾಜದ ಕೆಳವರ್ಗದ ಜನರೇ ನಿಜವಾದ ಸಂಸ್ಕೃತಿ ಆರಾಧಕರು. ಕರಗ, ಡೊಳ್ಳು ಕುಣಿತ, ವಾದ್ಯಗಳನ್ನು ನುಡಿಸುವುದರಲ್ಲಿ ನಮ್ಮ ಸಂಸ್ಕೃತಿ ಅಡಗಿದೆ. ಇಂತಹ ಚಟುವಟಿಕೆಗಳನ್ನು ಪ್ರೋತ್ಸಾಹಿಸಬೇಕು' ಎಂದರು.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಕಂದಾಯ ಸಚಿವ ಆರ್‌.ಅಶೋಕ

ಸಬ್ ರಿಜಿಸ್ಟ್ರಾರ್ ಕಚೇರಿಗಳಲ್ಲಿ ಸರ್ವರ್ ಸಮಸ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಸಬ್ ರಿಜಿಸ್ಟ್ರಾರ್ ಕಚೇರಿಗಳಲ್ಲಿ ಸರ್ವರ್ ಸಮಸ್ಯೆ ಇರುವುದು ನಿಜ. 15-20 ದಿನಗಳಿಗೊಮ್ಮೆ ಈ ಸಮಸ್ಯೆ ಆಗುತ್ತಿದೆ' ಎಂದು ಕಂದಾಯ ಸಚಿವ ಆರ್. ಅಶೋಕ ಅವರು ಒಪ್ಪಿಕೊಂಡರು.

ವಿಧಾನಸಭೆಯಲ್ಲಿ ಸೋಮವಾರ ಪ್ರಶ್ನೋತ್ತರ ಅವಧಿಯಲ್ಲಿ ಶರತ್ ಬಚ್ಚೇಗೌಡ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಬಿಎಸ್‌ಎನ್‌ಎಲ್ ಹಾಗೂ ಏರ್‌ಟೆಲ್ ಸಂಸ್ಥೆಗಳ ಸಹಯೋಗದಲ್ಲಿ ಈ ಕಚೇರಿಗಳಿಗೆ ನೆಟ್‌ವರ್ಕ್ ಒದಗಿಸಲಾಗಿದೆ. ಹವಾಮಾನ ವೈಪರೀತ್ಯದಿಂದ ಕೆಲವೊಮ್ಮೆ ಬಿಎಸ್‌ಎನ್‌ಎಲ್ ಸಂಪರ್ಕದಲ್ಲಿ ವ್ಯತ್ಯಯ ಉಂಟಾಗುತ್ತಿದೆ. ಆ ಸಮಯದಲ್ಲಿ ನೋಂದಣಿ ಪ್ರಕ್ರಿಯೆಯೂ ತೊಂದರೆ ಆಗುತ್ತಿದೆ. ಈ ಸಮಸ್ಯೆಯನ್ನು ಇ– ಆಡಳಿತ ಪರಿಹರಿಸುತ್ತಿದೆ' ಎಂದು ಹೇಳಿದರು.

ಈ ವರ್ಷ ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ₹12,655 ಕೋಟಿ ರಾಜಸ್ವ ಸಂಗ್ರಹಿಸುವ ಗುರಿ ಹೊಂದಿತ್ತು. ಇಲಾಖೆ ಹೆಚ್ಚುವರಿಯಾಗಿ ₹50 ಕೋಟಿ ರಾಜಸ್ವ ಸಂಗ್ರಹಿಸಿದೆ ಎಂದು ಅವರು ಹೇಳಿದರು.



ವಿಧಾನಸಭೆಯಲ್ಲಿ ಕಂದಾಯ ಸಚಿವ ಆರ್‌.ಅಶೋಕ ಮಾತನಾಡಿದರು. ಸಚಿವರಾದ ಜೆ.ಸಿ.ಮಾಧುಸ್ವಾಮಿ, ಸಿ.ಸಿ.ಪಾಟೀಲ ಚಿತ್ರದಲ್ಲಿದ್ದಾರೆ

ಜೆಡಿಎಸ್‌ನ ಎ.ಮಂಜುನಾಥ್ ಅವರು ಪ್ರಶ್ನೆಗೆ ಉತ್ತರಿಸಿದ ಸಚಿವರು, 'ರಾಮನಗರ ಜಿಲ್ಲೆಯ ಬಿಡದಿ ಹಾಗೂ ಕುದೂರು ಪಟ್ಟಣದಲ್ಲಿ ಉಪನೋಂದಣಾಧಿಕಾರಿ ಕಚೇರಿ ಆರಂಭಕ್ಕೆ ಶೀಘ್ರ ಕ್ರಮ ಕೈಗೊಳ್ಳಲಾಗುವುದು. ರಾಜ್ಯದ ವಿವಿಧ ಕಡೆಗಳಲ್ಲಿ ಅಗತ್ಯ ಇರುವಲ್ಲಿ ಸಬ್ ರಿಜಿಸ್ಟ್ರಾರ್ ಕಚೇರಿಗಳನ್ನು ಆರಂಭಿಸಲಾಗುವುದು' ಎಂದು ಹೇಳಿದರು.

ನಾಡಕಚೇರಿಗೆ ಚಿಕ್ಕಾಸು ಅನುದಾನ: ನಾಡ ಕಚೇರಿಗಳ ನಿರ್ಮಾಣಕ್ಕೆ ಸರ್ಕಾರ ನೀಡುತ್ತಿರುವ ಅನುದಾನ ಯಾವುದಕ್ಕೂ ಸಾಲದು ಎಂದು ಹಲವು ಸದಸ್ಯರು ಆಕ್ಷೇಪಿಸಿದರು.

ಈ ಬಗ್ಗೆ ಕಾಂಗ್ರೆಸ್‌ನ ಅನಿಲ್ ಚಿಕ್ಕಮಾದು ಪ್ರಶ್ನೆ ಕೇಳಿದರು. ನಾಡ ಕಚೇರಿ ನಿರ್ಮಾಣಕ್ಕೆ ನೀಡುತ್ತಿರುವ ಅನುದಾನದ ಬಗ್ಗೆ ಸಚಿವ ಅಶೋಕ ಉತ್ತರ ನೀಡಿದರು. ಜೆಡಿಎಸ್‌ನ ವೆಂಕಟರಾವ್ ನಾಡಗೌಡ, 'ನಾಡ ಕಚೇರಿಗಳಲ್ಲಿ ಎರಡು ಕುರ್ಚಿಗಳನ್ನು ಹಾಕಲು ಜಾಗ ಇರುವುದಿಲ್ಲ' ಎಂದು ಹೇಳಿದರು. ಕುಮಾರ ಬಂಗಾರಪ್ಪ ಅವರು ಸಹ ಧ್ವನಿಗೂಡಿಸಿದರು. ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, 'ಬೆಂಗಳೂರಿನಲ್ಲಿ ಕುಳಿತು ಅವುಗಳ ವಿನ್ಯಾಸ ಮಾಡಲಾಗುತ್ತದೆ. ಆಯಾ ಪ್ರದೇಶಕ್ಕೆ ತಕ್ಕಂತೆ ವಿನ್ಯಾಸ ಮಾಡುತ್ತಿಲ್ಲ. ಇದರಿಂದ ಸಮಸ್ಯೆ ಸೃಷ್ಟಿಯಾಗುತ್ತಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು. ಮುಂದಿನ ದಿನಗಳಲ್ಲಿ ನಾಡ ಕಚೇರಿಗಳಿಗೆ ಹೊಸ ಸ್ವರೂಪ ನೀಡಲಾಗುವುದು ಎಂದು ಸಚಿವರು ಭರವಸೆ ನೀಡಿದರು.

ಕಂದಾಯ ಗ್ರಾಮಗಳಿಗೆ ಜಾತಿ ಸೂಚಕ ಹೆಸರು ಇಲ್ಲ: ಸಚಿವ ಅಶೋಕ

ಬೆಂಗಳೂರು: 'ಕಂದಾಯ ಗ್ರಾಮಗಳಿಗೆ ಜಾತಿ ಸೂಚಕ ಹೆಸರು ಇಡದಂತೆ ಅಧಿಕಾರಿಗಳಿಗೆ ಸೂಚನೆ ನೀಡುತ್ತೇನೆ' ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದರು.

ವಿಧಾನಸಭೆಯಲ್ಲಿ ಸೋಮವಾರ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಬಸನಗೌಡ ತುರುವಿಹಾಳ್ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಈ ಹಿಂದೆ ಕೆಲವು ಗ್ರಾಮಗಳಿಗೆ ಜಾತಿ ಸೂಚಕ ಹೆಸರು ಇಡಲಾಗಿತ್ತು. ಅವುಗಳನ್ನು ಬದಲಿಸಲು ನಿರ್ದೇಶನ ನೀಡುತ್ತೇನೆ' ಎಂದರು.

ಕಾಂಗ್ರೆಸ್‌ನ ಕೆ.ಆರ್.ರಮೇಶ್ ಕುಮಾರ್, 'ಕೆಲವು ಗ್ರಾಮಗಳಿಗೆ ಜಾತಿ ಸೂಚಕ ಹೆಸರು ಇಡಲಾಗಿದೆ. ಇದು ಸರಿಯಲ್ಲ' ಎಂದು ಗಮನ ಸೆಳೆದರು

ಕಾಂಗ್ರೆಸ್‌ನ ಬಸವನಗೌಡ ದದ್ದಲ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಮುಜರಾಯಿ ದೇವಸ್ಥಾನಗಳನ್ನು ಖಾಸಗಿಯವರಿಗೆ ವಹಿಸುವ ಪ್ರಶ್ನೆಯೇ ಇಲ್ಲ' ಎಂದು ಸ್ಪಷ್ಟಪಡಿಸಿದರು.

ಯುವತಿ, ಟೆಂಪೊ ಕ್ಲೀನರ್ ಸಾವು; 9 ಮಂದಿಗೆ ಗಾಯ

ಹಿರಿಯೂರು: ಇಲ್ಲಿನ ರಾಷ್ಟ್ರೀಯ ಹೆದ್ದಾರಿ ನಾಲ್ಕರ ಬಗ್ಗನಡು ಗೇಟ್ ಬಳಿ ಸೋಮವಾರ ಮುಂಜಾನೆ ಟೆಂಪೊ ಟ್ರಾವೆಲರ್ ವಾಹನವು ನಿಂತಿದ್ದ ಲಾರಿಗೆ ಡಿಕ್ಕಿ ಹೊಡೆದು ಇಬ್ಬರು ಮೃತಪಟ್ಟಿದ್ದು, ಒಂಬತ್ತು ಮಂದಿ ಗಾಯಗೊಂಡಿದ್ದಾರೆ. ಇಬ್ಬರಿಗೆ ಯಾವುದೇ ತೊಂದರೆಯಾಗಿಲ್ಲ.

ಬೆಂಗಳೂರಿನ ಯುವತಿ ಶ್ವೇತಾ (24), ಟೆಂಪೊ ಟ್ರಾವೆಲರ್ ಕ್ಲೀನರ್ ಅರಿಕ್ಯದಾಸ್ (19) ಮೃತಪಟ್ಟವರು.

ಬೆಂಗಳೂರಿನ ಇಂಡಿಯನ್ ಅಕಾಡೆಮಿ ಕಾಲೇಜಿನಲ್ಲಿ ಬಿಸಿಎ ಪದವಿ ವ್ಯಾಸಂಗ ಮಾಡಿದ್ದ 2013ರ ಬ್ಯಾಚ್‌ನ ಒಟ್ಟು 11 ಮಂದಿ ಸ್ನೇಹಕೂಟ (ಗೆಟ್ ಟುಗೆದರ್) ಮಾಡಲು ಮಾರ್ಚ್ 10ರಂದು ಉಡುಪಿ, ಗೋಕರ್ಣಕ್ಕೆ ತೆರಳಿದ್ದರು. ಬೆಂಗಳೂರಿಗೆ ವಾಪಸ್ ಆಗುವಾಗ ಈ ಘಟನೆ ನಡೆದಿದೆ.

'ಸಾಲದ ಸುಳಿ: ಶ್ವೇತ ಪತ್ರ ಹೊರಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರ ಸಾಲದ ಸುಳಿಯಲ್ಲಿದೆ. ಹಾಗೆಂದು, ಈ ಸಾಲ ಬೊಮ್ಮಾಯಿ ಸರ್ಕಾರ ಆರಂಭಿಸಿದ್ದಲ್ಲ. ರಾಜ್ಯದ ಆರ್ಥಿಕ ಸ್ಥಿತಿ ಅರಿಯಲು ಶ್ವೇತ ಪತ್ರ ಹೊರಡಿಸಬೇಕು. ಎಲ್ಲರೂ ಸೇರಿ ಈ ಬೇಡಿಕೆ ಮಂಡಿಸೋಣ' ಎಂದು ಬಿಜೆಪಿಯ ಆಯನೂರು ಮಂಜುನಾಥ ಅವರು ಸಲಹೆ ನೀಡಿದರು.

ವಿಧಾನ ಪರಿಷತ್ತಿನಲ್ಲಿ ಬಜೆಟ್ ಮೇಲೆ ಮಾತನಾಡಿದ ಅವರು, 'ಯಾರ ಅವಧಿಯಲ್ಲಿ ಎಷ್ಟು ಸಾಲ ಆಗಿದೆ ಎನ್ನುವುದೂ ಎಲ್ಲರಿಗೂ ತಿಳಿಯಲಿ. ಒಬ್ಬರು ಇನ್ನೊಬ್ಬರನ್ನು ಟೀಕಿಸುವ ಬದಲು ವಸ್ತುಸ್ಥಿತಿ ಅರಿತುಕೊಳ್ಳೋಣ' ಎಂದು ಹೇಳಿದರು.

'ಸಾಲ 1 ಲಕ್ಷ ಕೋಟಿ ತಲುಪಲು 60 ವರ್ಷ ಬೇಕಾಯಿತು. ಆದರೆ, ಸಿದ್ದರಾಮಯ್ಯ ಅವಧಿಯಲ್ಲಿ ಅದು ಇಮ್ಮಡಿಯಾಯಿತು. ಸಾಲದ ಸುಳಿಗೆ ಸಿಲುಕಿಸಿದ್ದೇ ಸಿದ್ದರಾಮಯ್ಯ ಸರ್ಕಾರ. ಕುಮಾರಸ್ವಾಮಿ ಅವಧಿಯಲ್ಲೂ ಸಾಕಷ್ಟು ಸಾಲ ಆಗಿದೆ. ಬಿಜೆಪಿ ಅಧಿಕಾರದ ಅವಧಿಯಲ್ಲಿ ಕೋವಿಡ್, ಆದಾಯ ಕೊರತೆ, ಸಂಪನ್ಮೂಲ ಕ್ರೋಡೀಕರಣ ಆಗದೆ ಮತ್ತಷ್ಟು ಸಾಲ ಮಾಡಬೇಕಾಯಿತು. ಯಾವುದೇ ಸರ್ಕಾರ ಕೈಗೊಂಡ ನಿರ್ಧಾರವನ್ನು ಮುಂದಿನ ಸರ್ಕಾರ ನಡೆಸಿಕೊಂಡು ಹೋಗಬೇಕು' ಎಂದು ಹೇಳಿದರು.

ಮಾತಿನ ಮಧ್ಯೆ ರಾಜಕೀಯ ವಿಚಾರ ಪ್ರಸ್ತಾಪಿಸಿದ ಆಯನೂರು ಮಂಜುನಾಥ ಅವರು, 'ಕರ್ನಾಟಕದಲ್ಲಷ್ಟೇ ಕಾಂಗ್ರೆಸ್ ಉಸಿರಾಡುತ್ತಿದೆ. ಇಲ್ಲಿ ಯಾರ ಮಾಸ್ಕ್ ಅನ್ನು ಯಾರು ಕೀಳುತ್ತಾರೋ ಗೊತ್ತಿಲ್ಲ' ಎಂದು ಛೇಡಿಸಿದರು.

'ಇಲಾಖಾವಾರು ಬಜೆಟ್‌ನಿಂದ ನ್ಯಾಯ ಅಸಾಧ್ಯ'

'ಇಲಾಖಾವಾರು ಇದ್ದ ಬಜೆಟ್ ವಲಯವಾರು ಆಗಿದೆ. ಈ ರೀತಿಯ ಬಜೆಟ್‌ನಿಂದ ಎಲ್ಲ ಇಲಾಖೆಗಳಿಗೆ ನ್ಯಾಯ ಒದಗಿಸುವುದು ಕಷ್ಟ. ಹಿಂದಿನ ವ್ಯವಸ್ಥೆ ಜಾರಿಗೆ ಬರಬೇಕು' ಎಂದು ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ ಹೇಳಿದರು.

'ಈಗಾಗಲೇ ಘೋಷಿಸಿದ ರೈತರ ಸಾಲ ಮನ್ನಾಕ್ಕೆ ಇನ್ನೂ ₹ 400 ಕೋಟಿ ಬೇಕಿದೆ. ಅರ್ಹ ರೈತರು ಸಾಲ ಸಿಗದೆ ಅಸಹಾಯಕರಾಗಿದ್ದಾರೆ. ರೈತರ ಬದುಕು ಉಳಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು. ಶಿಕ್ಷಣವನ್ನು ರಾಷ್ಟ್ರೀಕರಣ ಮಾಡಿ, ಎಲ್ಲರಿಗೂ ಸಮಾನ ಶಿಕ್ಷಣ ಸಿಗುವಂತೆ ಮಾಡಬೇಕು' ಎಂದು ಅವರು ಆಗ್ರಹಿಸಿದರು.

'ಕೇಂದ್ರವೂ ಶ್ವೇತ ಪತ್ರ ಹೊರಡಿಸಲಿ'

'ರಾಜ್ಯ ಸರ್ಕಾರದಿಂದ ಮಾತ್ರವಲ್ಲ, ಕೇಂದ್ರ ಸರ್ಕಾರ ಕೂಡಾ ಶ್ವೇತ ಪತ್ರ ಹೊರಡಿಸಬೇಕು' ಎಂದು ಕಾಂಗ್ರೆಸ್ಸಿನ ನಜೀರ್ ಅಹ್ಮದ್ ಹೇಳಿದರು.

'ರಾಜ್ಯಕ್ಕೆ ಅನ್ಯಾಯ ಆಗುತ್ತಿರುವಾಗ ಎಲ್ಲರೂ ಹೋಗಿ ನ್ಯಾಯ ಕೇಳಬೇಕು. 2010-11ರಲ್ಲಿ ಕೇಂದ್ರದ ಪಾಲು ಶೇ 23ರಷ್ಟು ಇತ್ತು. 2015-16 ನಲ್ಲಿ ಶೇ 27 ಆಯಿತು. 2021-22 ಈಗ ಶೇ 18ಕ್ಕೆ ಇಳಿದಿದೆ. ಕೇಂದ್ರದಿಂದ ಬರುವ ಅನುದಾನ ಕಡಿತವನ್ನು ಪ್ರಶ್ನಿಸಲೇಬೇಕಿದೆ' ಎಂದರು.

4,317 ಶಿಕ್ಷರಿಂದ ಮೌಲ್ಯಮಾಪನದಲ್ಲಿ ಲೋಪ

ಬೆಂಗಳೂರು: 2020ರ ಜುಲೈ ಮತ್ತು ಸೆಪ್ಟೆಂಬರ್‌ನಲ್ಲಿ ನಡೆಸಿದ್ದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 4,317 ಶಿಕ್ಷಕರು ಉತ್ತರ ಪತ್ರಿಕೆಗಳ ಮೌಲ್ಯಮಾಪನದಲ್ಲಿ ಲೋಪ ಎಸಗಿರುವುದು ಪತ್ತೆಯಾಗಿದೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಸೋಮವಾರ ಬಿಜೆಪಿಯ ಎನ್. ರವಿಕುಮಾರ್ ಪ್ರಶ್ನೆಗೆ ಉತ್ತರಿಸಿದ ಅವರು, 'ಮೌಲ್ಯಮಾಪನದಲ್ಲಿ ತಪ್ಪೆಸಗಿದ ಶಿಕ್ಷಕರಿಗೆ ₹ 51.26 ಲಕ್ಷ ದಂಡ ವಿಧಿಸಲಾಗಿತ್ತು. ಈ ಪೈಕಿ ₹ 10.56 ಲಕ್ಷವನ್ನು ವಸೂಲಿ ಮಾಡಲಾಗಿದೆ. ಉಳಿದ ಮೊತ್ತವನ್ನು ಶೀಘ್ರದಲ್ಲೇ ವಸೂಲಿ ಮಾಡಲಾಗುವುದು' ಎಂದರು.

ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನಕ್ಕೆ 19,826 ಅರ್ಜಿಗಳು ಸಲ್ಲಿಕೆಯಾಗಿದ್ದವು. 15,591 ಪ್ರಕರಣಗಳಲ್ಲಿ ಒಂದರಿಂದ ಆರು ಅಂಕಗಳ ವ್ಯತ್ಯಾಸ ಕಂಡುಬಂದಿದೆ. 4,235 ಪ್ರಕರಣಗಳಲ್ಲಿ ಆರಕ್ಕಿಂತ ಹೆಚ್ಚು ಅಂಕಗಳ ವ್ಯತ್ಯಾಸವಾಗಿದೆ. ಅದರಲ್ಲಿ 3,056 ಪ್ರಕರಣಗಳಲ್ಲಿ ವ್ಯತ್ಯಾಸದ ಅಂತರವು 6ರಿಂದ 10 ಅಂಕಗಳಾಗಿತ್ತು. ಉಳಿದ ಪ್ರಕರಣಗಳಲ್ಲಿ 11ರಿಂದ 25ಕ್ಕೂ ಹೆಚ್ಚು ಅಂಕಗಳವರೆಗೂ ವ್ಯತ್ಯಾಸ ಇತ್ತು ಎಂದು ವಿವರ ನೀಡಿದರು.

ಬೆಂಗಳೂರು: ಅನುದಾನ ಹಂಚಿಕೆ ತಾರತಮ್ಯ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸರ್ಕಾರದಿಂದ ಬೆಂಗಳೂರು ನಗರದ ಕಾಂಗ್ರೆಸ್ ಶಾಸಕರಿಗೆ ಅನುದಾನ ಹಂಚಿಕೆಯಲ್ಲಿ ತಾರತಮ್ಯ ಆಗಿದೆ ಎಂದು ಕಾಂಗ್ರೆಸ್ ಸದಸ್ಯ ರಾಮಲಿಂಗಾರೆಡ್ಡಿ ಅವರು ವಿಧಾನಸಭೆಯಲ್ಲಿ ಸೋಮವಾರ ಆರೋಪ ಮಾಡಿದರು.

ಇದಕ್ಕೆ ತಿರುಗೇಟು ನೀಡಿದ ಬಿಜೆಪಿಯ ಸದಸ್ಯರಾದ ಸತೀಶ್ ರೆಡ್ಡಿ ಮತ್ತು ಎಲ್‌.ಎ. ರವಿಸುಬ್ರಹ್ಮಣ್ಯ ಅವರು, 'ಕಾಂಗ್ರೆಸ್ ಕಾಲದಲ್ಲೇ ಬಿಜೆಪಿ ಶಾಸಕರಿಗೆ ಹೆಚ್ಚಿನ ಅನ್ಯಾಯ ಆಗಿತ್ತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಗರದ ಸಮಗ್ರ ಅಭಿವೃದ್ಧಿಗೆ ಎಲ್ಲ ಶಾಸಕರಿಗೂ ಅನುದಾನ ನೀಡಿದ್ದಾರೆ, ತಾರತಮ್ಯ ಮಾಡಿಲ್ಲ' ಎಂದು ವಾದಿಸಿದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ರಾಮಲಿಂಗಾರೆಡ್ಡಿ ಮತ್ತು ಸತೀಶ್ ರೆಡ್ಡಿ ತಮ್ಮ ವಾದಗಳಿಗೆ ಪೂರಕವಾಗಿ ಅಂಕಿ–ಅಂಶ ಮಂಡಿಸಿದರು.

'ಅಮೃತ್ ನಗರ ಯೋಜನೆಯಡಿ ಬಿಜೆಪಿ 15 ಶಾಸಕರಿಗೆ ₹9,880 ಕೋಟಿ, ಕಾಂಗ್ರೆಸ್ 12 ಶಾಸಕರಿಗೆ ₹2,186 ಮತ್ತು ಜೆಡಿಎಸ್‌ನ ಒಬ್ಬ ಶಾಸಕನಿಗೆ ₹287 ಕೋಟಿ ಅನುದಾನ ನೀಡಲಾಗಿದೆ. ಬೆಂಗಳೂರು ಶಾಸಕರ ಅಭಿವೃದ್ಧಿ ಬದಲಿಗೆ ಬಿಜೆಪಿ ಶಾಸಕರ ಅಭಿವೃದ್ಧಿ ಮಾತ್ರ ಆಗಿದೆ. ನಮ್ಮ ಕಾಲದಲ್ಲಿ ಬಿಜೆಪಿ ಶಾಸಕರಿಗೂ ಅನುದಾನ ನೀಡಲಾಗಿತ್ತು. ಅವರಿಗಿಂತ ನಮಗೆ ಜಾಸ್ತಿ ಸಿಕ್ಕಿತ್ತು ಎನ್ನುವುದನ್ನು ಒಪ್ಪುತ್ತೇವೆ' ಎಂದು ರಾಮಲಿಂಗಾರೆಡ್ಡಿ ಹೇಳಿದರು.

ಇದನ್ನು ಒಪ್ಪದ ಸತೀಶ್ ರೆಡ್ಡಿ, 'ಕಾಂಗ್ರೆಸ್ ಅವಧಿಯಲ್ಲಿ ಬಿಜೆಪಿ ಶಾಸಕರನ್ನು ಕಡೆಗಣಿಸಲಾಗಿತ್ತು. ಕಾಂಗ್ರೆಸ್ ಶಾಸಕರಿಗೆ ಅತಿ ಹೆಚ್ಚು ಹಣ ಲಭಿಸಿತ್ತು. ಆಗ ನನ್ನ ಕ್ಷೇತ್ರಕ್ಕೆ ಐದು ವರ್ಷಗಳಿಗೆ ಒಟ್ಟು ಸಿಕ್ಕಿದ್ದು ಕೇವಲ ₹170 ಕೋಟಿ ಮಾತ್ರ. 2008 ರಲ್ಲಿ ಮತ್ತು ಈ ಬಾರಿ ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆದ ಬಳಿಕ ನಮಗೆ ಅನುದಾನ ಸಿಕ್ಕಿತು. ಕಳೆದ ಎರಡು ವರ್ಷಗಳಲ್ಲಿ ಕೋವಿಡ್ ಇದ್ದ ಕಾರಣ ಅನುದಾನ ಸಿಗಲಿಲ್ಲ' ಎಂದು ತಿಳಿಸಿದರು.

ಅಷ್ಟೇ ಅಲ್ಲ, ನೀರಿನ ಸಮಸ್ಯೆ ತೀವ್ರವಾಗಿದ್ದ ಸಂದರ್ಭದಲ್ಲಿ ಯಡಿಯೂರಪ್ಪ ಅವರು ಕಾವೇರಿಯಿಂದ 50 ಕೋಟಿ ಲೀಟರ್ ನೀರು ತರಲು ಅಗತ್ಯ ಅನುದಾನ ನೀಡಿ, ಕಾಮಗಾರಿಗೆ ಚಾಲನೆ ನೀಡಿದರು. ಈಗ 110 ಹಳ್ಳಿಗಳಿಗೆ ಕುಡಿಯುವ ನೀರು ಒದಗಿಸಲು ಬೊಮ್ಮಾಯಿ ಅವರು ಹಣ ಕೊಟ್ಟಿದ್ದಾರೆ ಎಂದು ಸತೀಶ್ ರೆಡ್ಡಿ ಅವರು ಹೇಳಿದರು.

ಬೆಂಗಳೂರಿನ ಸಂಚಾರ ದಟ್ಟಣೆಯ ಪರಿಹಾರಕ್ಕೆ ಸುರಂಗ ರಸ್ತೆ ನಿರ್ಮಿಸುವ ಬಗ್ಗೆ ಚಿಂತನೆ ನಡೆಸಬೇಕು ಎಂದೂ ಅವರು ಸಲಹೆ ನೀಡಿದರು.

'ಕೋವಿಡ್ ಸಾವು ಮುಚ್ಚಿಡಲಾಗಿದೆ'

ರಾಜ್ಯದಲ್ಲಿ ಕೋವಿಡ್‌ನಿಂದ ಮೃತಪಟ್ಟರ ಸಂಖ್ಯೆಯನ್ನು ಮುಚ್ಚಿಡಲಾಗಿದೆ. 2019 ರಲ್ಲಿ ಒಟ್ಟು ಮರಣದ ಪ್ರಮಾಣ 5.8 ಲಕ್ಷ, 2020 ರಲ್ಲಿ 5.51 ಲಕ್ಷ, 2021 ರಲ್ಲಿ 6.66 ಲಕ್ಷಕ್ಕೆ ಏರಿತ್ತು. 2019 ಮತ್ತು 2021 ರ ಸಾವಿನ ಪ್ರಮಾಣದಲ್ಲಿ 1.99 ಲಕ್ಷ ಮರಣ ಪ್ರಮಾಣ ಹೆಚ್ಚಾಗಿದೆ ಎಂದು ಕಾಂಗ್ರೆಸ್ ಶಾಸಕ ರಾಮಲಿಂಗಾರೆಡ್ಡಿ ಹೇಳಿದರು.

ತಲೆ ತೆಗೆಯಲು ಸಿದ್ಧ: ಋಷಿಕುಮಾರ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಹಾಸನ: 'ಖಾವಿ ತೊಟ್ಟಿರುವ ನಾನು ಅಗತ್ಯಬಿದ್ದರೆ ಕರೆ ನೀಡುವುದಷ್ಟೇ ಅಲ್ಲ, ಆತ್ಮ ರಕ್ಷಣೆಗಾಗಿ ತಲೆ ತೆಗೆಯಲೂ ಸಿದ್ಧ' ಎಂದು ಅರಸೀಕೆರೆ ಕಾಳಿ ಮಠದ ಋಷಿಕುಮಾರ ಸ್ವಾಮೀಜಿ ಪ್ರತಿಪಾದಿಸಿದರು.

'ಶಿವಮೊಗ್ಗದ ಹರ್ಷ ಕೊಲೆ ನಂತರ ಒಂದು ತಲೆಗೆ 10 ತಲೆ ತೆಗೆಯಬೇಕು ಎಂದು ಹೇಳಿಕೆ ನೀಡಿರುವುದರಲ್ಲಿ ಏನು ತಪ್ಪಿದೆ? ಹರ್ಷ ನಮ್ಮ ಮನೆಯ ಮಗ. ಆತನ ಸಾವು ಇನ್ನೂ ಕಾಡುತ್ತಿದೆ. ನಾನು ನೀಡಿದ ಹೇಳಿಕೆ ಹೇಗೆ ಪ್ರಚೋದನ ಕಾರಿಯಾಗುತ್ತದೆ?' ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಸಮರ್ಥಿಸಿಕೊಂಡರು.

'ಕಾವಿ ಧರಿಸಿದ ಮಾತ್ರಕ್ಕೆ ಸುಮ್ಮನಿರಬೇಕು ಎಂದೇನು ಇಲ್ಲ. ಹಿಂದೆ ಪರಶುರಾಮ, ವಶಿಷ್ಠರಂತಹ ಮುನಿಗಳು ಇದ್ದರು. ಧರ್ಮಕ್ಕೆ ಅಪಾಯ ಬಂದಾಗ ಸುಮ್ಮನೆ ನೋಡಿಕೊಂಡು ಇರಲು ಆಗುವುದಿಲ್ಲ. ಬೆಂಗಳೂರಿನ ಕೆ.ಜಿ ಹಳ್ಳಿ, ಡಿ.ಜಿ ಹಳ್ಳಿಯಲ್ಲಿಯೂ ಕಾಶ್ಮೀರದಂತಹ ವಾತಾವರಣ ಇದೆ. ಅಲ್ಲಿ ಕಾನೂನು ಸುವ್ಯವಸ್ಥೆ ಜಾರಿ ಮಾಡಲು ಸಾಧ್ಯವಾಗದ ಸ್ಥಿತಿ ಇದೆ' ಎಂದರು.



ಋಷಿಕುಮಾರ ಸ್ವಾಮೀಜಿ

'ದಿ ಕಾಶ್ಮೀರ್ ಫೈಲ್ ಸಿನಿಮಾವನ್ನು ಹಾಸನ ಸೇರಿದಂತೆ ರಾಜ್ಯದಾದ್ಯಂತ ಪ್ರದರ್ಶಿಸಲು ಸಿನಿಮಾ ವಿತರಕರು ಕ್ರಮ ವಹಿಸಬೇಕು. 35 ವರ್ಷಗಳ ಹಿಂದೆ ಕಾಶ್ಮೀರಿ ಪಂಡಿತರು ಹಾಗೂ ಅಲ್ಲಿನ ಹಿಂದೂಗಳು ಎಷ್ಟು ನೋವು ಅನುಭವಿಸಿದ್ದಾರೆ ಎಂಬುದು ಎಲ್ಲರಿಗೂ ತಿಳಿಯಬೇಕು. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಹಂಚಿಕೆದಾರರು ಕೈಜೋಡಿಸಬೇಕು. ಸಿನಿಮಾ ಪ್ರಾದೇಶಿಕ ಭಾಷೆಗಳಿಗೆ ಡಬ್ಬಿಂಗ್ ಆಗಬೇಕು' ಎಂದು ಋಷಿಕುಮಾರ ಸ್ವಾಮೀಜಿ ಕೋರಿದರು.

'ಅವಕಾಶ ಸಿಕ್ಕರೆ ಮುಂದಿನ ದಿನಗಳಲ್ಲಿ ಕಾಶ್ಮೀರಕ್ಕೆ ತೆರಳಿ ಅಲ್ಲೂ ನಮ್ಮ ಶಾಖಾ ಮಠ ಆರಂಭಿಸುವ ಚಿಂತನೆ ಇದೆ. ಅಲ್ಲಿ ಮಠದ ಚಟುವಟಿಕೆ ವಿಸ್ತರಣೆ ಮಾಡುವೆ' ಎಂದರು.

ಮಾಸಾಶನ ಹೆಚ್ಚಳಕ್ಕೆ ಆಗ್ರಹ: ಉದ್ಯಾನದಲ್ಲೇ ಅಹೋರಾತ್ರಿ ಧರಣಿ

ದೇವದಾಸಿಯರ ಅನಿರ್ದಿಷ್ಟಾವಧಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇವದಾಸಿ ಮಹಿಳೆಯರ ಮಾಸಾಶನವನ್ನು ₹ 3 ಸಾವಿರಕ್ಕೆ ಹೆಚ್ಚಿಸಬೇಕು. ಅವಲಂಬಿತ ಹೆಣ್ಣು ಮಕ್ಕಳಿಗೂ ಮಾಸಾಶನ ವಿಸ್ತರಿಸಬೇಕು' ಎಂದು ಒತ್ತಾಯಿಸಿ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ನೇತೃತ್ವದಲ್ಲಿ ದೇವದಾಸಿ ಮಹಿಳೆಯರು ನಗರದಲ್ಲಿ ಸೋಮವಾರದಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಿದ್ದಾರೆ.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬೆಳಿಗ್ಗೆ ಸೇರಿದ್ದ ಪ್ರತಿಭಟನಕಾರರು, ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು. ಬೆಳಗಾವಿ, ಬಾಗಲಕೋಟೆ, ಧಾರವಾಡ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳ ದೇವದಾಸಿ ಮಹಿಳೆಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಾರೆ.

'ದೇವದಾಸಿ ಮಹಿಳೆಯರ ಗಣತಿ ನಡೆಸಬೇಕು. ಪಟ್ಟಿಯಲ್ಲಿ ಬಿಟ್ಟು ಹೋಗಿರುವ ಮಹಿಳೆಯರು ಹಾಗೂ ಅವರ ಕುಟುಂಬದವರ ಮಾಹಿತಿ ದಾಖಲಿಸಿಕೊಳ್ಳಬೇಕು. ಎಲ್ಲರಿಗೂ ಪುನರ್ವಸತಿ ಕಲ್ಪಿಸಬೇಕು' ಎಂದು ಪ್ರತಿಭಟನಕಾರರು ಒತ್ತಾಯಿಸಿದ್ದಾರೆ.

'ಅಂತರ್ಜಾತಿ ಹಾಗೂ ಸ್ವಜಾತಿಯಲ್ಲಿ ಮದುವೆಯಾಗುವ ದೇವದಾಸಿ ಮಹಿಳೆಯರಿಗೆ ₹ 5 ಲಕ್ಷ ಪ್ರೋತ್ಸಾಹ ಧನ ನೀಡಬೇಕು. ಎಲ್ಲ ಪ್ರಕಾರದ ಸಾಲಗಳನ್ನು ಮನ್ನಾ ಮಾಡಬೇಕು. ಕೃಷಿ ಚಟುವಟಿಕೆಯಲ್ಲಿ ತೊಡಗುವ ದೇವದಾಸಿ ಮಹಿಳೆಯರಿಗೆ 5 ಎಕರೆ ಉಚಿತ ಜಮೀನು ಮಂಜೂರು ಮಾಡಬೇಕು. ಸೂರು ಇಲ್ಲದವರಿಗೆ ನಿವೇಶನ ನೀಡಿ, ಸುಸಜ್ಜಿತ ಮನೆ ಕಟ್ಟಿಸಿಕೊಡಬೇಕು' ಎಂದೂ ಆಗ್ರಹಿಸಿದ್ದಾರೆ. 'ಗ್ರಾಮ ಪಂಚಾಯಿತಿ ಸೇರಿದಂತೆ ವಿವಿಧ ಸಂಸ್ಥೆಗಳಲ್ಲಿ ಫಲಾನುಭವಿಗಳ ಆಯ್ಕೆಯಲ್ಲಿ ತಾರತಮ್ಯ ಹಾಗೂ ಭ್ರಷ್ಟಾಚಾರ ನಡೆಯುತ್ತಿದೆ. ಇದರ ತಡೆಗೆ ಕ್ರಮ ಕೈಗೊಳ್ಳಬೇಕು' ಎಂದೂ ಪ್ರತಿಭಟನಕಾರರು ಕೋರಿದ್ದಾರೆ.

ಅಹೋರಾತ್ರಿ ಧರಣಿ: ಪ್ರತಿಭಟನಾನಿರತ ದೇವದಾಸಿ ಮಹಿಳೆಯರು, ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಹಾಗೂ ಸಚಿವರಿಗೆ ಮನವಿ ಪತ್ರ ಸಲ್ಲಿಸಲು ಸಿದ್ಧತೆ ಮಾಡಿಕೊಂಡಿದ್ದರು. ಆದರೆ, ಯಾರೊಬ್ಬರು ಪ್ರತಿಭಟನಾ ಸ್ಥಳಕ್ಕೆ ಬರಲಿಲ್ಲ.

ಇದನ್ನು ಖಂಡಿಸಿದ ದೇವದಾಸಿ ಮಹಿಳೆಯರು, ಸ್ವಾತಂತ್ರ್ಯ ಉದ್ಯಾನದಲ್ಲೇ ಮಂಗಳವಾರ ಅಹೋರಾತ್ರಿ ಧರಣಿ ಮುಂದುವರಿಸಿದರು. ಉದ್ಯಾನದಲ್ಲಿ ನಿರ್ಮಿಸಿದ್ದ ಶೆಡ್‌ನಲ್ಲೇ ರಾತ್ರಿ ಕಳೆದರು. ಮುಖ್ಯಮಂತ್ರಿ ಹಾಗೂ ಸಚಿವರ ವಿರುದ್ಧ ಆಕ್ರೋಶ ಹೊರಹಾಕಿದರು.

ಮಹಿಳೆಯರು ಹೆಚ್ಚಿದ್ದರಿಂದ ಉದ್ಯಾನದಲ್ಲಿ ಪೊಲೀಸರು ಬಿಗಿ ಭದ್ರತೆ ಕೈಗೊಂಡಿದ್ದಾರೆ.



ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ದೇವದಾಸಿ ಮಹಿಳೆಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಬಾಲನ್ಯಾಯ ಕಾಯ್ದೆ: ಅಂತಿಮ ಗಡುವು

ಬೆಂಗಳೂರು: ಬಾಲನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯ್ದೆ-2015ರ ಅಡಿ ಮಕ್ಕಳನ್ನು, ಪೋಷಕರು ಮಕ್ಕಳ ಕಲ್ಯಾಣ ಸಮಿತಿಗೆ (ಸಿಡಬ್ಲುಸಿ) ಒಪ್ಪಿಸಿದ ಪ್ರಕರಣಗಳಲ್ಲಿ ತನಿಖೆ ಮತ್ತು ಕೌನ್ಸೆಲಿಂಗ್ ನಡೆಸಲು ಅನುಸರಿಸಬೇಕಾದ ನಿಯಮಗಳನ್ನು ಅಂತಿಮಗೊಳಿಸಲು ಹೈಕೋರ್ಟ್, ಸರ್ಕಾರಕ್ಕೆ ಅಂತಿಮ ಗಡುವು ವಿಧಿಸಿದೆ.

ಸಹಜೀವನ ನಡೆಸಿದ್ದ ಅವಿವಾಹಿತ ಜೋಡಿ ತಮ್ಮ 12 ದಿನಗಳ ಹಸುಗೂಸನ್ನು ಸಿಡಬ್ಲುಸಿಗೆ ಒಪ್ಪಿಸಿದ್ದ ಬಗ್ಗೆ ಮಾಧ್ಯಮಗಳ ವರದಿ ಆಧರಿಸಿ 'ಲೆಟ್ಜ್ ಕಿಟ್ ಫೌಂಡೇಷನ್' ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರಿ ವಕೀಲರು, 'ತನಿಖೆ ಹಾಗೂ ಕೌನ್ಸೆಲಿಂಗ್ ನಡೆಸಲು ಅನುಸರಿಸಬೇಕಾದ ಕ್ರಮಗಳಿಗೆ ಸಂಬಂಧಿಸಿದಂತೆ ತಜ್ಞರ ಸಮಿತಿ ಎಲ್ಲಾ ಅಂಶಗಳನ್ನು ಪರಿಗಣಿಸುತ್ತಿದೆ. ಪ್ರಕರಣದಲ್ಲಿ ಕಾನೂನು ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಅಭಿಪ್ರಾಯ ಪಡೆಯಬೇಕಿದೆ. ಆದ್ದರಿಂದ, ಕಡೆಯ ಬಾರಿ ಕಾಲಾವಕಾಶ ನೀಡಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, 'ನ್ಯಾಯಾಲಯದ ಆದೇಶ ಪಾಲಿಸದೇ ಹೋದರೆ ಮುಂದಿನ ವಿಚಾರಣೆಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಖುದ್ದು ಹಾಜರಾಗಬೇಕಾಗುತ್ತದೆ' ಎಂದು ಎಚ್ಚರಿಸಿ ವಿಚಾರಣೆಯನ್ನು ನಾಲ್ಕು ವಾರಗಳ ಕಾಲ ಮುಂದೂಡಿದೆ.

ಶಾರ್ಟ್ ಸರ್ಕಿಟ್: ಮೂವರು ಸಜೀವ ದಹನ

ಜಮ್ಮು: ಇಲ್ಲಿನ ರೆಸಿಡೆನ್ಸಿ ರಸ್ತೆಯಲ್ಲಿನ ಗುಜರಿ ಅಂಗಡಿಯೊಂದರಲ್ಲಿ ಸೋಮವಾರ ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದಾಗಿ ಉಂಟಾದ ಭಾರಿ ಬೆಂಕಿ ಅವಘಡದಲ್ಲಿ ಮೂವರು ಸಜೀವ ದಹನಗೊಂಡಿದ್ದು, 15 ಮಂದಿ ಗಾಯಗೊಂಡಿದ್ದಾರೆ.

'ಸೋಮವಾರ ಸಂಜೆ ವೇಳೆಗೆ ಹೊತ್ತಿಕೊಂಡ ಬೆಂಕಿಯ ಕೆಲವೇ ಕ್ಷಣಗಳಲ್ಲಿ ಸುತ್ತಲಿನ ಗುಡಿಸಲುಗಳಿಗೆ ಆವರಿಸಿದ್ದು, ಈ ವೇಳೆ ಗುಡಿಸಲಲ್ಲಿ ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡು ಮೂವರು ಸಜೀವ ದಹನಗೊಂಡಿದ್ದಾರೆ. ಬೆಂಕಿಯಲ್ಲಿ ಸಿಲುಕಿದವರ ನೆರವಿಗೆ ಧಾವಿಸಿದ ಸ್ಥಳೀಯರು ಹಲವರನ್ನು ರಕ್ಷಿಸಿದರು' ಎಂದು ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದರು.



ಚಿಕ್ಕಕಲ್ಲಸಂದ್ರ ಕೆರೆ: ಒತ್ತುವರಿ ತೆರವು– ಜಾಣ ಮರೆವು • ಸುತ್ತೋಲೆ ಹೊರಡಿಸಿ 8 ತಿಂಗಳ ಬಳಿಕವೂ ತೆರವಿಗೆ ಕ್ರಮ ಇಲ್ಲ • ಹೈಕೋರ್ಟ್ ಆದೇಶಕ್ಕೂ ಕಿಮ್ಮತ್ತಿಲ್ಲ

ಕಂದಾಯ ಸಚಿವರ ಕ್ಷೇತ್ರದಲ್ಲೇ ಕೆರೆ ಕಣ್ಮರೆ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಕೆರೆ–ಕಾಲುವೆಗಳ ಜಾಗಗಳು ಭೂಗಳ್ಳರ ಪಾಲಾಗುತ್ತಿರುವ ಬಗ್ಗೆ ಹಸಿರು ನ್ಯಾಯಮಂಡಳಿ ಹಾಗೂ ಹೈಕೋರ್ಟ್‌ನಿಂದ ಛೀಮಾರಿ ಹಾಕಿಸಿಕೊಂಡ ಬಳಿಕ ಎಚ್ಚೆತ್ತುಕೊಂಡ ರಾಜ್ಯ ಸರ್ಕಾರ ಒತ್ತುವರಿ ತೆರವಿಗೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುವಂತೆ ಸುತ್ತೋಲೆ ಹೊರಡಿಸಿದೆ. ಆದರೆ, ರಾಜ್ಯದ ಕಂದಾಯ ಸಚಿವ ಆರ್. ಅಶೋಕ ಪ್ರತಿನಿಧಿಸುವ ಪದ್ಮನಾಭನಗರ ಕ್ಷೇತ್ರದಲ್ಲೇ ಈ ಸುತ್ತೋಲೆಯನ್ವಯ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯಲ್ಲಿರುವ ಚಿಕ್ಕಕಲ್ಲಸಂದ್ರ ಕೆರೆ 12 ಎಕರೆ 26 ಗುಂಟೆ ವಿಸ್ತೀರ್ಣವನ್ನು ಹೊಂದಿದೆ. ಒಂದು ಕಾಲದಲ್ಲಿ ಕೃಷಿಗೆ ನೀರಾವರಿ ಸೌಲಭ್ಯ ಕಲ್ಪಿಸುತ್ತಿದ್ದ ಕೆರೆ ಇದು. ಈಗ ಈ ಜಾಗಕ್ಕೆ ಭೇಟಿ ನೀಡಿದರೆ ಇಲ್ಲಿ ಕೆರೆ ಇತ್ತು ಎಂಬ ಸಣ್ಣ ಸುಳಿವು ಇಲ್ಲದ ರೀತಿ ಇದು ಒತ್ತುವರಿಯಾಗಿದೆ. ಈ ಕೆರೆ ಮಾತ್ರವಲ್ಲ, ಇದನ್ನು ಸಂಪರ್ಕಿಸುವ ರಾಜಕಾಲುವೆಗಳೂ ಒತ್ತುವರಿಯಾಗಿವೆ. ಕೆರೆಯ ಬಹುಪಾಲು ಒತ್ತುವರಿಯಾಗಿದ್ದರೂ, ಅದರ ತೆರವಿಗೆ ಜಾಣ ಮರೆವು ಪ್ರದರ್ಶಿಸಲಾಗುತ್ತಿದೆ. ಇಲ್ಲಿ ಕೆರೆ ಒತ್ತುವರಿ ಮಾಡಿರುವವರಲ್ಲಿ ಪ್ರಭಾವಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ಅಧಿಕಾರಿಗಳೂ ತೆರವು ಕಾರ್ಯಕ್ಕೆ ಕೈಹಾಕುವ ಧೈರ್ಯ ತೋರುತ್ತಿಲ್ಲ ಎಂದು ದೂರುತ್ತಾರೆ ಸ್ಥಳೀಯ ನಿವಾಸಿಗಳು.


ಕೆರೆ ಇದ್ದ ಪ್ರದೇಶದಲ್ಲಿ ನರ್ಸರಿ, ದೇವಸ್ಥಾನ, ಮನೆಗಳು ಹಾಗೂ ಬಂಗಲೆಗಳು ನಿರ್ಮಾಣವಾಗಿವೆ. 12 ಎಕರೆ 26 ಗುಂಟೆ ವಿಸ್ತೀರ್ಣದ ಈ ಕೆರೆಯಲ್ಲಿ ಒಟ್ಟು 7 ಎಕರೆ 20 ಗುಂಟೆ ಜಮೀನು ಒತ್ತುವರಿಯಾಗಿದೆ. ಕಂದಾಯ ಇಲಾಖೆಯೇ ನಡೆಸಿರುವ ಸರ್ವೆ ಪ್ರಕಾರ ಇದರಲ್ಲಿ ಈಗ ಉಳಿದಿರುವ ಖಾಲಿ ಖುಲ್ಲಾ ಪ್ರದೇಶ 5 ಎಕರೆ 06 ಗುಂಟೆಗಳು ಮಾತ್ರ. ಅಚ್ಚರಿ ಎಂದರೆ, ಮನೆ ಹಾಗೂ ಇತರ ಕಟ್ಟಡ ನಿರ್ಮಾಣಕ್ಕಾಗಿ 4 ಎಕರೆ 27 ಗುಂಟೆಗಳಷ್ಟು ಜಮೀನನ್ನು ಖಾಸಗಿ ವ್ಯಕ್ತಿಗಳು ಒತ್ತುವರಿ ಮಾಡಿದ್ದಾರೆ. ಬಿಎಂಟಿಸಿ ಬಸ್ ನಿಲ್ದಾಣ ನಿರ್ಮಾಣವಾಗಿರುವುದು ಕೂಡಾ ಕೆರೆಯ ಜಾಗದಲ್ಲೇ ಎಂದು ಕಂದಾಯ ಇಲಾಖೆಯ ದಾಖಲೆಗಳು ದೃಢಪಡಿಸಿವೆ. ಬಿಬಿಎಂಪಿಯೂ ಇಲ್ಲಿ ಕೆರೆಯ ಜಾಗದಲ್ಲೇ ರಸ್ತೆಗಳನ್ನು ನಿರ್ಮಿಸಿದೆ.

ಕೆರೆ– ಕಾಲುವೆಗಳ ಒತ್ತುವರಿ ತೆರವುಗೊಳಿಸಲು ಕ್ರಮಕೈಗೊಳ್ಳುವಂತೆ ಕಂದಾಯ ಇಲಾಖೆ ಸುತ್ತೋಲೆ ಹೊರಡಿಸಿ ಎಂಟು ತಿಂಗಳುಗಳೇ ಕಳೆದಿವೆ. ಚಿಕ್ಕಕಲ್ಲಸಂದ್ರ ಕೆರೆ ಒತ್ತುವರಿ ತೆರವುಗೊಳಿಸುವ ಯಾವುದೇ ಪ್ರಯತ್ನಗಳೂ ಆ ಬಳಿಕ ನಡೆದಿಲ್ಲ.

ಹೈಕೋರ್ಟ್ ಆದೇಶಕ್ಕೂ ಕಿಮ್ಮತ್ತಿಲ್ಲ: ಚಿಕ್ಕಕಲ್ಲಸಂದ್ರ ಕೆರೆಯ ಒತ್ತುವರಿ ತೆರವಿಗೆ ಕಂದಾಯ ಇಲಾಖೆ ನೋಟಿಸ್ ಜಾರಿಗೊಳಿಸಿದ್ದನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ರಿಟ್ ಅರ್ಜಿಗಳನ್ನು (ನ.54377/2014 ಹಾಗೂ 51798) ವಿಲೇವಾರಿ ಮಾಡಿ 2021ರ ಫೆ 16ರಂದು ಹೈಕೋರ್ಟ್ ಆದೇಶ ಹೊರಡಿಸಿದೆ. 'ಅರ್ಜಿದಾರರಿಗೆ ಸೂಕ್ತ ದಾಖಲೆಗಳೊಂದಿಗೆ ಮುಂಚಿತವಾಗಿ ನೋಟಿಸ್ ಜಾರಿಗೊಳಿಸಿ, ಅವರ ಅಹವಾಲು ಹೇಳಿಕೊಳ್ಳುವುದಕ್ಕೆ ಕಾಲಾವಕಾಶ ನೀಡಿ, ಒತ್ತುವರಿ ತೆರವಿಗೆ ಕ್ರಮಕೈಗೊಳ್ಳಬೇಕು. ಈ ಇಡೀ ಪ್ರಕ್ರಿಯೆಯನ್ನು, ಈ ಆದೇಶದ ಪ್ರತಿ ತಲುಪಿದ ಆರು ತಿಂಗಳ ಒಳಗೆ ಪೂರ್ಣಗೊಳಿಸಬೇಕು' ಎಂದು ನಿರ್ದೇಶಿಸಿದೆ. ಇದಾಗಿ ವರ್ಷ ಕಳೆದರೂ ಕಂದಾಯ ಇಲಾಖೆ ಒತ್ತುವರಿ ತೆರಿಗೆ ಯಾವುದೇ ಕ್ರಮ ಕೈಗೊಂಡಿಲ್ಲ.

ಈ ಕೆರೆಯ ಒತ್ತುವರಿ ತೆರವಿಗೆ ಒತ್ತಾಯಿಸಿ ಸ್ವಾತಂತ್ರ್ಯ ಹೋರಾಟಗಾರ ದಿವಂಗತ ಎಚ್‌.ಎಸ್‌.ದೊರೆಸ್ವಾಮಿ ಅವರು ಲೋಕಾಯುಕ್ತರಿಗೆ ಈ ಹಿಂದೆಯೇ ದೂರು ನೀಡಿದ್ದು, ಈ ಕುರಿತ ವಿಚಾರಣೆ ಸಲುವಾಗಿ ಬೆಂಗಳೂರು ದಕ್ಷಿಣ ತಾಲ್ಲೂಕಿನ ತಹಶೀಲ್ದಾರ್ ಅವರು ಒತ್ತುವರಿ ವಿವರಗಳನ್ನು ಲೋಕಾಯುಕ್ತ ಇಲಾಖೆಗೆ 2021ರ ಸೆ 6ರಂದು ಸಲ್ಲಿಸಿದ್ದರು. 'ಒತ್ತುವರಿದಾರರ ಪಟ್ಟಿ ತಯಾರಿಸಬೇಕಿದೆ. 1964ರ ಭೂಕಂದಾಯ ಕಾಯ್ದೆ ಕಲಂ 39ರ ಅಡಿ ಒತ್ತುವರಿದಾರರಿಗೆ ನೋಟಿಸ್ ಜಾರಿ ಮಾಡಿ ಉತ್ತರ ಪಡೆಯಬೇಕಿದೆ. ನಿ ಯಾ ಮಾ ನು ಸಾ ರ ವಿಚಾರಣೆ ನಡೆಸಿ ಆದೇಶ ಹೊರಡಿಸಬೇಕಿದೆ. ಇದಕ್ಕೆ ಗರಿಷ್ಠ ಕಾಲಾವಕಾಶ ನೀಡಬೇಕು' ಎಂದು ಅವರು ಕೋರಿದ್ದರು.

ಚಿಕ್ಕಕಲ್ಲಸಂದ್ರ ಕೆರೆ ಒತ್ತುವರಿ ವಿವರ (ಎಕರೆ–ಗುಂಟೆ)	
0-16	ಬಿಎಂಟಿಸಿ ಬಸ್ ನಿಲ್ದಾಣಕ್ಕೆ
4-27	ಖಾಸಗಿ ಕಟ್ಟಡಗಳು ಮತ್ತು ಮನೆಗಳ ನಿರ್ಮಾಣಕ್ಕೆ
1-34	ಹಳ್ಳ ಮತ್ತು ರಸ್ತೆಗಳಿಗೆ
0-33	ನರ್ಸರಿ ಪ್ರದೇಶ
5-06	ಖಾಲಿ ಪ್ರದೇಶ
12-26	ಒಟ್ಟು ಕೆರೆಯ ವಿಸ್ತೀರ್ಣ




ಚಿಕ್ಕಕಲ್ಲಸಂದ್ರ ಕೆರೆಯ ಜಾಗ ಪ್ರಜಾವಾಣಿ ಚಿತ್ರ/ ಅನೂಪ್ ರಾಘ.ಟಿ.

'ಚಿಕ್ಕಕಲ್ಲಸಂದ್ರ ಕೆರೆ ಒತ್ತುವರಿ ತೆರವುಗೊಳಿಸಿಯೇ ಸಿದ್ಧ'

'ನಾನು ಪ್ರತಿನಿಧಿಸುವ ಪದ್ಮನಾಭನಗರ ಕ್ಷೇತ್ರದಲ್ಲಿರುವ ಚಿಕ್ಕಕಲ್ಲಸಂದ್ರ ಕೆರೆ ಒತ್ತುವರಿಯನ್ನು ತೆರವುಗೊಳಿಸಿಯೇ ಸಿದ್ಧ. ಕೆರೆ ಕಾಲುವೆಗಳು ಯಾವುದೇ ಸ್ಥಿತಿಯಲ್ಲಿದ್ದರೂ ಒತ್ತುವರಿಗೆ ಅವಕಾಶ ನೀಡುವುದಿಲ್ಲ. ಚಿಕ್ಕಕಲ್ಲಸಂದ್ರ ಕೆರೆ ಒತ್ತುವರಿಯ ತೆರವಿಗೆ ಅಧಿಕಾರಿಗಳು ಕ್ರಮ ಕೈಗೊಂಡಿದ್ದಾರೆ. ಇದನ್ನು ಪ್ರಶ್ನಿಸಿ ಕೆಲವರು ನ್ಯಾಯಾಲಯದ ಮೊರೆ ಹೋಗಿದ್ದರಿಂದ ತೆರವು ಕಾರ್ಯ ವಿಳಂಬವಾಗಿದೆ. ಕೋರ್ಟ್ ಮೊರೆ ಹೋದವರನ್ನು ಸಂಪರ್ಕಿಸಿ, 'ಎಷ್ಟೇ ಕಾನೂನು ಹೋರಾಟ ನಡೆಸಿದರೂ ಪ್ರಯೋಜನವಿಲ್ಲ. ಹಾಗಾಗಿ ದಾವೆ ಹಿಂದಕ್ಕೆ ಪಡೆಯಿರಿ' ಎಂದು ಮನವೊಲಿಸುವ ಪ್ರಯತ್ನವನ್ನೂ ಮಾಡುತ್ತಿದ್ದೇವೆ. ದೇವೇಗೌಡ ಪೆಟ್ರೋಲ್‌ಬಂಕ್ ಬಳಿ ಒತ್ತುವರಿಯಾಗಿದ್ದ ಜಾಗ ತೆರವುಗೊಳಿಸಿ ಅಲ್ಲಿ ಸ್ವಾತಂತ್ರ್ಯಯೋಧರ ಉದ್ಯಾನ ನಿರ್ಮಿಸಲಾಗುತ್ತಿದೆ. ಗೌಡನಪಾಳ್ಯ ಕೆರೆಯ ಒತ್ತುವರಿ ತೆರವಿಗೂ ಕ್ರಮಕೈಗೊಳ್ಳುತ್ತಿದ್ದೇವೆ. ಅಂತೆಯೇ ಚಿಕ್ಕಕಲ್ಲಸಂದ್ರ ಕೆರೆಯ ಒತ್ತುವರಿ ತೆರವುಗೊಳಿಸಿ ಸಾರ್ವಜನಿಕ ಉದ್ದೇಶಕ್ಕೆ ಬಳಸಿಕೊಳ್ಳುತ್ತೇವೆ.


ಆರ್.ಅಶೋಕ, ಕಂದಾಯ ಸಚಿವ




'ಒತ್ತುವರಿದಾರರಲ್ಲಿ ಪ್ರಭಾವಿಗಳೇ ಹೆಚ್ಚು'

ಬೆಂಗಳೂರು ದಕ್ಷಿಣ ತಾಲ್ಲೂಕಿನ ತಹಶೀಲ್ದಾರ್ ಕಚೇರಿಗೆ ಚಿಕ್ಕಕಲ್ಲಸಂದ್ರ ಕೆರೆಯ ಒತ್ತುವರಿ ಕುರಿತು 2006ರಿಂದಲೇ ಮಾಹಿತಿ ಇತ್ತು ಎನ್ನುತ್ತವೆ 'ಪ್ರಜಾವಾಣಿ'ಗೆ ಲಭ್ಯವಾದ ದಾಖಲೆಗಳು. 2006ರಲ್ಲೇ 48 ಮಂದಿ ಒತ್ತುವರಿದಾರರ ಪಟ್ಟಿ ಸಿದ್ಧಪಡಿಸಲಾಗಿತ್ತು. ಆದರೆ, ತಹಶೀಲ್ದಾರ್ ಕಚೇರಿಯ ಅಧಿಕಾರಿಗಳು ಒತ್ತುವರಿ ತೆರವಿಗೆ ಕ್ರಮ ಕೈಗೊಳ್ಳದ ಕಾರಣ 2014ರ ವೇಳೆಗೆ ಒತ್ತುವರಿದಾರರ ಸಂಖ್ಯೆ 90ಕ್ಕೆ ಹೆಚ್ಚಳವಾಗಿತ್ತು. ಯಾರು ಯಾವ ಉದ್ದೇಶಕ್ಕೆ ಎಷ್ಟು ಜಾಗವನ್ನು ಒತ್ತುವರಿ ಮಾಡಿದ್ದಾರೆ ಎಂಬುದನ್ನು ತಹಶೀಲ್ದಾರ್ ಕಚೇರಿಯ ಅಧಿಕಾರಿಗಳು 2014ರಲ್ಲೇ ಸಿದ್ಧಪಡಿಸಿದ ಪಟ್ಟಿಯಲ್ಲಿ ದಾಖಲಿಸಲಾಗಿತ್ತು. ಈ ಪಟ್ಟಿಯಲ್ಲಿ ಕಣ್ಣಾಡಿಸಿದಾಗ, ಅವುಗಳಲ್ಲಿ ಬಂಗಲೆಗಳು, ಆರ್‌ಸಿಸಿ ಮನೆಗಳ ಸಂಖ್ಯೆಯೇ ಹೆಚ್ಚು ಇದೆ. ಇಲ್ಲಿನ ಒತ್ತುವರಿದಾರರಲ್ಲಿ ಪ್ರಭಾವಿಗಳೇ ಹೆಚ್ಚು ಇರುವುದನ್ನು ಇದು ಪುಷ್ಟೀಕರಿಸುತ್ತಿದೆ.

ಒತ್ತುವರಿದಾರರ ಪಟ್ಟಿ ಸಿದ್ಧವಾಗಿದ್ದರೂ, ಹೈಕೋರ್ಟ್ ಆದೇಶವಿದ್ದರೂ ಇನ್ನೂ ತೆರವು ಪ್ರಕ್ರಿಯೆ ನಡೆಯದ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಬೆಂಗಳೂರು ದಕ್ಷಿಣ ತಹಶೀಲ್ದಾರ್ ರಾಮಲಕ್ಷ್ಮಣ್, 'ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲೂ ಪ್ರತಿ ಶನಿವಾರ ಕೆರೆಗಳು ಹಾಗೂ ಇತರ ಸರ್ಕಾರಿ ಭೂಮಿ ಒತ್ತುವರಿ ತೆರವು ಕಾರ್ಯಾಚರಣೆ ನಡೆಸುತ್ತಲೇ ಇದ್ದೇವೆ. ಆದರೆ, ಚಿಕ್ಕಕಲ್ಲಸಂದ್ರ ಕೆರೆಯ ಒತ್ತುವರಿ ಸಂಬಂಧ ನ್ಯಾಯಾಲಯದಲ್ಲಿ ಕೆಲವು ಪ್ರಕರಣಗಳು ಇತ್ಯರ್ಥಕ್ಕೆ ಬಾಕಿ ಇವೆ. ಹಾಗಾಗಿ ತೆರವು ಕಾರ್ಯಾಚರಣೆ ಸಾಧ್ಯವಾಗುತ್ತಿಲ್ಲ' ಎಂದರು.



ಕೆರೆ ಯಾವುದೇ ಸ್ಥಿತಿಯಲ್ಲಿದ್ದರೂ ಒತ್ತುವರಿ ತೆರವುಗೊಳಿಸಿ: ಕಂದಾಯ ಇಲಾಖೆ



'ಕಂದಾಯ ದಾಖಲೆಗಳಲ್ಲಿ ಹೇಳಲಾದ ಸರ್ಕಾರಿ ಕೆರೆ ಮತ್ತು ಅದರ ಜಲಾನಯನ ಪ್ರದೇಶ, ರಾಜಕಾಲುವೆಯ ಮುಖ್ಯ ಒಳಹರಿವು ಒಡ್ಡುಗಳನ್ನು, ಕಾಲುವೆಗಳನ್ನು ಹೊರಹರಿವುಗಳನ್ನು, ಹೊರ ಹರಿವು ಕಾಲುವೆಗಳು ಮೂಲಸ್ವರೂಪ ಕಳೆದುಕೊಂಡಿವೆ ಎಂಬ ಕಾರಣಕ್ಕೆ ಇವುಗಳನ್ನು ಯಾವುದೇ ಸರ್ಕಾರಿ ಅಥವಾ ಖಾಸಗಿ ಉದ್ದೇಶಗಳಿಗೆ ಉಪಯೋಗಿಸಿಕೊಳ್ಳಲು ಅವಕಾಶ ಇರುವುದಿಲ್ಲ. ಇಂತಹ ಜಲಕಾಯಗಳು ಇತರ ಉದ್ದೇಶಗಳಿಗೆ ಬಳಕೆಯಾಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಕೆರೆ ಪ್ರದೇಶ ಪುನರುಜ್ಜೀವನಕ್ಕೆ ಅವಶ್ಯಕ ಕ್ರಮ ಕೈಗೊಂಡು ಅವುಗಳನ್ನು ಸಂರಕ್ಷಿಸಬೇಕು' ಎಂದು ಕಂದಾಯ ಇಲಾಖೆಯು 2021ರ ಜೂನ್ 14ರಂದು ಸುತ್ತೋಲೆ ಹೊರಡಿಸಿದೆ.

ಈ ಆದೇಶ ಪ್ರಕಟವಾಗಿ ಒಂಬತ್ತು ತಿಂಗಳುಗಳೇ ಉರುಳಿವೆ. ಆದರೆ, ನಗರದಲ್ಲಿ ಬೆರಳೆಣಿಕೆಯ ಕಡೆ ಕೆರೆ ಕಾಲುವೆಗಳ ಒತ್ತುವರಿ ತೆರವು ಕಾರ್ಯ ನಡೆಯುತ್ತಿದೆ. ಕಂದಾಯ ಸಚಿವ ಆರ್.ಅಶೋಕ ಅವರು ಪ್ರತಿನಿಧಿಸುವ ಪದ್ಮನಾಭನಗರ ಕ್ಷೇತ್ರದ ಕೆರೆ ಒತ್ತುವರಿ ತೆರವಿಗೆ ಸಂಬಂಧಿಸಿ ಜಿಲ್ಲಾಡಳಿತ ಯಾವುದೇ ಕ್ರಮ ಕೈಗೊಂಡಿಲ್ಲ.

'ಕೆರೆ ಒತ್ತುವರಿ ತೆರವಿಗೆ ಆದ್ಯತೆ ಮೇರೆಗೆ ಕ್ರಮ'



'ನಗರದಲ್ಲಿ ಇದುವರೆಗೆ 205 ಕೆರೆಗಳ ಒತ್ತುವರಿ ತೆರವು ಮಾಡಲಾಗಿದೆ. ಕೆರೆ ಕುಂಟೆ ಕಾಲುವೆಯ ಜಲಕಾಯಗಳ ಒತ್ತುವರಿಗೆ ಸಂಬಂಧಿಸಿದ ರಿಟ್ ಅರ್ಜಿ 38401 ಸಂಬಂಧ ಆದೇಶ ನೀಡಿರುವ ಹೈಕೋರ್ಟ್ ಜಲಕಾಯಗಳ ಸರ್ವೆ ಮಾಡಿ ಒತ್ತುವರಿ ತೆರವಿಗೆ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದೆ. ಸರ್ಕಾರದ ಆದೇಶ ಇರಲಿ, ಇಲ್ಲದೆಯೇ ಇರಲಿ. ಕೆರೆ– ಕಾಲುವೆಗಳು ಮುಂದಿನ ಪೀಳಿಗೆಗೆ ಉಳಿಸಬೇಕಾದ ಪ್ರದೇಶಗಳು. ಹಾಗಾಗಿ ಅವುಗಳ ಒತ್ತುವರಿ ತೆರವನ್ನು ಆದ್ಯತೆ ಮೇರೆಗೆ ನಡೆಸಲಿದ್ದೇವೆ' ಎನ್ನುತ್ತಾರೆ ಜಿಲ್ಲಾಧಿಕಾರಿ ಜೆ.ಮಂಜುನಾಥ್.


'ಕೆಲವು ಕೆರೆಗಳು ಮೂಲ ಗುಣಲಕ್ಷಣ ಕಳೆದುಕೊಂಡಿವೆ. ಅಲ್ಲಿ, ಏನೂ ಅಭಿವೃದ್ಧಿ ಆಗಿಲ್ಲದಿದ್ದರೆ, ಪುನಃಶ್ಚೇತನ ಮಾಡಬಹುದು. ದಶಕಗಳ ಹಿಂದೆ ಬಡಾವಣೆ ನಿರ್ಮಾಣವಾಗಿದ್ದರೆ, ಅನ್ಯ ಉದ್ದೇಶಕ್ಕೆ ಅದು ಬಳಕೆ ಆಗಿದ್ದರೆ ನೋಡಿಕೊಂಡು ಕ್ರಮಕೈಗೊಳ್ಳಬೇಕು. 20– 30 ವರ್ಷಗಳ ಹಿಂದೆಯೇ ಕಟ್ಟಡಗಳು ನಿರ್ಮಾಣವಾಗಿದ್ದರೆ ಅದನ್ನು ಒಡೆದು ಕೆಡವಲು ಆಗುತ್ತದೆಯೇ' ಎಂದು ಅವರು ಪ್ರಶ್ನಿಸಿದರು.

'ಒತ್ತುವರಿ ಜಾಗದಲ್ಲಿ ಬಡಾವಣೆ, ಸಾರ್ವಜನಿಕ ರಸ್ತೆ, ಹಾಸ್ಟೆಲ್ ಆಸ್ಪತ್ರೆ, ಶಾಲೆಗಳಿದ್ದರೆ, ಅವುಗಳನ್ನು ಬಿಟ್ಟು ಖಾಸಗಿ ಒತ್ತುವರಿ ನಿರ್ದಾಕ್ಷಿಣ್ಯವಾಗಿ ತೆರವು ಮಾಡುತ್ತೇವೆ. ಖಾಸಗಿ ಒತ್ತುವರಿಯಲ್ಲಿ ಮೂರು ರೀತಿ ಇದೆ. ಕೃಷಿಗಾಗಿ ಒತ್ತುವರಿ ಮಾಡಿದ್ದರೆ, ಶೆಡ್ ನಿರ್ಮಿಸಿದ್ದರೆ ಸುಲಭವಾಗಿ ತೆರವುಗೊಳಿಸಬಹುದು. ಒತ್ತುವರಿ ಜಾಗದಲ್ಲಿ ಗಟ್ಟಿಮುಟ್ಟಾದ ಮನೆ ಕಟ್ಟಿಕೊಂಡು ವಾಸವಾಗಿದ್ದರೆ, ನೋಟಿಸ್ ಜಾರಿ ಜಾಡಿ, ಸ್ಥಳಾಂತರಕ್ಕೆ ಅವಕಾಶ ಮಾಡಿಕೊಡಬೇಕಾಗುತ್ತದೆ. ಈ ಬಗ್ಗೆ ಹೈಕೋರ್ಟ್‌ಗೂ ಮನವರಿಕೆ ಮಾಡಿ ಮುಂದುವರಿಯಬೇಕಾಗುತ್ತದೆ' ಎಂದರು.

64 ವರ್ಷ ಹಳೆಯ ನಕ್ಷೆಯಲ್ಲಿ ಕೆರೆ ವಿವರ


ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ 64 ವರ್ಷಗಳ ಹಿಂದೆ (1958ರಲ್ಲಿ) ನಡೆಸಿದ್ದ ರಿ–ಸರ್ವೆ ನಕ್ಷೆಯಲ್ಲಿ ಈ ಕೆರೆಯ ವಿವರಗಳನ್ನು ಸ್ಪಷ್ಟವಾಗಿ ದಾಖಲಿಸಲಾಗಿದೆ. ಅದರ ಪ್ರಕಾರ ಗ್ರಾಮದ ಸರ್ವೆ 76ರಲ್ಲಿ ಕೆರೆ ಇರುವುದನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ.

ಗ್ರಾಮ ಲೆಕ್ಕಾಧಿಕಾರಿ ಕಚೇರಿಯ ದಾಖಲೆಯೊಂದರ ಪ್ರಕಾರ ಮಳೆಗಾಲದಲ್ಲಿ ತುಂಬುತ್ತಿದ್ದ ಈ ಕೆರೆಯ ನೀರು ತೂಬಿನ ಮೂಲಕ ಮುಂದಿನ ಜನವರಿ–ಫೆಬ್ರುವರಿವರೆಗೂ ಹರಿಯುತ್ತಿತ್ತು. ಕೆರೆಯ ಕೆಳಗಿನ ಜಮೀನುಗಳಿಗೆ ಸುಮಾರು ಮೂರು ತಿಂಗಳು ಸಾಕಾಗುತ್ತಿತ್ತು. ಈ ಕೆರೆಯ ಏರಿಯನ್ನು ಕಲ್ಲು ಮಣ್ಣಿನಿಂದ ಕಟ್ಟಲಾಗಿದೆ. ಕೆರೆಯ ತೂಬಿಗೆ ಗಾರೆ ಮಾಡಲಾಗಿದೆ. ಕೆರೆಯ ಕೋಡಿ ಉತ್ತರ ದಿಕ್ಕಿನಲ್ಲಿದೆ. ಈ ಕೆರೆಯನ್ನು ಯಾರು ಕಟ್ಟಿಸಿದರು ಎಂದು ಗೊತ್ತಿಲ್ಲ ಎಂದು ಈ ದಾಖಲೆಯಲ್ಲಿ ಹೇಳಲಾಗಿದೆ.



ಚಿಕ್ಕಕಲ್ಲಸಂದ್ರ ಕೆರೆ ಒತ್ತುವರಿ - ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ


ಪ್ರಜಾವಾಣಿ


ಪ್ರಜಾವಾಣಿ
ಗುರುವಾರ 21ನೇ ಆಗಸ್ಟ್ 2014
3A
ಮಾರಾಟ ತಾಣ
ಕಟ್ಟಡ ನಿರ್ಮಾಣ ಸಾಮಗ್ರಿಗಳ ಮಾರಾಟ ತಾಣವಾಗಿಯೂ ಕೆರೆ ಅಂಗಳ ಮಾರ್ಪಟ್ಟಿದೆ
ಮಹಾನಗರ
ಕೆರೆ ಕಣ್ಮರೆ
ಉತ್ತರಹಳ್ಳಿ ಭಾಗದ ಚಿಕ್ಕಕಲ್ಲಸಂದ್ರ ಕೆರೆ ಸಂಪೂರ್ಣವಾಗಿ ಕಣ್ಮರೆಯಾಗಿ ಹೋಗಿದ್ದು, ಅದರ ಪಾತ್ರದಲ್ಲಿ ಕಟ್ಟಡಗಳೇ ತುಂಬಿವೆ
ಜಲಮೂಲವನ್ನೇ ಸಮಾಧಿ ಮಾಡಿದ ಭೂಗಳ್ಳರು: ನೆರವಿಗೆ ನಿಂತ ಬಿಬಿಎಂಪಿ ಅಧಿಕಾರಿಗಳು
ಭೂದಾಹ ತಣಿಸಲು ಕೆರೆ ಆಪೋಶನ!

'ಪ್ರಜಾವಾಣಿ' ವರದಿ ಆಧರಿಸಿ ತೆರವಾಗಿತ್ತು ಒತ್ತುವರಿ

ಚಿಕ್ಕಕಲ್ಲಸಂದ್ರ ಕೆರೆ ಒತ್ತುವರಿ ಕುರಿತು 'ಪ್ರಜಾವಾಣಿ'ಯು 2014ರ ಆ.21ರ ಸಂಚಿಕೆಯಲ್ಲಿ 'ಭೂದಾಹ ತಣಿಸಲು ಕೆರೆ ಆಪೋಶನ' ಎಂಬ ವಿಶೇಷ ವರದಿ ಪ್ರಕಟಿಸಿತ್ತು. ಒತ್ತುವರಿಯ ಕುರಿತ ಸಮಗ್ರ ವಿವರಗಳಿದ್ದ ಈ ವಿಶೇಷ ವರದಿಯನ್ನು ಆಧರಿಸಿ ಅಂದಿನ ಜಿಲ್ಲಾಡಳಿತ 2014ರ ನವೆಂಬರ್ 7ರಂದು ಒತ್ತುವರಿ ತೆರವು ಕಾರ್ಯಾಚರಣೆ ನಡೆಸಿತ್ತು. ಆಗಿನ ಜಿಲ್ಲಾಧಿಕಾರಿ ವಿ.ಶಂಕರ್, ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ವೆಂಕಟಾಚಲಪತಿ, ಉಪವಿಭಾಗಾಧಿಕಾರಿ ಎಲ್.ಸಿ.ನಾಗರಾಜ್ ಹಾಗೂ ತಹಶೀಲ್ದಾರ್ ಬಿ.ಆರ್.ದಯಾನಂದ್ ನೇತೃತ್ವದಲ್ಲಿ ತೆರವುಗೊಳಿಸಲಾಗಿತ್ತು.

ಇಲ್ಲಿ ಅಕ್ರಮವಾಗಿ ನಿರ್ಮಾಣವಾಗಿದ್ದ ಶೆಡ್‌ಗಳನ್ನು, ಆವರಣ ಗೋಡೆಗಳನ್ನು ಹಾಗೂ ಗೋದಾಮನ್ನು 10 ಜೆಸಿಬಿ ಬಳಸಿ ಒಡೆದು ಹಾಕಲಾಗಿತ್ತು. ಬಳಿಕ ಕೆರೆ ಮತ್ತೆ ಒತ್ತುವರಿಯಾಗಿದೆ. ಈ ಬಗ್ಗೆ ಸಾರ್ವಜನಿಕರು ಮತ್ತೆ ದೂರು ನೀಡಿದ್ದರೂ ಕಂದಾಯ ಇಲಾಖೆಯಾಗಲೀ ಈ ಕೆರೆಯ ನಿರ್ವಹಣೆಯ ಹೊಣೆ ಹೊತ್ತಿರುವ ಬಿಬಿಎಂಪಿಯಾಗಲೀ ಒತ್ತುವರಿ ತೆರವುಗೊಳಿಸುವ ಗೋಜಿಗೇ ಹೋಗಿಲ್ಲ. ಮತ್ತಷ್ಟು ಒತ್ತುವರಿಯಾಗುವುದನ್ನು ತಡೆಯುವ ಪ್ರಯತ್ನವೂ ನಡೆದಿಲ್ಲ ಎಂದು ದೂರುತ್ತಾರೆ ಸ್ಥಳೀಯರು.



ಚಿಕ್ಕಕಲ್ಲಸಂದ್ರ ಕೆರೆಯ ಒತ್ತುವರಿ ತೋರಿಸುವ ನಕ್ಷೆ

ಚಿಕ್ಕಕಲ್ಲಸಂದ್ರ ಕೆರೆ ಅಂಗಳ ಒತ್ತುವರಿ ಪಟ್ಟಿ
(ತಹಶೀಲ್ದಾರ್ ಕಚೇರಿ 2014ರಲ್ಲಿ ಸಿದ್ಧಪಡಿಸಿರುವುದು)

ಒತ್ತುವರಿದಾರರ ಹೆಸರು	ವಿಸ್ತೀರ್ಣ (ಚ.ಅಡಿ)	ಕಟ್ಟಡದ ವಿಧ	ಸ್ವರೂಪ
ಸುಶೀಲ	60x40	ಶೀಟು	ವಾಣಿಜ್ಯ
ಅನಸೂಯ	30x40	ಶೀಟು	ಮನೆ
ಲಕ್ಷ್ಮೀ	30x40	ಆರ್‌ಸಿಸಿ	ಮನೆ
ರಾಜೇಂದ್ರ ನಾಯ್ಡು	30x40	ಆರ್‌ಸಿಸಿ	ಮನೆ
ಗಾಯತ್ರಿ ಪ್ರಸಾದ್	30x40	ಆರ್‌ಸಿಸಿ	ಮನೆ
ಎಂ.ವಿ.ನಾಗರಾಜು	30x40	ಆರ್‌ಸಿಸಿ	ಮನೆ
ಆಶಾ	30x40	ಆರ್‌ಸಿಸಿ	ಮನೆ
ನಾಗರಾಜು ಶೆಣೈ	30x40	ಆರ್‌ಸಿಸಿ	ಮನೆ
ಖಾಲಿ ಜಾಗ	30x40	ನಿವೇಶನ	ಖಾಲಿ
ಸಂಜೀವಿನಿ	30x40	ಶೀಟು	ಮನೆ
ನಾಗರಾಜ್ ಎಚ್.ಎಂ.	30x40	ಆರ್‌ಸಿಸಿ	ಮನೆ
–	30x40	ಆರ್‌ಸಿಸಿ	ಮನೆ
ಸವಿತಾ ರಾಜಶೇಖರ್	30x40	ಆರ್‌ಸಿಸಿ	ಮನೆ
ರವಿ ಬಳಗೆರೆ	40x100	ಆರ್‌ಸಿಸಿ	ಶಾಲೆ
ರಾಮನಾಥ ನಾಯ್ಡು	30x50	ಆರ್‌ಸಿಸಿ	ಕಚೇರಿ
ಆರ್.ಮಾಧವಿ	30x20	ನಿವೇಶನ	ಖಾಲಿ
ಯಶಸ್ವಿನಿ	40x60	ಬಂಗಲೆ	ಆರ್‌ಸಿಸಿ
ಗುರುಪ್ರಸಾದ್	40x60	ಬಂಗಲೆ	ಆರ್‌ಸಿಸಿ
ಆಶೀರ್ವಾದ್ ನಿಲಯ	30x40	ಬಂಗಲೆ	ಆರ್‌ಸಿಸಿ
ಪೂಜಾ ಕಂಫರ್ಟ್	40x60	ಅಪಾರ್ಟ್‌ಮೆಂಟ್	ಆರ್‌ಸಿಸಿ
ಖಾಲಿ ಜಾಗ	40x60	ನಿವೇಶನ	ಖಾಲಿ
ಶ್ರೀಧರ್ ಶೆಟ್ಟಿ	40x60	ಆರ್‌ಸಿಸಿ	ಬಂಗಲೆ
ಖಾಲಿ ಜಾಗ	60x60	ಆರ್‌ಸಿಸಿ	ಬಂಗಲೆ
ಆರ್.ಆರ್.ಭಾಸ್ಕರ್	60x60	ಆರ್‌ಸಿಸಿ	ಬಂಗಲೆ
ರಾಧಾಕೃಷ್ಣ (ನಾಗಮಣಿ)	40x60	ಆರ್‌ಸಿಸಿ	ಬಂಗಲೆ
ಬಸ್ ನಿಲ್ದಾಣ	100x200	ಬಸ್ ನಿಲ್ದಾಣ	ಬಸ್‌ನಿಲ್ದಾಣ
–	40x60	ನಿವೇಶನ	ಶೀಟು
ಆನಂದ ಹೋಟೆಲ್	40x40	ಶೀಟು	ವಾಣಿಜ್ಯ
ಎಚ್.ವೆಂಕಟಲಕ್ಷ್ಮಿ	60x40	ಆರ್‌ಸಿಸಿ	ಮನೆ
ಶೇಷಸಾಯಿನಾಥ್	30x40	ಆರ್‌ಸಿಸಿ	ಮನೆ
ವಿ.ಕೃಷ್ಣ	30x40	ಆರ್‌ಸಿಸಿ	ಮನೆ
ಖಾಲಿ ಜಾಗ	30x40	ಶೀಟು	ಖಾಲಿ
ಗಣೇಶ್	10x40	ಶೀಟು	ವಾಣಿಜ್ಯ
ಲಕ್ಷ್ಮಣಸ್ವಾಮಿ	10x50	ಶೀಟು	ವಾಣಿಜ್ಯ
ಲಕ್ಷ್ಮಣಸ್ವಾಮಿ	15x24	ಶೀಟು	ವಾಣಿಜ್ಯ
ಲಕ್ಷ್ಮಣಸ್ವಾಮಿ	100x25	ಶೀಟು	ವಾಣಿಜ್ಯ
ಲಕ್ಷ್ಮಣಸ್ವಾಮಿ	80x25	ಶೀಟು	ವಾಣಿಜ್ಯ
ಲಕ್ಷ್ಮಣಸ್ವಾಮಿ	45x30	ಶೀಟು	ವಾಣಿಜ್ಯ
ರಮೇಶ್	30x40	ಹೆಂಚು	ವಾಣಿಜ್ಯ
ಲಕ್ಷ್ಮಣಸ್ವಾಮಿ	80x100	ಹೆಂಚು	ಕಲಾಕುಟೀರ
ಲಕ್ಷ್ಮಣಸ್ವಾಮಿ	200x100	ಹೆಂಚು	ಕಲಾಕುಟೀರ
ಬಾಬು	30x49	ಶೀಟು	ಮನೆ
ಚಂದ್ರಮ್ಮ	20x80	ಶೀಟು	ಮನೆ
ಗಂಗಾ ರೇಣುಕಾ	60x80	ಶೀಟು	ಮನೆ
ಚೌಡಪ್ಪ	2-20 ಎಕರೆ	ಶೀಟ್	ಮನೆ
–	30x40	ಶೀಟ್	ಮನೆ
ಮಂಜುನಾಥ್	30x40	ಆರ್‌ಸಿಸಿ	ಮನೆ
ಶಿವಣ್ಣ ದೃಷ್ಟಿ ಆರ್ಟ್ ಕ್ಲಬ್	30x40	ಆರ್‌ಸಿಸಿ	ಮನೆ
ಕೃಷ್ಣ	60x40	ಶೀಟ್	ಮನೆ
ಗೌರಿಶಂಕರ್ ಡಿ.ಆರ್	40x60	ಆರ್‌ಸಿಸಿ	ಮನೆ/ ವಾಣಿಜ್ಯ
ಸುಧಾಕರ	30x40	ಆರ್‌ಸಿಸಿ	ಮನೆ
ರಾಮಕೃಷ್ಣ	60x40 ಆರ್‌ಸಿಸಿ	ಮನೆ	
ಚಂದ್ರಶೇಖರ್	15x80	ಆರ್‌ಸಿಸಿ	ಮನೆ
ಎಲ್.ಶ್ರೀನಿವಾಸ್	40x60	ಖಾಲಿ	ನಿವೇಶನ
–	150x40	ಬಂಗಲೆ	ಮನೆ
ಕಾಳಿಕಾಂಬಾ ದೇವಿ ದೇವಸ್ಥಾನ	80x40	ಶೀಟು	ದೇವಸ್ಥಾನ
ಅನಸೂಯಮ್ಮ	30x40	ಆರ್‌ಸಿಸಿ	ಮನೆ
ಸುಮ	30x40	ನಿವೇಶನ	ಖಾಲಿ
ಎಂ.ಜಗದೀಶ್	30x40	ಆರ್‌ಸಿಸಿ	ಮನೆ
ಕಾರ್ತಿಕ್	30x40	ಆರ್‌ಸಿಸಿ	ಮನೆ
–	30x40	ಆರ್‌ಸಿಸಿ	ಮನೆ
ಸುನೀತಾ ಅರ್	30x40	ಆರ್‌ಸಿಸಿ	ಮನೆ
ನಾಗರಾಜು	30x40	ಆರ್‌ಸಿಸಿ	ಮನೆ
ಉಮಾ	20x30	ಆರ್‌ಸಿಸಿ	ಮನೆ
ಶ್ರೀನಿಲಯ	30x40	ಆರ್‌ಸಿಸಿ	ಮನೆ
ಶೇಖರ್	20x30	ಆರ್‌ಸಿಸಿ	ಮನೆ
ಗಜೇಂದ್ರಬಾಬು	15x40	ಆರ್‌ಸಿಸಿ	ಮನೆ
–	20x40	ಆರ್‌ಸಿಸಿ	ಮನೆ
ಡಿ.ಆರ್. ಗೋವಿಂದನಾಯ್ಡು	20x40	ಆರ್‌ಸಿಸಿ	ಮನೆ
ಕೆ.ಸುಂದರಂ	30x40	ಆರ್‌ಸಿಸಿ	ಮನೆ
ನಿರ್ಮಲಾ	30x40	ಆರ್‌ಸಿಸಿ	ಮನೆ
ಎ.ಕೆ.ಪ್ರಭಾಕರ	30x40	ಆರ್‌ಸಿಸಿ	ಮನೆ
ಬಿ.ಆರ್.ಪ್ರದೀಪ್	30x40	ಆರ್‌ಸಿಸಿ	ಮನೆ
ಎಸ್.ಎಸ್.ರಾವ್	30x40	ಆರ್‌ಸಿಸಿ	ಮನೆ
ಮಹಾಲಕ್ಷ್ಮಿ	30x40	ಆರ್‌ಸಿಸಿ	ಮನೆ
ಕೆ.ಎಂ. ಸೋಮಶೇಖರ್	40x60	ಆರ್‌ಸಿಸಿ	ಮನೆ
ಕೆ.ಎಸ್.ಸತೀಶ ಮೂರ್ತಿ	30x40	ಆರ್‌ಸಿಸಿ	ಮನೆ
ಜಯಚಂದ್ರ	20x30	ಆರ್‌ಸಿಸಿ	ಮನೆ
ಖಾಲಿ ಜಾಗ	20x30	ನಿವೇಶನ	ಖಾಲಿ
ವೆಂಕಟೇಶ್	60x60	ಮರಳು ಜಲ್ಲಿ	ಮಾರಾಟ ಜಾಗ
–	60x60	ಮರಳು ಜಲ್ಲಿ	ಮಾರಾಟ ಜಾಗ
–	60x60	ಮರಳು ಜಲ್ಲಿ	ಮಾರಾಟ ಜಾಗ
ಅಬ್ದುಲ್ (ಬಾಡಿಗೆದಾರ)	40x50	ಕಬ್ಬಿಣ ಅಂಗಡಿ	ತಾತ್ಕಾಲಿಕ ಮಳಿಗೆ
ನರೇಂದ್ರ	30x30	ಗ್ಯಾರೇಜ್	ಅಂಗಡಿ
ರವಿ (ಬಾಡಿಗೆದಾರ)	30x50	ಫರ್ನಿಚರ್	ವಾಣಿಜ್ಯ
ಪ್ರಕಾಶ್ ಜೈನ್	20x50	ಗ್ಯಾರೇಜ್	ವಾಣಿಜ್ಯ
ಮುನಿರಾಜು (ಬಾಡಿಗೆದಾರ)	50x30	ತರಕಾರಿ ಅಂಗಡಿ	ವಾಣಿಜ್ಯ
ಕುಮಾರ್ (ಬಾಡಿಗೆದಾರ)	60x60	ಡಿಪೊ	ವಾಣಿಜ್ಯ ಮಳಿಗೆ
ಎಂ.ವೆಂಕಟಸ್ವಾಮಿ	3-00 ಮತ್ತು 100x100	ಬಂಗಲೆ ಮತ್ತು ಖಾಲಿ ಜಾಗ	–
ಅಯ್ಯಪ್ಪಸ್ವಾಮಿ ಸಮಿತಿ	40x60	ದೇವಸ್ಥಾನ	–
ಬಾಬು	20x30	ಮನೆ	ಶೀಟು

ಒಂದು ಕಾಲದಲ್ಲಿ ಈ ಕೆರೆಯ ನೀರನ್ನು ಕುಡಿಯುತ್ತಿದ್ದೆವು. ಪಂಚೆ ಟವೆಲ್ ಆಗಿ, ಟವೆಲ್ ಕರ್ಚೀಫ್ ಆಗಿ, ಅದು ಮಾಸ್ಕ್ ಆಗಿ ಬದಲಾದಂತೆ ಆಗಿದೆ ಈ ಕೆರೆಯ ಪರಿಸ್ಥಿತಿ. ಕಂದಾಯ ಸಚಿವರು ಪ್ರತಿನಿಧಿಸುವ ಕ್ಷೇತ್ರ ಇದಾದರೂ ಒತ್ತುವರಿ ತೆರವಿಗೆ ಏನೂ ಕ್ರಮವಾಗಿಲ್ಲ. ಇನ್ನಾದರೂ ಈ ಕೆರೆ ಒತ್ತುವರಿ ತೆರವಿಗೆ ಸರ್ಕಾರ ಕ್ರಮ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು



ನಾಗೇಶ್ವರ ರಾವ್, ಸಾಮಾಜಿಕ ಕಾರ್ಯಕರ್ತ

ಪ್ರೀತಿಯಿಂದ ಪೋಷಣೆ ಮಾಡಿರುವ ರೈತಾಪಿ ಕುಟುಂಬ

ಈ ಕೋಣದ ಬೆಲೆ ಒಂದೂವರೆ ಕೋಟಿ!

• ಸುಧಾಕರ ತಳವಾರ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ಗತ್ತು ಗೈರತ್ತಿನ 'ಗಜೇಂದ್ರ' ಆ ಮನೆ ಮಂದಿಯ ಪ್ರೀತಿಯ ಸದಸ್ಯ. ನಿತ್ಯವೂ 15 ಲೀಟರ್ ಹಾಲು ಹಾಗೂ ಪೌಷ್ಟಿಕ ಆಹಾರ ಬೇಕೇಬೇಕು. ನಾಲ್ಕು ವರ್ಷ 'ಗಜೇಂದ್ರ' ಬರೋಬ್ಬರಿ ಒಂದೂವರೆ ಟನ್ ತೂಗುತ್ತದೆ. ಅದಕ್ಕೆ ಕುಟುಂಬದವರು ಕಟ್ಟಿರುವ ಬೆಲೆ ಒಂದೂವರೆ ಕೋಟಿ ರೂಪಾಯಿ!

–ಇದು ರೈತಾಪಿ ಕುಟುಂಬವೊಂದು ಪ್ರೀತಿಯಿಂದ ಸಾಕಿರುವ ಮುರ್ರಾ ತಳಿಯ 'ಗಜೇಂದ್ರ' ಎಂಬ ಕೋಣನ ಕಥೆ.

ಕಾಗವಾಡ ತಾಲ್ಲೂಕಿನ ಮಂಗಸೂಳಿ ಗ್ರಾಮದ ವಿಲಾಸ ಗಣಪತಿ ನಾಯಿಕ ಕುಟುಂಬದವರು ಕೋಣವನ್ನು ಸಾಕಿದ್ದಾರೆ. ಈ ಕುಟುಂಬ ಹೈನುಗಾರಿಕೆ ನೆಚ್ಚಿಕೊಂಡು ಉಪಜೀವನ ನಡೆಸುತ್ತಿದೆ. ನಾಲ್ಕು ವರ್ಷಗಳ ಹಿಂದೆ ತಾವು ಸಾಕಿದ್ದ ಎಮ್ಮೆಯೊಂದರ ಕರುವೇ ಈ 'ಗಜೇಂದ್ರ'. ದಷ್ಟ ಪುಷ್ಟವಾಗಿ ಬೆಳೆದಿದ್ದು, ನಾಯಿಕ ಕುಟುಂಬದವರು ಬಹಳ ಕಾಳಜಿಯಿಂದ ಸಾಕುತ್ತಿದ್ದಾರೆ.

ಈ ಕೋಣಕ್ಕೆ ಪ್ರತಿ ದಿನ 15 ಲೀಟರ್ ಹಾಲು ಕುಡಿಸುತ್ತಾರೆ. 2ರಿಂದ 3 ಕೆ.ಜಿಯಷ್ಟು ಹತ್ತಿ ಹಿಂಡಿ, ಕಬ್ಬು, ಹಸಿ ಮತ್ತು ಒಣ ಮೇವನ್ನೂ ನಿಯಮಿತವಾಗಿ ನೀಡುತ್ತಾರೆ. ಅಥಣಿ ತಾಲ್ಲೂಕಿನ ಜನಾಪುರ, ಮಹಾರಾಷ್ಟ್ರದ ತಾಸಗಾಂವ, ಅಹಮದಾಬಾದ್‌ನಲ್ಲಿ ನಡೆದ ಜಾನುವಾರುಗಳ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದ 'ಗಜೇಂದ್ರ'ನ ಗಜಗಾತ್ರದ ಮೈಕಟ್ಟು ಕಂಡು ಜನ ಬೆರಗಾಗಿದ್ದಾರೆ.

'ತಾಸಗಾಂವದಲ್ಲಿ ನಮ್ಮ ಗಜೇಂದ್ರನನ್ನು ₹ 80 ಲಕ್ಷಕ್ಕೆ ಕೊಡುವಂತೆ ಬೇಡಿಕೆ ಇಟ್ಟಿದ್ದರು. ಈಚೆಗೆ ಸಾಂಗ್ಲಿಯಲ್ಲಿ ನಡೆದ ಜಾನುವಾರು ಪ್ರದರ್ಶನದಲ್ಲಿ ₹ 1 ಕೋಟಿ ಬೆಲೆ ಕಟ್ಟಲಾಗಿದೆ. ಆದರೆ, ಒಂದೂವರೆ ಕೋಟಿ ರೂಪಾಯಿಗೂ ಅಧಿಕ ಬೆಲೆ ಬಂದರೆ ಮಾತ್ರ ಮಾರುತ್ತೇನೆ' ಎನ್ನುತ್ತಾರೆ ಅದರ ಮಾಲೀಕ ವಿಲಾಸ ಗಣಪತಿ ನಾಯಿಕ.

'ನಮ್ಮ ಕುಟುಂಬ ಹೈನುಗಾರಿಕೆಯನ್ನೇ ನೆಚ್ಚಿಕೊಂಡು ಜೀವನ ನಡೆಸುತ್ತಿದೆ. ಹರಿಯಾಣ ಮೊದಲಾದ ಕಡೆಗಳಿಂದ 50 ಎಮ್ಮೆಗಳನ್ನು ತಂದು ಸಾಕಿದ್ದೇವೆ. ನಮಗೆ ಹೊಲವಿಲ್ಲ. ಪ್ರತಿ ತಿಂಗಳು ₹ 50ಸಾವಿರ ಮೌಲ್ಯದ ಮೇವು, ಹಿಂಡಿ ಖರೀದಿಸಿ ಜಾನುವಾರುಗಳಿಗೆ ನೀಡುತ್ತೇವೆ. ನಿತ್ಯ ಸಂಜೆ ಮತ್ತು ಬೆಳಿಗ್ಗೆ ಸೇರಿ 100 ಲೀಟರ್ ಹಾಲು ಮಾರುತ್ತೇವೆ. ನಿತ್ಯ ₹ 5ಸಾವಿರ ಆದಾಯವಿದೆ. ಕೊಟ್ಟಿಗೆ ಗೊಬ್ಬರ ಮಾರಾಟದಿಂದ ಪ್ರತಿ ವರ್ಷ ಅಂದಾಜು ₹ 2 ಲಕ್ಷ ಬರುತ್ತದೆ. ಮನೆಯ ಎಲ್ಲರೂ ಜಾನುವಾರು ಸಾಕಣೆಯಲ್ಲೇ ತೊಡಗಿಕೊಂಡಿದ್ದೇವೆ' ಎಂದು ವಿಲಾಸ ನಾಯಿಕ, ಪುತ್ರರಾದ ಜ್ಞಾನದೇವ ಮತ್ತು ಆನಂದ ನಾಯಿಕ ಹೇಳುತ್ತಾರೆ.


ಕಾಗವಾಡ ತಾಲ್ಲೂಕಿನ ಮಂಗಸೂಳಿ ಗ್ರಾಮದ ವಿಲಾಸ ನಾಯಕ ಅವರು ಸಾಕಿರುವ ಕೋಣ 'ಗಜೇಂದ್ರ'

ಪ್ರಜಾವಾಣಿ ವಿಶೇಷ

ಜಿಲ್ಲಾ ಕೋರ್ಟ್ ವಿದ್ಯಮಾನ: ಮಾಹಿತಿಗೆ ಹೈಕೋರ್ಟ್ ಸೂಚನೆ

ಬೆಂಗಳೂರು: 'ವಕೀಲರು ಮುಷ್ಕರ ಹೂಡುವ, ಧರಣಿ ನಡೆಸುವ ಅಥವಾ ಕೋರ್ಟ್ ಬಹಿಷ್ಕರಿಸುವಂತಹ ಸಂದರ್ಭಗಳಲ್ಲಿ ಈ ಕುರಿತ ಮಾಹಿತಿಯನ್ನು ಜಿಲ್ಲಾ ನ್ಯಾಯಾಲಯಗಳ ಮುಖ್ಯಸ್ಥರು ತಕ್ಷಣವೇ ಮುಖ್ಯ ನ್ಯಾಯಮೂರ್ತಿಗಳ ಗಮನಕ್ಕೆ ತರಬೇಕು' ಎಂದು ಹೈಕೋರ್ಟ್ ಸೂಚಿಸಿದೆ.

ಈ ಕುರಿತಂತೆ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಸುತ್ತೋಲೆ ಹೊರಡಿಸಿದ್ದು, 'ರಾಜ್ಯದ ಯಾವುದೇ ಜಿಲ್ಲೆಯಲ್ಲಿ ವಕೀಲರ ಸಂಘಗಳು ಅಥವಾ ಬೇರಾವುದೇ ಸಂಘಗಳು ನ್ಯಾಯಾಲಯಗಳ ಕಲಾಪ ಬಹಿಷ್ಕರಿಸುವುದು ಅಥವಾ ನ್ಯಾಯಾಲಯಕ್ಕೆ ಹಾಜರಾಗದಂತೆ ತಡೆಯುವುದನ್ನು ಮಾಡಿದರೆ ಈ ಕುರಿತ ಮಾಹಿತಿಯನ್ನು ತಕ್ಷಣವೇ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಗಮನಕ್ಕೆ ತರಬೇಕು' ಎಂದು ವಿವರಿಸಲಾಗಿದೆ.

'ಮುಷ್ಕರ, ಧರಣಿ ಸೇರಿದಂತೆ ಇತರೆ ಯಾವುದೇ ಪ್ರಮುಖ ವಿದ್ಯಮಾನಗಳು ನಡೆಯುತ್ತಿದ್ದರೆ ಆ ಬಗ್ಗೆ ಆಯಾ ಜಿಲ್ಲೆಯ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಮತ್ತು ಜಿಲ್ಲಾ ನ್ಯಾಯಾಲಯದ ಮುಖ್ಯಸ್ಥರು ತಡಮಾಡದೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಗಮನಕ್ಕೆ ತರಬೇಕು' ಎಂದು ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

ಶಿರಸಿ ಮಾರಿಕಾಂಬಾ ಜಾತ್ರೆ ಇಂದಿನಿಂದ

ಪ್ರಜಾವಾಣಿ ವಾರ್ತೆ

ಶಿರಸಿ: ದಕ್ಷಿಣ ಭಾರತದ ಜಾಗೃತ ಶಕ್ತಿಪೀಠಗಳಲ್ಲಿ ಒಂದೆನಿಸಿರುವ ಶಿರಸಿ ಮಾರಿಕಾಂಬಾ ದೇವಿಯ ಜಾತ್ರೆಗೆ ಮಂಗಳವಾರ ಚಾಲನೆ ದೊರೆಯಲಿದ್ದು, ಅದ್ದೂರಿ ಜಾತ್ರೆಗೆ ಶಿರಸಿ ನಗರ ಸಜ್ಜುಗೊಂಡಿದೆ.

ಇದೇ 16 ರಂದು ಮಾರಿಕಾಂಬಾ ದೇವಿಯ ಮೂರ್ತಿಯನ್ನು ಶೋಭಾಯಾತ್ರೆ ಮೂಲಕ ಗದ್ದುಗೆಗೆ ತರಲಾಗುತ್ತದೆ. ಇದೇ 23ರವರೆಗೆ ಜಾತ್ರೆ ನಡೆಯಲಿದೆ ಎಂದು ದೇವಸ್ಥಾನದ ಧರ್ಮದರ್ಶಿ ಮಂಡಳಿ ತಿಳಿಸಿದೆ.


ಶಾಂತವೇರಿ ಗೋಪಾಲಗೌಡ ಸಮಾಜವಾದಿ ಪ್ರತಿಷ್ಠಾನವು ಬೆಂಗಳೂರಿನಲ್ಲಿ ಸೋಮವಾರ ಆಯೋಜಿಸಿದ್ದ ಶಾಂತವೇರಿ ಗೋಪಾಲಗೌಡ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವ ಎಸ್‌ಟಿ. ಸೋಮಶೇಖರ್, ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಶಾಂತವೇರಿ ಗೋಪಾಲಗೌಡ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

ಶಾಂತವೇರಿ ಗೋಪಾಲಗೌಡ ಹೆಸರಲ್ಲಿ ಶ್ರೇಷ್ಠ ಕೃಷಿಕ, ಶ್ರೇಷ್ಠ ಶಾಸಕ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜವಾದಿ ನೇತಾರ ಶಾಂತವೇರಿ ಗೋಪಾಲಗೌಡರ ಹೆಸರಿನಲ್ಲಿ ಶ್ರೇಷ್ಠ ಕೃಷಿಕ ಮತ್ತು ಶ್ರೇಷ್ಠ ಶಾಸಕ ಪ್ರಶಸ್ತಿಗಳನ್ನು ಪ್ರತಿ ವರ್ಷ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಶಾಂತವೇರಿ ಗೋಪಾಲಗೌಡ ಸಮಾಜವಾದಿ ಪ್ರತಿಷ್ಠಾನ ಮತ್ತು ಜನ್ಮ ಶತಮಾನೋತ್ಸವ ಆಚರಣಾ ಸಮಿತಿ ಆಯೋಜಿಸಿದ್ದ 'ಶಾಂತವೇರಿ ಗೋಪಾಲಗೌಡರ ಜನ್ಮ ಶತಮಾನೋತ್ಸವ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಜನ್ಮ ಶತಮಾನೋತ್ಸವ ಇಡೀ ವರ್ಷ ನಡೆಯಲಿದೆ ಎಂದೂ ಅವರು ಹೇಳಿದರು.

ಗೋಪಾಲಗೌಡರ ಕುರಿತ ಕೃತಿಗಳನ್ನು ಮುದ್ರಿಸಿ, ನಾಡಿನಾದ್ಯಂತ ಎಲ್ಲ ಗ್ರಂಥಾಲಯಗಳಿಗೆ ತಲುಪಿಸುವ ಕೆಲಸ ಮಾಡಲಾಗುವುದು. ಶಿವಮೊಗ್ಗ ಜಿಲ್ಲೆಯಲ್ಲಿ ಭೂಸುಧಾರಣೆಗಾಗಿ ನಡೆದಿರುವ ಹೋರಾಟಗಳ ಬಗ್ಗೆ ಪುಸ್ತಕವನ್ನು ಸರ್ಕಾರದ ವತಿಯಿಂದ ಜನ್ಮ ದಿನೋತ್ಸವದ ಅಂಗವಾಗಿ ಹೊರತಂದು ಬಿಡುಗಡೆ ಮಾಡಲಾಗುವುದು ಎಂದು ಹೇಳಿದರು.

ಸರ್ಕಾರದ ಆಡಳಿತ ಮತ್ತು ಪ್ರಮುಖ ನಿರ್ಣಯಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಅವರ ವಿಚಾರಧಾರೆಗಳು ಮಾರ್ಗದರ್ಶಕವಾಗಿವೆ. ಅವರು ಯಾವುದಕ್ಕಾಗಿ ತಮ್ಮ ಬದುಕನ್ನು ಮೀಸಲಿಟ್ಟಿದ್ದರೋ, ತ್ಯಾಗ ಮಾಡಿದ್ದರೋ ಆ ಮೌಲ್ಯಗಳನ್ನು ಎತ್ತಿ ಹಿಡಿಯಲು ಎಲ್ಲಾ ಪ್ರಯತ್ನಗಳನ್ನು ಮಾಡೋಣ ಎಂದು ಬೊಮ್ಮಾಯಿ ಕರೆ ನೀಡಿದರು.

'ಗೋಪಾಲಗೌಡರು ನಮ್ಮ ತಂದೆ ಎಸ್.ಆರ್.ಬೊಮ್ಮಾಯಿ ಅವರ ಸಮಕಾಲೀನರು. ಸಮಾನ ಮನಸ್ಕರು ಹಾಗೂ ಸಮ ಹೋರಾಟಗಾರರು ಆಗಿದ್ದರು. ರಾಜಕಾರಣಕ್ಕೆ ವಿಶ್ವಾಸಾರ್ಹತೆ ಉಳಿದಿರುವುದೇ ಅವರಂತಹ ನಾಯಕರಿಂದ. ಸಮಾನ ಆದರ್ಶ ಬದುಕನ್ನು ಬದುಕಿದ್ದರು. ಇಂದಿನ ದಿನಗಳಲ್ಲಿ ರಾಜಕಾರಣಿಗಳನ್ನು ಅವರ ಆಸ್ತಿ ಎಷ್ಟಿದೆ ಎಂಬುದನ್ನು ಆಧರಿಸಿ ನೋಡುತ್ತೇವೆ. ಜನರಿಗೆ ಆತ್ಮವಿಶ್ವಾಸ ತುಂಬಿ ವ್ಯವಸ್ಥೆ ಕಲ್ಪಿಸುವ ಕನಸು ಮತ್ತು ಅದಕ್ಕೆ ಪೂರಕವಾದ ವ್ಯಕ್ತಿತ್ವವನ್ನು ಗೋಪಾಲಗೌಡರ ಆಸ್ತಿಯಾಗಿದ್ದುವು' ಎಂದು ಹೇಳಿದರು.

'ರಾಜ್ಯ ರಾಜಕಾರಣ ಮಾತ್ರವಲ್ಲ, ರಾಷ್ಟ್ರದ ರೈತರ ಬದುಕಿನಲ್ಲಿ ತಮ್ಮ ಹೆಜ್ಜೆ ಗುರುತುಗಳನ್ನು ಬಿಟ್ಟು ಹೋಗಿದ್ದಾರೆ. ಅವರ ಇಡೀ ಬದುಕನ್ನು ಜನರಿಗಾಗಿ ಗಂಧದ ಕೊರಡಿನಂತೆ ತೇಯ್ದಿದ್ದಾರೆ. ತೀರ್ಥಹಳ್ಳಿ ಸ್ಫೂರ್ತಿದಾಯಕ ಪುಣ್ಯ ಭೂಮಿ. ಕುವೆಂಪು, ಕಡಿದಾಳ ಮಂಜಪ್ಪ, ಶಾಂತವೇರಿ ಗೋಪಾಲಗೌಡರು ಜನಿಸಿದ ನೆಲ' ಎಂದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಗೃಹ ಸಚಿವ ಆರಗ ಜ್ಞಾನೇಂದ್ರ, ಸಹಕಾರ ಸಚಿವ ಎಸ್.ಟಿ. ಸೋಮಶೇಖರ್, ಗೋಪಾಲಗೌಡರ ಅವರ ಮಗ ರಾಮ ಮನೋಹರ ಶಾಂತವೇರಿ ಅವರು ಉಪಸ್ಥಿತರಿದ್ದರು.

ನೌಕರ ಆತ್ಮಹತ್ಯೆ: ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಹುಮನಾಬಾದ್ (ಬೀದರ್ ಜಿಲ್ಲೆ): ಸಿಂಧುತ್ವ ಪ್ರಮಾಣ ಪತ್ರ ಸಿಗದ ಕಾರಣ ನೊಂದು ತಾಲ್ಲೂಕಿನ ಕುಮಾರ್ ಚಿಂಚೋಳಿ ಗ್ರಾಮದ ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯ ಬಸ್ ಚಾಲಕ ಕಮ್ ನಿರ್ವಾಹಕ ಓಂಕಾರ ಶೇರಿಕಾರ (36) ಅವರು ಆತ್ಮಹತ್ಯೆ ಮಾಡಿಕೊಂಡಿದ್ದು, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಓಂಕಾರ್ ಪತ್ನಿ ಲಕ್ಷ್ಮಿಬಾಯಿ ನೀಡಿದ ದೂರಿನ ಮೇರೆಗೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಹುಮನಾಬಾದ್ ಠಾಣೆಯ ಪೊಲೀಸರು ತಿಳಿಸಿದ್ದಾರೆ.


'ಎಲ್ಲ ದಾಖಲೆಗಳು ಸರಿಯಾಗಿದ್ದರೂ ಹಣ ಪಡೆಯುವ ಉದ್ದೇಶದಿಂದ 8 ವರ್ಷಗಳಿಂದ ಸಮಾಜ ಕಲ್ಯಾಣ ಅಧಿಕಾರಿಗಳು ಸಿಂಧುತ್ವ ಪ್ರಮಾಣ ಪತ್ರ ನೀಡದೆ ಕಚೇರಿಗೆ ಸುತ್ತಾಡಿಸಿದ್ದಾರೆ. ಇದರಿಂದ ನನ್ನ ಪತಿ ಓಂಕಾರ ಸಾಕಷ್ಟು ಹಣ ಖರ್ಚು ಮಾಡಿದ್ದಾರೆ. ಪ್ರಮಾಣ ಪತ್ರವನ್ನು ಸಾರಿಗೆ ಇಲಾಖೆಗೆ ನೀಡದಿದ್ದರೆ ಕೆಲಸ ಕಳೆದುಕೊಳ್ಳುವ ಭೀತಿ ಪತಿಗೆ ಕಾಡುತ್ತಿತ್ತು. ಅವರ ಸಾವಿಗೆ ಕಾರಣರಾದ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಲಕ್ಷ್ಮಿಬಾಯಿ ದೂರಿನಲ್ಲಿ ಒತ್ತಾಯಿಸಿದ್ದಾರೆ.

ಸೆಕ್ಷನ್ 306 (ಆತ್ಮಹತ್ಯೆಗೆ ಪ್ರಚೋದನೆ) ಹಾಗೂ ಸೆಕ್ಷನ್ 34ರಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಓಂಕಾರ ಕುಟುಂಬಕ್ಕೆ ಸರ್ಕಾರವು ₹25 ಲಕ್ಷ ಪರಿಹಾರ ಕೊಡಬೇಕು ಮತ್ತು ಕುಟುಂಬದ ಸದಸ್ಯರೊಬ್ಬರಿಗೆ ಸರ್ಕಾರಿ ನೌಕರಿ ಕೊಡಬೇಕು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ ಒತ್ತಾಯಿಸಿದ್ದಾರೆ.

ನಿಧನವಾರ್ತೆ

ಜಯರಾಮ್ ನಾಡಿಗ್



ಸಂತೆಬೆನ್ನೂರು: ಅಮೆರಿಕದ ಹ್ಯೂಸ್ಟನ್‌ನಲ್ಲಿ ನಡೆದ ಮೊದಲ ವಿಶ್ವ ಕನ್ನಡ ಸಮ್ಮೇಳನದ ಅಧ್ಯಕ್ಷರಾಗಿದ್ದ ಸಂತೆ ಬೆನ್ನೂರಿನ ಜಯರಾಮ್ ನಾಡಿಗ್ (84) ಅವರು ಹ್ಯೂಸ್ಟನ್‌ನಲ್ಲಿ ಶನಿವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ. ಅಂತ್ಯಕ್ರಿಯೆ ಹ್ಯೂಸ್ಟನ್‌ನಲ್ಲಿ ಸೋಮವಾರ ನೆರವೇರಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ಅಮೆರಿಕದ ಎಲ್ಲ ಕನ್ನಡ ಕೂಟಗಳನ್ನು ಸೇರಿಸಿದ ಕೀರ್ತಿ ಜಯರಾಮ್ ನಾಡಿಗ್ ಭಾಜನರಾಗಿದ್ದರು. ಅವರ ಪ್ರಯತ್ನದಿಂದ ಅಮೆರಿಕ ಕನ್ನಡ ಕೂಟಗಳ ಒಕ್ಕೂಟ (ಅಕ್ಕ) ರೂಪುಗೊಂಡಿತ್ತು.

ನಾಡಿಗ ಕುಟುಂಬದಲ್ಲಿ ಜನಿಸಿದ್ದ ಅವರು ದಾವಣಗೆರೆಯ ಯುಬಿಡಿಟಿಯಲ್ಲಿ ಎಂಜಿನಿಯರಿಂಗ್ ಪದವಿ ಪಡೆದು 1967ರಲ್ಲಿ ಅಮೆರಿಕಕ್ಕೆ ತೆರಳಿದ್ದರು. ಅಲ್ಲಿಯೇ ವಾಸಮಾಡುತ್ತಿದ್ದರು. ಸಂತೆಬೆನ್ನೂರಿನ ವಿಜಯ ಪ್ರೌಢಶಾಲೆಯ ಎಸ್ಎಸ್ಎಲ್‌ಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗೆ ಪ್ರತಿ ವರ್ಷ ₹ 5,000 ಪ್ರೋತ್ಸಾಹಧನ ಸೇರಿ ಹಲವು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು.

ಯೋಗೇಶ್ವರ್ ಏಟು; ಎಚ್‌ಡಿಕೆ ಎದಿರೇಟು

‘ವೆಸ್ಟೆಂಡ್ ಹೋಟೆಲ್‌ನಲ್ಲಿ ಎಚ್‌ಡಿಕೆ ರಾಸಲೀಲೆ’

ಪ್ರಜಾವಾಣಿ ವಾರ್ತೆ

ರಾಮನಗರ: ‘ಎಚ್.ಡಿ. ಕುಮಾರಸ್ವಾಮಿ 14 ತಿಂಗಳ ಕಾಲ ಮುಖ್ಯಮಂತ್ರಿ ಆಗಿದ್ದಾಗ ಚನ್ನಪಟ್ಟಣಕ್ಕೆ ಬರಲೇ ಇಲ್ಲ. ವೆಸ್ಟೆಂಡ್ ಹೋಟೆಲ್‌ನಲ್ಲಿ ರಾಸಲೀಲೆ ಆಡಿಕೊಂಡಿದ್ದು, ಈಗ ಜನರ ಮುಂದೆ ಕಣ್ಣೊರೆಸುವುದು ಶೋಭೆ ಅಲ್ಲ’ ಎಂದು ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ವಾಗ್ದಾಳಿ ನಡೆಸಿದರು.

ಚನ್ನಪಟ್ಟಣದಲ್ಲಿ ಸೋಮವಾರ ಪತ್ರಕರ್ತರ ಜೊತೆ ಅವರು ಮಾತನಾಡಿದರು. ‘ಕುಮಾರಸ್ವಾಮಿಯ ವಿಚಾರ ಇಡೀ ಕರ್ನಾಟಕದ ಜನರಿಗೆ ಗೊತ್ತಿದೆ. ಈ ವಿಚಾರವನ್ನು ನನ್ನ ಬಾಯಿಂದ ಕೇಳಬೇಡಿ. ಹೋಟೆಲ್‌ನಲ್ಲಿ ಕಳೆದ ಸಮಯದಲ್ಲಿ ದಿನಕ್ಕೆ ಕೇವಲ ಒಂದು ಗಂಟೆ ಸಮಯ ಕೊಟ್ಟಿದ್ದರೆ ನಮ್ಮ ತಾಲ್ಲೂಕಿನ, ಜಿಲ್ಲೆಯ ಸಮಸ್ಯೆ ಬಗೆಹರಿಯುತ್ತಿತ್ತು. ಆವಯ್ಯ ಹಾಗೆ ಮಾಡಲಿಲ್ಲ. ಹೋಟೆಲ್‌ನಲ್ಲಿ ಇದ್ದಾಗ ಯಾವ ಮಂತ್ರಿ, ಶಾಸಕರನ್ನೂ ಭೇಟಿ ಆಗುತ್ತಿರಲಿಲ್ಲ’ ಎಂದು ಟೀಕಿಸಿದರು.


‘ಈ ಹಿಂದಿನ ಚುನಾವಣೆಯಲ್ಲಿ ನಾನು ನಿನ್ನ ಹೆಂಡತಿಯನ್ನು ಸೋಲಿಸಿದ್ದೆ. ನಿನ್ನ ವಿರುದ್ಧ ಸೋತಿದ್ದೆ. 2023ರ ಚುನಾವಣೆಯಲ್ಲಿ ನಾನು–ನೀನು ಮತ್ತೆ ಮುಖಾಮುಖಿ ಆಗುತ್ತೇವೆ. ಯಾಕಿಷ್ಟು ಕೀಳು ಮಟ್ಟದ ರಾಜಕಾರಣಕ್ಕೆ ಇಳಿದಿದ್ದೀಯೋ ಗೊತ್ತಿಲ್ಲ’ ಎಂದು ಟೀಕಿಸಿದರು.

‘ಕುಮಾರಸ್ವಾಮಿ ಮತ್ತು ನನ್ನನ್ನು ಒಟ್ಟಿಗೆ ಕೂರಿಸಿದರೆ, ವೈಯಕ್ತಿಕ ಮತ್ತು ಸಾರ್ವಜನಿಕ ವಿಚಾರದ ಬಗ್ಗೆ ನೇರವಾಗಿ ಚರ್ಚೆಗೆ ಸಿದ್ಧನಿದ್ದೇನೆ’ ಎಂದು ಸವಾಲು ಹಾಕಿದರು.

‘ನಾನು ತಾಲ್ಲೂಕಿನಲ್ಲಿ ಯಾರ ಜಮೀನನ್ನೂ ಹೊಡೆದಿಲ್ಲ. ಆದರೆ ಕುಮಾರಸ್ವಾಮಿ ಮೇಲೆ ಆ ಆಪಾದನೆ ಇದೆ. ಬಿಡದಿಯಲ್ಲಿ ಬಂಗಲೆ ಕಟ್ಟಿದ್ದಾನಲ್ಲ, ಅದು ದಲಿತರ ಜಮೀನು ಎಂಬ ಆಪಾದನೆ ಇದೆ. ಅವನೊಬ್ಬ ನಯವಂಚಕ, ಅಪ್ರಬುದ್ಧ ರಾಜಕಾರಣಿ’ ಎಂದು ಟೀಕಿಸಿದರು.

ಬಿಜೆಪಿ ನಾಯಕರಿಗೆ ಬುದ್ಧಿ ಇಲ್ಲ: ‘ಕುಮಾರಸ್ವಾಮಿಗೆ ನಮ್ಮ ಪಕ್ಷದವರೇ ರಾಜಕೀಯವಾಗಿ ಬೆಂಬಲ ನೀಡುತ್ತಿದ್ದಾರೆ. ನಮ್ಮ ಪಕ್ಷದ ನಾಯಕರಿಗೆ ಬುದ್ಧಿ ಇಲ್ಲ. ಅವನನ್ನು ಓಲೈಸುತ್ತಾರೆ. ಇದರಿಂದ ಬಿಜೆಪಿಗೇ ನಷ್ಟ’ ಎಂದು ಏಕವಚನದಲ್ಲಿಯೇ ವಾಗ್ದಾಳಿ ನಡೆಸಿದರು.

‘ಜೆಡಿಎಸ್ ಜೊತೆ ಹೊಂದಾಣಿಕೆಯ ಪ್ರಶ್ನೆ ಇಲ್ಲ. ನಮಗೆ ಅಂತಹ ಅನಿವಾರ್ಯತೆ ಇಲ್ಲ. ಈ ಬಗ್ಗೆ ಅರುಣ್ ಸಿಂಗ್ ಅವರೇ ಸ್ಪಷ್ಟಪಡಿಸಿದ್ದಾರೆ. ಜೆಡಿಎಸ್ ಇವತ್ತು ನೆಲ ಕಚ್ಚಿದ್ದು, ಅವರಿಗೆ ರಾಜಕೀಯ ಅಸ್ತಿತ್ವ ಇಲ್ಲ. ಹಳೇ ಮೈಸೂರು ಭಾಗದಲ್ಲಿ ಬಿಜೆಪಿ ಸ್ವತಂತ್ರವಾಗಿ ಬೆಳೆಯಬೇಕು ಎಂದರೆ ಸ್ವತಂತ್ರವಾಗಿ ಇರಬೇಕು. ಜೆಡಿಎಸ್ ಜೊತೆಗೆ ಕೈ ಜೋಡಿಸಬಾರದು. ಕುಮಾರಸ್ವಾಮಿಗೆ ಮತ್ತೆ ಶಕ್ತಿ ಕೊಟ್ಟರೆ ಈ ಹಿಂದೆ ವಿಧಾನಸೌಧದ ಮುಂದೆ ಎಡಪಕ್ಷಗಳನ್ನು ಕರೆತಂದು ಮಾಡಿದಂತೆ ಮತ್ತೆ ಘಟಬಂಧನ್ ಮಾಡುತ್ತಾರೆ’ ಎಂದರು.


ಸಿ.ಪಿ. ಯೋಗೇಶ್ವರ್

‘ಯು.ಬಿ ಸಿಟಿ ಪಕ್ಕ ಯೋಗೇಶ್ವರ್ ಮಜಾ’

ಬೆಂಗಳೂರು: ‘ಸಿ.ಪಿ. ಯೋಗೇಶ್ವರ್ ಯು.ಬಿ. ಸಿಟಿ ಪಕ್ಕದಲ್ಲೇ ಇದ್ದರಲ್ಲಾ, ಆಗ ಏನು ಮಜಾ ಮಾಡುತ್ತಿದ್ದರಾ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು.


‘ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಹೋಟೆಲ್‌ನಲ್ಲಿ ರಾಸಲೀಲೆ ನಡೆಸುತ್ತಿದ್ದರು’ ಎಂದು ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಸಿ.ಪಿ. ಯೋಗೇಶ್ವರ್ ಮಾಡಿರುವ ಆರೋಪಕ್ಕೆ ಸೋಮವಾರ ಪ್ರತಿಕ್ರಿಯಿಸಿದ ಅವರು, ‘ನನ್ನ ಜೀವನ ತೆರೆದ ಪುಸ್ತಕ. ನನಗೆ ಯಾರ ಪ್ರಮಾಣಪತ್ರವೂ ಬೇಡ’ ಎಂದರು.

‘ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ನಾನು ರಾಸಲೀಲೆ ನಡೆಸಲು ವೆಸ್ಟೆಂಡ್ ಹೋಟೆಲ್‌ಗೆ ಹೋಗುತ್ತಿರಲಿಲ್ಲ. ಸರ್ಕಾರಿ ಬಂಗಲೆ ಇಲ್ಲದ ಕಾರಣದಿಂದ ಸ್ವಲ್ಪ ಸಮಯ ವಿಶ್ರಾಂತಿಗಾಗಿ ಅಲ್ಲಿಗೆ ಹೋಗುತ್ತಿದ್ದೆ. ನಾನು ಎಲ್ಲೇ ಹೋದರೂ ಆಪ್ತ ಸಹಾಯಕ ನನ್ನ ಜತೆಯಲ್ಲೇ ಇರುತ್ತಿದ್ದರು. ಈಗಲೂ ಜತೆಯಲ್ಲೇ ಇರುತ್ತಾರೆ. ಆಗ ನನ್ನ ಸಂಪುಟ ಸಹೋದ್ಯೋಗಿಯಾಗಿದ್ದ ಸಾ.ರಾ. ಮಹೇಶ್ ಕೂಡ ಜತೆಯಲ್ಲೇ ಇರುತ್ತಿದ್ದರು. ಇನ್ನೂ ಅನೇಕ ಸ್ನೇಹಿತರು ನನ್ನೊಂದಿಗೆ ಇರುತ್ತಿದ್ದರು’ ಎಂದು ಹೇಳಿದರು.

‘ಈ ವ್ಯಕ್ತಿಯನ್ನು ನೋಡಿ ನಾನು ಕಲಿಯಬೇಕಾ? ಇವರೇನು ಗುಡಿಸಲಿನಲ್ಲಿ ಇದ್ದರಾ? ನನ್ನ ಜೀವನದಲ್ಲಿ ಕದ್ದುಮುಚ್ಚಿದ ಯಾವ ಸಂಗತಿಗಳೂ ಇಲ್ಲ. ನನ್ನ ಬಗ್ಗೆ ಟೀಕಿಸುವಾಗ ಆತ ಬಳಸಿರುವ ಪದಪುಂಜಗಳೇ ಅವರ ಸಂಸ್ಕಾರವನ್ನು ಹೇಳುತ್ತವೆ’ ಎಂದು ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ಮುಗಿದ ಅಧ್ಯಾಯ: ‘ಈ ವ್ಯಕ್ತಿಯದ್ದು ಚನ್ನಪಟ್ಟಣದಲ್ಲಿ ಮುಗಿದ ಅಧ್ಯಾಯ. ಖಾಸಗಿ ಬಸ್ ನಿಲ್ದಾಣ ನಿರ್ಮಾಣ, ಅಂಬೇಡ್ಕರ್ ಭವನದ ಹೆಸರಿನಲ್ಲಿ ಏನು ಮಾಡಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ನಾನು ಚನ್ನಪಟ್ಟಣದ ಅಭಿವೃದ್ಧಿಗೆ ಏನೆಲ್ಲಾ ಮಾಡಬೇಕಿತ್ತೋ ಅದೆಲ್ಲವನ್ನೂ ಮಾಡಿದ್ದೇನೆ’ ಎಂದರು.

‘ಮೆಗಾಸಿಟಿ ಯೋಜನೆ ಹೆಸರಿನಲ್ಲಿ ಸಾವಿರಾರು ಜನರನ್ನು ಬೀದಿಪಾಲು ಮಾಡಿದ ಈ ವ್ಯಕ್ತಿ, ಸಿನಿಮಾ ತೆಗೆದು ಎಲ್ಲರನ್ನೂ ಹಾಳು ಮಾಡಿದ್ದು ಗೊತ್ತಿದೆ. ‘ಸೈನಿಕ’ ಎಂಬ ಸಿನಿಮಾ ಮಾಡಲು ಹೋಗಿದ್ದರು. ಹಣ ಕೊಟ್ಟವರು ಈಗಲೂ ಬೀದಿ ಪಾಲಾಗಿದ್ದಾರೆ. ನನ್ನ ವಿರುದ್ಧ ದಲಿತರ ಜಮೀನು ಹೊಡೆದ ಆರೋಪ ಮಾಡುತ್ತಿದ್ದಾರೆ. ಚನ್ನಪಟ್ಟಣದಲ್ಲೇ ಬಹಿರಂಗ ಚರ್ಚೆಗೆ ನಾನು ಸಿದ್ಧ. ಬಂದು ತೋರಿಸಲಿ’ ಎಂದು ಕುಮಾರಸ್ವಾಮಿ ಸವಾಲು ಹಾಕಿದರು.


ಎಚ್‌ಡಿ.ಕುಮಾರಸ್ವಾಮಿ



ವೈರಮುಡಿ...

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಮೇಲುಕೋಟೆ ಕ್ಷೇತ್ರದಲ್ಲಿ ಸೋಮವಾರ ರಾತ್ರಿ ಅಪಾರ ಭಕ್ತರ ಸಮ್ಮುಖದಲ್ಲಿ ಚೆಲುವನಾರಾಯಣಸ್ವಾಮಿ ವೈರಮುಡಿ ಉತ್ಸವ ನಡೆಯಿತು

ಪ್ರಜಾವಾಣಿ ಚಿತ್ರ/ರಂಜು ಪಿ.

ವಿಧಾನಸಭೆಯಲ್ಲಿ ಶಾಸಕ ರಮೇಶ್ ಕುಮಾರ್ ಒತ್ತಾಯ

ಶಾಸಕರ ಆಸ್ತಿ ಇ.ಡಿ, ಐ.ಟಿ ತನಿಖೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಶಾಸಕರು ತಮ್ಮ ಆಸ್ತಿ– ಪಾಸ್ತಿಗಳಿಗೆ ಸಂಬಂಧಿಸಿದಂತೆ ಚುನಾವಣಾ ಆಯೋಗಕ್ಕೆ ಸಲ್ಲಿಸುವ ಪ್ರಮಾಣಪತ್ರದಲ್ಲಿ ಸಂಪತ್ತಿನ ಪ್ರಮಾಣದಲ್ಲಿ ಅಸಹಜವಾಗಿ ಏರಿಕೆ ಆಗಿರುವುದು ಕಂಡುಬಂದರೆ ಜಾರಿ ನಿರ್ದೇಶನಾಲಯ ಮತ್ತು ಆದಾಯ ತೆರಿಗೆ ಇಲಾಖೆಗಳು ತನಿಖೆ ನಡೆಸಬೇಕು ಎಂದು ಕಾಂಗ್ರೆಸ್ ಸದಸ್ಯ ಕೆ.ಆರ್. ರಮೇಶ್ ಕುಮಾರ್ ಒತ್ತಾಯಿಸಿದರು.

ಸೋಮವಾರ ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಚುನಾವಣೆಯಿಂದ ಚುನಾವಣೆಗೆ ಹಲವು ಶಾಸಕರ ಸಂಪತ್ತು ಹಲವು ಪಟ್ಟು ಹೆಚ್ಚಾಗುತ್ತಿದ್ದರೂ ಚುನಾವಣಾ ಆಯೋಗ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ. ಹಾಗಿದ್ದ ಮೇಲೆ ಪ್ರಮಾಣಪತ್ರ ಪಡೆದು ಸುಮ್ಮನೆ ಕೂರುವುದಾದರು ಏತಕ್ಕೆ? ತನಿಖೆ ನಡೆಸಿದಾಗ ಮಾತ್ರ ಆಯೋಗಕ್ಕೂ ಗೌರವ ಬರುತ್ತದೆ ಎಂದರು.

‘ನಮ್ಮ ಶಾಸಕರು ಜನರ ಸೇವೆಯನ್ನು ಅಹೋರಾತ್ರಿ ಮಾಡುತ್ತಾರೆ. ಅವರಿಗೆ ಪುರುಸೊತ್ತೇ ಇರುವುದಿಲ್ಲ. ಅದರ ನಡುವೆಯೂ ಅವರ ಆಸ್ತಿ ₹3 ಕೋಟಿ ಇದ್ದಿದ್ದು ಐದು ವರ್ಷಗಳಲ್ಲೇ ₹30 ಕೋಟಿಗೆ ಏರುತ್ತದೆ. ಇದು ಹೇಗೆ ಸಾಧ್ಯ’ ಎಂದು ಅವರು ಕುಟುಕಿದರು.

ಈ ವೇಳೆ ಅವರು ಕಾಮರಾಜ್ ಅವರ ಉದಾಹರಣೆಯನ್ನು ಹೇಳಿದರು. ‘ಕಾಮರಾಜ್ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳುತ್ತಾರೆ. ಬಳಿಕ ಅವರು ಮನೆಗೆ ಬರುತ್ತಾರೆ. ಅವರ ತಾಯಿ ಮಗನನ್ನು ಖುಷಿಯಿಂದ ಅಪ್ಪಿಕೊಳ್ಳುತ್ತಾರೆ. ಮುಖ್ಯಮಂತ್ರಿಯಾಗಿದ್ದು ಅಮ್ಮನಿಗೆ ಖುಷಿಯಾಗಿದೆ ಎಂದು ಕಾಮರಾಜ್ ಅಂದುಕೊಳ್ಳುತ್ತಾರೆ. ಆಗ ತಾಯಿ, ‘ಮಗ ನೀನು ಯಾವುದೋ ದೊಡ್ಡ ಹುದ್ದೆಗೆ ಏರಿದೆಯಂತಲ್ಲ. ಹೀಗಾಗಿ, ಅಧಿಕಾರಿಗಳು ಮನೆಗೆ ನಲ್ಲಿ ನೀರಿನ ಸಂಪರ್ಕ ಹಾಕಿಸಿದರು’ ಎಂದು ಹೇಳಿದರು. ‘ಅಮ್ಮಾ, ನಿನ್ನ ಖುಷಿ ಹೆಚ್ಚು ಹೊತ್ತು ಇರುವುದಿಲ್ಲ. ಆ ಸಂಪರ್ಕವನ್ನು ನಾನು ಈಗಲೇ ತೆಗೆಸಿ ಹಾಕುವೆ’ ಎಂದು ಕಾಮರಾಜ್ ಪ್ರತಿಕ್ರಿಯಿಸಿದರು. ಹೀಗಿದ್ದರು ನಮ್ಮ ರಾಜಕಾರಣಿಗಳು’ ಎಂದು ನೆನಪಿಸಿಕೊಂಡರು.

ಬಿಜೆಪಿಯ ಪಿ.ರಾಜೀವ್, ‘ಮುಖ್ಯಮಂತ್ರಿಯಾಗಿದ್ದ ಕಾಮರಾಜ್ ಅವರು ಆಪ್ತ ಸಹಾಯಕನ ಜತೆಗೆ ರಸ್ತೆಯಲ್ಲಿ ಹೋಗುತ್ತಿದ್ದರು. ಆಗ ಕೆಲವು ಮಕ್ಕಳು ರಸ್ತೆಯಲ್ಲಿ ಆಟವಾಡುತ್ತಿದ್ದರು. ಈ ಮಕ್ಕಳು ಶಾಲೆಗೆ ಹೋಗಲಿಲ್ಲವೇಕೆ ಎಂದು ಕಾಮರಾಜ್ ಪ್ರಶ್ನಿಸಿದರು. ಬಡತನದ ಕಾರಣದಿಂದ ಅವರು ಶಾಲೆಗೆ ಹೋಗುತ್ತಿಲ್ಲ ಎಂದು ಆಪ್ತ ಸಹಾಯಕ ಹೇಳಿದರು. ಕಾಮರಾಜ್ ಕೆಲವೇ ದಿನಗಳಲ್ಲಿ ಮಧ್ಯಾಹ್ನದ ಬಿಸಿಯೂಟ ಯೋಜನೆ ಆರಂಭಿಸಿದರು’ ಎಂದರು.



ಕೆಲವು ರಾಜಕಾರಣಿಗಳ ಕುಟುಂಬ ಸದಸ್ಯರೆಲ್ಲರ ಆಸ್ತಿ ಲೆಕ್ಕ ಹಾಕಿದರೆ ₹25 ಸಾವಿರ ಕೋಟಿ ದಾಟುತ್ತದೆ. ಶಾಸಕರ ಆಸ್ತಿ ತನಿಖೆಗೆ ನಾವು ನಿರ್ಣಯ ತೆಗೆದುಕೊಳ್ಳಬೇಕು

ಕೆ.ಆರ್.ರಮೇಶ್ ಕುಮಾರ್, ಶಾಸಕ

‘ರಾಬರ್ಟ್ ವಾದ್ರಾ ತಪ್ಪು ಮಾಡಿದ್ರೂ ಮಣ್ಣು ತಿನ್ತಾರೆ’

‘ಅಂಬಾನಿ ಆಸ್ತಿ ₹1.13 ಲಕ್ಷ ಕೋಟಿ ಇದ್ದದ್ದು ₹5.74 ಲಕ್ಷ ಕೋಟಿಗೇರಿದೆ. ಅದಾನಿ ಆಸ್ತಿಯೂ ಅದೇ ರೀತಿ ಏರಿಕೆ ಆಗಿದೆ ಇದು ಹೇಗೆ ಸಾಧ್ಯವಾಯಿತು’ ಎಂದು ರಮೇಶ್ ಕುಮಾರ್ ಪ್ರಶ್ನಿಸಿದರು.

ಇದಕ್ಕೆ ತಿರುಗೇಟು ನೀಡಿದ ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ, ‘ಇವರು ನಮ್ಮ ಕಾಲದಲ್ಲಿ ಹುಟ್ಟಿಕೊಂಡವರಲ್ಲ. ಕಾಂಗ್ರೆಸ್ ಕಾಲದಲ್ಲೇ ಹಣ ಮಾಡಿದವರು. ಅಲ್ಪ ಕಾಲದಲ್ಲಿ ಎಂಟು ಹತ್ತು ಪಟ್ಟು ಹಣ ಹೇಗೆ ಮಾಡಬೇಕು ಎಂಬುದನ್ನು ತೋರಿಸಿಕೊಟ್ಟ ರಾಬರ್ಟ್ ವಾದ್ರಾ ಬಗ್ಗೆ ಮಾತನಾಡಿ’ ಎಂದು ಕಾಲೆಳೆದರು. ‘ನನ್ನ ಸೊಂಟಕ್ಕೆ ಪಕ್ಷದ ಹಗ್ಗ ಕಟ್ಟಿಲ್ಲ. ಯಾವುದೇ ಮುಲಾಜಿಲ್ಲ ರಾಬರ್ಟ್ ವಾದ್ರಾ ಅಕ್ರಮ ಮಾಡಿದ್ದರೆ ಮಣ್ಣು ತಿನ್ತಾರೆ’ ಎಂದು ರಮೇಶ್‌ಕುಮಾರ್ ಪ್ರತಿಕ್ರಿಯಿಸಿದರು.

ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳ ಬಲವರ್ಧನೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ವರದಿ ಪ್ರತಿಧ್ವನಿ

ಬೆಂಗಳೂರು: ರಾಜ್ಯದಲ್ಲಿರುವ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಮೂಲಸೌಕರ್ಯ ಮತ್ತು ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಕೊರತೆ ನೀಗಿಸಲು ಕ್ರಮ ಕೈಗೊಳ್ಳುವಂತೆ ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ ಯು.ಬಿ. ವೆಂಕಟೇಶ್ ಸರ್ಕಾರವನ್ನು ಆಗ್ರಹಿಸಿದರು.

ಸರ್ಕಾರಿಎಂಜಿನಿಯರಿಂಗ್‌ಕಾಲೇಜುಗಳ ಸಮಸ್ಯೆ ಕುರಿತು ‘ಪ್ರಜಾವಾಣಿ’ಯ ಭಾನುವಾರದ ಸಂಚಿಕೆಯಲ್ಲಿ ‘ಒಳನೋಟ’ದಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಆಧರಿಸಿ ಸೋಮವಾರ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, ‘ರಾಜ್ಯದಲ್ಲಿರುವ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳು ಇದ್ದೂ ಇಲ್ಲದಂತಾಗಿವೆ. ಅವುಗಳ ಬಲವರ್ಧನೆಗೆ ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದರು.

ಈ ವಿಷಯದ ಕುರಿತು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರಿಂದ ಉತ್ತರ ಪಡೆದು ಸದನದಲ್ಲಿ ಮಂಡಿಸುವುದಾಗಿ ಸಭಾ ನಾಯಕ ಕೋಟ ಶ್ರೀನಿವಾಸ ಪುಜಾರಿ ಭರವಸೆ ನೀಡಿದರು.

ವಸತಿ: ಆದಾಯ ಮಿತಿ ₹1.20 ಲಕ್ಷಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ವಸತಿ ಯೋಜನೆಗಳಲ್ಲಿ ಫಲಾನುಭವಿಗಳ ಆಯ್ಕೆಗೆ ಆದಾಯ ಮಿತಿಯನ್ನು ಗ್ರಾಮೀಣ ಪ್ರದೇಶದಲ್ಲಿ ₹32 ಸಾವಿರದಿಂದ ₹1.20 ಲಕ್ಷಕ್ಕೆ ಹಾಗೂ ನಗರ ಪ್ರದೇಶದಲ್ಲಿ ₹87,600 ದಿಂದ ₹3 ಲಕ್ಷಕ್ಕೆ ಏರಿಸಲಾಗುವುದು. ವಾರದೊಳಗೆ ಈ ಬಗ್ಗೆ ಆದೇಶ ಹೊರಡಿಸಲಾಗುವುದು’ ಎಂದು ವಸತಿ ಸಚಿವ ವಿ.ಸೋಮಣ್ಣ ತಿಳಿಸಿದರು.

ವಿಧಾನಸಭೆಯಲ್ಲಿ ಸೋಮವಾರ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಸಿ.ಟಿ.ರವಿ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಈ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜತೆ ಸಮಾಲೋಚನೆ ನಡೆಸಲಾಗಿದ್ದು, ಸದನದಲ್ಲಿ ಮಂಗಳವಾರ ಅವರು ಈ ಕುರಿತ ಹೇಳಿಕೆ ನೀಡಲಿದ್ದಾರೆ’ ಎಂದರು.

ಸಿ.ಟಿ.ರವಿ, ‘₹32 ಸಾವಿರ ಆದಾಯ ಮಿತಿ ನಿಗದಿ ಮಾಡಿರುವುದರಿಂದ ಫಲಾನುಭವಿಗಳ ಆಯ್ಕೆ ಕಷ್ಟವಾಗಿದೆ’ ಎಂದರು. ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ‘ಫಲಾನುಭವಿಗಳಿಗೆ ಸುಳ್ಳು ದಾಖಲೆ ಸೃಷ್ಟಿಸಿಕೊಟ್ಟರೆ ಆಯಿತಲ್ಲ’ ಎಂದು ವ್ಯಂಗ್ಯವಾಗಿ ಹೇಳಿದರು.

ಸೋಮಣ್ಣ, ‘ಆದಾಯ ಮಿತಿಯನ್ನು ಹಲವು ವರ್ಷಗಳ ಹಿಂದೆಯೇ ನಿಗದಿಪಡಿಸಲಾಗಿದೆ’ ಎಂದು ಸಮಜಾಯಿಷಿ ನೀಡಿದರು. ಆಗ ಕಾಗೇರಿ, ‘ನೀವು ಅಧಿಕಾರಕ್ಕೆ ಬಂದು ಎರಡು ವರ್ಷಗಳು ಕಳೆಯಿತಲ್ಲ. ಸಮಸ್ಯೆ ಬಗೆಹರಿಸಬೇಕಿತ್ತಲ್ಲ’ ಎಂದರು.

ಕಾಂಗ್ರೆಸ್‌ನ ಕೆ.ಆರ್.ರಮೇಶ್ ಕುಮಾರ್, ‘ಆದಾಯ ಮಿತಿ ನಿಗದಿ ಮಾಡುವ ಅಧಿಕಾರ ವಸತಿ ಇಲಾಖೆಗೆ ಇಲ್ಲ. ಈ ಬಗ್ಗೆ ಕಂದಾಯ ಇಲಾಖೆ ಕ್ರಮ ಕೈಗೊಳ್ಳಬೇಕು’ ಎಂದರು.


ಬಿಜೆಪಿ ಸದಸ್ಯ ಸಿ.ಟಿ.ರವಿ ಮಾತನಾಡಿದರು. ಸದಸ್ಯರಾದ ಬಸವರಾಜ ಮತ್ತಿಮೂಡ, ವೇದವ್ಯಾಸ ಕಾಮತ್, ಶಿವನಗೌಡ ನಾಯಕ್ ಇದ್ದಾರೆ.

‘ದಿ ಕಾಶ್ಮೀರಿ ಫೈಲ್ಸ್’ ಸಿನಿಮಾ: ಶಾಸಕರ ವೀಕ್ಷಣೆಗೆ ಇಂದು ವ್ಯವಸ್ಥೆ

ಬೆಂಗಳೂರು: ‘ದಿ ಕಾಶ್ಮೀರಿ ಫೈಲ್ಸ್’ ಸಿನಿಮಾವನ್ನು ಶಾಸಕರು ವೀಕ್ಷಿಸಲು ಮಂಗಳವಾರ ಸಂಜೆ 6.30ಕ್ಕೆ ಮಂತ್ರಿ ಮಾಲ್‌ನಲ್ಲಿ ವ್ಯವಸ್ಥೆ ಮಾಡಲಾಗಿದೆ. ಎಲ್ಲ ಶಾಸಕರು ಸಿನಿಮಾ ವೀಕ್ಷಣೆಗೆ ಬರಬೇಕು’ ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ವಿಧಾನಸಭೆಯಲ್ಲಿ ಸೋಮವಾರ ಕಲಾಪ ಆರಂಭವಾಗುತ್ತಿದ್ದಂತೆ ಈ ವಿಷಯ ಪ್ರಕಟಿಸಿದ ಕಾಗೇರಿ, ‘ಸಿನಿಮಾಕ್ಕೆ ತೆರಿಗೆ ವಿನಾಯಿತಿ ನೀಡಿದ ಮುಖ್ಯಮಂತ್ರಿಗಳಿಗೆ ಅಭಿನಂದನೆಗಳು’ ಎಂದರು.

ಸಿನಿಮಾ ವೀಕ್ಷಣೆಗೆ ಬರುವಂತೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಕಾಗೇರಿ ಅವರು, ಪ್ರತ್ಯೇಕವಾಗಿ ಆಹ್ವಾನಿಸಿದರು. ಸಿದ್ದರಾಮಯ್ಯ ಪ್ರತಿಕ್ರಿಯಿಸಲಿಲ್ಲ.

ಮಧ್ಯಪ್ರದೇಶದಲ್ಲಿ ಸಿನಿಮಾ ನೋಡಲು ಪೊಲೀಸರಿಗೆ ರಜೆ ಘೋಷಿಸಲಾಗಿದೆ.

ಕಂದಾಯ ಗ್ರಾಮ ಘೋಷಣೆ: ಭರವಸೆ

ಬೆಂಗಳೂರು: ದಾಖಲೆ ರಹಿತ ಗ್ರಾಮಗಳನ್ನು ಕಂದಾಯ ಗ್ರಾಮಗಳೆಂದು ಘೋಷಿಸಲು ಮುಖ್ಯಮಂತ್ರಿಯವರು ಜತೆ ಚರ್ಚಿಸಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಹೇಳಿದರು.

ವಿಧಾನಸಭೆಯಲ್ಲಿ ಸೋಮವಾರ ಗಮನಸೆಳೆಯುವ ಸೂಚನೆಯಡಿ ಬಿಜೆಪಿಯ ಅಶೋಕ್ ನಾಯ್ಕ್ ಅವರಿಗೆ ಈ ಭರವಸೆ ನೀಡಿದರು.

ಕಂದಾಯ ಗ್ರಾಮ ಎಂದು ಗುರುತಿಸಬೇಕಾದರೆ 700 ರಿಂದ 750 ಜನರು ವಾಸ ಇರಬೇಕು. ಕಂದಾಯ ಗ್ರಾಮದಿಂದ ಕನಿಷ್ಠ 1 ಕಿ.ಮೀ ದೂರ ಇರಬೇಕು ಎಂಬ ನಿಯಮ ಇದೆ ಎಂದು ತಿಳಿಸಿದರು.

‘ಜೀವರಕ್ಷಕ ಪ್ರಶಸ್ತಿ ಶೀಘ್ರದಲ್ಲೇ ಪುನರಾರಂಭ’

ಬೆಂಗಳೂರು: ಅಪಘಾತಕ್ಕೊಳಗಾಗುವ ವ್ಯಕ್ತಿಗೆ ಚಿಕಿತ್ಸೆ ನೀಡಲು ನೆರವಾಗುವವರಿಗೆ ‘ಮುಖ್ಯಮಂತ್ರಿ ಸಾಂತ್ವನ– ಹರೀಶ್’ ಯೋಜನೆ ಅಡಿಯಲ್ಲಿ ನೀಡಲಾಗುತ್ತಿದ್ದ ‘ಜೀವರಕ್ಷಕ ಪ್ರಶಸ್ತಿ’ಯನ್ನು ಶೀಘ್ರದಲ್ಲಿ ಪುನರಾರಂಭ ಮಾಡಲಾಗುವುದು ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ ಸದಸ್ಯ ಯು.ಬಿ. ವೆಂಕಟೇಶ್ ಪ್ರಶ್ನೆಗೆ ಸೋಮವಾರ ಉತ್ತರಿಸಿದ ಅವರು, ‘ಮುಖ್ಯಮಂತ್ರಿ ಸಾಂತ್ವನ– ಹರೀಶ್ ಯೋಜನೆಯನ್ನು ಆರೋಗ್ಯ ಕರ್ನಾಟಕ– ಆಯುಷ್ಮಾನ್ ಭಾರತ್ ಯೋಜನೆಯಡಿ ವಿಲೀನಗೊಳಿಸಲಾಗಿದೆ. ಆ ಬಳಿಕ ಜೀವರಕ್ಷಕ ಪ್ರಶಸ್ತಿ ನೀಡುವುದನ್ನು ಸ್ಥಗಿತಗೊಳಿಸಲಾಗಿದೆ’ ಎಂದರು.

ಜೀವರಕ್ಷಕ ಪ್ರಶಸ್ತಿ ಪುನರಾರಂಭ ಮಾಡುವಂತೆ ವೆಂಕಟೇಶ್ ಆಗ್ರಹಿಸಿದರು. ಅದನ್ನು ಒಪ್ಪಿಕೊಂಡ ಸಚಿವರು, ಶೀಘ್ರದಲ್ಲಿ ಈ ಸಂಬಂಧ ಆದೇಶ ಹೊರಡಿಸುವುದಾಗಿ ಭರವಸೆ ನೀಡಿದರು.

ಉಪ ಕೇಂದ್ರಗಳಿಗೆ ಎಎನ್‌ಎಂ ನೇಮಕ: ಕಾಂಗ್ರೆಸ್‌ನ ಎಂ.ಎಲ್. ಅನಿಲ್ ಕುಮಾರ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ರಾಜ್ಯದ 9,000 ಉಪ ಆರೋಗ್ಯ ಕೇಂದ್ರಗಳಿಗೆ ಕಿರಿಯ ಆರೋಗ್ಯ ಪರಿವೀಕ್ಷಕರನ್ನು (ಎಎನ್‌ಎಂ) ನೇಮಕ ಮಾಡಲಾಗುವುದು’ ಎಂದು ತಿಳಿಸಿದರು.

ಉಕ್ರೇನ್‌ನ ಪ್ರಮುಖ ನಗರಗಳ ವಶ • ಯುದ್ಧಗಳಲ್ಲಿ ನರಮೇಧ ಮಾಡಿದ ಅಮೆರಿಕದಿಂದ ಪಾಠ ಅನಗತ್ಯ

ಚೀನಾ ನೆರವಿಲ್ಲದೆ ಗುರಿ ಸಾಧನೆ: ರಷ್ಯಾ

ಲಂಡನ್ (ರಾಯಿಟರ್ಸ್): 'ರಷ್ಯಾದ ಪಡೆಗಳು ಉಕ್ರೇನ್‌ನ ಪ್ರಮುಖ ನಗರಗಳನ್ನು ಸಂಪೂರ್ಣ ನಿಯಂತ್ರಣಕ್ಕೆ ತೆಗೆದುಕೊಳ್ಳಲಿವೆ. ಚೀನಾದ ಯಾವುದೇ ಸಹಾಯವಿಲ್ಲದೆ ಉಕ್ರೇನ್‌ನಲ್ಲಿ ತನ್ನ ಗುರಿ ಸಾಧಿಸಲು ಸಾಕಷ್ಟು ಮಿಲಿಟರಿ ಶಕ್ತಿಯನ್ನು ರಷ್ಯಾ ಹೊಂದಿದೆ' ಎಂದು ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ಆಡಳಿತ ಕಚೇರಿ ಕ್ರೆಮ್ಲಿನ್ ಸೋಮವಾರ ಹೇಳಿದೆ.

'ರಷ್ಯಾದ ರಕ್ಷಣಾ ಸಚಿವಾಲಯವು, ಯಾವಾಗಲೂ ನಾಗರಿಕರ ಸುರಕ್ಷತೆಗೆ ಒತ್ತು ನೀಡಲು ಬಯಸುತ್ತದೆ. ಅದರಲ್ಲೂ ಹೆಚ್ಚು ಜನವಸತಿಗಳಿರುವ ಪ್ರದೇಶಗಳನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುವಾಗ ಅವರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡುತ್ತದೆ' ಎಂದು ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೋವ್ ಹೇಳಿದರು.

'ಕಾರ್ಯಾಚರಣೆಯ ಪ್ರಾರಂಭದಲ್ಲಿ ಪುಟಿನ್ ಅವರು, ಕೀವ್‌ನಂತಹ ನಗರಗಳ ಮೇಲೆ ದಾಳಿ ನಡೆಸುವುದನ್ನು ತಪ್ಪಿಸಲು ರಕ್ಷಣಾ ಸಚಿವಾಲಯಕ್ಕೆ ಸ್ಪಷ್ಟವಾಗಿ ಸೂಚಿಸಿದ್ದರು. ಏಕೆಂದರೆ ಉಕ್ರೇನ್ ಪಡೆಗಳು ನಾಗರಿಕರನ್ನು ಮಾನವ ಗುರಾಣಿಗಳಾಗಿ ಬಳಸಲಿವೆ ಎನ್ನುವುದನ್ನು ಅವರು ಮೊದಲೇ ಊಹಿಸಿದ್ದರು' ಎಂದು ಪೆಸ್ಕೋವ್ ಹೇಳಿದರು.

'ಈಗಾಗಲೇ ಉಕ್ರೇನ್‌ನ ಎಲ್ಲ ಪ್ರಮುಖ ನಗರಗಳನ್ನು ನಮ್ಮ ಪಡೆಗಳು ಸುತ್ತುವರಿದಿವೆ. ಸೇನಾ ಕಾರ್ಯಾಚರಣೆ ಮುಂದುವರಿಸಲು ರಷ್ಯಾ ಸ್ವಸಾಮರ್ಥ್ಯ ಹೊಂದಿದೆ. ನಾವು ಅಂದುಕೊಂಡಂತೆಯೇ ಎಲ್ಲವೂ ನಡೆಯುತ್ತಿದೆ. ಸಮಯಕ್ಕೆ ಸರಿಯಾಗಿ ಕಾರ್ಯಾಚರಣೆ ಪರಿಪೂರ್ಣಗೊಳ್ಳಲಿದೆ' ಎಂದು ತಿಳಿಸಿದ್ದಾರೆ.



ಉಕ್ರೇನ್‌ನ ರಾಜಧಾನಿ ಕೀವ್‌ನ ಒಬಲಾನ್ ಜಿಲ್ಲೆಯಲ್ಲಿ ಭಾನುವಾರ ರಷ್ಯಾ ಪಡೆಗಳು ನಡೆಸಿದ ಶೆಲ್ ದಾಳಿಗೆ ಅಪಾರ್ಟ್‌ಮೆಂಟ್‌ವೊಂದು ಹೊತ್ತಿ ಉರಿಯಿತು– ಎಎಫ್‌ಪಿ ಚಿತ್ರ

ರಷ್ಯಾ ಉಕ್ರೇನ್‌ನಲ್ಲಿ ನಡೆಸುತ್ತಿರುವ ವಿಶೇಷ ಸೇನಾ ಕಾರ್ಯಾಚರಣೆಯ ಫಲಿತಾಂಶಕ್ಕೆ ಪುಟಿನ್ ನಿರಾಶೆಗೊಂಡಿದ್ದಾರೆ ಎಂದು ಅಮೆರಿಕ ಮತ್ತು ಯುರೋಪ್ ಒಕ್ಕೂಟ ಬಿಂಬಿಸುತ್ತಿರುವುದು ರಷ್ಯಾ, ಆ ನಗರಗಳಲ್ಲಿ ಬಿರುಗಾಳಿ ಎಬ್ಬಿಸಲಿ ಎನ್ನುವ ಪ್ರಚೋದನೆಯಾಗಿದೆ ಎಂದು ಪೆಸ್ಕೋವ್ ಹೇಳಿದರು.

ಅಮೆರಿಕ 1999ರಲ್ಲಿ ಯುಗೊಸ್ಲಾವಿಯಾ ಮತ್ತು ಅದರ ರಾಜಧಾನಿ ಬೆಲ್‌ಗ್ರೇಡ್‌ನಲ್ಲಿ ಬಾಂಬ್ ದಾಳಿ ನಡೆಸಿ ನರಮೇಧ ಮಾಡಿತ್ತು. ಮಧ್ಯಪ್ರಾಚ್ಯ ದೇಶಗಳಲ್ಲಿ ನಡೆಸಿದ ಯುದ್ಧಗಳಲ್ಲಿ ಮತ್ತು ಅಫ್ಗಾನಿಸ್ತಾನದ ಆಕ್ರಮಣದಲ್ಲೂ ಅದೇ ಕೆಲಸವನ್ನು ಅದು ಮಾಡಿದೆ. ನಮಗೆ ಅಂತಹ ಪರಿಣತರ ಸಲಹೆಯ ಅಗತ್ಯವಿಲ್ಲ. ರಷ್ಯಾದ ನಾಯಕತ್ವ ಎಲ್ಲ ಯೋಜನೆಗಳನ್ನು ಸಮಯೋಚಿತವಾಗಿ ಪರಿಪೂರ್ಣಗೊಳಿಸಲಿದೆ' ಎಂದು ತಿಳಿಸಿದರು.

ರಷ್ಯಾ ಚೀನಾದಿಂದ ಮಿಲಿಟರಿ ಉಪಕರಣಗಳ ನೆರವು ಕೇಳಿದೆ ಎಂದು ಅಮೆರಿಕ ಅಧಿಕಾರಿಗಳ ಹೇಳಿಕೆ ಬಗ್ಗೆ ಕೇಳಿದಾಗ, 'ಇಲ್ಲ' ಎಂದು ಪೆಸ್ಕೋವ್ ಹೇಳಿದರು.

ಉಕ್ರೇನ್‌ನಿಂದ ಮರಳಿದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ವ್ಯವಸ್ಥೆ: ಸರ್ಕಾರ ಭರವಸೆ

ನವದೆಹಲಿ: ಯುದ್ಧಪೀಡಿತ ಉಕ್ರೇನ್‌ನಿಂದ 'ಆಪರೇಷನ್ ಗಂಗಾ' ಕಾರ್ಯಾಚರಣೆಯಡಿ ದೇಶಕ್ಕೆ ಮರಳಿರುವ ಭಾರತೀಯ ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಪೂರ್ಣಗೊಳಿಸಲು ತೆಗೆದುಕೊಳ್ಳಬಹುದಾದ ಕ್ರಮಗಳನ್ನು ಪರಿಶೀಲಿಸುವುದಾಗಿ ಕೇಂದ್ರ ಸರ್ಕಾರ ಸೋಮವಾರ ಲೋಕಸಭೆಗೆ ಭರವಸೆ ನೀಡಿದೆ.

ಉಕ್ರೇನ್‌ನಿಂದ ಭಾರತೀಯ ವಿದ್ಯಾರ್ಥಿಗಳನ್ನು ಸ್ಥಳಾಂತರಿಸಲು ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ನಡೆದ ಆಪರೇಷನ್ ಗಂಗಾ ಕಾರ್ಯಾಚರಣೆಗಾಗಿ ಕಾಂಗ್ರೆಸ್ ಪಕ್ಷ ಅಭಿನಂದಿಸಬೇಕು ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಿಳಿಸಿದರು.

ಕಾಂಗ್ರೆಸ್ ಸದಸ್ಯ ಗೌರವ್ ಗೊಗೊಯಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಉಕ್ರೇನ್‌ನಿಂದ ವಿದ್ಯಾರ್ಥಿಗಳನ್ನು ಕರೆತಂದಾಗಲೇ, ಸರ್ಕಾರ ಅವರ ಭವಿಷ್ಯದ ಕುರಿತು ಚಿಂತನೆ ನಡೆಸಿದೆ' ಎಂದರು.

'ಸದ್ಯ ವಿದ್ಯಾರ್ಥಿಗಳನ್ನು ಆಘಾತದಿಂದ ಹೊರತರುವ ಸಮಯ ಇದಾಗಿದ್ದು, ನಾವೆಲ್ಲರೂ ಅದೇ ಕಾರ್ಯದಲ್ಲಿ ನಿರತರಾಗಿದ್ದೇವೆ' ಎಂದರು.

ಇದಕ್ಕೆ ಮೊದಲು ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಕಾಸರಗೋಡಿನ ಸಂಸದ ರಾಜಮೋಹನ್ ಉಣ್ಣಿತ್ತಾನ್, ಉಕ್ರೇನ್‌ನ ಸುಮಿಯಲ್ಲಿ ಈಗಲೂ ಸಾವಿರಾರು ಮಂದಿ ಕೇರಳದ ವಿದ್ಯಾರ್ಥಿಗಳು ಸಿಲುಕಿಕೊಂಡಿದ್ದು, ಅವರನ್ನು ಭಾರತಕ್ಕೆ ಕರೆತರಲು ತಕ್ಷಣ ಕ್ರಮ ಕೈಗೊಳ್ಳಬೇಕು ಎಂದರು.

ಭಾರತೀಯರನ್ನು ಕರೆತರುವುದಕ್ಕೆ ಯುದ್ಧ ಆರಂಭವಾಗುವವರೆಗೆ ಕಾಯಬಾರದಿತ್ತು ಎಂದು ಇನ್ನೊಬ್ಬ ಸದಸ್ಯ ಅಬ್ದುಲ್ ಖಲೀಖ್ ಹೇಳಿದರು.

ವಿದ್ಯಾರ್ಥಿಗಳು ಮಾಡಿರುವ ಶೈಕ್ಷಣಿಕ ಸಾಲವನ್ನು ಸರ್ಕಾರ ಮನ್ನಾ ಮಾಡಬೇಕು ಎಂದು ಕೊಡಿಕುನ್ನಿಲ್ ಸುರೇಶ್ ಒತ್ತಾಯಿಸಿದರು.

ರಾಜ್ಯಸಭಾ ಸದಸ್ಯರ ಆಗ್ರಹ: ಉಕ್ರೇನ್‌ನಿಂದ ಮರಳಿರುವ ವಿದ್ಯಾರ್ಥಿಗಳ ಶಿಕ್ಷಣ ಪೂರ್ಣಗೊಳಿಸಲು ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ರಾಜ್ಯಸಭೆಯಲ್ಲಿ ಟಿಡಿಪಿ, ಕಾಂಗ್ರೆಸ್, ಟಿಎಂಸಿ ಸದಸ್ಯರು ಕೇಂದ್ರ ಸರ್ಕಾರವನ್ನು ಆಗ್ರಹಿಸಿದರು.

ಈ ವೇಳೆ ಮಾತನಾಡಿದ ಸಭಾಪತಿ ಎಂ.ವೆಂಕಯ್ಯ ನಾಯ್ಡು, ಉಕ್ರೇನ್‌ನಿಂದ ಇಷ್ಟು ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳನ್ನು ಕರೆತರುವ ಕೆಲಸ ಸುಲಭವಲ್ಲ. ಈ ಸವಾಲನ್ನು ಭಾರತ ಸರ್ಕಾರ ಯಶಸ್ವಿಯಾಗಿ ನಿರ್ವಹಿಸಿದೆ. ಸರ್ಕಾರದ ಈ ಕಾರ್ಯ ಪ್ರಶಂಸಾರ್ಹ ಎಂದು ಹೇಳಿದರು.

ದಿನದ ಬೆಳವಣಿಗೆಗಳು

- ತಕ್ಷಣವೇ ಉಕ್ರೇನ್ ತೊರೆಯುವಂತೆ ತನ್ನ ದೇಶದ ಪ್ರಜೆಗಳಿಗೆ ಅಮೆರಿಕದ ರಾಯಭಾರ ಕಚೇರಿ ಸೂಚಿಸಿದೆ
- ರಷ್ಯಾ ದಾಳಿಯಿಂದ ಬಂದರು ನಗರ ಮರಿಯುಪೋಲ್‌ನಲ್ಲಿ ಈವರೆಗೆ 2,500 ನಾಗರಿಕರು ಮೃತಪಟ್ಟಿದ್ದಾರೆ– ಯುರೋಪ್ ಒಕ್ಕೂಟ
- ಯುದ್ಧಪೀಡಿತ ಉಕ್ರೇನ್‌ನಿಂದ 28 ಲಕ್ಷ ಮಂದಿ ವಲಸೆ, ವಲಸೆ ಹೋದವರಲ್ಲಿ 10 ಲಕ್ಷದಷ್ಟು ಮಂದಿ ಮಕ್ಕಳೇ ಇದ್ದಾರೆ. ಒಟ್ಟು ವಲಸಿಗರಲ್ಲಿ 17 ಲಕ್ಷ ಮಂದಿ ಪೋಲೆಂಡ್‌ಗೆ ಪ್ರಯಾಣ–ವಿಶ್ವಸಂಸ್ಥೆ ಹೇಳಿಕೆ
- ಯುದ್ಧದಲ್ಲಿ ಗಾಯಗೊಂಡಿರುವ ಉಕ್ರೇನ್ ಯೋಧರನ್ನು ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಭೇಟಿ ಮಾಡಿ, ಸ್ಥೈರ್ಯ ತುಂಬಿದರು
- ನಮ್ಮ ವಾಯು ಗಡಿ ಸೀಮೆ ಮುಚ್ಚಿ, ಇಲ್ಲವೇ ರಷ್ಯಾ ದಾಳಿ ಎದುರಿಸಿ- ನ್ಯಾಟೊಗೆ ಝೆಲೆನ್‌ಸ್ಕಿ ಒತ್ತಾಯ
- ನ್ಯಾಟೊ ಪ್ರದೇಶದ ಮೇಲೆ ರಷ್ಯಾ ಕಾಲ ಬೆರಳಿಟ್ಟರೂ ಯುದ್ಧಕ್ಕೆ ನಾಂದಿ
- ಡೊನೆಟ್‌ಸ್ಕ್ ಮೇಲೆ ಉಕ್ರೇನ್ ಸೈನಿಕರ ದಾಳಿ: 20 ಮಂದಿ ಸಾವು
- ಉಕ್ರೇನಿನ ವಿಮಾನ ಕಾರ್ಖಾನೆ ಧ್ವಂಸ
- ರಷ್ಯಾ-ಉಕ್ರೇನ್ ಮಧ್ಯೆ 4ನೇ ಹಂತದ ಮಾತುಕತೆ. ಈ ವೇಳೆ ಉಭಯ ಪಕ್ಷಗಳು ಆರೋಪ-ಪ್ರತ್ಯಾರೋಪ
- ಉಕ್ರೇನ್‌ನ 2ನೇ ಅತಿದೊಡ್ಡ ನಗರ ಹಾರ್ಕಿವ್ ಮೇಲಿನ ರಷ್ಯಾ ದಾಳಿಯಲ್ಲಿ ಮತ್ತೆ ಇಬ್ಬರು ನಾಗರಿಕರ ಬಲಿ
- ಯುರೋಪ್ ಕೌನ್ಸಿಲ್ ಸದಸ್ಯತ್ವದಿಂದ ರಷ್ಯಾವನ್ನು ಉಚ್ಚಾಟಿಸಲು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಒತ್ತಾಯ
- ರಷ್ಯದಾದ್ಯಂತ ಚುನಾವಣೆ ವೇಳೆ ಆನ್‌ಲೈನ್ ಮತದಾನಕ್ಕೆ ಅವಕಾಶ ನೀಡುವ ವಿವಾದಾತ್ಮಕ ಕಾನೂನಿಗೆ ಪುಟಿನ್ ಸಹಿ
- ಉಕ್ರೇನ್ ಮತ್ತು ರಷ್ಯಾ ನಡುವಿನ 4ನೇ ಸುತ್ತಿನ ಮಾತುಕತೆ ಅಪೂರ್ಣ, ಮಂಗಳವಾರ ಮುಂದುವರಿಯಲಿದೆ
- ಉಕ್ರೇನ್‌ನ ಮರಿಯುಪೋಲ್ ಹೆರಿಗೆ ಆಸ್ಪತ್ರೆ ಮೇಲೆ ರಷ್ಯಾ ಸೇನೆ ಬಾಂಬ್ ದಾಳಿ ನಡೆಸಿದ್ದಾಗ ಗಾಯಗೊಂಡಿದ್ದ ಬಾಣಂತಿ ಮತ್ತು ಆಕೆಯ ಮಗು ಮೃತಪಟ್ಟಿದ್ದಾರೆ

'ಚೆರ್ನೊಬಿಲ್: ಮತ್ತೆ ವಿದ್ಯುತ್ ಸ್ಥಗಿತ'



ಕೀವ್, ಲುವಿವ್ (ಎಎಫ್‌ಪಿ): '1986ರಲ್ಲಿ ವಿಶ್ವದ ಅತ್ಯಂತ ಭೀಕರ ಅಣು ದುರಂತಕ್ಕೆ ಸಾಕ್ಷಿಯಾಗಿದ್ದ ಉಕ್ರೇನ್‌ನ ಚೆರ್ನೊಬಿಲ್ ಅಣು ವಿದ್ಯುತ್ ಸ್ಥಾವರದಲ್ಲಿ ಮತ್ತೊಮ್ಮೆ ವಿದ್ಯುತ್ ಸರಬರಾಜು ಸ್ಥಗಿತಗೊಂಡಿದೆ. ಇದರಿಂದ ಮತ್ತೆ ಡೀಸೆಲ್ ಜನರೇಟರ್‌ಗಳನ್ನು ಅವಲಂಬಿಸಲಾಗಿದೆ' ಎಂದು ಗ್ರಿಡ್ ನಿರ್ವಹಣಾ ಸಂಸ್ಥೆ ಉಕ್ರೆನೆರ್ಗೊ ಸೋಮವಾರ ಹೇಳಿದೆ.

'ಚೆರ್ನೊಬಿಲ್ ಅಣು ವಿದ್ಯುತ್ ಸ್ಥಾವರಕ್ಕೆ ಮತ್ತು ಸ್ಲವ್ಯುರೆಕ್ ಪಟ್ಟಣಕ್ಕೆ ವಿದ್ಯುತ್ ಪೂರೈಸುವ ಮಾರ್ಗವು ರಷ್ಯಾ ಪಡೆಗಳ ಆಕ್ರಮಣದ ವೇಳೆ ಶೆಲ್ ದಾಳಿಯಿಂದ ಹಾನಿಗೊಳಗಾಗಿತ್ತು. ಕಳೆದ ವಾರದ ಆರಂಭದಲ್ಲಿ ವಿದ್ಯುತ್ ಮಾರ್ಗ ಸರಿಪಡಿಸಿ, ಭಾನುವಾರದಿಂದ ವಿದ್ಯುತ್ ಪೂರೈಕೆ ಪುನರಾರಂಭಿಸಲಾಗಿತ್ತು. ವಿದ್ಯುತ್ ಸರಬರಾಜು ಮಾರ್ಗ ಈಗ ಮತ್ತೊಮ್ಮೆ ಹಾನಿಗೀಡಾಗಿದೆ. ಹೆಚ್ಚಿನ ದುರಸ್ತಿಗಾಗಿ ರಷ್ಯಾ ಪಡೆಗಳ ವಶದಲ್ಲಿರುವ 'ಆಕ್ರಮಿತ ಪ್ರದೇಶಕ್ಕೆ' ಸಿಬ್ಬಂದಿ ಹೋಗಲಿದ್ದಾರೆ' ಎಂದು ಉಕ್ರೆನೆರ್ಗೊ ಫೇಸ್‌ಬುಕ್‌ನಲ್ಲಿ ಹೇಳಿದೆ.

'ಅಗತ್ಯ ವಿದ್ಯುತ್ ಪೂರೈಸುವ ಈ ಸ್ಥಾವರದ ಹೈವೋಲ್ಟೇಜ್ ಮಾರ್ಗವನ್ನು ದುರಸ್ತಿಪಡಿಸಿ, ಯಥಾಸ್ಥಿತಿಗೆ ತರದೇ ಬಿಡುವಂತಿಲ್ಲ. ಏಕೆಂದರೆ ಹತ್ತಿರದ ಸ್ಲವ್ಯುರೆಕ್ ಪಟ್ಟಣ ಇದೇ ಗ್ರಿಡ್‌ನ ವಿದ್ಯುತ್ ಅವಲಂಬಿಸಿದೆ. ಈಗಾಗಲೇ ಇಡೀ ಪಟ್ಟಣ ಕತ್ತಲಿನಲ್ಲಿ ಮುಳುಗಿದೆ' ಎಂದು ಉಕ್ರೆನೆರ್ಗೊ ಮುಖ್ಯಸ್ಥ ವೊಲೊಡಿಮಿರ್ ಕುಡ್ರಿಟ್‌ಸ್ಕಿ ತಿಳಿಸಿದ್ದಾರೆ.

ಈ ಹಿಂದೆಯೇ ಅಣು ವಿದ್ಯುತ್ ಉತ್ಪಾದನೆ ಸ್ಥಗಿತಗೊಳಿಸಿರುವ ಚೆರ್ನೊಬಿಲ್ ಅಣು ಸ್ಥಾವರಕ್ಕೆ ಬೃಹತ್ ಉಕ್ಕು ಮತ್ತು ಕಾಂಕ್ರೀಟ್ ಕವಚದ ಹೊದಿಕೆ ಹಾಕಿ, ವಿಕಿರಣ ಸೋರಿಕೆಯನ್ನು ತಡೆಯಲಾಗಿದೆ.

ರಷ್ಯಾದ ಪಡೆಗಳು ಇದೇ 4 ರಂದು ಯುರೋಪಿನ ಅತಿದೊಡ್ಡ ಪರಮಾಣು ವಿದ್ಯುತ್ ಸ್ಥಾವರವಾದ ಝಪೋರಿಝಿಯಾ ಸ್ಥಾವರದ ಮೇಲೂ ಶೆಲ್ ದಾಳಿ ಮಾಡಿ, ವಶಪಡಿಸಿಕೊಂಡಿವೆ. ಇದು ಸಂಭಾವ್ಯ ಪರಮಾಣು ದುರಂತದ ಬಗ್ಗೆ ಯುರೋಪನ್ನು ಆತಂಕಕ್ಕೆ ದೂಡಿದೆ.

ನವೀನ್ ಮೃತದೇಹ ತರಲು ಪರಿಷತ್‌ನಲ್ಲಿ ಒತ್ತಾಯ

ಬೆಂಗಳೂರು: ಉಕ್ರೇನ್‌ನಲ್ಲಿ ರಷ್ಯಾ ಪಡೆಗಳು ನಡೆಸಿದ ಕ್ಷಿಪಣಿ ದಾಳಿಯಲ್ಲಿ ಮೃತಪಟ್ಟಿರುವ ಹಾವೇರಿಯ ಚಳಗೇರಿ ಗ್ರಾಮದ ನವೀನ್ ಗ್ಯಾನಗೌಡರ ಅವರ ಮೃತದೇಹವನ್ನು ತರಲು ಕೇಂದ್ರ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಜೆಡಿಎಸ್ ಮತ್ತು ಕಾಂಗ್ರೆಸ್ ಸದಸ್ಯರು ವಿಧಾನ ಪರಿಷತ್‌ನಲ್ಲಿ ಆಗ್ರಹಿಸಿದರು.

ಸೋಮವಾರ ಕಲಾಪ ಆರಂಭವಾಗುತ್ತಿದ್ದಂತೆಯೇ ವಿಷಯ ಪ್ರಸ್ತಾಪಿಸಿದ ಸಭಾಪತಿ ಬಸವರಾಜ ಹೊರಟ್ಟಿ, 'ಮೃತ ನವೀನ್ ಮನೆಗೆ ನಾನು ಭೇಟಿನೀಡಿದ್ದೆ. ಮೃತದೇಹ ತರಿಸಿಕೊಡುವಂತೆ ಅವರ ಕುಟುಂಬದವರು ಬೇಡಿಕೊಳ್ಳುತ್ತಿದ್ದಾರೆ. ಮೃತದೇಹ ತರಲು ಅಗತ್ಯ ವ್ಯವಸ್ಥೆ ಮಾಡುವುದಾಗಿ ಪ್ರಧಾನಿ ನರೇಂದ್ರ ಮೋದಿ ಭರವಸೆ ನೀಡಿದ್ದಾರೆ. ರಾಜ್ಯ ಸರ್ಕಾರವೂ ಈ ಬಗ್ಗೆ ಹೆಚ್ಚಿನ ಆಸಕ್ತಿ ತೋರಬೇಕು. ಮೃತದೇಹ ತರುವ ನಿಟ್ಟಿನಲ್ಲಿ ಯಾವ ಪ್ರಗತಿ ಆಗಿದೆ ಎಂಬುದನ್ನು ಸದನಕ್ಕೆ ತಿಳಿಸಬೇಕು' ಎಂದರು.

'ನವೀನ್ ಕುಟುಂಬದವರು ನೋವಿನಲ್ಲಿದ್ದಾರೆ. ಅವರ ಮೃತದೇಹವನ್ನು ತರಿಸಲು ರಾಜ್ಯ ಸರ್ಕಾರ ಜವಾಬ್ದಾರಿ ವಹಿಸಿಕೊಳ್ಳಬೇಕು' ಎಂದು ಕಾಂಗ್ರೆಸ್‌ನ ಸಲೀಂ ಅಹ್ಮದ್ ಒತ್ತಾಯಿಸಿದರು.

ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಮಾತನಾಡಿ, 'ಉಕ್ರೇನ್‌ನಲ್ಲಿ ಸಿಲುಕಿದ್ದ ಭಾರತೀಯರು ತಾವಾಗಿಯೇ ಆ ದೇಶದ ಗಡಿ ದಾಟಿ ಬಂದಿದ್ದಾರೆ. ಆ ಬಳಿಕ ಕೇಂದ್ರ ಸರ್ಕಾರ ಅವರನ್ನು ಇಲ್ಲಿಗೆ ಕರೆತಂದಿದೆ. ಯುದ್ಧಭೂಮಿಯಲ್ಲಿ ಸಿಲುಕಿದ್ದವರನ್ನು ಅಲ್ಲಿಂದಲೇ ರಕ್ಷಿಸಿ, ಕರೆತರುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡಿಲ್ಲ' ಎಂದು ದೂರಿದರು.

'ವಿದ್ಯಾರ್ಥಿಗಳು ತಾವಾಗಿಯೇ ಗಡಿದಾಟಿ ಪಾರಾಗಿ ಬಂದರು. ನವೀನ್ ಮೃತದೇಹ ತರುವುದು ಅದಕ್ಕಿಂತ ಭಿನ್ನವಾದ ಕೆಲಸ. ಈ ಜವಾಬ್ದಾರಿಯನ್ನು ಕೇಂದ್ರ ಸರ್ಕಾರ ನಿರ್ವಹಿಸಬೇಕು' ಎಂದು ಆಗ್ರಹಿಸಿದರು.

ಉಕ್ರೇನ್‌ನಿಂದ ಬಂದ ವಿದ್ಯಾರ್ಥಿಗಳು ರಾಜ್ಯದಲ್ಲಿ ಶಿಕ್ಷಣ ಮುಂದುವರಿಸಲು ಅವಕಾಶ ಕಲ್ಪಿಸಬೇಕು ಎಂದು ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ ಒತ್ತಾಯಿಸಿದರು. ಬಿಜೆಪಿಯ ಪ್ರದೀಪ ಶೆಟ್ಟರ್ ಮತ್ತು ಶಾಂತಾರಾಮ ಸಿದ್ದಿ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುವಂತೆ ಸಲಹೆ ನೀಡಿದರು.

ಅಗತ್ಯ ಕ್ರಮದ ಭರವಸೆ: ಉತ್ತರ ನೀಡಿದ ಆರೋಗ್ಯ ಸಚಿವ ಡಾ.ಕೆ. ಸುಧಾಕರ್, 'ಭಾರತದ 22,000 ವಿದ್ಯಾರ್ಥಿಗಳಲ್ಲಿ ಉಕ್ರೇನ್‌ನಲ್ಲಿ ಸಿಲುಕಿದ್ದರು. ಅವರಲ್ಲಿ ಒಬ್ಬ ವಿದ್ಯಾರ್ಥಿ ಮಾತ್ರ ಮೃತಪಟ್ಟಿದ್ದಾರೆ. ನವೀನ್ ಮೃತದೇಹವನ್ನು ದೇಶಕ್ಕೆ ತರಲು ಕೇಂದ್ರ ಸರ್ಕಾರ ಎಲ್ಲ ಕ್ರಮಗಳನ್ನೂ ಕೈಗೊಳ್ಳಲಿದೆ' ಎಂದರು.

'ವೈದ್ಯಕೀಯ ಶುಲ್ಕ ಕಡಿತಕ್ಕೆ ಪ್ರಯತ್ನ'

'ವೈದ್ಯಕೀಯ ಶಿಕ್ಷಣದ ಶುಲ್ಕ ಇಳಿಕೆ ಕುರಿತು ರಾಷ್ಟ್ರೀಯ ವೈದ್ಯಕೀಯ ವೈದ್ಯಕೀಯ ಮಂಡಳಿ ಜತೆ ಚರ್ಚಿಸಲಾಗುತ್ತಿದೆ' ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಅವರು ತಿಳಿಸಿದರು.'ಉಕ್ರೇನ್‌ನಿಂದ ಹಿಂದಿರುಗಿರುವ ವಿದ್ಯಾರ್ಥಿಗಳಿಗೆ ಇಲ್ಲಿಯೇ ಶಿಕ್ಷಣ ಮುಂದುವರಿಸಲು ಅವಕಾಶ ಕಲ್ಪಿಸುವ ಕುರಿತು ಮಂಡಳಿ ಜತೆ ಚರ್ಚೆ ಆರಂಭವಾಗಿದೆ.

ವೈದ್ಯಕೀಯ ಶಿಕ್ಷಣ ಶುಲ್ಕ ಕಡಿತ ಮಾಡುವ ಬಗ್ಗೆಯೂ ಚರ್ಚೆ ನಡೆಸಲಾಗಿದೆ' ಎಂದರು.

ಸಂಪುಟ ರಚನೆ: 2024ರ ಚುನಾವಣೆ ಮೇಲೆ ಕಣ್ಣು

ಉತ್ತರ ಪ್ರದೇಶ: ಎಲ್ಲ ಜಾತಿಗಳಿಗೆ ಪ್ರಾತಿನಿಧ್ಯ; ಮೂವರು ಉಪಮುಖ್ಯಮಂತ್ರಿಗಳ ನೇಮಕ ಸಾಧ್ಯತೆ

• ಸಂಜಯ್ ಪಾಂಡೆ

ಲಖನೌ: ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಿರುವ ಬಿಜೆಪಿ, 2024ರ ಲೋಕಸಭೆ ಚುನಾವಣೆಯ ಸಿದ್ಧತೆ ಆರಂಭಿಸಿದೆ. ಇದರ ಮೊದಲ ಸುಳಿವು ಉತ್ತರ ಪ್ರದೇಶ ಸಚಿವ ಸಂಪುಟ ರಚನೆಯಲ್ಲಿ ಗೋಚರವಾಗುವ ಸಾಧ್ಯತೆಯಿದೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಕೇಂದ್ರದ ಬಿಜೆಪಿ ನಾಯಕರ ಜೊತೆ ದೆಹಲಿಯಲ್ಲಿ ಮಾತುಕತೆ ನಡೆಸಿದ್ದು, ಸಂಪುಟ ಸೇರಲಿರುವವರ ಪಟ್ಟಿ ಅಂತಿಮವಾಗಿದೆ ಎಂದು ಮೂಲಗಳು ತಿಳಿಸಿವೆ. ಯೋಗಿ ಅವರು ಹೋಳಿ ಹಬ್ಬದ ದಿನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳುವ ಸಾಧ್ಯತೆಯಿದೆ.

ಕಳೆದ ಬಾರಿ ಯೋಗಿ ಸಂಪುಟದಲ್ಲಿ ಇಬ್ಬರು ಉಪಮುಖ್ಯಮಂತ್ರಿಗಳಿದ್ದರು. ಮೂಲಗಳ ಪ್ರಕಾರ, ಈ ಬಾರಿ ಮೂವರು ಉಪಮುಖ್ಯಮಂತ್ರಿಗಳನ್ನು ನೇಮಿಸುವ ಸಾಧ್ಯತೆಯಿದೆ. ಚುನಾವಣೆಯಲ್ಲಿ ಸೋತಿರುವ ಕೇಶವಪ್ರಸಾದ್ ಮೌರ್ಯ ಹಾಗೂ ದಿನೇಶ್ ಶರ್ಮಾ ಅವರು ಸಂಪುಟ ಸೇರಲಿದ್ದಾರೆಯೇ ಎಂಬುದು ಸ್ಪಷ್ಟವಾಗಿಲ್ಲ.

'ಒಟ್ಟು 60 ಸಚಿವರು ಸಂಪುಟದಲ್ಲಿ ಇರಲಿದ್ದಾರೆ. ಸಚಿವರ ಆಯ್ಕೆಯಲ್ಲಿ ಜಾತಿ ಪರಿಗಣನೆ ಮಹತ್ವದ ಪಾತ್ರ ವಹಿಸಲಿದೆ' ಎಂದು ಹಿರಿಯ ಮುಖಂಡರೊಬ್ಬರು ತಿಳಿಸಿದ್ದಾರೆ. ಇವರು ಯೋಗಿ ಹಾಗೂ ಕೇಂದ್ರದ ನಾಯಕರ ನಡುವೆ ಮಾತುಕತೆ ನಡೆದಾಗ ಉಪಸ್ಥಿತರಿದ್ದರು.



ದೆಹಲಿ ಭೇಟಿಯಲ್ಲಿರುವ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಕೇಂದ್ರ ಸಚಿವ ಅನುರಾಗ್ ಠಾಕೂರ್ ಅವರನ್ನು ಭಾನುವಾರ ಭೇಟಿ ಮಾಡಿದರು –ಪಿಟಿಐ ಚಿತ್ರ

ಉಪಮುಖ್ಯಮಂತ್ರಿ ಹುದ್ದೆಯ ಬಗ್ಗೆ ಹಲವು ಸುತ್ತಿನ ಮಾತುಕತೆ ನಡೆದಿವೆ. ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಸ್ವತಂತ್ರ ದೇವ್ ಸಿಂಗ್, ಉತ್ತರಾಖಂಡದ ಮಾಜಿ ರಾಜ್ಯಪಾಲ ಬೇಬಿ ರಾಣಿ ಮೌರ್ಯ, ಹಾಗೂ ಮೋದಿ ಅವರಿಗೆ ಆಪ್ತರು ಎನ್ನಲಾಗಿರುವ ಗುಜರಾತ್ ಕೇಡರ್‌ನ ಮಾಜಿ ಅಧಿಕಾರಿ ಎ.ಕೆ. ಶರ್ಮಾ ಅವರ ನೇಮಕದ ಬಗ್ಗೆ ಚರ್ಚೆ ನಡೆದಿದೆ.

ಮೂವರು ಉಪಮುಖ್ಯಮಂತ್ರಿಗಳು ಬ್ರಾಹ್ಮಣ, ಒಬಿಸಿ ಹಾಗೂ ಠಾಕೂರ್ ಸಮುದಾಯದಿಂದ ಆಯ್ಕೆಯಾಗುವ ಸಾಧ್ಯತೆಯಿದೆ. ಜಾಟ್, ದಲಿತ ಹಾಗೂ ಗುಜ್ಜರ್ ಸಮುದಾಯಗಳಿಗೆ ಸಂಪುಟದಲ್ಲಿ ಹೆಚ್ಚಿನ ಸ್ಥಾನ ದೊರೆಯಬಹುದು ಎನ್ನಲಾಗಿದೆ. ಬಿಜೆಪಿ ಮಿತ್ರಪಕ್ಷಗಳಾದ ಅಪ್ನಾದಳ ಹಾಗೂ ನಿಷಾದ್ ಪಕ್ಷಗಳಿಗೆ ತಲಾ ಒಂದು ಸಚಿವ ಸ್ಥಾನ ಸಿಗುವ ಸಾಧ್ಯತೆಯಿದೆ.

ಮುಂದಿನ ಲೋಕಸಭಾ ಚುನಾವಣೆಯನ್ನು ದೃಷ್ಟಿಯಲ್ಲಿರಿಸಿಕೊಂಡು ಸಂಪುಟ ರಚನೆಯಾಗಲಿದೆ ಎಂದು ಬಿಜೆಪಿ ಮುಖಂಡರು ಹೇಳಿದ್ದಾರೆ. 'ಲೋಕಸಭಾ ಚುನಾವಣೆಗೆ ಇನ್ನೂ ಎರಡು ವರ್ಷ ಬಾಕಿಯಿದೆ. ಮುಖ್ಯವಾಗಿ, ಮೊನ್ನೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಬೆಂಬಲಿಸಿದ ಸಮುದಾಯಗಳನ್ನು ಒಳಗೊಂಡಂತೆ ಎಲ್ಲ ಜಾತಿಗಳಿಗೆ ಪ್ರಾತಿನಿಧ್ಯ ದೊರೆಯುವ ಸಾಧ್ಯತೆಯಿದೆ ಎಂದು ಅವರು ಹೇಳಿದ್ದಾರೆ.

ಯೋಗಿ ಸಂಪುಟದ ಪ್ರಮಾಣ ವಚನ ಕಾರ್ಯಕ್ರಮವನ್ನು ಅದ್ದೂರಿಯಾಗಿ ನಡೆಸಲು ಬಿಜೆಪಿ ನಿರ್ಧರಿಸಿದೆ. ರಾಜಧಾನಿಯ ಇಕಾನಾ ಮೈದಾನದಲ್ಲಿ ಸಮಾರಂಭ ನಡೆಯಲಿದೆ.

ಪ್ರಜಾ ಮತ
ಜನತಂತ್ರದ ಹಬ್ಬ 2022

ಪರಿಷತ್‌ನಲ್ಲಿ ಬಹುಮತ ಬಿಜೆಪಿ ಗುರಿ

ಉತ್ತರ ಪ್ರದೇಶ ವಿಧಾನಸಭೆಯಲ್ಲಿ ನಿಚ್ಚಳ ಬಹುಮತ ಪಡೆದಿರುವ ಬಿಜೆಪಿ, ಇದೀಗ ವಿಧಾನ ಪರಿಷತ್‌ನ 36 ಸ್ಥಾನಗಳ ಮೇಲೆ ಕಣ್ಣಿಟ್ಟಿದೆ.

ಏಪ್ರಿಲ್ 9ರಂದು ಪರಿಷತ್‌ನ 36 ಸ್ಥಾನಗಳಿಗೆ ಚುನಾವಣೆ ನಿಗದಿಯಾಗಿದೆ. ಏಪ್ರಿಲ್ 12ರಂದು ಮತ ಎಣಿಕೆ ನಡೆಯಲಿದೆ.

ವಿಧಾನಸಭೆಯಲ್ಲಿ ಮೂರನೇ ಎರಡರಷ್ಟು ಬಹುಮತ ಪಡೆದಿರುವ ಬಿಜೆಪಿ, ಪರಿಷತ್‌ನಲ್ಲೂ ಏಕೈಕ ಅತಿದೊಡ್ಡ ಪಕ್ಷವಾಗುವ ಅವಕಾಶ ಈ ಚುನಾವಣೆಯಿಂದ ಸಿಕ್ಕಿದೆ.

100 ಸದಸ್ಯಬಲದ ಪರಿಷತ್‌ನಲ್ಲಿ ಸದ್ಯ ಬಿಜೆಪಿಯ 35, ಎಸ್‌ಪಿಯ 17 ಹಾಗೂ ಬಿಎಸ್‌ಪಿಯ ನಾಲ್ವರು ಸದಸ್ಯರಿದ್ದಾರೆ. ಕಾಂಗ್ರೆಸ್ ಅಪ್ನಾದಳ (ಎಸ್) ಹಾಗೂ ನಿಷಾದ್ ಪಕ್ಷಗಳು ತಲಾ ಒಂದು ಸ್ಥಾನ ಹೊಂದಿವೆ. 37 ಸ್ಥಾನಗಳು ಖಾಲಿಯಿವೆ.

ವಿಧಾನಸಭಾ ಚುನಾವಣೆಗೂ ಮುನ್ನ, ಸಮಾಜವಾದಿ ಪಕ್ಷದ ಹಲವು ಪರಿಷತ್ ಸದಸ್ಯರು ಬಿಜೆಪಿ ಸೇರ್ಪಡೆಯಾಗಿದ್ದರು. ಈ ಚುನಾವಣೆಯನ್ನು ಎರಡು ಹಂತಗಳಲ್ಲಿ ನಡೆಸಲು ಈ ಮೊದಲು ಉದ್ದೇಶಿಸಲಾಗಿತ್ತು. ಆದರೆ ಈಗ ಒಂದೇ ದಿನದಂದು ಚುನಾವಣೆ ನಡೆಸಲು ಚುನಾವಣಾ ಆಯೋಗ ನಿರ್ಧರಿಸಿದೆ.

ಸಂಸದ ಸ್ಥಾನಕ್ಕೆ ಮಾನ್ ರಾಜೀನಾಮೆ

ನವದೆಹಲಿ (ಪಿಟಿಐ): ಪಂಜಾಬ್‌ನ ನಿಯೋಜಿತ ಮುಖ್ಯಮಂತ್ರಿ ಭಗವಂತ ಮಾನ್ ಅವರು ತಮ್ಮ ಸಂಸದ ಸ್ಥಾನಕ್ಕೆ ಸೋಮವಾರ ರಾಜೀನಾಮೆ ನೀಡಿದ್ದಾರೆ. ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ.

ಮಾನ್ ಅವರು ಮಾ.16ರಂದು ಪಂಜಾಬ್ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಧುರಿ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಆಯ್ಕೆಯಾಗುವುದಕ್ಕೂ ಮುನ್ನ ಅವರು ಪಂಜಾಬ್‌ನ ಸಂಗ್ರೂರ್ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರು.

ಚಿತ್ರಾ ರಾಮಕೃಷ್ಣಗೆ ನ್ಯಾಯಾಂಗ ಬಂಧನ

ನವದೆಹಲಿ (ಪಿಟಿಐ): ರಾಷ್ಟ್ರೀಯ ಷೇರುಪೇಟೆಯ (ಎನ್‌ಎಸ್‌ಇ) ಮಾಜಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಚಿತ್ರಾ ರಾಮಕೃಷ್ಣ ಅವರನ್ನು ದೆಹಲಿಯ ನ್ಯಾಯಾಲಯವು 14 ದಿನಗಳ ವರೆಗೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಷೇರುಗಳನ್ನು ತ್ವರಿತವಾಗಿ ಖರೀದಿಸಲು ಹಾಗೂ ಮಾರಾಟ ಮಾಡಲು ವರ್ತಕರಿಗೆ ಅವಕಾಶ ಕಲ್ಪಿಸುವ ಸೌಲಭ್ಯವನ್ನು ದುರ್ಬಳಕೆ ಮಾಡಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯವು ಸೋಮವಾರ ಈ ಆದೇಶವನ್ನು ಪ್ರಕಟಿಸಿದೆ.

ಚಿತ್ರಾ ಅವರು ತನಿಖೆಗೆ ಸಹಕರಿಸುತ್ತಿಲ್ಲ, ಕೇಳುವ ಪ್ರಶ್ನೆಗಳಿಗೆ ನುಣುಚಿಕೊಳ್ಳುವ ರೀತಿ ಉತ್ತರಿಸುತ್ತಿದ್ದಾರೆ ಎಂದು ಸಿಬಿಐ ಕೋರ್ಟ್‌ಗೆ ತಿಳಿಸಿತು.

ಮನೆಯ ಊಟ ನೀಡಲು ಅನುಮತಿ ನೀಡುವಂತೆ ಚಿತ್ರಾ ಅವರ ಪರ ವಕೀಲರು ಕೋರ್ಟ್‌ಗೆ ಮನವಿ ಮಾಡಿದರು. 'ನ್ಯಾಯಾಂಗ ಬಂಧನದಲ್ಲಿಯೂ ಊಟ ಚೆನ್ನಾಗಿಯೇ ಇರುತ್ತದೆ. ಹಲವು ಬಾರಿ ನಾನೂ ಸಹ ಅಲ್ಲಿನ ಊಟ ಮಾಡಿರುವೆ' ಎಂದು ನ್ಯಾಯಾಧೀಶರು ಹೇಳಿದ್ದಾಗಿ ವರದಿಯಾಗಿದೆ.

ಆರ್‌ಎಸ್‌ಎಸ್‌ನ ಪ್ರತಿನಿಧಿ ಸಭಾ ನಿರ್ಣಯ

'ಭಾರತ– ಕೇಂದ್ರಿತ ಉದ್ಯೋಗ ಸೃಷ್ಟಿ ಮಾದರಿ ಅಳವಡಿಸಿ'

ಅಹಮದಾಬಾದ್ (ಪಿಟಿಐ): ಸುಸ್ಥಿರ ಮತ್ತು ಸಮಗ್ರ ಅಭಿವೃದ್ಧಿಗಾಗಿ ದೇಶದ ಆರ್ಥಿಕತೆಯನ್ನು ಬಲಪಡಿಸಲು 'ಭಾರತ– ಕೇಂದ್ರಿತ' ಉದ್ಯೋಗ ಸೃಷ್ಟಿ ಮಾದರಿ ಅಳವಡಿಸಿಕೊಳ್ಳಬೇಕು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಕರೆ ನೀಡಿದೆ.

ಆರ್‌ಎಸ್‌ಎಸ್‌ನ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಂಸ್ಥೆಯಾದ ಅಖಿಲ ಭಾರತೀಯ ಪ್ರತಿನಿಧಿ ಸಭಾ (ಎಬಿಪಿಎಸ್) ಈ ಕುರಿತು ನಿರ್ಣಯ ತೆಗೆದುಕೊಂಡಿದೆ. ಅಹಮದಾಬಾದ್‌ನ ಹೊರವಲಯ ಪಿರಾನಾದಲ್ಲಿ ಭಾನುವಾರ ಮುಕ್ತಾಯವಾದ ಮೂರು ದಿನಗಳ ಸಭೆಯಲ್ಲಿ ಎಬಿಪಿಎಸ್ ಈ ನಿರ್ಣಯವನ್ನು ಅಂಗೀಕರಿಸಿದೆ.

ದೇಶದಲ್ಲಿ ಯುವ ಸಮೂಹ ಪ್ರಮುಖವಾಗಿ ಎದುರಿಸುತ್ತಿರುವ ನಿರುದ್ಯೋಗ ಸಮಸ್ಯೆ ನಿವಾರಿಸಬೇಕಿದೆ. ದೇಶವನ್ನು ಸ್ವಾವಲಂಬಿಯನ್ನಾಗಿ ಮಾಡಲು ಉದ್ಯೋಗಾವಕಾಶಗಳನ್ನು ಹೆಚ್ಚಾಗಿ ಸೃಷ್ಟಿಸಬೇಕಾಗಿದೆ ಎಂದು ಸಭಾ ಹೇಳಿದೆ.

ಮಾನವ ಕೇಂದ್ರಿತ, ಹೆಚ್ಚು ಕಾರ್ಮಿಕರನ್ನು ಬಯಸುವ, ಪರಿಸರ ಸ್ನೇಹಿ ಮತ್ತು ವಿಕೇಂದ್ರೀಕರಣ ಹಾಗೂ ಪ್ರಯೋಜನಗಳ ಸಮಾನ ಹಂಚಿಕೆಗೆ ಮಹತ್ವ ನೀಡುವ ಗ್ರಾಮ ಆರ್ಥಿಕತೆಯನ್ನು ಒಳಗೊಂಡ 'ಭಾರತೀಯ ಆರ್ಥಿಕ ಮಾದರಿ'ಗೆ ಒತ್ತು ನೀಡಬೇಕು ಎಂದು ಎಬಿಪಿಎಸ್ ಅಭಿಪ್ರಾಯಪಟ್ಟಿದೆ. ಸಣ್ಣ, ಸೂಕ್ಷ್ಮ ಮತ್ತು ಕೃಷಿ ಆಧಾರಿತ ಕೈಗಾರಿಕೆಗಳನ್ನು ಪ್ರಮುಖವಾಗಿ ಗಮನದಲ್ಲಿಟ್ಟುಕೊಳ್ಳಬೇಕು ಎಂಬುದನ್ನು ಸಭಾ ನಿರ್ಣಯದಲ್ಲಿ ಉಲ್ಲೇಖಿಸಿದೆ.

ಗ್ರಾಮೀಣ, ಅಸಂಘಟಿತ ವಲಯದ ಉದ್ಯೋಗ ಸೃಷ್ಟಿಗೆ ಒತ್ತು ನೀಡಬೇಕು. ಮಹಿಳಾ ಉದ್ಯೋಗಾವಕಾಶ ಹೆಚ್ಚಿಸುವುದರ ಜತೆಗೆ ಆರ್ಥಿಕತೆಯಲ್ಲಿ ಅವರ ಪಾಲ್ಗೊಳ್ಳುವಿಕೆಯನ್ನೂ ಹೆಚ್ಚಿಸಬೇಕು. ಇದಕ್ಕಾಗಿ ಸಾಮಾಜಿಕ ಪರಿಸ್ಥಿತಿಗಳಿಗೆ ಸೂಕ್ತವಾದ ಹೊಸ ತಂತ್ರಜ್ಞಾನಗಳು ಮತ್ತು ಮೃದು ಕೌಶಲಗಳನ್ನು ಅಳವಡಿಸಿಕೊಳ್ಳುವ ಅಗತ್ಯವಿದೆ ಎಂಬುದನ್ನು ಎಬಿಪಿಎಸ್ ನಿರ್ಣಯದಲ್ಲಿ ತಿಳಿಸಿದೆ.

ಮಣಿಪುರ ಶಾಸಕರ ಪ್ರಮಾಣ

ಪ್ರಜಾವಾಣಿ ವಾರ್ತೆ

ಗುವಾಹಟಿ: ಮಣಿಪುರದಲ್ಲಿ ಬಹುಮತ ಪಡೆದಿರುವ ಬಿಜೆಪಿಯು ಮುಖ್ಯಮಂತ್ರಿ ಯಾರಾಗಬೇಕು ಎಂದು ನಿರ್ಧರಿಸುವ ಮೊದಲೇ ಹೊಸದಾಗಿ ಆಯ್ಕೆ ಆಗಿರುವ ಎಲ್ಲಾ 60 ಶಾಸಕರು ಸೋಮವಾರ ಪ್ರಮಾಣ ವಚನ ಸ್ವೀಕರಿಸಿದರು.

ಹಂಗಾಮಿ ಸ್ಪೀಕರ್ ಆಗಿ ಆಯ್ಕೆ ಆಗಿರುವ ಬಿಜೆಪಿ ಶಾಸಕ ಎಸ್. ರಾಜನ್ ಸಿಂಗ್ ಅವರು ಎಲ್ಲಾ ಶಾಸಕರಿಗೆ ಪ್ರಮಾಣ ವಚನ ಬೋಧಿಸಿದರು.

60 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ 32 ಸ್ಥಾನಗಳನ್ನು ಗೆದ್ದಿದೆ. ಎನ್. ಬಿರೇನ್ ಸಿಂಗ್ ಅವರು ಮತ್ತೊಮ್ಮೆ ಮುಖ್ಯಮಂತ್ರಿ ಆಗಬೇಕೇ ಅಥವಾ ಹೊಸ ಮುಖ್ಯಮಂತ್ರಿಯನ್ನು ಆಯ್ಕೆ ಮಾಡಬೇಕೆ ಎಂಬ ಕುರಿತು ಬಿಜೆಪಿ ಶಾಸಕರು ಸ್ಪಷ್ಟವಾಗಿ ನಿರ್ಧಾರ ತೆಗೆದುಕೊಂಡಿಲ್ಲ. ಇದೇ ಮೊದಲ ಬಾರಿಗೆ ಮಣಿಪುರದಲ್ಲಿ ಬಿಜೆಪಿ ಬಹುಮತ ಪಡೆದಿದೆ. ಬಿರೇನ್ ಅವರ ನಾಯಕತ್ವದಲ್ಲಿ ಪಕ್ಷ ಈ ಸಾಧನೆ ಮಾಡಿದ ಕಾರಣ ಅವರು ರಾಜ್ಯ ಬಿಜೆಪಿಯ ಪ್ರಮುಖ ನಾಯಕರಾಗಿ ಹೊರಹೊಮ್ಮಿದ್ದಾರೆ.

ಆದರೆ ಪಕ್ಷದ ಗೆಲುವಿಗೆ ಬಿರೇನ್ ಅವರು ಮಾತ್ರ ಕಾರಣರಲ್ಲ. ಪಕ್ಷದ ಹಿರಿಯ ನಾಯಕರಾದ ಥೋಂಗಮ್ ಬಿಸ್ವಜಿತ್ ಸಿಂಗ್ ಮತ್ತು 2020ರಲ್ಲಿ ಕಾಂಗ್ರೆಸ್‌ನಿಂದ ಬಿಜೆಪಿಗೆ ಪಕ್ಷಾಂತರ ಮಾಡಿದ ಕೊಂಥೌಜಮ್ ಗೋವಿಂದಾಸ್ ಸಿಂಗ್ ಅವರೂ ಕೂಡಾ ಕಾರಣರಾಗಿದ್ದಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಬಿರೇನ್ ಅವರಿಗೆ ಪಕ್ಷದ ಶಾಸಕರ ಬೆಂಬಲ ಇದೆ. ರಾಜ್ಯದ ಪರ್ವತ ಪ್ರದೇಶದಲ್ಲಿ 20 ಸ್ಥಾನಗಳಲ್ಲಿ ಆರು ಸ್ಥಾನಗಳನ್ನು ಬಿಜೆಪಿ ಈ ಬಾರಿ ಗೆದ್ದಿರುವ ಕಾರಣ ಮುಖ್ಯಮಂತ್ರಿ ಸ್ಥಾನಕ್ಕೆ ಅವರನ್ನು ಕಡೆಗಣಿಸುವುದು ಸುಲಭವಲ್ಲ ಎನ್ನಲಾಗಿದೆ. 2017ರ ಚುನಾವಣೆಯಲ್ಲಿ ಈ ಪ್ರದೇಶದಲ್ಲಿ ಬಿಜೆಪಿ ಐದು ಸ್ಥಾನಗಳನ್ನು ಗೆದ್ದಿತ್ತು.

ಎನ್‌ಪಿಎಫ್ ಮತ್ತು ಜೆಡಿಯು ಸರ್ಕಾರ ರಚಿಸಲು ಬಿಜೆಪಿಗೆ ಬೆಂಬಲ ನೀಡಿವೆ.

ಸರ್ಕಾರ ರಚನೆ: ವೀಕ್ಷಕ ನೇಮಕ

ನವದೆಹಲಿ/ಪಣಜಿ (ಪಿಟಿಐ): ಉತ್ತರ ಪ್ರದೇಶ ಮತ್ತು ಉತ್ತರಾಖಂಡದ ಸರ್ಕಾರ ರಚನೆಯ ವೀಕ್ಷಕರಾಗಿ ಕೇಂದ್ರ ಸಚಿವ ಅಮಿತ್ ಶಾ ಮತ್ತು ರಾಜನಾಥ್ ಸಿಂಗ್ ಅವರನ್ನು ಬಿಜೆಪಿ ಸೋಮವಾರ ನೇಮಿಸಿದೆ. ಉತ್ತರ ಪ್ರದೇಶ ಸರ್ಕಾರ ರಚನೆ ಪ್ರಕ್ರಿಯೆಯಲ್ಲಿ ಶಾ ಅವರಿಗೆ ಬಿಜೆಪಿ ಉಪಾಧ್ಯಕ್ಷ ರಘುಬರ್ ದಾಸ್ ನೆರವಾಗಲಿದ್ದಾರೆ. ಉತ್ತರಾಖಂಡ ಸರ್ಕಾರ ರಚನೆ ಪ್ರಕ್ರಿಯೆಯಲ್ಲಿ ರಾಜನಾಥ್ ಅವರಿಗೆ ಕೇಂದ್ರ ಸಚಿವೆ ಮೀನಾಕ್ಷಿ ಲೇಖಿ ಸಹಕರಿಸಲಿದ್ದಾರೆ.

ಮಣಿಪುರ ಸರ್ಕಾರ ರಚನೆಯ ವೀಕ್ಷಕರಾಗಿ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್, ಸಹ ವೀಕ್ಷಕರಾಗಿ ಕಿರಣ್ ರಿಜಿಜು ಮತ್ತು ಗೋವಾ ಸರ್ಕಾರ ರಚನೆಯ ವೀಕ್ಷಕರಾಗಿ ಕೇಂದ್ರ ಸಚಿವ ನರೇಂದ್ರ ಸಿಂಗ್ ತೋಮರ್, ಸಹ ವೀಕ್ಷಕರಾಗಿ ಕೇಂದ್ರ ಸಚಿವ ಎಲ್. ಮುರುಘನ್ ಅವರನ್ನು ನೇಮಿಸಲಾಗಿದೆ.

ಹಂಗಾಮಿ ಸ್ಪೀಕರ್: ಬಿಜೆಪಿ ಶಾಸಕ ಗಣೇಶ್ ಗಾಂವ್ಕರ್ ಅವರಿಗೆ ಗೋವಾ ವಿಧಾನಸಭೆಯ ಹಂಗಾಮಿ ಸ್ಪೀಕರ್ ಆಗಿ ರಾಜ್ಯಪಾಲ ಪಿ.ಎಸ್. ಶ್ರೀಧರನ್ ಪಿಳ್ಳೈ ಅವರು ಸೋಮವಾರ ಪ್ರಮಾಣ ವಚನ ಬೋಧಿಸಿದರು.

ಚನ್ನಿ, ಅಂಬಿಕಾ ಸೋನಿ ವಿರುದ್ಧ ಹರಿಹಾಯ್ದ ಜಾಖಡ್

ಚಂಡಿಗಡ (ಪಿಟಿಐ): ಪಂಜಾಬ್ ವಿಧಾನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲಿಗೆ ಚರಣ್‌ಜಿತ್ ಸಿಂಗ್ ಚನ್ನಿ ಹೊಣೆಗಾರರು ಎಂದು ರಾಜ್ಯ ಕಾಂಗ್ರೆಸ್ ಘಟಕದ ಮಾಜಿ ಅಧ್ಯಕ್ಷ ಸುನಿಲ್ ಜಾಖಡ್ ಆರೋಪಿಸಿದ್ದಾರೆ. 'ಚನ್ನಿ ಅವರ ದುರಾಸೆಯು ಪಕ್ಷವನ್ನು ಪತನಕ್ಕೆ ತಳ್ಳಿತು' ಎಂದು ಕಿಡಿಕಾರಿದ್ದಾರೆ.

ಕಾಂಗ್ರೆಸ್ ನಾಯಕಿ ಅಂಬಿಕಾ ಸೋನಿ ಅವರ ವಿರುದ್ಧವೂ ಜಾಖಡ್ ಕಿಡಿಕಾರಿದ್ದಾರೆ. ದೆಹಲಿಯಲ್ಲಿ ಭಾನುವಾರ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ (ಸಿಡಬ್ಲ್ಯುಸಿ) ಪಂಜಾಬ್ ಸೋಲಿನ ಕುರಿತಂತೆ ಚರ್ಚೆ ನಡೆಯಿತು. ನಿರ್ಗಮಿತ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರ ಬೆಂಬಲಕ್ಕೆ ರಾಜ್ಯದ ಕಾಂಗ್ರೆಸ್ ಮುಖಂಡರು ನಿಲ್ಲದ ಕಾರಣದಿಂದ ಪಕ್ಷಕ್ಕೆ ಸೋಲಾಯಿತು ಎಂಬ ಅರ್ಥದಲ್ಲಿ ಚರ್ಚೆ ನಡೆಯಿತು.

'ಚನ್ನಿ ಅವರು ಪಕ್ಷದ ಆಸ್ತಿಯೇ. ಅಲ್ಲ ಅವರು ಪಕ್ಷದ ಸೋಲಿಗೆ ಹೊಣೆಗಾರರು. ಅವರನ್ನು ಮುಖ್ಯಮಂತ್ರಿ ಹುದ್ದೆಗೆ ಮೊದಲು ಶಿಫಾರಸು ಮಾಡಿದ ಮಹಿಳೆಯ ಪಾಲಿಗೆ ಅವರು ಆಸ್ತಿ ಆಗಿರಬಹುದು. ಅದೃಷ್ಟವಶಾತ್, ಸಿಡಬ್ಲುಸಿ ಸಭೆಯಲ್ಲಿ ಚನ್ನಿ ಅವರನ್ನು ರಾಷ್ಟ್ರೀಯ ಸೊತ್ತು ಎಂದು ಘೋಷಿಸಲಿಲ್ಲ' ಎಂದು ಜಾಖಡ್ ವ್ಯಂಗ್ಯದ ಧಾಟಿಯಲ್ಲಿ ಟ್ವೀಟ್ ಮಾಡಿದ್ದಾರೆ. ಚನ್ನಿ ಅವರ ಸಂಬಂಧಿಯನ್ನು ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಇ.ಡಿ ಅಧಿಕಾರಿಗಳು ಬಂಧಿಸಿದ ವಿಚಾರವನ್ನು ಜಾಖಡ್ ತಮ್ಮ ಟ್ವೀಟ್‌ನಲ್ಲಿ ಉಲ್ಲೇಖಿಸಿದ್ದಾರೆ.

ಸೋನಿಯಾ ಕುಟುಂಬಕ್ಕೆ ಪಕ್ಷ ಮುನ್ನಡೆಸುವ ಶಕ್ತಿ ಇಲ್ಲ ಇದು ಮುಂದುವರಿದರೆ, ಪಂಚಾಯಿತಿ ಚುನಾವಣೆಯಲ್ಲೂ ಕಾಂಗ್ರೆಸ್ ಕಾಣಿಸುವುದಿಲ್ಲ

ಹಿಮಂತ್ ಬಿಸ್ವ ಶರ್ಮಾ ಬಿಜೆಪಿ ಮುಖಂಡ

ಆಡಂಬರದ ವ್ಯಕ್ತಿತ್ವದ ಸಿಧು, ಭ್ರಷ್ಟಾಚಾರಿ ಚನ್ನಿ ಅವರಿಗೆ ಕಾಂಗ್ರೆಸ್ ಯಾವಾಗ ಮಣೆ ಹಾಕಿತೋ, ಅಂದೇ ಪಂಜಾಬ್‌ನಲ್ಲಿ ತನ್ನ ಗೋರಿ ತೋಡಿಕೊಂಡಿತು.

ಕ್ಯಾಪ್ಟನ್ ಅಮರಿಂದರ್ ಸಿಂಗ್ ಮಾಜಿ ಮುಖ್ಯಮಂತ್ರಿ

ಕೃಷ್ಣಾ, ಕಾವೇರಿ ಸೇರಿ 13 ನದಿಗಳ ಪುನಶ್ಚೇತನ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೃಷ್ಣಾ ಮತ್ತು ಕಾವೇರಿ ನದಿಗಳೂ ಒಳಗೊಂಡಂತೆ ದೇಶದ ಒಟ್ಟು 13 ನದಿಗಳ ಪುನರುಜ್ಜೀವನ ಕಾರ್ಯಕ್ಕಾಗಿ ಕೇಂದ್ರ ಸರ್ಕಾರವು ₹ 19,000 ಕೋಟಿ ವೆಚ್ಚದ ಯೋಜನೆಯೊಂದನ್ನು ಕೈಗೆತ್ತಿಕೊಳ್ಳಲಿದೆ.

ಕರ್ನಾಟಕದ ಜೀವನದಿಗಳಾದ ಕೃಷ್ಣಾ, ಕಾವೇರಿ ಸೇರಿದಂತೆ ದೇಶದ ವಿವಿಧೆಡೆ ಹರಿದಿರುವ ಝೇಲಂ, ಚೆನಾಬ್, ರಾವಿ, ಬಿಯಾಸ್, ಸಟ್ಲೆಜ್, ಯಮುನಾ, ಬ್ರಹ್ಮಪುತ್ರಾ, ಲುನಿ, ನರ್ಮದಾ, ಗೋದಾವರಿ ಮತ್ತು ಮಹಾನದಿಗಳನ್ನು ಈ ಯೋಜನೆಯಡಿ ಪುನರುಜ್ಜೀವನಕ್ಕೆ ಆಯ್ಕೆ ಮಾಡಲಾಗಿದೆ.

ನದಿಗಳ ಜಲಾನಯನ ಪ್ರದೇಶದಲ್ಲಿ ವಿವಿಧ ರೀತಿಯ ಸಸಿಗಳನ್ನು ನೆಟ್ಟು, ಆಯಾ ರಾಜ್ಯ ಸರ್ಕಾರದ ಅರಣ್ಯ ಇಲಾಖೆಗಳ ಸಹಕಾರದೊಂದಿಗೆ ವ್ಯವಸ್ಥಿತವಾಗಿ ಬೆಳೆಸುವ ಮೂಲಕ ಅವುಗಳ ನಿರ್ವಹಣೆ ಕಾರ್ಯಕ್ಕೆ ಕ್ರಮ ಕೈಗೊಳ್ಳಲಾಗಿದೆ.

ಭಾರತೀಯ ಅರಣ್ಯ ಸಂಶೋಧನೆ ಮತ್ತು ಶಿಕ್ಷಣ ಮಂಡಳಿ ವತಿಯಿಂದ ರೂಪಿಸಿರುವ ನದಿಗಳ ಕಾಯಕಲ್ಪ ಯೋಜನೆ ಅಡಿ ಕಾವೇರಿ ನದಿಯ ಪುನರುಜ್ಜೀವನಕ್ಕಾಗಿ ₹ 3,069 ಕೋಟಿ ಹಾಗೂ ಕೃಷ್ಣಾ ನದಿಗಾಗಿ ₹ 2,327 ಕೋಟಿ ವೆಚ್ಚವನ್ನು ಅಂದಾಜಿಸಲಾಗಿದೆ.

ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯದ ಅಡಿಯ ರಾಷ್ಟ್ರೀಯ ಅರಣ್ಯೀಕರಣ ಮತ್ತು ಪರಿಸರ -ಅಭಿವೃದ್ಧಿ ಮಂಡಳಿಯಿಂದ ಈ ಪ್ರಸ್ತಾವಿತ ಯೋಜನೆಗಾಗಿ ಒಟ್ಟು ₹19,342 ಕೋಟಿ ವ್ಯಯಿಸಲಾಗುತ್ತದೆ. ಈ ಯೋಜನೆಯು ಹೆಚ್ಚುತ್ತಿರುವ ನೀರಿನ ಕೊರತೆಯ ನಿವಾರಣೆಗೆ ಸಹಕಾರಿಯಾಗಲಿದೆ. ಹವಾಮಾನ ಬದಲಾವಣೆ ಮತ್ತು ಸುಸ್ಥಿರ ಅಭಿವೃದ್ಧಿಗೂ ಪೂರಕವಾಗಲಿದೆ. ಯೋಜನೆಗೆ ಅಗತ್ಯವಿರುವ ಹಣಕಾಸಿನ ನೆರವನ್ನು ಕೇಂದ್ರವೇ ಆಯಾ ರಾಜ್ಯ ಸರ್ಕಾರಗಳಿಗೆ ನೀಡಲಿದೆ ಎಂದು ಸೋಮವಾರ ವಿಸ್ತೃತ ಯೋಜನಾ ವರದಿಯನ್ನು ಬಿಡುಗಡೆ ಮಾಡಿರುವ ಕೇಂದ್ರದ ಪರಿಸರ ಖಾತೆ ಸಚಿವ ಭೂಪೇಂದ್ರ ಯಾದವ್ ತಿಳಿಸಿದ್ದಾರೆ.

ಕ್ಷೇಮ ಕುಶಲ



ಮರೆಯುವ ಮುನ್ನ ಓದಿ...

ಡಾ. ಶಿವಾನಂದ ಬಿ. ಹಿರೇಮಠ

> ಮರೆಗುಳಿತನಕ್ಕೆ ಅನೇಕ ಕಾರಣಗಳಿವೆ. ಕೆಲವು ಸಾಮಾನ್ಯವಾದವು ಹಾಗೂ ಸರಿಪಡಿಸ ಬಹುದಾದಂಥವು. ಇನ್ನು ಕೆಲವು ಗಂಭೀರವಾದವು.

ರಾಮಮೂರ್ತಿಗಳು ಬ್ಯಾಂಕ್‌ನಿಂದ ನಿವೃತ್ತಿಯಾಗಿ ಸುಮಾರು ಎರಡು ವರ್ಷಗಳೇ ಕಳೆದಿವೆ. ಬ್ಯಾಂಕಿನಲ್ಲಿ ಇವರ ನಿಷ್ಠೆ, ಪ್ರಾಮಾಣಿಕತೆ ಬಗ್ಗೆ ಎಷ್ಟು ಹೆಸರಿತ್ತೋ, ಅಷ್ಟೇ ಇವರ ನೆನಪಿನ ಶಕ್ತಿಯ ಬಗ್ಗೆಯೂ ಹೆಸರಿತ್ತು. ಅಕೌಂಟ್ಸ್ ಲೆಕ್ಕ ಇಡುವುದು, ಮುಖ್ಯವಾದ ಸಂಖ್ಯೆಗಳನ್ನು ನೆನಪಿಟ್ಟುಕೊಳ್ಳುವುದು, ಹಳೆ ಗ್ರಾಹಕರನ್ನು ಗುರುತು ಹಿಡಿಯುವುದು, ಇವೆಲ್ಲವುದರಲ್ಲಿ ನಿಸ್ಸೀಮರು. ಆದರೆ ಇತ್ತೀಚೆಗೆ, ರಾಮಮೂರ್ತಿಗಳಿಗೆ ಮರೆಗುಳಿತನ ಕಾಡುತ್ತಿದೆ. ಕಳೆದ ಆರು ತಿಂಗಳುಗಳಲ್ಲಿಯೇ – ತಾವು ಇಟ್ಟ ವಸ್ತುಗಳನ್ನು ಪದೇ ಪದೇ ಹುಡುಕುತ್ತಿರುತ್ತಾರೆ. ದಿನಸಿ ತರಲು, ಲಿಸ್ಟ್ ಇಲ್ಲದೇ ಹೋಗಲಾಗುವುದಿಲ್ಲ. ಹತ್ತಿರದ ಸಂಬಂಧಿಗಳನ್ನು ಗುರುತಿಸುವುದು ಕಷ್ಟವಾಗುತ್ತಿದೆ. ವಾರದ ಹಿಂದಂತೂ,ಪಾರ್ಕ್‌ಗೆ ವಾಕಿಂಗ್‌ಗೆ ಹೋಗಿ ಮರಳುವಾಗ, ಮನೆ ದಾರಿಯೇ ಮರೆತುಹೋಗಿತ್ತು!

28 ವರ್ಷದ ಆದಿತ್ಯ, ಪ್ರಖ್ಯಾತ ಬಹುರಾಷ್ಟ್ರೀಯ ಸಾಫ್ಟ್‌ವೇರ್ ಕಂಪನಿಯಲ್ಲಿ ಉದ್ಯೋಗಿ. ಕಳೆದೆರಡು ತಿಂಗಳಿನಿಂದ, ಅಮೆರಿಕದ ಪ್ರಾಜೆಕ್ಟ್‌ಗಾಗಿ ಕೆಲಸ ಮಾಡುತ್ತಿದ್ದ. ರಾತ್ರಿ ಕೆಲಸ, ಹಗಲು ನಿದ್ದೆ. ಜೊತೆಗೆ ಪ್ರಾಜೆಕ್ಟ್ ಅನ್ನು ಡೆಡ್‌ಲೈನ್‌ನಲ್ಲಿ ಮುಗಿಸುವ ಧಾವಂತ. ದಿನಕ್ಕೆ ಸುಮಾರು 14ರಿಂದ 16 ಗಂಟೆ ಕೆಲಸ. ಕಳೆದ ತಿಂಗಳಿನಿಂದ, ಪಕ್ಕದ ಸೈಟ್‌ನಲ್ಲಿ, ಮನೆ ಕಟ್ಟುತ್ತಿದ್ದರು. ಆದಿತ್ಯ ರಾತ್ರಿ ಪಾಳಿ ಮುಗಿಸಿ, ಇನ್ನೇನು ಮಲಗಬೇಕು ಎನ್ನುವಷ್ಟರಲ್ಲಿ ಕಟ್ಟಡ ಕೆಲಸ ಶುರು. ನಿದ್ದೆ ಅಧೋಗತಿ. ಇತ್ತೀಚೆಗೆ, ತುಂಬ ಕಿರಿಕಿರಿ, ಗೊಂದಲ, ಸಿಟ್ಟು ಬರುತ್ತಿತ್ತು. ಪ್ರಾಜೆಕ್ಟ್‌ಗೆ ಸಂಬಂಧಿಸಿದ ವಿಷಯಗಳನ್ನು ಪದೇ ಪದೇ ಮರೆಯುತ್ತಿದ್ದ. ಈ ಮೇಲ್ ಐಡಿಗಳು, ಫೋನ್ ನಂಬರ್‌ಗಳು ಮರೆತುಹೋಗುತ್ತಿದ್ದವು. ನಿನ್ನೆಯಂತೂ, ತನ್ನ ಲಾಗಿನ್ ಪಾಸ್‌ವರ್ಡ್ ಅನ್ನೇ ಮರೆತಿದ್ದ!

ಹೇಗೆ, ನೆನಪಿನ ಶಕ್ತಿಯು ಮನುಷ್ಯನಿಗೆ ಪ್ರಕೃತಿದತ್ತವಾಗಿ ಒಲಿದ ವರವೋ, ಅದೇ ರೀತಿ ಮರೆಗುಳಿತನವೂ ವರವೇ ಸರಿ. ಕಲ್ಪಿಸಿಕೊಳ್ಳಿ, ದಿನನಿತ್ಯದ ಪ್ರತಿಯೊಂದು ಮಾತು, ಘಟನೆ, ವಸ್ತುವಿಷಯಗಳು ನಮ್ಮ ಸ್ಮೃತಿಪಟಲದಲ್ಲಿಯೇ ಉಳಿದುಬಿಟ್ಟರೆ ಎಂತಹ ಗೊಂದಲ, ಕಸಿವಿಸಿಯಾಗುತ್ತಿತ್ತು ನಮ್ಮ ಬಾಳು! ಅನೇಕ ಕಹಿ ಘಟನೆಗಳನ್ನು ಹಿಂದಕ್ಕೆ ತಳ್ಳಿ, ಮುನ್ನಡೆಯಲು ಮರೆವು ಎಂಬ ವರವೇ ಅಲ್ಲವೇ ಕಾರಣ!

ರಾಮಮೂರ್ತಿಯವರ ಪರಿಸ್ಥಿತಿ ಗಮನಿಸಿದರೆ, ಅದು ವೃದ್ಧಾಪ್ಯದ ಮರೆಗುಳಿತನ ಎನ್ನಿಸಬಹುದು. ಆದರೆ ಅವರ ಮರೆವು ಜೀವನದ ಅನೇಕ ಆಯಾಮಗಳಲ್ಲಿ ಆವರಿಸಿಕೊಂಡು, ಗಾಢವಾಗಿ ಪರಿಣಾಮ ಬೀರುತ್ತಿರುವುದನ್ನು ಗಮನಿಸಿದರೆ, ಗಂಭೀರ ಸಮಸ್ಯೆಯಿರಬಹುದು ಎನ್ನಿಸುತ್ತದೆ.

ಆದಿತ್ಯನ ಪ್ರಕರಣದಲ್ಲಿ, ಕೆಲಸದ ಒತ್ತಡ, ನಿದ್ರಾಹೀನತೆ, ಬದಲಾದ ನಿದ್ದೆಯ ಸಮಯ – ಇವು ಆತನಲ್ಲಿ ಅತೀವ ಒತ್ತಡವುಂಟು ಮಾಡುತ್ತಿವೆ. ಬಹುಶಃ ಇವುಗಳಿಂದಲೇ ಅವನಲ್ಲಿ ಮರೆವು ಕಾಣಿಸುತ್ತಿರಬಹುದು.

ಮರೆಗುಳಿತನಕ್ಕೆ ಅನೇಕ ಕಾರಣಗಳಿವೆ. ಕೆಲವು ಸಾಮಾನ್ಯವಾದವು ಹಾಗೂ ಸರಿಪಡಿಸಬಹುದಾದಂಥವು. ಇನ್ನು ಕೆಲವು ಗಂಭೀರವಾದವು.

ಸಾಮಾನ್ಯ ಕಾರಣಗಳು

ನಿದ್ರಾಹೀನತೆ: ಬಹುಶಃ ಮರೆವಿಗೆ ಅತ್ಯಂತ ಸಾಮಾನ್ಯವಾದ ಕಾರಣವೇ ನಿದ್ರಾಹೀನತೆ. ರಾತ್ರಿ ಪದೇಪದೇ ಎಚ್ಚರವಾಗುವುದು, ನಿದ್ದೆಯ ಸಮಯದಲ್ಲಿ ಬದಲಾವಣೆ, ನಿದ್ದೆಯ ಗುಣಮಟ್ಟ ಸರಿಯಿರದಿದ್ದರೆ, ಅತಿಯಾದ ಗೊರಕೆ, ಇನ್ನೂ ಇತ್ಯಾದಿ ಕಾರಣಗಳಿಂದ ನಿದ್ರಾಹೀನತೆ ಉಂಟಾಗಬಹುದು. ಇದರಿಂದ ದೇಹ ಹಾಗೂ ಮೆದುಳಿಗೆ ಅವಶ್ಯಕವಾದ ವಿಶ್ರಾಂತಿ ದೊರೆಯದೇ, ಏಕಾಗ್ರತೆ ಕೊರತೆ ಉಂಟಾಗಿ ಮರೆವು ಕಾಡಬಹುದು.

ಒತ್ತಡ: ತೀವ್ರ ಒತ್ತಡದಿಂದ, ದೇಹದಲ್ಲಿ ಅನೇಕ ಜೈವಿಕ ಬದಲಾವಣೆಗಳಾಗಿ, ಹಾರ್ಮೋನುಗಳಲ್ಲಿ ಏರುಪೇರಾಗಬಹುದು. ಅದರಿಂದ ಮೆದುಳಿನ ಪರಿಣಾಮ ಉಂಟಾಗಿ, ಏಕಾಗ್ರತೆ, ನಿರ್ಧರಿಸುವ ಸಾಮರ್ಥ್ಯ ಕುಂಠಿತವಾಗಿ, ಮರೆವು ಹೆಚ್ಚುತ್ತದೆ.

ದುಶ್ಚಟಗಳು: ಮುಖ್ಯವಾಗಿ ಮದ್ಯಪಾನದಿಂದ ಮೆದುಳಿನ ನೆನಪಿಟ್ಟುಕೊಳ್ಳುವ ಸಾಮರ್ಥ್ಯ ಕುಸಿಯುತ್ತದೆ. ಮದ್ಯವು ನೇರವಾಗಿ ಹಾಗೂ ಪರೋಕ್ಷವಾಗಿಯೂ ಮೆದುಳಿನ ಮೇಲೆ ಪರಿಣಾಮ ಉಂಟು ಮಾಡಿ ಮರೆಗುಳಿತನ ಕಾಣಿಸಿಕೊಳ್ಳುತ್ತದೆ.

ಆತಂಕ, ಖಿನ್ನತೆ ಆಗೂ ಇತರ ಮಾನಸಿಕ ಕಾಯಿಲೆಗಳು: ಆತಂಕ, ಖಿನ್ನತೆಗಳು ಸಾಮಾನ್ಯವಾದ ಮಾನಸಿಕ ಕಾಯಿಲೆಗಳು. ಈ ಕಾಯಿಲೆಗಳಿಂದ ಬಳಲುವವರಲ್ಲೂ ನೆನಪಿನ ಶಕ್ತಿಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಮಕ್ಕಳಲ್ಲಿ ಚಿತ್ತಚಂಚಲತೆಯಿಂದ (ADHD) ಮರೆಗುಳಿತನದಂತಹ ವರ್ತನೆ ಕಾಣಿಸಬಹುದು.

ಅನಾರೋಗ್ಯಕರ ಆಹಾರ ಮತು ಜೀವನಪದ್ಧತಿ: ಹಾಳು-ಮೂಳು ತಿನ್ನುವುದು, ಪೋಷಕಾಂಶವಿಲ್ಲದ ಆಹಾರಸೇವನೆ, ಬೊಜ್ಜು, ವ್ಯಾಯಾಮ ಇಲ್ಲದಿರುವುದು, ಚಟುವಟಿಕೆ ಇಲ್ಲದಿರುವುದು – ಇವೆಲ್ಲವೂ ಮರೆಗುಳಿತನಕ್ಕೆ ಆಹ್ವಾನ ನೀಡುತ್ತವೆ.

ಜೀವಸತ್ವ ಬಿ1, ಬಿ12, ಥೈರಾಯಿಡ್ ಗ್ರಂಥಿಯ ಸಮಸ್ಯೆಗಳಿಂದ ಮರೆಗುಳಿತನ ಉಂಟಾಗುತ್ತದೆ. ನಿದ್ರಾಮಾತ್ರೆಗಳ ವಿಪರೀತ ಹಾಗೂ ವೈದ್ಯರ ಸಲಹೆಗೂ ಮೀರಿದ ಬಳಕೆಯಿಂದಲೂ ನೆನಪಿನ ಶಕ್ತಿಯ ಸಮಸ್ಯೆಯಾಗುತ್ತದೆ.

ತಲೆಗೆ ಪೆಟ್ಟು, ಅಲ್ಝೈಮರ್ ಕಾಯಿಲೆ, ಪಾರ್ಶ್ವವಾಯು, ಪಾರ್ಕಿನ್ಸನ್ ಕಾಯಿಲೆ – ಇವು ಮರೆಗುಳಿತನಕ್ಕೆ ಗಂಭೀರವಾದ ಕಾರಣಗಳು. ಅತಿ ಕಡಿಮೆ ಸಮಯದಲ್ಲಿ ಹೆಚ್ಚಿನ ಮರೆಗುಳಿತನ, ಹಗಲುರಾತ್ರಿ ಗೊಂದಲ, ಜೋಲಿ ಹೋಗುವುದು, ಕೈನಡುಕ, ಭ್ರಾಂತು ಮುಂತಾದ ಚಿಹ್ನೆಗಳಿದ್ದರೆ ತಕ್ಷಣ ವೈದ್ಯರನ್ನು ಸಂಪರ್ಕಿಸಬೇಕು. ಮರೆಗುಳಿತನ ತಡೆಗಟ್ಟಲು ತೆಗೆದುಕೊಳ್ಳಬೇಕಾದ

ಕ್ರಮಗಳು

- ಆರೋಗ್ಯಕರ ಜೀವನಶೈಲಿ, ಆಹಾರಪದ್ಧತಿಯನ್ನು ಅಳವಡಿಸಿಕೊಳ್ಳಬೇಕು.
- ಒತ್ತಡಮುಕ್ತ ಜೀವನಶೈಲಿ ನಮ್ಮದಾಗಬೇಕು.
- ನಿಯಮಿತವಾಗಿ ಕಡಿಮೆ ಬೊಜ್ಜಿರುವ ಆಹಾರ, ಹಣ್ಣು ಮತ್ತು ನಾರಿನ ಪದಾರ್ಥಗಳನ್ನು ಹೆಚ್ಚು ಸೇವಿಸಬೇಕು.
- ನಿಯಮಿತವಾದ ನಿದ್ದೆ.
- ಓದು, ಪದಬಂಧ, ಸುಡೊಕು ಬಿಡಿಸುವುದು, ಪಜಲ್ ಬಿಡಿಸುವುದು, ಚಿತ್ರಕಲೆ ಮುಂತಾದ ಹವ್ಯಾಸಗಳ ರೂಢಿ.
- ನಿಯಮಿತವಾದ ದೈಹಿಕ ವ್ಯಾಯಾಮ, ಯೋಗ, ಪ್ರಾಣಾಯಾಮ.
- ದುಶ್ಚಟಗಳಿಂದ ದೂರವಿರುವುದು.



ವ್ಯಾಯಾಮಕ್ಕೂ ಬೇಕು ಶಿಸ್ತು

ಡಾ. ಸತ್ಯನಾರಾಯಣ ಭಟ್ ಪಿ.

ವ್ಯಾಯಾಮ ಎಂದರೇನು?

ದೇಹಕ್ಕೆ ಆಯಾಸ ಉಂಟುಮಾಡುವ ಪ್ರಕ್ರಿಯೆಯೇ ವ್ಯಾಯಾಮ. ನಡಿಗೆ, ಸೂರ್ಯನಮಸ್ಕಾರ, ಈಜು, ಸೈಕ್ಲಿಂಗ್, ಹೊರಾಂಗಣ ಕ್ರೀಡೆಗಳು, ಆಟೋಟಗಳಂಥ ದೇಹದಂಡನೆ ಅಥವಾ ಕಸರತ್ತುಗಳೆಲ್ಲವೂ ವ್ಯಾಯಾಮದ ಬಗೆಬಗೆಯ ಪ್ರಕಾರಗಳು. ದೇಹದಲ್ಲಿ ಬೆವರು ತರಿಸಲು ವ್ಯಾಯಾಮ ಅತ್ಯಗತ್ಯ.

ಪ್ರಯೋಜನಗಳು

ದೇಹದ ಪುಷ್ಟಿ, ಮಾಂಸಖಂಡಗಳ ದೃಢತೆ, ದೇಹದಲ್ಲಿ ಕಾಂತಿ, ಜಠರಾಗ್ನಿ (ಹಸಿವು) ಸುಸ್ಥಿತಿಯಲ್ಲಿಡುವುದು, ಆಲಸ್ಯದಿಂದ ಮುಕ್ತಿ, ಸುಸ್ಥಿರದೇಹ, ಹಗುರವೆನಿಸುವ ದೇಹ – ಇವು ವ್ಯಾಯಾಮದಿಂದ ಸಿದ್ಧವಾಗುತ್ತವೆ. ಕಶ್ಮಲಗಳು ದೇಹದಿಂದ ಸದಾಕಾಲ ಹೊರಬೀಳುವುದು ಅಗತ್ಯ; ವ್ಯಾಯಾಮ ಇದಕ್ಕೂ ನೆರವಾಗುತ್ತದೆ. ಕಷ್ಟದ ಕೆಲಸಗಳನ್ನು ನಿಭಾಯಿಸುವ ಸಾಮರ್ಥ್ಯ, ಆಯಾಸವನ್ನು ತಡೆದುಕೊಳ್ಳುವ ಕಸುವು, ಅತಿ ನೀರಡಿಕೆ, ವಿಪರೀತ ಸೆಕೆ, ವಿಪರೀತ ಚಳಿಯನ್ನು ತಡೆಯುವ ಸಾಮರ್ಥ್ಯಗಳೆಲ್ಲವೂ ವ್ಯಾಯಾಮ ಮಾಡುವುದರಿಂದ ಮೈಗೂಡುತ್ತವೆ. ಬೊಜ್ಜು ಕರಗಿಸಲು ವ್ಯಾಯಾಮಕ್ಕಿಂತಲೂ ಮಿಗಿಲಾದ ಸಾಧನ ಯಾವುದೂ ಇಲ್ಲ. ವ್ಯಾಯಾಮಿಗೆ ಶತ್ರುಭಯವೂ ಇರುವುದಿಲ್ಲ!

ನಿತ್ಯ ವ್ಯಾಯಾಮವನ್ನು ನೀವು ಮಾಡುವಿರಾ? ನಿಮ್ಮನ್ನು ಬೇಗನೆ ಆಯಾಸ ಕಾಡುವುದೇ ಇಲ್ಲ. ಮಾಂಸಖಂಡಗಳು ಸ್ಥಿರವಾಗಿಯೇ ಇರುತ್ತವೆ. ಮೈ ದಂಡಿಸುವ ಕಸರತ್ತು ಮಾಡಿದಿರಾ? ಅನಂತರ ಸೀಗೆಪುಡಿಯಿಂದ ಉಜ್ಜುವ 'ವಿದ್ವರ್ತನ' ಮಾಡುವಿರಾದರೆ ಕಾಯಿಲೆಗಳು ನಿಮ್ಮ ಹತ್ತಿರ ಸುಳಿಯವು. ಸಂಹಿತೆಗಳ ಒಟ್ಟು ಅಭಿಪ್ರಾಯ ಹೀಗಿದೆ: ವಯಸ್ಸು, ರೂಪಗಳಿಲ್ಲದವರಿಗೂ ವ್ಯಾಯಾಮದಿಂದ ಕಟ್ಟುಮಸ್ತುತನ ಕಟ್ಟಿಟ್ಟ ಬುತ್ತಿ. ವಾತ-ಪಿತ್ತ-ಕಫ ಈ ತ್ರಿದೋಷಗಳು ಸಹ ವ್ಯಾಯಾಮಶೀಲರಲ್ಲಿ ತಕರಾರಿಲ್ಲದೆ ಮಾಯವಾಗುವುದು ಖಂಡಿತ. ವ್ಯಾಯಾಮಕ್ಕೆ ಮೊದಲು ಜಿಡ್ಡಿನ ಪದಾರ್ಥಗಳನ್ನು ಹೆಚ್ಚಾಗಿ ಸೇವಿಸಬೇಕು. ಆದರೆ ಹೊಟ್ಟೆ ತುಂಬ ಉಂಡ ಕೂಡಲೇ ವ್ಯಾಯಾಮಕ್ಕೆ ತೊಡಗುವುದು ಸಲ್ಲದು. ಹೀಗಾಗಿ ಬೆಳಗು-ಬೈಗು ಸಮಯಗಳು ವ್ಯಾಯಾಮಕ್ಕೆ ಸೂಕ್ತ.

ಕಡುಬೇಸಿಗೆ ಮತ್ತು ಜಡಿಮಳೆಯ ದಿನಗಳಲ್ಲಿ ಕಠಿಣವಾದ ವ್ಯಾಯಾಮ ಸಲ್ಲದು; ಲಘುತರ ವ್ಯಾಯಾಮವಷ್ಟೆ ಸಾಕು. ಕಂಕುಳು ಮತ್ತು ಹಣೆಗಳಲ್ಲಿ ಬೆವರು ಜಿನುಗಿತೆ? ಆಗ ವ್ಯಾಯಾಮ ನಿಲ್ಲಿಸಲು ಸೂಚನೆ ಎಂಬ ಆಯುರ್ವೇದ ಸಂಹಿತಾಸೂತ್ರವನ್ನು ನೆನಪಿಡಿ.

ವ್ಯಾಯಾಮಕ್ಕೆ ಅನರ್ಹರು ಯಾರು?

ದೇಹ ಕ್ಷಯವಾಗುವ ಕ್ಷಯರೋಗ, ವಿಪರೀತ ಸುಸ್ತು, ಆಗಾಗ ತಲೆದೋರುವ ವಾಂತಿ, ದೇಹದ ವಿವಿಧೆಡೆ ರಕ್ತಸ್ರಾವವಾಗುವ ರಕ್ತಪಿತ್ತ ಕಾಯಿಲೆ, ತಲೆತಿರುಗು, ಇಂದ್ರಿಯಗಳ ಕ್ಷೀಣ ಪಟುತ್ವ (ಸೋಲುವಿಕೆ), ಕೆಮ್ಮು, ಉಬ್ಬಸ, ಆಗಾಗ ಕಾಣಿಸುವ ಎದೆನೋವು ಇದೆಯೇ? ಹಾಗಾದರೆ ಇಂತಹವರಿಗೆ ವ್ಯಾಯಾಮ ನಿಷೇಧ. ಏದುಬ್ಬಸ ಬರುವವರಿಗೆ, ಹೃದಯಗತಿ ಏರಿಳಿತ ಇರುವವರು ವ್ಯಾಯಾಮ ಮಾಡಬೇಡಿರೆಂದು ಚರಕಸಂಹಿತೆಯ ಸೊಲ್ಲಿದೆ.

ಹೆಚ್ಚು ವ್ಯಾಯಾಮದಿಂದ ಹಾನಿಯೇ?

ವಿತಿಯರಿತ ವ್ಯಾಯಾಮದಿಂದ ಲಾಭವಿರುವಂತೆಯೇ, ಹದ್ದುಮೀರಿದ ವ್ಯಾಯಾಮದಿಂದ ಹಾನಿಯೇ ಹೆಚ್ಚು. 'ಅರ್ಧ ಶಕ್ತ್ಯಾ ವ್ಯಾಯಾಮಂ ಕುರ್ವೀತ' ಎನ್ನುತ್ತದೆ ಆರ್ಯುವೇದದ ಮೂಲಸೂತ್ರ. ಎಂದರೆ, ನಿಮಗೆ ಮೂರು ಕಿಲೋಮೀಟರ್‌ನಷ್ಟು ಓಡುವ ಚೈತನ್ಯವಿದೆಯೇ? ಒಂದೂವರೆ ಕಿಲೋಮೀಟರ್‌ನಷ್ಟು ಮಾತ್ರವೇ ಓಡಿ. ಇದಕ್ಕೆ ಚರಕಮಹರ್ಷಿ ನೀಡುವ ದೃಷ್ಟಾಂತ – ಸಿಂಹ-ಆನೆಯ ನಡುವೆ ನಡೆಯುವ ಕದನ. ಬಲಿಷ್ಠ ಆನೆಯನ್ನು ಸಿಂಹವೇ ಕೊಂದುಬಿಡುತ್ತದೆ. ಹೀಗೆಯೇ ವ್ಯಾಯಾಮದಿಂದ ಅನೇಕಾನೇಕ ಶುಭಫಲಗಳಿವೆ. ಆದರೆ ಕ್ರಮವರಿತು ಮಾಡದ ವ್ಯಾಯಾಮದಿಂದ ಕ್ರಮೇಣ ರೋಗನಿರೋಧಕ ಶಕ್ತಿ ಕುಸಿಯುತ್ತದೆ. ಮಾತ್ರವಲ್ಲ, ರೋಗಗಳು ಎದುರಾಗುತ್ತ, ಮರಣವೂ ಸನ್ನಿಹಿತವಾಗುತ್ತದೆ. ಅದನ್ನೇ ಮತ್ತೆ ಮತ್ತೆ ಪುನರುಚ್ಚರಿಸುವ ಚರಕಮಹರ್ಷಿ ಹೇಳುವ ಮಾತು ಸಾರ್ವಕಾಲಿಕ ಸತ್ಯ. 'ಅರ್ಧ ಶಕ್ತ್ಯಾ ವ್ಯಾಯಾಮಂ ಕುರ್ವೀತ'; ಎಂದರೆ ದೇಹದ ಆರೋಗ್ಯ ಕಾಪಾಡಿಕೊಳ್ಳಬೇಕೆ? ನಿಮ್ಮ ಧಾರಣಾಶಕ್ತಿಯ ಅರ್ಧದಷ್ಟು ಮಾತ್ರ ವಿನಿಯೋಗಿಸಿರಿ ವ್ಯಾಯಾಮ ಮಾಡಿರಿ. ಉಳಿದ ಅರ್ಧ ಶಕ್ತಿಯನ್ನು ಕಾಪಾಡಿಕೊಂಡು ನಿರೋಗಿಗಳಾಗಿರಿ, ನೂರ್ಕಾಲ ಬಾಳಿರಿ.

ಶ್ರೀಕೃಷ್ಣದೇವರಾಯರ ದಿನಚರಿ

ವ್ಯಾಯಾಮದ ಮಹತ್ವ ತಿಳಿದಿದ್ದ ಶ್ರೀಕೃಷ್ಣದೇವರಾಯನು ಮುಂಜಾವಿನ ವ್ಯಾಯಾಮಪೂರ್ವದಲ್ಲಿ ತಾಜಾ ಎಳ್ಳೆಣ್ಣೆ ಕುಡಿಯುತ್ತಿದ್ದ. ಕುಸ್ತಿ, ಕುದುರೆ ಸವಾರಿ, ಕತ್ತಿವರಸೆಗಳು ಪ್ರಮುಖ ವ್ಯಾಯಾಮವಾಗಿದ್ದವು ಎಂಬ ಸಂಗತಿಯನ್ನು ಹದಿನಾರನೆಯ ಶತಮಾನದ ಪೋರ್ಚುಗೀಸ್ ಇತಿಹಾಸಜ್ಞ ಡೊಮಿಂಗೊ ಪಾಯಸ್ ವರದಿ ಮಾಡಿದ್ದಾನೆ. ಮೈಸೂರರಸರ ಪೈಕಿ ಕಂಠೀರವ ನರಸರಾಜ ಒಡೆಯರ್ ಮಾದರಿ ಉಲ್ಲೇಖಾರ್ಹ. ಎಪ್ಪತ್ತರ ದಶಕರ ಖ್ಯಾತ ಚಲನಚಿತ್ರ 'ರಣಧೀರ ಕಂಠೀರವ'; ಅದರ ನಿರ್ದೇಶಕ ಜಿ.ವಿ. ಅಯ್ಯರ್ ಸ್ವತಃ ಕುಸ್ತಿಪಟು. ಸ್ವಾಮಿ ವಿವೇಕಾನಂದರ ಸಿಂಹವಾಣಿಯಾದ 'ಸೌಂಡ್ ಮೈಂಡ್ ಇನ್ ಸೌಂಡ್ ಬಾಡಿ' (ದೇಹ ಸೌಷ್ಠವದಲ್ಲಿ ದೃಢ ಮನಸ್ಸು) ಎಂಬ ಸಂಗತಿಯನ್ನು ಅಕ್ಷರಶಃ ನಂಬಿದವರು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಕಾರ್ಬನ್ ಮತ್ತು ಅದರ ಸಂಯುಕ್ತಗಳು

ರಸಾಯನಶಾಸ್ತ್ರ

ಎಸ್ಸೆಸ್ಸೆಲ್ಸಿ

ಪ್ರಮುಖಾಂಶಗಳು

- ಕಾರ್ಬನ್ ಸಂಯುಕ್ತಗಳು ವಿದ್ಯುತ್‌ನ ದುರ್ಬಲ ವಾಹಕಗಳು. ಇವು ಕಡಿಮೆ ದ್ರವನಬಿಂದು ಮತ್ತು ಕುದಿಬಿಂದುಗಳನ್ನು ಹೊಂದಿವೆ.
- ಕಾರ್ಬನ್ ಟೆಟ್ರಾವೇಲೆನ್ಸಿ(4) ಧಾತುವಾಗಿದ್ದು, ಇತರ ಧಾತುಗಳೊಂದಿಗೆ ಸಹವೇಲೆನ್ಸಿಯ ಬಂಧಗಳನ್ನು ಉಂಟುಮಾಡುತ್ತದೆ.
- ಹೈಡ್ರೋಕಾರ್ಬನ್‌ಗಳ ಮೊದಲ ಸದಸ್ಯ ಮಿಥೇನ್(CH_4). ಇದನ್ನು ವ್ಯಾಪಕವಾಗಿ ಇಂಧನವಾಗಿ ಬಳಸಲಾಗುತ್ತದೆ. ಇದು ಜೈವಿಕ ಅನಿಲ ಮತ್ತು ಸಂಪೀಡಿತ ನೈಸರ್ಗಿಕ ಅನಿಲ (CNG) ಗಳ ಪ್ರಮುಖ ಘಟಕವಾಗಿದೆ.
- ಕಾರ್ಬನ್‌ನ ಎರಡು ಪ್ರಮುಖ ಗುಣಗಳೆಂದರೆ ಕೆಟನೀಕರಣ ಮತ್ತು ಟೆಟ್ರಾವೇಲೆನ್ಸಿ.
- ಕಾರ್ಬನ್ ಮತ್ತು ಹೈಡ್ರೋಜನ್‌ಗಳನ್ನು ಹೊಂದಿರುವ ಸಂಯುಕ್ತಗಳನ್ನು ಹೈಡ್ರೋಕಾರ್ಬನ್‌ಗಳು ಎನ್ನುವರು.

ಸಾಮಾನ್ಯ ಸೂತ್ರಗಳು

- ಆಲ್ಕೇನ್- C_nH_{2n+2} -ಆಲ್ಕೀನ್- C_nH_{2n-2}
- ಆಲ್ಕೈನ್- C_nH_{2n} -ಬೆಂಜೀನ್- C_nH_n

ಕ್ರಿಯಾಗುಂಪುಗಳು

ಕ್ರಿಯಾಗುಂಪು	ಅಂತ್ಯಪದ	ಉದಾಹರಣೆ
ಆಲ್ಕೋಹಾಲ್ -OH	ಓಲ್(ol)	ಪ್ರೋಪೇನಾಲ್
ಆಲ್ಡಿಹೈಡ್ -OH	ಆ್ಯಲ್(al)	ಪ್ರೋಪೇನ್ಯಾಲ್
ಕೀಟೋನ್ -CO	ಓನ್(one)	ಪ್ರೋಪೇನೋನ್
ಕಾರ್ಬಾಕ್ಸಿಲಿಕ್ ಆಮ್ಲ -COOH	ಓಯಿಕ್ ಆಮ್ಲ(oic acid)	ಪ್ರೋಪೇನೋಯಿಕ್ ಆಮ್ಲ

ಮಾದರಿ ಪ್ರಶ್ನೆ-ಉತ್ತರಗಳು

1.ಕೆಟನೀಕರಣ ಎಂದರೇನು?

ಕಾರ್ಬನ್‌ನ 3 ರೀತಿಯ ಜೋಡಣೆಗಳನ್ನು ಹೆಸರಿಸಿ. ಪ್ರತಿಯೊಂದಕ್ಕೂ ಒಂದೊಂದು ಉದಾಹರಣೆ ಕೊಡಿ.

-ಕಾರ್ಬನ್ ತನ್ನ ಇತರ ಪರಮಾಣುಗಳೊಂದಿಗೆ ಬಂಧಗಳನ್ನು ಏರ್ಪಡಿಸಿಕೊಂಡು ಸರಪಳಿ ರಚನೆಯನ್ನು ಉಂಟು ಮಾಡುವ ಅನನ್ಯ ಗುಣವನ್ನು ಕೆಟನೀಕರಣ ಎನ್ನುವರು.

ಇದರ ಮೂರು ಜೋಡಣೆಗಳು

- ನೇರ ಸರಪಳಿ. ಉದಾ|| ಬ್ಯೂಟೇನ್
- ಕವಲು ಸರಪಳಿ. ಉದಾ|| ಐಸೋಬ್ಯೂಟೇನ್
- ಉಂಗುರ ಸರಪಳಿ. ಉದಾ|| ಸೈಕ್ಲೋಬ್ಯೂಟೇನ್.

2.ಆಲ್ಕೇನ್, ಆಲ್ಕೀನ್ ಮತ್ತು ಆಲ್ಕೈನ್‌ಗಳಿಗಿರುವ ವ್ಯತ್ಯಾಸ ತಿಳಿಸಿ.

ಲಕ್ಷಣ	ಆಲ್ಕೇನ್	ಆಲ್ಕೀನ್	ಆಲ್ಕೈನ್
ಸಾಮಾನ್ಯ ಸೂತ್ರ	C_nH_{2n+2}	C_nH_{2n-2}	C_nH_{2n}
C-C ನಡುವಿನ ಬಂಧ	ಏಕ	ದ್ವಿ	ತ್ರಿ
ಕ್ರಿಯಾಶೀಲತೆ	ಕಡಿಮೆ	ಹೆಚ್ಚು	ಹೆಚ್ಚು
ಅಂತ್ಯಪದ	ಏನ್	ಈನ್	ಐನ್

3.ಪರ್ಯಾಪ್ತ ಮತ್ತು ಅಪರ್ಯಾಪ್ತ ಹೈಡ್ರೋಕಾರ್ಬನ್‌ಗಳಿಗಿರುವ ವ್ಯತ್ಯಾಸ ತಿಳಿಸಿ.

-ಪರ್ಯಾಪ್ತ ಹೈಡ್ರೋಕಾರ್ಬನ್

- C-C ನಡುವೆ ಒಂದು ಏಕಬಂಧ ಇರುತ್ತದೆ
- ಕಡಿಮೆ ಕ್ರಿಯಾಶೀಲ
- ಸ್ವಚ್ಛ ಜ್ವಾಲೆಯೊಂದಿಗೆ ಉರಿಯುತ್ತವೆ
- ಆದೇಶನ ಕ್ರಿಯೆಗೆ ಒಳಗಾಗುತ್ತವೆ.


-ಅಪರ್ಯಾಪ್ತ ಹೈಡ್ರೋಕಾರ್ಬನ್

- C-C ನಡುವೆ ಒಂದು ದ್ವಿ/ತ್ರಿ ಬಂಧ ಇರುತ್ತದೆ.
- ಹೆಚ್ಚು ಕ್ರಿಯಾಶೀಲ
- ಹಳದಿ ಜ್ವಾಲೆಯೊಂದಿಗೆ ಕಪ್ಪು ಬಣ್ಣದ ಹೊಗೆಯನ್ನು ಉಂಟುಮಾಡುತ್ತವೆ
- ಸಂಕಲನ ಕ್ರಿಯೆಗೆ ಒಳಗಾಗುತ್ತವೆ.

4.ರಚನಾ ಸಮಾಂಗಿಗಳು ಎಂದರೇನು? ಉದಾಹರಣೆ ಕೊಡಿ.

-ಒಂದೇ ಅಣುಸೂತ್ರ ಹೊಂದಿದ್ದು ಬೇರೆ ಬೇರೆ ರಚನಾಸೂತ್ರಗಳನ್ನು ಹೊಂದಿರುವುದು.

ಉದಾ|| ಬ್ಯೂಟೇನ್(C_4H_{10}) ಮತ್ತು ಐಸೋ-ಬ್ಯೂಟೇನ್ (C_4H_{10})



5.ಅನುರೂಪ ಶ್ರೇಣಿಗಳು ಎಂದರೇನು? ಉದಾಹರಣೆ ಕೊಡಿ.

-ಒಂದು ಸರಣಿಯ ಎರಡು ಅನುಕ್ರಮ ಹೈಡ್ರೋಕಾರ್ಬನ್‌ಗಳ ನಡುವಿನ ವ್ಯತ್ಯಾಸ CH_2 ಆಗಿರುವ ಸರಣಿ.

ಉದಾ||ಆಲ್ಕೇನ್ ಸರಣಿ: CH_4, C_2H_6, C_3H_8, C_4H_{10}

- ಆಲ್ಕೀನ್ ಸರಣಿ: C_2H_4, C_3H_6, C_4H_8, C_5H_{10}
- ಆಲ್ಕೈನ್ ಸರಣಿ: C_2H_2, C_3H_4, C_4H_6, C_5H_8


6.ಬ್ಯೂಟೆನೋನ್ ಕಾರ್ಬನ್ ಸಂಯುಕ್ತವನ್ನು ಹೆಸರಿಸುವ ವಿಧಾನವನ್ನು ಹೆಸರಿಸಿ.


- ಬ್ಯೂಟೆನೋನ್ ಎಂಬುದು 4 ಕಾರ್ಬನ್ ಪರಮಾಣುಗಳನ್ನು ಹೊಂದಿರುವ ಸಂಯುಕ್ತ. ಆದ್ದರಿಂದ ಅದರ ಹೆಸರು ಬ್ಯೂಟೇನ್ ಎಂದು ಪ್ರಾರಂಭವಾಗುತ್ತದೆ.
- ಬ್ಯೂಟೆನೋನ್ ಸಂಯುಕ್ತದಲ್ಲಿ ಕೀಟೋನ್ ಎಂಬ ಕ್ರಿಯಾಗುಂಪು ಇದೆ. ಆದ್ದರಿಂದ ಇದು ಓನ್(one) ಎಂಬ ಪದದಿಂದ ಕೊನೆಗೊಳ್ಳುತ್ತದೆ.
- ಕೀಟೋನ್ ಕ್ರಿಯಾಗುಂಪು ಓನ್(one) ಪದದಿಂದ ಪ್ರಾರಂಭವಾಗುತ್ತದೆ. ಇದು ಆಂಗ್ಲಭಾಷೆಯ a,e,i,o,u.. ಸ್ವರಾಕ್ಷರ(o)ದಿಂದ ಪ್ರಾರಂಭವಾಗುವುದರಿಂದ ಮೊದಲ ಪದ Butane ನ ಅಂತ್ಯದಲ್ಲಿರುವ e ಸ್ವರವನ್ನು ತೆಗೆದು ಕ್ರಿಯಾಗುಂಪು ಸೇರಿಸಬೇಕು.

Butane – e = Butan + one


= Butanone

7.ಪ್ರಮುಖ ಚುಕ್ಕಿ ಸೂತ್ರಗಳು.





8. ಪ್ರಮುಖ ಅಣುಸೂತ್ರ ಮತ್ತು ರಚನಾ ಸೂತ್ರಗಳು.



(ಪರಿಕಲ್ಪನೆಗಳಾದ 4.4, 4.4 & 4.5 ಈ ವಿಷಯಗಳಿಗೆ ಸಂಬಂದಿಸಿದಂತೆ ಪುಟಸಂಖ್ಯೆ 15 ರಿಂದ 25 ರವರೆಗಿನ ಪಠ್ಯ ಭಾಗವನ್ನು ಈ ವರ್ಷ ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ).

ಎ. ಬಾಲರಾಜು. ಎಂ.ಎಸ್ಸಿ., ಎಂ.ಇಡಿ.
ವಿಜ್ಞಾನ ಶಿಕ್ಷಕರು, ಚಿಕ್ಕಬಳ್ಳಾಪುರ

ಮಾದರಿ ಪ್ರಶ್ನೋತ್ತರ

ಹ್ಯಾಲೋ ಆಲ್ಕೇನ್‌ಗಳು

ರಸಾಯನಶಾಸ್ತ್ರ

ಪಿಯುಸಿ

33) ಯಾವ ಕ್ರಿಯೆಯನ್ನು 'ಫಿಂಕಲ್‌ಸ್ಟೀನ್ ಕ್ರಿಯೆ' ಎನ್ನುವರು?

ಉತ್ತರ: ಕೆಲವೊಮ್ಮೆ ಆಲ್ಕೈಲ್ ಕ್ಲೋರೈಡ್/ಬ್ರೋಮೈಡ್ ಅನ್ನು ಶುಷ್ಕ ಅಸಿಟೋನ್‌ನಲ್ಲಿ NaIನೊಂದಿಗೆ ಕ್ರಿಯೆ ನಡೆಸಿ ಆಲ್ಕೈಲ್ ಅಯೋಡೈಡ್‌ಗಳನ್ನು ತಯಾರಿಸುತ್ತದೆ. ಈ ಕ್ರಿಯೆಯನ್ನು 'ಫಿಂಕಲ್‌ಸ್ಟೀನ್ ಕ್ರಿಯೆ' ಎನ್ನುವರು.

34) ಯಾವ ರಾಸಾಯನಿಕ ಕ್ರಿಯೆಯನ್ನು 'ಸ್ವಾರ್ಟ್ಸ್' ಕ್ರಿಯ ಎನ್ನುವರು?

ಉತ್ತರ:- ಆಲ್ಕೈಕ್ ಕ್ಲೋರೈಡ್ / ಬ್ರೋಮೈಡ್‌ಗಳನ್ನು ಲೋಹೀಯ ಫ್ಲೋರೈಡ್‌ಗಳಾದAgF.HgF_2 CoF_2 ಅಥವಾ SbF_3 ಸಾನಿಧ್ಯದಲ್ಲಿ ಕಾಯಿಸಿ, ಆಲ್ಕೈಲ್ ಫ್ಲೋರೈಡ್‌ಗಳನ್ನು ಉತ್ತಮವಾಗಿ ಸಂಶ್ಲೇಷಿಸಬಹುದು. ಈ ರಾಸಾಯನಿಕ ಕ್ರಿಯೆಯನ್ನು 'ಸ್ವಾರ್ಟ್ಸ್' ಕ್ರಿಯ ಎನ್ನುವರು.

35) ಹ್ಯಾಲೋ ಆಲ್ಕೇನ್‌ಗಳು ನೀರಿನಲ್ಲಿ ಅತ್ಯಂತ ಅಲ್ಪ ಪ್ರಮಾಣದಲ್ಲಿ ಕರಗುತ್ತವೆ. ಏಕೆ?

ಉತ್ತರ:- ಹ್ಯಾಲೋ ಆಲ್ಕೇನ್‌ಗಳು ನೀರಿನಲ್ಲಿ ಅತ್ಯಂತ ಅಲ್ಪ ಪ್ರಮಾಣದಲ್ಲಿ ಕರಗುತ್ತವೆ. ಹ್ಯಾಲೋ ಆಲ್ಕೇನ್‌ಗಳನ್ನು ನೀರಿನಲ್ಲಿ ಕರಗುವಂತೆ ಮಾಡಲು ಹ್ಯಾಲೋ ಆಲ್ಕೇನ್ ಅಣುಗಳ ನಡುವಿನ ಆಕರ್ಷಣಾ ಬಲವನ್ನು ತಡೆದು ಮತ್ತು ನೀರಿನ ಅಣುವಿನಲ್ಲಿರುವ ಹೈಡ್ರೋಜನ್‌ಬಂಧವನ್ನು ಒಡೆಯಬೇಕಾಗುತ್ತದೆ. ಇದಕ್ಕೆ ಶಕ್ತಿಯ ಅಗತ್ಯವಿರುತ್ತದೆ. ಹ್ಯಾಲೋಆಲ್ಕೇನ್ ಮತ್ತು ನೀರಿನ ಅಣುವಿನ ನಡುವೆ ಹೊಸ ಆಕರ್ಷಣೆ ಉಂಟಾದಂತೆ ಕಡಿಮೆ ಶಕ್ತಿ ಬಿಡುಗಡೆಯಾಗುವುದು. ಈ ಬಂಧವು ನೀರಿನಲ್ಲಿರುವ ಮೂಲ ಹೈಡ್ರೋಜನ್ ಬಂಧದಷ್ಟು ಪ್ರಬಲವಾಗಿಲ್ಲ. ಹಾಗಾಗಿ ನೀರಿನಲ್ಲಿ ಹ್ಯಾಲೋ ಆಲ್ಕೇನ್‌ಗಳ ವಿಲೀನತೆ ಅತ್ಯಂತ ಕಡಿಮೆ.

36) ಹ್ಯಾಲೋ ಆಲ್ಕೇನ್‌ಗಳು ಯಾವ ದ್ರಾವಕದಲ್ಲಿ ಕರಗುತ್ತದೆ. ಏಕೆ?

ಉತ್ತರ:- ಹ್ಯಾಲೋ ಆಲ್ಕೇನ್‌ಗಳು ಸಾವಯವ ದ್ರಾವಕದಲ್ಲಿ ಕರಗುತ್ತದೆ. ಏಕೆಂದರೆ ಹ್ಯಾಲೋಲ್ಕೇನ್ ಮತ್ತು ಸಾವಯವ ದ್ರಾವಕಗಳ ನಡುವಿನ ಹೊಸ ಅಂತರಾಣ್ವಿಕ ಆಕರ್ಷಣಾ ಬಲವು ಸರಿ ಸುಮಾರು ಒಂದೇ ಆಗಿರುವದರಿಂದ, ಹ್ಯಾಲೋಆಲ್ಕೇನ್ ಮತ್ತು ದ್ರಾವಕದ ಅಣುಗಳನ್ನು ಸುಲಭವಾಗಿ ಒಡೆಯಬಹುದು

37) ಯಾವುದಕ್ಕೆ ಅಸಮ್ಮಿತಿ ಕಾರ್ಬನ್ ಅಥವಾ ಸ್ಟಿರಿಯೋ ಕೇಂದ್ರ ಎನ್ನುವರು?

ಉತ್ತರ:- ಕೇಂದ್ರ ಚತುಮುರ್ಖೀಯ ಕಾರ್ಬನ್ ಪರಮಾಣುವಿನ ಸುತ್ತ ನಾಲ್ಕು ವಿಭಿನ್ನ ಗುಂಪುಗಳು (ವೆಲೆನ್ಸಿ) ಜೋಡಣೆಯಾಗಿದ್ದರೆ, ಅಂತಹ ಕಾರ್ಬನ್ ಅನ್ನು ಅಸಮ್ಮಿತಿ ಕಾರ್ಬನ್ ಅಥವಾ ಸ್ಟಿರಿಯೋ ಕೇಂದ್ರ ಎನ್ನುವರು. ಇದರ ಪರಿಣಾಮವಾಗಿ ಅಣುವು ಸಮತಲವನ್ನು ಕಳೆದುಕೊಂಡು ಅಸಮ್ಮಿತಿ ಅಣುವಾಗಿ ಸಾವಯವ ಸಂಯುಕ್ತಗಳ ದ್ಯುತಿಪಟುತ್ವಕ್ಕೆ ಕಾರಣವಾಗುತ್ತದೆ.

38) ಯಾವುದನ್ನು 'ಸಾವಯವ ಲೋಹೀಯ ಸಂಯುಕ್ತಗಳು' ಎನ್ನುವರು?

ಉತ್ತರ:- ಬಹುತೇಕ ಸಾವಯವ ಕ್ಲೋರೈಡ್, ಬ್ರೋಮೈಡ್ ಮತ್ತು ಅಯೋಡೈಡ್‌ಗಳು ಕೆಲವು ಲೋಹಗಳೊಂದಿಗೆ ವರ್ತಿಸಿ ಕಾರ್ಬನ್-ಲೋಹೀಯ ಬಂಧಗಳಿರುವ ಸಂಯುಕ್ತಗಳನ್ನು ಉಂಟುಮಾಡುತ್ತವೆ. ಅವುಗಳನ್ನು 'ಸಾವಯವ ಲೋಹೀಯ ಸಂಯುಕ್ತಗಳು' ಎನ್ನುವರು.

ಹೆಚ್ಚಿನ ಮಾಹಿತಿ

ಸಾವಯವ ಲೋಹೀಯ ಸಂಯುಕ್ತಗಳ ಪ್ರಮುಖ ವಿಧವಾದ ಆಲ್ಕೈಲ್ ಮೆಗ್ನೇಷಿಯಂ ಹ್ಯಾಲೈಡ್ (RMgX) ಅನ್ನು 1900ರಲ್ಲಿ ವಿಕ್ಟರ್ ಗ್ರಿಗ್ನಾರ್ಡ್ ಕಂಡು ಹಿಡಿದರು. ಅವುಗಳನ್ನು ಗ್ರಿಗ್ನಾರ್ಡ್ ಕಾರಕಗಳು ಎಂದು ಹೆಸರಿಸುತ್ತಾರೆ. ಈ ಕಾರಕಗಳನ್ನು ಹ್ಯಾಲೋ ಆಲ್ಕೇನ್‌ಗಳು ಮೆಗ್ನೇಷಿಯಂ ಲೋಹದೊಂದಿಗೆ ಶುಷ್ಕ ಈಥರ್‌ನಲ್ಲಿ ವರ್ತಿಸಿ ಪಡೆಯುತ್ತಾರೆ.

38) ಯಾವ ರಾಸಾಯನಿಕ ಕ್ರಿಯೆಯನ್ನು ವುರ್ಟ್ಸ್ (wurtz) ಕ್ರಿಯೆ ಎನ್ನುವರು?

ಉತ್ತರ:-ಆಲ್ಕೈಲ್ ಹ್ಯಾಲೈಡ್‌ಗಳು ಶುಷ್ಕ ಈಥರ್‌ನಲ್ಲಿ ಸೋಡಿಯಂನೊಂದಿಗೆ ವರ್ತಿಸಿ, ಹ್ಯಾಲೈಡ್‌ಗಳಲ್ಲಿರುವ ಎರಡರಷ್ಟು ಸಂಖ್ಯೆಯ ಕಾರ್ಬನ್ ಪರಮಾಣುಗಳುಳ್ಳ ಹೈಡ್ರೋಕಾರ್ಬನ್‌ಗಳನ್ನು ಉಂಟುಮಾಡುತ್ತದೆ. ಈ ರಾಸಾಯನಿಕ ಕ್ರಿಯೆಯನ್ನು ವುರ್ಟ್ಸ್ (wurtz) ಕ್ರಿಯೆ ಎನ್ನುವರು.

39) ವುರ್ಟ್ಸ ಫಿಟ್ಟಿಗ್ ರಾಸಾಯನಿಕ ಕ್ರಿಯೆ ಬಗ್ಗೆ ಬರೆಯಿರಿ

ಉತ್ತರ:- ಆಲ್ಕೈಲ್ ಮತ್ತು ಆರೈಲ್ ಹ್ಯಾಲೈಡುಗಳ ಒಂದು ಮಿಶ್ರಣವನ್ನು ಶುಷ್ಕ ಈಥರ್‌ನಲ್ಲಿ ಸೋಡಿಯಂನೊAದಿಗೆ ವರ್ತಿಸಿದಾಗ ಆಲ್ಕೈಲ್ ಆರೀನ್‌ಗಳನ್ನು ಉಂಟು ಮಾಡುತ್ತದೆ. ಇದನ್ನು ವುರ್ಟ್ಸ ಫಿಟ್ಟಿಗ್ ಕ್ರಿಯೆ ಎನ್ನುವರು.

40) ಯಾವುದನ್ನು 'ಬಹು ಹ್ಯಾಲೋಜನ್ ಸಂಯುಕ್ತಗಳು' ಎನ್ನುವರು?

ಉತ್ತರ:- ಒಂದಕ್ಕಿಂತ ಹೆಚ್ಚು ಹ್ಯಾಲೋಜನ್ ಪರಮಾಣುಗಳನ್ನು ಹೊಂದಿರುವ ಕಾರ್ಬನ್ ಸಂಯುಕ್ತಗಳನ್ನು 'ಬಹು ಹ್ಯಾಲೋಜನ್ ಸಂಯುಕ್ತಗಳು' ಎನ್ನುವರು ಇವುಗಳಲ್ಲಿ ಹೆಚ್ಚಿನವು ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಉಪಯುಕ್ತವಾಗಿವೆ.

41) ಡೈಕ್ಲೋರೋ ಮಿಥೇನ್ (ಮಿಥಲೀನ್ ಕ್ಲೋರೈಡ್) ಎಲ್ಲೆಲ್ಲಿ ಬಳಸುತ್ತಾರೆ?

ಉತ್ತರ:- ಬಣ್ಣವನ್ನು ತೆಗೆಯಲು ವ್ಯಾಪಕವಾಗಿ ಡೈಕ್ಲೋರೋ ಮಿಥೇನ್ ಅನ್ನು ದ್ರಾವಕವಾಗಿ ಉಪಯೋಗಿಸುತ್ತಾರೆ. ಏರೋಸೋಲ್‌ಗಳಲ್ಲಿ ನೋದನಾಕಾರಿಯಾಗಿ, ಡ್ರಗ್ಸ್ ತಯಾರಿಕೆಯಲ್ಲಿ ಪ್ರಕ್ರಿಯಾ ದ್ರಾವಕವಾಗಿ ಉಪಯೊಗಿಸುತ್ತಾರೆ. ಇದನ್ನು ಲೋಹಗಳನ್ನು ಸ್ವಚ್ಛಗೊಳಿಸುವ ದ್ರಾವಕವಾಗಿ ಬಳಸುತ್ತಾರೆ.

ನಿಮಗಿದು ಗೊತ್ತಿರಲಿ

- ರಸಾಯನಶಾಸ್ತ್ರದ ಮೊದಲ ನೊಬೆಲ್ ಪಾರಿತೋಷಕವನ್ನು 1901ರಲ್ಲಿ ದ್ರಾವಣದ ಕುರಿತು ಮಾಡಿದ ಸಂಶೋಧನೆಗೆ ಜಕೋಬಸ್ ಹೆಂಡ್ರಿಯಸ್ ವಾಂಟ್ ಹಾಫ್ (1852-1911) ನೀಡಲಾಯಿತು.

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು



ಸುಭಾಷಿತ

ಅನ್ನದ ಆಧಾರದ ಮೇಲೆ ಪ್ರಾಣ, ಪ್ರಾಣದ ಆಧಾರದ ಮೇಲೆ ಜ್ಞಾನ, ಅನ್ನ–ಪ್ರಾಣ–ಜ್ಞಾನಗಳ ಮೇಲೆ ವಿಜ್ಞಾನ; ಇದರಿಂದ ಆನಂದ.

–ಶಾಂತವೇರಿ ಗೋಪಾಲಗೌಡ

ಪಾತಾಳಕ್ಕೆ ಕುಸಿದ ಕಾಂಗ್ರೆಸ್ ಪರ್ಯಾಯದ ಹುಡುಕಾಟ ಅನಿವಾರ್ಯ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುವ ಪ್ರಬಲ ವಿರೋಧ ಪಕ್ಷವು ಆಡಳಿತ ಪಕ್ಷದಷ್ಟೇ ಮುಖ್ಯ. ವಿರೋಧ ಪಕ್ಷ ಪ್ರಬಲವಾಗಿದ್ದಾಗ ಆಡಳಿತ ಪಕ್ಷವು ಸರ್ವಾಧಿಕಾರಿ ಆಗದಂತೆ ತಡೆಯಬಹುದು. ಆದರೆ, ಭಾರತದಲ್ಲಿ ಈಗ ಅತಿ ಪ್ರಬಲವಾದ ಆಡಳಿತ ಪಕ್ಷ ಮತ್ತು ಅತಿ ದುರ್ಬಲವಾದ ವಿರೋಧ ಪಕ್ಷ ಇದೆ. ಇಂತಹ ಸ್ಥಿತಿಯು ಪ್ರಜಾಪ್ರಭುತ್ವವನ್ನು ಅತ್ಯಂತ ಅಪಾಯದ ಸ್ಥಿತಿಗೆ ತಳ್ಳಬಹುದು. ಅತಿ ದೀರ್ಘಕಾಲ ದೇಶವನ್ನು ಆಳಿರುವ ಕಾಂಗ್ರೆಸ್ ಪಕ್ಷಕ್ಕೆ ಲೋಕಸಭೆಯಲ್ಲಿ ಈಗ ಅಧಿಕೃತ ವಿರೋಧ ಪಕ್ಷದ ಸ್ಥಾನವನ್ನು ಪಡೆಯುವಷ್ಟು ಸದಸ್ಯ ಬಲವೂ ಇಲ್ಲ. ಸೋಲಿನ ಸುಳಿಯಲ್ಲಿ ಸುತ್ತುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಐದು ರಾಜ್ಯಗಳಿಗೆ ಇತ್ತೀಚೆಗೆ ನಡೆದ ವಿಧಾನಸಭೆ ಚುನಾವಣೆಯ ಫಲಿತಾಂಶವು ಬಹುದೊಡ್ಡ ಪ್ರಹಾರ. ಸುಮಾರು 25 ಕೋಟಿ ಜನಸಂಖ್ಯೆ ಇರುವ, 80 ಲೋಕಸಭಾ ಕ್ಷೇತ್ರಗಳನ್ನು ಹೊಂದಿರುವ ಉತ್ತರಪ್ರದೇಶದಲ್ಲಿ ಕಾಂಗ್ರೆಸ್ ನಗಣ್ಯವಾಗಿದೆ. 403 ವಿಧಾನಸಭಾ ಕ್ಷೇತ್ರಗಳನ್ನು ಹೊಂದಿರುವ ಆ ರಾಜ್ಯದಲ್ಲಿ ಕಾಂಗ್ರೆಸ್ ಗೆಲ್ಲಲು ಸಾಧ್ಯವಾಗಿರುವುದು ಎರಡು ಕ್ಷೇತ್ರಗಳನ್ನು ಮಾತ್ರ. ಪಂಜಾಬ್‌ನಲ್ಲಿ ಪಕ್ಷವು ಅತಿ ಹೀನಾಯವಾಗಿ ಅಧಿಕಾರ ಕಳೆದುಕೊಂಡಿತು. ಗೋವಾ, ಉತ್ತರಾಖಂಡ ಮತ್ತು ಮಣಿಪುರ ರಾಜ್ಯಗಳಲ್ಲಿ ಗೆಲ್ಲುವ ಅವಕಾಶಗಳನ್ನು ಕೈಚೆಲ್ಲಿತು. 40 ಲೋಕಸಭಾ ಕ್ಷೇತ್ರಗಳನ್ನು ಹೊಂದಿರುವ ಪಶ್ಚಿಮ ಬಂಗಾಳ ಸೇರಿದಂತೆ ಕೆಲವು ರಾಜ್ಯಗಳ ವಿಧಾನಸಭೆಯಲ್ಲಿ ಕಾಂಗ್ರೆಸ್‌ಗೆ ಪ್ರಾತಿನಿಧ್ಯವೇ ಇಲ್ಲ. ಮಧ್ಯಪ್ರದೇಶ, ಕರ್ನಾಟಕದಲ್ಲಿ ಇದ್ದ ಸರ್ಕಾರವನ್ನು ಬಿಜೆಪಿ ಉರುಳಿಸಿದಾಗ ಕಾಂಗ್ರೆಸ್ ಅಸಹಾಯಕವಾಗಿತ್ತು. ಜ್ಯೋತಿರಾದಿತ್ಯ ಸಿಂಧಿಯಾ ಅವರಂತಹ ಜನಬೆಂಬಲ ಇರುವ ನಾಯಕರು, ಜಿತಿನ್ ಪ್ರಸಾದ ಅವರಂತಹ ಸಮುದಾಯದ ನಾಯಕರು ಪಕ್ಷ ತೊರೆದಾಗಲೂ ಕಾಂಗ್ರೆಸ್ ನಾಯಕತ್ವವು ಅಡ್ಡಗೋಡೆಯಲ್ಲೇ ಇತ್ತು.



ಸೋನಿಯಾ ಗಾಂಧಿ ರಾಜೀನಾಮೆ ಕೊಡಲು ಮುಂದಾದರೂ ಸಿಡಬ್ಲ್ಯುಸಿ ಅದನ್ನು ತಿರಸ್ಕರಿಸಿದೆ. ಯಥಾಸ್ಥಿತಿ ಮುಂದುವರಿಯಲಿದೆ ಎಂಬುದಕ್ಕೆ ಇದಕ್ಕಿಂತ ದೊಡ್ಡ ಪುರಾವೆ ಬೇಕಿಲ್ಲ

ಪ್ರಭಾವ, ಜನಬೆಂಬಲದಲ್ಲಿ ಹಿಂದೆಂದೂ ಇಲ್ಲದ ರೀತಿಯಲ್ಲಿ ಕಾಂಗ್ರೆಸ್ ಪಕ್ಷ ಪಾತಾಳಕ್ಕೆ ಕುಸಿದಿದೆ. ಪ್ರತೀ ಚುನಾವಣೆಯಲ್ಲಿ ಸೋತಾಗಲೂ ಕಾಂಗ್ರೆಸ್ ಪಕ್ಷದೊಳಗೆ ಮತ್ತು ಹೊರಗೆ ಕೇಳಿಬರುವ ಕೂಗು ಒಂದೇ– ಪಕ್ಷದ ನಾಯಕತ್ವ ಬದಲಾಗಬೇಕು. ನೆಹರೂ– ಗಾಂಧಿ ಕುಟುಂಬದ ನಾಯಕತ್ವವು ಪಕ್ಷಕ್ಕೆ ಒಂದು ರೀತಿಯಲ್ಲಿ ಹೊರೆಯಾಗಿರುವುದು ಹೌದು. ಬಿಜೆಪಿಗೆ ಈ ಕುಟುಂಬವು ಸುಲಭದ ಗುರಿ. ಈ ದೇಶದ ಎಲ್ಲ ಸಮಸ್ಯೆಗಳಿಗೆ ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರಿಂದ ರಾಹುಲ್ ಗಾಂಧಿವರೆಗಿನ ಕಾಂಗ್ರೆಸ್ ನಾಯಕರೇ ಕಾರಣ ಎಂದು ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಬಿಜೆಪಿಯ ಹಲವು ಮುಖಂಡರು ಹೇಳುತ್ತಲೇ ಬಂದಿದ್ದಾರೆ. ಕಾಂಗ್ರೆಸ್ ನಾಯಕತ್ವಕ್ಕೆ ನೆಹರೂ–ಗಾಂಧಿ ಕುಟುಂಬದ ಹೊರಗಿನವರು ಬಂದರೆ ಈ ಆಪಾದನೆಯಿಂದ ತಪ್ಪಿಸಿಕೊಳ್ಳುವ ಸಾಧ್ಯತೆ ಇದೆ. ಆದರೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ವಾದ್ರಾ ಅವರಿಗಿಂತ ಹೆಚ್ಚು ಜನಪ್ರಿಯತೆ ಇರುವ ನಾಯಕರು ಕಾಂಗ್ರೆಸ್ ಪಕ್ಷದಲ್ಲಿ ಇದ್ದಾರೆಯೇ? ಇದು ಕಾಂಗ್ರೆಸ್‌ನ ಮುಖ್ಯ ದ್ವಂದ್ವಗಳಲ್ಲಿ ಒಂದು. ರಾಜೀವ್ ಗಾಂಧಿ ಹತ್ಯೆಯಾದ ಬಳಿಕ 1991ರಿಂದ 1997ರವರೆಗೆ ಕಾಂಗ್ರೆಸ್ ಪಕ್ಷದ ನಾಯಕತ್ವವು ನೆಹರೂ– ಗಾಂಧಿ ಕುಟುಂಬದ ಕೈಯಲ್ಲಿ ಇರಲಿಲ್ಲ. 1996ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಹಿನ್ನಡೆಯಾದ ಬಳಿಕ ಕಾಂಗ್ರೆಸ್‌ನ ಒಂದು ವರ್ಗವು ಅಕ್ಷರಶಃ ಸೋನಿಯಾ ಅವರನ್ನು ಪಕ್ಷಕ್ಕೆ ಸೆಳೆದುಕೊಂಡು ನಾಯಕತ್ವವನ್ನು ಅವರಿಗೆ ವಹಿಸಿದ್ದು ಈಗ ಇತಿಹಾಸ. ಐದು ರಾಜ್ಯಗಳ ಚುನಾವಣಾ ಸೋಲಿನ ಬಳಿಕವೂ ನಾಯಕತ್ವದ ಪ್ರಶ್ನೆ ಮುನ್ನೆಲೆಗೆ ಬಂದಿದೆ. ಎಂದಿನಂತೆ, ಕಾಂಗ್ರೆಸ್ ಕಾರ್ಯಕಾರಿಣಿ (ಸಿಡಬ್ಲ್ಯುಸಿ) ಸಭೆ ನಡೆದಿದೆ. ಸೋನಿಯಾ ರಾಜೀನಾಮೆ ಕೊಡಲು ಮುಂದಾದರೂ ಸಿಡಬ್ಲ್ಯುಸಿ ಅದನ್ನು ತಿರಸ್ಕರಿಸಿದೆ. ಯಥಾಸ್ಥಿತಿ ಮುಂದುವರಿಯಲಿದೆ ಎಂಬುದಕ್ಕೆ ಇದಕ್ಕಿಂತ ದೊಡ್ಡ ಪುರಾವೆ ಬೇಕಿಲ್ಲ.

ಕಾಂಗ್ರೆಸ್ ಪಕ್ಷದ ಈಗಿನ ಸ್ಥಿತಿಗೆ ನೆಹರೂ– ಗಾಂಧಿ ಕುಟುಂಬ ಮಾತ್ರ ಕಾರಣ ಎಂದು ಹೇಳಲಾಗದು. ಈ ಕುಟುಂಬದ ಸುತ್ತ ಗಿರಕಿ ಹೊಡೆಯುವ ಭಟ್ಟಂಗಿ ಮುಖಂಡರೂ ಕಾರಣ. ನೆಲವಾಸ್ತವ ಏನು ಎಂಬುದು ಆ ಕುಟುಂಬಕ್ಕೆ ತಿಳಿಯದಂತೆ ಈ ಮುಖಂಡರು ನೋಡಿಕೊಂಡಿದ್ದಾರೆ. ಇಂತಹ ಬಹುತೇಕ ಮುಖಂಡರು ಜನರ ಜತೆಗೆ ಯಾವ ಸಂಬಂಧವನ್ನೂ ಹೊಂದಿರುವುದಿಲ್ಲ. ಕಾಂಗ್ರೆಸ್‌ನ ನಿರ್ಧಾರಗಳನ್ನು ಕೈಗೊಳ್ಳುವ ಪ್ರಮುಖರಲ್ಲಿ ಹೆಚ್ಚಿನವರಿಗೆ ಚುನಾವಣೆಗೆ ನಿಲ್ಲುವ ಉಮೇದು ಕೂಡ ಇಲ್ಲ. ಇದು ಪಕ್ಷದಲ್ಲಿರುವ ಪ್ರಹಸನಗಳಲ್ಲೊಂದು. ಗೆಲ್ಲಬೇಕು, ಅಧಿಕಾರ ಹಿಡಿಯಬೇಕು ಎಂಬ ಹುಮ್ಮಸ್ಸು ಪಕ್ಷದ ಕಾರ್ಯಕರ್ತರಲ್ಲಿ ಇಲ್ಲ. ರಾಜ್ಯಗಳಲ್ಲಿ ಗೆದ್ದರೂ ಶಾಸಕರನ್ನು ಹಿಡಿದಿಟ್ಟುಕೊಂಡು ಸರ್ಕಾರ ಉಳಿಸಿಕೊಳ್ಳಬೇಕು ಎಂಬ ಛಲವೂ ಇಲ್ಲ. ಗೆಲ್ಲುವುದಕ್ಕೆ ಬೇಕಿರುವ ಪಕ್ಷಕ್ಕೆ ಮತದಾರ ಮತ ಹಾಕುವುದಾದರೂ ಏಕೆ? ಬಿಜೆಪಿಯ ನಂತರ ಕಾಂಗ್ರೆಸ್ ಈ ದೇಶದ ಅತ್ಯಂತ ದೊಡ್ಡ ಪಕ್ಷ ಎಂಬುದು ವಾಸ್ತವ. ರಾಷ್ಟ್ರಮಟ್ಟದಲ್ಲಿ ಶೇ 20ರಷ್ಟು ಮತ ಗಳಿಕೆಯೂ ಇದೆ. ಆದರೆ, ಸತತ ಸೋಲಿನ ಹೊಡೆತ ಪಕ್ಷವನ್ನು ಕುಗ್ಗಿಸಿದೆ. ಭೂತ ಕಾಲದ ಹೊರೆ, ವರ್ತಮಾನದ ಕುಸಿತವು ಕಾಂಗ್ರೆಸ್ ಪಕ್ಷದ ಭವಿಷ್ಯವನ್ನು ಮಂಕಾಗಿಸಿವೆ. ಮತದಾರರ ಮನಗೆಲ್ಲುವ ಚಾಕಚಕ್ಯತೆ ಕಾಣಿಸುತ್ತಿಲ್ಲ. ಒಳಜಗಳಕ್ಕೆ ಪರ್ಯಾಯ ಪದವೇ ಕಾಂಗ್ರೆಸ್ ಎಂಬ ಸ್ಥಿತಿಯೂ ಇದೆ. ಇಂತಹ ಸ್ಥಿತಿಯಲ್ಲಿ ಪ್ರಬಲ ವಿರೋಧ ಪಕ್ಷವಾಗಿ ಕಾಂಗ್ರೆಸ್ ಅನ್ನು ದೇಶವು ನೆಚ್ಚಿಕೊಳ್ಳಲು ಸಾಧ್ಯವಿಲ್ಲ. ಪರ್ಯಾಯವೊಂದರ ಸೃಷ್ಟಿ ಅನಿವಾರ್ಯವೇ ಆಗಿದೆ.

ವಂಚನೆಯ ಜಾಲಗಳಿಂದ ಪಾರಾಗಲು ಗ್ರಾಹಕರಿಗೆ ಬೇಕು ಆರ್ಥಿಕ ಸಾಕ್ಷರತೆ

ಡಿಜಿಟಲ್ ಹಣಕಾಸು: ಇಲ್ಲ ರಕ್ಷಣೆ



ವಿಶ್ಲೇಷಣೆ

ವೈ.ಜಿ.ಮುರಳೀಧರನ್

ಬ್ಯಾಂಕ್ ಮತ್ತು ಹಣಕಾಸು ವ್ಯವಹಾರಗಳಲ್ಲಿ ಡಿಜಿಟಲ್ ತಂತ್ರಜ್ಞಾನದ ಪ್ರವೇಶದಿಂದ ಗ್ರಾಹಕರ ಬದುಕು ಬಹಳ ಸರಳವಾಗಿದೆ. ತಿಂಗಳುಗಟ್ಟಲೆ ಅಲೆದರೂ ಅವರು ಕೇಳುವ ಎಲ್ಲಾ ದಾಖಲೆಗಳನ್ನು ಒದಗಿಸಿದರೂ ಬ್ಯಾಂಕ್‌ನಲ್ಲಿ ಒಂದು ಖಾತೆ ತೆರೆಯುವುದಕ್ಕೆ ಅಥವಾ ಒಂದೆರಡು ಲಕ್ಷ ರೂಪಾಯಿ ಸಾಲ ಪಡೆಯುವುದಕ್ಕೆ ಪರದಾಡುತ್ತಿದ್ದ ಗ್ರಾಹಕರು ಈಗ ಮೊಬೈಲ್ ಮೂಲಕ ಕುಳಿತಲ್ಲೇ ಎಲ್ಲಾ ವ್ಯವಹಾರಗಳನ್ನು ನಿರ್ವಹಿಸಬಹುದಾಗಿದೆ.

ಗ್ರಾಹಕರು ಕೇಳಿದಷ್ಟೂ ಅರ್ಜಿ ಸಲ್ಲಿಸಿದಷ್ಟೂ ದಾಖಲೆ ನೀಡದಿದ್ದರೂ ಸಾಲ ಮಂಜೂರಾಗಿ ಖಾತೆಗೆ ಹಣ ಜಮಾ ಆಗುತ್ತದೆ. ಆದರೆ ಈ ವಿಶ್ವದಲ್ಲಿ ಯಾವುದೂ ಪುಕ್ಕಟೆಯಾಗಿ ದೊರೆಯುವುದಿಲ್ಲ ಎಂಬುದನ್ನು ಗ್ರಾಹಕರು ಅರ್ಥಮಾಡಿಕೊಳ್ಳುವ ಕಾಲ ಬಂದಿದೆ. ಹಣಕಾಸು ವ್ಯವಹಾರದಲ್ಲಿ ಡಿಜಿಟಲ್ (ಫಿನ್‌ಟೆಕ್) ತಂತ್ರಜ್ಞಾನ ಹಲವೊಂದು ಸಮಸ್ಯೆಗಳನ್ನು ತಂದೊಡ್ಡಿದೆ.

ಫಿನ್‌ಟೆಕ್ ಮೂಲಕ ಹಣಕಾಸು ವ್ಯವಹಾರ ಅನೇಕ ವರ್ಷಗಳಿಂದ ನಡೆದು ಬಂದಿದ್ದರೂ ಮೊಬೈಲ್ ಬಂದ ನಂತರ ಅದರ ವ್ಯಾಪ್ತಿ ಮತ್ತು ಪ್ರಮಾಣ ಹೆಚ್ಚಾಗಿದೆ. ಈ ಬೆಳವಣಿಗೆಗೆ ಕೋವಿಡ್–19 ಮತ್ತೊಂದು ಕಾರಣವಾಗಿದೆ. ಅಭಿವೃದ್ಧಿ ಹೊಂದುತ್ತಿರುವ ಶೇ 64ರಷ್ಟು ರಾಷ್ಟ್ರಗಳಲ್ಲಿ ಮೊಬೈಲ್ ಮೂಲಕವೇ ಹಣಕಾಸು ವ್ಯವಹಾರ ನಡೆಯುತ್ತಿದ್ದು, ಮುಂದಿನ ವರ್ಷಗಳಲ್ಲಿ ಇದು ಮತ್ತಷ್ಟು ಹೆಚ್ಚುವ ಸಾಧ್ಯತೆ ಇದೆ.

ಟ್ರ್ಯಾಕ್ಸ್‌ನ್ (Tracxn) ಕಂಪನಿ ನೀಡಿರುವ ವರದಿ ಪ್ರಕಾರ, ಭಾರತದಲ್ಲಿ ಸದ್ಯ 4,680 ಫಿನ್‌ಟೆಕ್ ಕಂಪನಿಗಳಿವೆ. ಆರ್‌ಬಿಐ ವರದಿಯಂತೆ, ಬ್ಯಾಂಕುಗಳು 1.12 ಲಕ್ಷ ಕೋಟಿ ರೂಪಾಯಿ ಹಾಗೂ ಬ್ಯಾಂಕೇತರ ಹಣಕಾಸು ಸಂಸ್ಥೆಗಳು (ಎನ್‌ಬಿಎಫ್‌ಸಿ) 0.23 ಲಕ್ಷ ಕೋಟಿ ರೂಪಾಯಿಯಷ್ಟು ಡಿಜಿಟಲ್ ಸಾಧನದ ಮೂಲಕ ವಿತರಿಸಿವೆ. ಸಾಂಪ್ರದಾಯಿಕ ಬ್ಯಾಂಕ್ ವ್ಯವಸ್ಥೆಯಿಂದ ಹೊರಗೆ ಉಳಿದಿದ್ದ ಗ್ರಾಹಕರು ಈಗ ಮುಖ್ಯವಾಹಿನಿಗೆ ಬಂದಿದ್ದಾರೆ. ಸಣ್ಣ ಹಾಗೂ ಮಧ್ಯಮ ಉದ್ದಿಮೆಗಳಿಗೆ ಫಿನ್‌ಟೆಕ್ ಮೂಲಕ ಸುಲಭವಾಗಿ ಸಾಲ ಮತ್ತು ಇತರ ಆರ್ಥಿಕ ನೆರವು ದೊರೆಯುತ್ತಿವೆ. ಗ್ರಾಹಕರ ಅಗತ್ಯಕ್ಕೆ ತಕ್ಕಂತೆ ಹಣಕಾಸು ಸೇವೆಗಳನ್ನು ಫಿನ್‌ಟೆಕ್ ಒದಗಿಸುತ್ತದೆ.

ಫಿನ್‌ಟೆಕ್‌ನಿಂದ ಗ್ರಾಹಕರಿಗೆ ದೊರೆಯುತ್ತಿರುವ ಸೌಲಭ್ಯಗಳ ಪಟ್ಟಿ ದೊಡ್ಡದಾಗಿದ್ದರೂ ಇದನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವ ವ್ಯಕ್ತಿಗಳ ಸಂಖ್ಯೆಯೂ ಬಹಳಷ್ಟಿದೆ. ಅನುಚಿತ ವ್ಯಾಪಾರ ಪದ್ಧತಿ, ವೈಯಕ್ತಿಕ ಮಾಹಿತಿ ಸೋರಿಕೆ, ಸಾಲದ ಮೇಲೆ ಅಧಿಕ ಬಡ್ಡಿ, ಗ್ರಾಹಕರ ಕುಂದುಕೊರತೆ ನಿವಾರಿಸಲು ಯಾವುದೇ ವ್ಯವಸ್ಥೆ ಇಲ್ಲದಿರುವಂತಹ ಸಮಸ್ಯೆಗಳು ಉದ್ಭವಿಸಿವೆ. ಸಾಲ ವಸೂಲಾತಿಗೆ ಅನುಸರಿಸುವ ಮಾರ್ಗ ಸಹ ಅಮಾನವೀಯವಾಗಿದೆ. ಕೆಲವು ಕಂಪನಿಗಳು ಗೂಂಡಾಗಳನ್ನು ಬಳಸಿಕೊಂಡು ಗ್ರಾಹಕರನ್ನು ಥಳಿಸಿದ್ದೂ ಇದೆ. ಈ ಕಿರುಕುಳ ತಡೆಯಲಾರದೆ ಗ್ರಾಹಕರು ಆತ್ಮಹತ್ಯೆ ಮಾಡಿಕೊಂಡಿರುವುದೂ ವರದಿಯಾಗಿದೆ. ಮುಖ್ಯವಾಗಿ ಡಿಜಿಟಲ್ ಲೆಂಡಿಂಗ್ ಆ್ಯಪ್ (ಡಿಎಲ್‌ಎ) ಮೂಲಕ ಸಾಲ ವಿತರಣೆಯಲ್ಲಿ ಗ್ರಾಹಕರು ಸಂಕಷ್ಟಗಳಿಗೆ ಗುರಿಯಾಗಿದ್ದಾರೆ. ಇದಕ್ಕೆ ಕಾರಣ ಗ್ರಾಹಕರಲ್ಲಿನ ತಿಳಿವಳಿಕೆ ಕೊರತೆ ಮತ್ತು ಡಿಜಿಟಲ್ ವೇದಿಕೆಗಳ ಮೂಲಕ ಸಾಲ ಒದಗಿಸುವ ವ್ಯವಹಾರವನ್ನು ನಿಯಂತ್ರಿಸಲು ಸಮರ್ಥ ಕಾನೂನು ಇಲ್ಲದಿರುವುದು. ಇದು ಇಡೀ ವಿಶ್ವ ಎದುರಿಸುತ್ತಿರುವ ಸಮಸ್ಯೆ. ಈ ಕಾರಣದಿಂದಲೇ 'ನ್ಯಾಯೋಚಿತ ಡಿಜಿಟಲ್ ಹಣಕಾಸು' (ಫೇರ್ ಡಿಜಿಟಲ್ ಫೈನಾನ್ಸ್) ಈ ವರ್ಷದ ವಿಶ್ವ ಗ್ರಾಹಕರ ದಿನದ (ಮಾರ್ಚ್ 15) ಘೋಷವಾಕ್ಯವಾಗಿದೆ.

ಆರ್‌ಬಿಐ ಕಳೆದ ನವೆಂಬರ್‌ನಲ್ಲಿ ಪ್ರಕಟಿಸಿರುವ ವರದಿಯ ಪ್ರಕಾರ, ದೇಶದಲ್ಲಿ 81 ಆ್ಯಪ್ ಸ್ಟೋರ್ ಮತ್ತು ಸುಮಾರು 1,100 ಡಿಎಲ್‌ಎ ಇವೆ. ಇದರಲ್ಲಿ 600 ಕಾನೂನುಬಾಹಿರ ಡಿಎಲ್‌ಎಗಳಿದ್ದು ಹೆಚ್ಚಿನವು ಚೀನಾದಿಂದ ಕಾರ್ಯನಿರ್ವಹಿಸುತ್ತಿವೆ. ಕಡಿಮೆ ಬಡ್ಡಿ ದರ ಎಂದು ನಂಬಿಸಿ ಗ್ರಾಹಕರಿಗೆ ಕೆಲವು ಮೋಸ ಮಾಡುತ್ತವೆ. ಸಾಲ ಮರುಪಾವತಿಸದವರ 'ಎಫ್‌ಐಆರ್ ದಾಖಲಿಸಿದ್ದೇವೆ' ಎಂಬ ಸುಳ್ಳು ಬೆದರಿಕೆ ಸಂದೇಶವನ್ನು ಕಳುಹಿಸಲಾಗುತ್ತದೆ. ಕುಟುಂಬದ ಮಹಿಳೆಯರಿಗೆ ಸಂದೇಶ ಕಳುಹಿಸಿ ಬೆದರಿಸುವುದೂ ಇದೆ. ಡಿಎಲ್‌ಎಗೆ ಸಂಬಂಧಿಸಿದ ದೂರುಗಳನ್ನು ದಾಖಲಿಸಲು ಆರ್‌ಬಿಐ ಪ್ರತ್ಯೇಕ ವ್ಯವಸ್ಥೆ ಮಾಡಿದ್ದು, ಜನವರಿ 2020ರಿಂದ ಮಾರ್ಚ್ 2021ರವರೆಗೆ 2,562 ದೂರುಗಳು ದಾಖಲಾಗಿವೆ. ಬಹುತೇಕ ದೂರುಗಳು ಆರ್‌ಬಿಐ ನಿಯಂತ್ರಣದಲ್ಲಿ ಇಲ್ಲದ ಡಿಎಲ್‌ಎ ವಿರುದ್ಧ ದಾಖಲಾಗಿವೆ. ಮಹಾರಾಷ್ಟ್ರದಲ್ಲಿರುವ ಡಿಎಲ್‌ಎ ವಿರುದ್ಧ 572 ದೂರುಗಳು ದಾಖಲಾಗಿದ್ದು ಪ್ರಥಮ ಸ್ಥಾನದಲ್ಲಿದೆ. ಕರ್ನಾಟಕ 394 ದೂರುಗಳನ್ನು ಹೊಂದಿದ್ದು ದ್ವಿತೀಯ ಸ್ಥಾನದಲ್ಲಿದೆ.

ಸಾಮಾನ್ಯ ಯೋಜನೆಗಳಿಗಿಂತ ಫಿನ್‌ಟೆಕ್ ಕ್ಷೇತ್ರದ ಕಂಪನಿಗಳು ಒದಗಿಸುವ ಸೇವೆಗಳು ಸಂಕೀರ್ಣವಾಗಿರುತ್ತವೆ. ಅವುಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ವಿಶೇಷ ಪರಿಣತಿ ಬೇಕಾಗುತ್ತದೆ. ಕೆಲವು ಕಂಪನಿಗಳು ಸರಿಯಾದ ಮಾಹಿತಿ ನೀಡುವುದಿಲ್ಲ. ಗ್ರಾಹಕರು ಸೇವೆಯನ್ನು ಪಡೆಯುವ ಸಂದರ್ಭದಲ್ಲಿ ಷರತ್ತುಗಳನ್ನು ಗಮನಿಸದೆ ಸಹಿ ಹಾಕುವುದರಿಂದ ಕಂಪನಿಗಳು ಆ ಷರತ್ತುಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬದಲಿಸುವುದೂ ಇದೆ. ಸಾಮಾನ್ಯ ಬ್ಯಾಂಕ್‌ಗಳಲ್ಲಿ ಎಲ್ಲ ಗ್ರಾಹಕರಿಗೆ ಒಂದೇ ನಿಯಮ ಇರುತ್ತದೆ.

ಫಿನ್‌ಟೆಕ್ ವಲಯದ ಕೆಲವು ಕಂಪನಿಗಳಿಗೆ ಗ್ರಾಹಕ ಸಂಬಂಧಿ ದತ್ತಾಂಶವೇ ಮೂಲ ಸಾಮಗ್ರಿ. ಕಂಪನಿಗಳು ಈ ದತ್ತಾಂಶವನ್ನು ಗ್ರಾಹಕರಿಂದ ನೇರವಾಗಿ ಪಡೆಯುವುದಕ್ಕಿಂತ ಇತರ ಮೂಲಗಳಿಂದ ಸಂಗ್ರಹಿಸುವುದೇ ಹೆಚ್ಚು. ಆದ್ದರಿಂದಲೇ ಗ್ರಾಹಕರಿಂದ ಡಿಎಲ್‌ಎ ಹೆಚ್ಚು ಮಾಹಿತಿಯನ್ನಾಗಲಿ ದಾಖಲೆಗಳನ್ನಾಗಲಿ ಪಡೆಯುವುದಿಲ್ಲ. ಗ್ರಾಹಕರ ಬ್ಯಾಂಕ್ ಖಾತೆ, ಮೊಬೈಲ್, ಫೇಸ್‌ಬುಕ್, ಟ್ವಿಟರ್, ವಾಟ್ಸ್‌ಆ್ಯಪ್ ಇತ್ಯಾದಿ ಮೂಲಗಳಿಂದ ಮಾಹಿತಿ ಪಡೆಯುತ್ತವೆ. ಇದು ಗ್ರಾಹಕರಿಗೆ ಗೊತ್ತಾಗುವುದಿಲ್ಲ. ಗ್ರಾಹಕರ ವೈಯಕ್ತಿಕ ಮಾಹಿತಿಯೂ ಸೇರಿದಂತೆ ಇತರ ಮಾಹಿತಿ ಸರಬರಾಜು ಮಾಡುವುದಕ್ಕೆಂದೇ ಡೇಟಾ ಅಗ್ರಿಗೇಟರ್ಸ್ ಇವೆ. ಫಿನ್‌ಟೆಕ್ ಕಂಪನಿಗಳು ಇವುಗಳಿಗೆ ಹಣ ಕೊಟ್ಟು ಮಾಹಿತಿ ಪಡೆಯುತ್ತವೆ.

ಡಿಜಿಟಲ್ ಹಣಕಾಸು ವ್ಯವಹಾರದಲ್ಲಿ ಗ್ರಾಹಕರು ಎದುರಿಸುವ ಸಮಸ್ಯೆಗಳನ್ನು ಪರಿಹರಿಸಲು ಮುಂಜಾಗ್ರತಾ ಕ್ರಮ ಅಗತ್ಯವಾಗಿದೆ. ಸದ್ಯಕ್ಕೆ ಫಿನ್‌ಟೆಕ್ ಕಂಪನಿಗಳ ವ್ಯವಹಾರ ನಿಯಂತ್ರಿಸುವ ಪರಿಣಾಮಕಾರಿ ವ್ಯವಸ್ಥೆ ಇಲ್ಲದ ಕಾರಣ ಸರ್ಕಾರಗಳು ಎಚ್ಚೆತ್ತುಕೊಳ್ಳಬೇಕಿದೆ. ಭಾರತದಲ್ಲಿ ಗ್ರಾಹಕ ಸಂರಕ್ಷಣಾ ಅಧಿನಿಯಮ, ಬ್ಯಾಂಕಿಂಗ್ ಓಂಬುಡ್ಸ್‌ಮನ್ ಇತ್ಯಾದಿ ಇದ್ದರೂ ಫಿನ್‌ಟೆಕ್ ಕಂಪನಿಗಳು ಒಡ್ಡುತ್ತಿರುವ ಸವಾಲುಗಳನ್ನು ಎದುರಿಸಲಾಗುತ್ತಿಲ್ಲ. ಇದನ್ನು ನಿಯಂತ್ರಿಸಲು ಒಂದು ಬಲಿಷ್ಠ ಸಂಸ್ಥೆಯನ್ನು ಸ್ಥಾಪಿಸಬೇಕೆಂಬ ಅಭಿಪ್ರಾಯ ವಿಶ್ವದಾದ್ಯಂತ ವ್ಯಕ್ತವಾಗಿದೆ. ಈ ಕ್ಷೇತ್ರದಲ್ಲಿ ಪಾರದರ್ಶಕತೆಗೆ ಹೆಚ್ಚು ಒತ್ತು ಕೊಡಬೇಕಾಗಿದೆ. ಫಿನ್‌ಟೆಕ್ ಕಂಪನಿಗಳು ಬಳಸುವ ಭಾಷೆ, ಉಪಯೋಗಿಸುವ ಪದಗಳು ಗ್ರಾಹಕರಿಗೆ ಅರ್ಥವಾಗುವಂತೆ ಇರಬೇಕಾಗುತ್ತದೆ.


ಸೇವೆಗಳನ್ನು ಮಾರಾಟ ಮಾಡಲು ಬಳಸುವ ಮಾದರಿ ಸಹ ಮುಖ್ಯವಾಗುತ್ತದೆ. ಗ್ರಾಹಕರಿಗೆ ಬೇಡದಿದ್ದರೂ ಪದೇ ಪದೇ ಫೋನ್ ಮೂಲಕ 'ಸಾಲ ಬೇಕೇ' ಎಂದು ಕೇಳುವುದು ತಪ್ಪಬೇಕು. ಸಾಲದ ಮೇಲಿನ ಬಡ್ಡಿಯ ಪ್ರಮಾಣವು ತರ್ಕಬದ್ಧವಾಗಿ ನಿಗದಿ ಆಗಬೇಕಾಗಿರುವುದು ಅವಶ್ಯವಾಗಿ ಆಗಬೇಕಾದ ಕೆಲಸ. ಕೆಲವು ಕಂಪನಿಗಳು ಗ್ರಾಹಕರಿಗೆ ನಿವೇಶನ, ಮನೆ ಕೊಳ್ಳಲು, ವಾಹನ ಖರೀದಿ, ಚಿನ್ನ ಬೆಳ್ಳಿ ಖರೀದಿ, ವಿದೇಶಕ್ಕೆ ಹೋಗುವಂತಹ ಕಾರಣಗಳಿಗೆ ಸಾಲ ನೀಡುತ್ತವೆ. ಇದು ಸಾಲದು ಎಂಬಂತೆ 'ಈಗ ಖರೀದಿಸಿ ನಂತರ ಹಣ ನೀಡಿ' (ಬೈ ನೌ ಪೇ ಲೇಟರ್) ಎಂಬ ಯೋಜನೆ ಆರಂಭವಾಗಿದೆ. ಇವೆಲ್ಲವನ್ನೂ ಸಮರ್ಥವಾಗಿ ನಿಯಂತ್ರಿಸುವ ಸಂಸ್ಥೆ ಬೇಕಿದೆ.



ಮತ್ತೊಂದೆಡೆ ಗ್ರಾಹಕರನ್ನು ಎಚ್ಚರಿಸಿ, ಮುಖ್ಯವಾಗಿ ಅವರ ವರ್ತನೆಯನ್ನು ಬದಲಿಸಲು ಶಿಕ್ಷಣ ಹಾಗೂ ಜಾಗೃತಿ ಉಂಟುಮಾಡುವ ಅವಶ್ಯಕತೆ ಇದೆ. ಹಣಕಾಸಿನ ವ್ಯವಹಾರಗಳು ಗೋಜಲಾಗಿ, ಅದರಲ್ಲಿ ಗ್ರಾಹಕರು ಸಿಲುಕಿಕೊಳ್ಳಲು ಕಾರಣ ಅವರಲ್ಲಿ ಹೆಚ್ಚುತ್ತಿರುವ ಕೊಳ್ಳುಬಾಕ ಸಂಸ್ಕೃತಿ. ಕಂಡದ್ದೆಲ್ಲಾ ಬೇಕು ಎಂಬ ಧೋರಣೆ ಗ್ರಾಹಕರ ವಿವೇಚನಾ ಶಕ್ತಿಯನ್ನು ಕುಂದಿಸಿದೆ. ಗ್ರಾಹಕರಲ್ಲಿ ಆರ್ಥಿಕ ಸಾಕ್ಷರತೆ ಹೆಚ್ಚಿಸುವುದಕ್ಕೆ ಒತ್ತು ಕೊಡಬೇಕಿದೆ.

ಲೇಖಕ: ಕೇಂದ್ರ ಗ್ರಾಹಕ ಸಂರಕ್ಷಣಾ ಪರಿಷತ್ತಿನ ಮಾಜಿ ಸದಸ್ಯ

ಚುರುಮುರಿ



ಆತ್ಮಾವಲೋಕನ

• ಲಿಂಗರಾಜು ಡಿ.ಎಸ್.

ನಮ್ಮ ಸಂಘದ ಎಲೆಕ್ಷನ್ನಲ್ಲಿ ಹೂವಣ್ಣನ ಗುಂಪು ಭಾರಿ ಮೆಜಾರಿಟಿ ತಗಂಡುತ್ತು. ಸೋತು ಸುಣ್ಣಾಗಿದ್ದ ಕೈಯ್ಯೆಣ್ಣೆ ಗುಂಪು ಸಭೆ ಸೇರಿತ್ತು. 'ಈ ಸಾರಿ ನಮ್ಮ ಗುಂಪು ನೀರಸವಾದ ಪ್ರದರ್ಶನ ನೀಡ್ಯದೆ ಅಂತ ಬೇಜಾರಾಗಬ್ಯಾಡಿ. ಎಲ್ಲಿ ಯಾಕೆ ತಪ್ಪಾಗ್ಯದೆ ಅಂತ ತಿಳಕಬಕು. ಮ್ಯಾಗಲ ಬೀದೀಲಿ ಹೂವಣ್ಣನಿಗೆ ಮೆಜಾರಿಟೀನೆ ಬಂದುಲ್ಲ' ಹಿರಿಯ ನಾಯಕರು ಕಾರ್ಯಕರ್ತರಿಗೆ ಕರೆ ಕೊಟ್ಟರು.

'ಸಾ, 'ಕೈಯ್ಯೆಣ್ಣೆದು ಪರ್ಸೆಂಟೇಜ್ ಗುಂಪು, ಕಿತ್ತಾಡದು ಬುಟ್ರೆ ಕೆಲಸಿಲ್ಲ' ಅಂತರೆ ಸದಸ್ಯರು!' ಇನ್ನೊಬ್ಬ ನಾಯಕರು ಹೇಳಿದರು.

'ಹೂವಣ್ಣರು ಎತ್ತಾರಾಗ್ಯವರೆ, ಜನದ ಕಣ್ಣಿಗೆ ಸುಲಭವಾಗಿ ಕಾಣಿಸಿಗ್ಯತ್ತರೆ ಅನ್ನದ್ಕೇ ನಾವು ಸೋತಿರದು. ಹೂವಣ್ಣಾರು ನಮ್ಮುನ್ನ ನೋಡಿ ಭಾರಿ ಹೆದರವರೆ ಕನ್ರಿ!' ಹಿರಿಯ ನಾಯಕರು ಸಮಾಧಾನ ಮಾಡಿದರು.

'ಹೂವಣ್ಣಾರ ರಾಜಾಹುಲಿ ಎಲ್ಲಾ ಬೀದೀಲು ಪ್ರವಾಸ ಮಾಡಿ ಮೆಜಾರಿಟಿ ಸೀಟು ಗೆದ್ದು ನಮ್ಮುನ್ನೆಲ್ಲ ದೂಳೀಪಟ ಮಾಡ್ತೀವಿ ಅಂದದೆ!' ಒಬ್ಬರು ಭಯಪಟ್ಟರು.

'ಹೋದಸಾರಿ ಕಣ್ಣಿಗೆ ನೀರಾಕ್ಕ್ಯಂಡು ರಾಜೀನಾಮೆ ಕೊಟ್ಟುದ್ದ ನೀವು ಕಾಣ್ರಾ? ನಾನೂ ನಾಯಕ ಅಂತ ತೋರಿಸಕ್ಕೆ ಅಬ್ಬರ ಮಾಡ್ತಾವ್ರೆ' ಅಂತಂದ್ರು ಇನ್ನೊಬ್ರು. 'ನಮ್ಮ ಕೇಂದ್ರ ಕೈಯ್ಯೆಣ್ಣೆ ನಾಯಕರೂ ರಾಜೀನಾಮೆ ಕೊಟ್ಟು ಹೊಯ್ತೀವಿ ಅಂದಿದ್ರಲ್ಲ ಏನಾಯ್ತು?' ಇನ್ನೊಬ್ಬ ನಾಯಕರ ಪ್ರಶ್ನೆ.

'ಅವರೇ ಮುಂದುವರಿತರೆ. ಅವರಾದ್ರೆ ನಾವು ಎಷ್ಟು ಕಿತ್ತಾಡಿಕ್ಯಂಡ್ರೂ ಸುಮ್ಮಗಿರತರೆ! ಅವುರುನ್ನೆ ಮತ್ತೆ ನಾಯಕರನ್ನ ಮಾಡಿಕ್ಯಂಡ್ರೆ ಊರಿಗೊಂದು ಮೆರೆ ದೇವ್ರಿದ್ದಂಗೆ ಹಂಗಾಮಿಯಾಗಿ ಇರತರೆ' ಅಂದ್ರು ದೊಡ್ಡ ನಾಯಕರು.

'ಸೋತುದ್ದು ಯಾಕೆ ಅಂತ ಆತ್ಮಾವಲೋಕನ ಮಾಡಿಕ್ಯಳ್ರೋ ಅಂದ್ರೆ ಇಲ್ಲುದ್ದ ಪುಲಾರ ಮಾತಾಡ್ತಿದೀರ, ಅಡ್ರಸ್ಸಿಲ್ದಂಗೋಯ್ತಿರ' ಅಂದ್ರು ಬುದ್ಧಿಜೀವಿಗಳು.

'ಅಣೈ, ರಾಜಕೀಯದೇಲಿ ಆತ್ಮಾವಲೋಕನ ಮಾಡಿಕ್ಯಣಕೆ ಆತ್ಮ ಇರಬೇಕಲ್ಲುವ್ರಾ. ಅದುನ್ನ ಗಾಂಧಿಮಾತ್ಮರೇ ತಗಂಡು ಹೊಂಟೋಗ್ಯವರೆ!' ಅಂತ ಒಬ್ಬರು ಅಕ್ಸಲಾ ಮಾಡುವಾಗ ಮಸಾಲೆ ದೋಸೆ ಬಂದು ಸಭೆಯ ಅಜೆಂಡಾ ಬದಲಾಯ್ತು.

ದಿನದ ಟ್ವೀಟ್

ದಪ್ಪ ಚರ್ಮದವರು!



ರಸ್ತೆಗುಂಡಿಗಳಲ್ಲಿ ಮೊಸಳೆಗಳ ಚಿತ್ರ ಬಿಡಿಸುವುದು ಅಥವಾ ಪೂಜೆ ಮಾಡುವುದು, ಆ ಗುಂಡಿಗಳನ್ನು ಸುಸ್ಥಿತಿಗೆ ತರುವ ಮಟ್ಟಕ್ಕೆ ಯಾರಲ್ಲೂ ನಾಚಿಕೆ ಉಂಟುಮಾಡುವುದಿಲ್ಲ. ಇಂತಹ ಅವಮಾನಗಳಿಗೆಲ್ಲ ಸ್ಪಂದಿಸುವಂತಹ ಜನ ಅವರಲ್ಲ. ನಿಜ ಹೇಳಬೇಕೆಂದರೆ, ಜನ ಇಂತಹ ಕೆಲಸಗಳನ್ನು ಮಾಡಿದಾಗ ಅವರೆಲ್ಲ ಖುಷಿಪಡುತ್ತಾರೆ– ತಮ್ಮ ಕೃತ್ಯ ಮುಂದುವರಿಸುವುದಕ್ಕೆ ನಿಜವಾದ ಬೆದರಿಕೆ ಇಲ್ಲ ಎಂಬುದನ್ನು ಇದು ಅವರಿಗೆ ತಿಳಿಸುತ್ತದೆ.

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

ಕಿಡಿನುಡಿ



ನಾಗಾಲೋಟದಲ್ಲಿರುವ ಬೆಲೆ ಏರಿಕೆಯು ಇನ್ನಿಲ್ಲದಷ್ಟು ಹೊರೆಯನ್ನು ಹೊರಿಸುತ್ತಿದೆ. ಇಂಧನ ಮತ್ತು ವಿದ್ಯುತ್ ಬೆಲೆ ಏರಿಕೆ- 32%. ತಯಾರಿಕಾ ಉತ್ಪನ್ನಗಳು- 10%. ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ ಸನ್ನಿಹಿತವಾಗುತ್ತಿರುವುದು ಸರಣಿ ಬೆಲೆ ಏರಿಕೆಗೆ ಕಾರಣವಾಗಲಿದೆ. ಪರಿಹಾರ ಒದಗಿಸುವ ಬದಲು, ಸತ್ಯವನ್ನು ಮರೆಮಾಚಲು ಸರ್ಕಾರವು ಹೊಸ ಸಗಟು ಬೆಲೆ ಸೂಚ್ಯಂಕದ (ಡಬ್ಲ್ಯುಪಿಐ) ಸರಣಿ ರಚಿಸುವ ಕಾರ್ಯದಲ್ಲಿ ನಿರತವಾಗಿದೆ.

ಸೀತಾರಾಂ ಯೆಚೂರಿ, ಸಿಪಿಎಂ ನಾಯಕ

25 ವರ್ಷಗಳ ಹಿಂದೆ

ಶನಿವಾರ, 15-3-1997

• **ದಕ್ಷ ಆಡಳಿತಗಾರ ವೀರೇಂದ್ರ ಪಾಟೀಲ್ ಇನ್ನಿಲ್ಲ**

ಬೆಂಗಳೂರು, ಮಾರ್ಚ್ 14– ಪ್ರಾಮಾಣಿಕ ಹಾಗೂ ದಕ್ಷ ಆಡಳಿತಗಾರರೆಂದು ಹೆಸರಾಗಿದ್ದ ಹಿರಿಯ ಮುತ್ಸದ್ದಿ ವೀರೇಂದ್ರ ಪಾಟೀಲರು (74) ಇಂದು ಮುಂಜಾನೆ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಕರ್ನಾಟಕದ ಮುಖ್ಯಮಂತ್ರಿಯಾಗಿ ಎರಡು ಬಾರಿ ಸೇವೆ ಸಲ್ಲಿಸಿದ್ದ ವೀರೇಂದ್ರ ಪಾಟೀಲರ ಅಂತ್ಯಕ್ರಿಯೆ ನಾಳೆ ಮಧ್ಯಾಹ್ನ ಅವರ ಹುಟ್ಟೂರಾದ ಕಲ್ಬುರ್ಗಿ ಜಿಲ್ಲೆಯ ಚಿಂಚೋಳಿಯಲ್ಲಿ ಸಕಲ ಸರ್ಕಾರಿ ಮರ್ಯಾದೆಗಳೊಡನೆ ನಡೆಯಲಿದೆ.

ವೀರೇಂದ್ರ ಪಾಟೀಲ್ ಅವರ ನಿಧನಕ್ಕೆ ರಾಷ್ಟ್ರಪತಿ ಶಂಕರ್ ದಯಾಳ್ ಶರ್ಮ, ಪ್ರಧಾನಿ ಎಚ್.ಡಿ.ದೇವೇಗೌಡ ಸೇರಿ ಹಲವಾರು ಗಣ್ಯರು ಕಂಬನಿ ಮಿಡಿದಿದ್ದಾರೆ.

• **ಉತ್ತರಪ್ರದೇಶ: ಮತ್ತೆ ರಾಷ್ಟ್ರಪತಿ ಆಳ್ವಿಕೆ**

ನವದೆಹಲಿ, ಮಾರ್ಚ್ 14 (ಪಿಟಿಐ, ಯುಎನ್ಐ)– ಬಿಜೆಪಿ ಸದಸ್ಯರ ಸಭಾತ್ಯಾಗದ ನಂತರ ಉತ್ತರಪ್ರದೇಶದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಇನ್ನೂ 6 ತಿಂಗಳ ಅವಧಿಗೆ ವಿಸ್ತರಿಸುವ ಶಾಸನಬದ್ಧ ನಿಲುವಳಿಗೆ ಲೋಕಸಭೆ ಅವಿರೋಧವಾಗಿ ಒಪ್ಪಿಗೆ ನೀಡಿತು.

50 ವರ್ಷಗಳ ಹಿಂದೆ

ಬುಧವಾರ, 15-3-1972

• **ಸಾಗಣೆ, ಪ್ರಯಾಣ ದರ ಏರಿಕೆ: ಮೂರನೇ ದರ್ಜೆಗೆ ವಿನಾಯಿತಿ**

ನವದೆಹಲಿ, ಮಾರ್ಚ್ 14– ಏಪ್ರಿಲ್ 15 ರಿಂದ ಮೂರನೇ ದರ್ಜೆ ಪ್ರಯಾಣ ಹೊರತು ಉಳಿದೆಲ್ಲ ದರ್ಜೆಯ ರೈಲು ಪ್ರಯಾಣ ಮತ್ತು ಸರಕು ಸಾಗಾಣಿಕೆ ತುಟ್ಟಿಯಾಗಿದೆ.

ರೈಲ್ವೆ ಸಚಿವ ಕೆಂಗಲ್ ಹನುಮಂತಯ್ಯ ಅವರು ಇಂದು ಸಂಸತ್ತಿನಲ್ಲಿ ಮಂಡಿಸಿದ 1972–73ನೇ ಸಾಲಿನ ರೈಲ್ವೆ ಮುಂಗಡ ಪತ್ರದಲ್ಲಿ ಮೂರನೇ ದರ್ಜೆ ರೈಲು ಪ್ರಯಾಣ ದರ ಹೊರತು ಉಳಿದೆಲ್ಲ ದರ್ಜೆಯ ರೈಲು ಪ್ರಯಾಣ ದರ ಮತ್ತು ಸಾಗಾಣಿಕೆ ದರಗಳನ್ನು ಹೆಚ್ಚಿಸಲಾಗಿದೆ. ಪ್ರಯಾಣ ದರ ಮತ್ತು ಸರಕು ಸಾಗಾಣಿಕೆ ದರಗಳನ್ನು ಹೆಚ್ಚಿಸಿರುವುದರಿಂದ ರೈಲ್ವೆಗೆ ಹದಿನೇಳು ಕೋಟಿ ರೂಪಾಯಿ ಹೆಚ್ಚುವರಿ ಆದಾಯ ಲಭಿಸುವುದು. ಸಚಿವ ಹನುಮಂತಯ್ಯ ಅವರು ಮಂಡಿಸಿದ ಬಜೆಟ್ 32.53 ಕೋಟಿ ರೂಪಾಯಿ ಉಳಿತಾಯ ತೋರಿಸಿದೆ.

• **ಅರ್ಚಕರ ಆನುವಂಶಿಕ ಹಕ್ಕು ರದ್ದು: ಸುಪ್ರೀಂ ಕೋರ್ಟ್ ತೀರ್ಪು**

ನವದೆಹಲಿ, ಮಾರ್ಚ್ 14– ತಮಿಳುನಾಡಿನಲ್ಲಿನ ಹಿಂದೂ ದೇವಾಲಯಗಳ ಅರ್ಚಕರ ವಂಶಪಾರಂಪರ್ಯ ಹಕ್ಕುಗಳನ್ನು ರದ್ದುಗೊಳಿಸುವ ತಮಿಳುನಾಡು ಹಿಂದೂ ಧಾರ್ಮಿಕ ದತ್ತಿ ತಿದ್ದುಪಡಿ ಶಾಸನದ (1970) ಕ್ರಮಬದ್ಧತೆಯನ್ನು ಸುಪ್ರೀಂ ಕೋರ್ಟಿನ ಸಂವಿಧಾನ ಪೀಠ ಎತ್ತಿ ಹಿಡಿಯಿತು.

ಸಂಗತ

ಕಲಿಕೆ ಕಲಿಯುವ ಬಗೆ

ಕಲಿಕೆಯಲ್ಲಿನ ಸವಾಲುಗಳಿಗಿಂತ, ಅದರಿಂದಾಗುವ ಉಪಯೋಗಗಳ ಕಡೆ ಮನಸ್ಸು ನೆಡುವಂತೆ ನಮ್ಮ ಆಲೋಚನಾಕ್ರಮವನ್ನು ಬದಲಿಸಿಕೊಳ್ಳಬೇಕು

• ಡಾ. ಎಚ್.ಬಿ.ಚಂದ್ರಶೇಖರ್


ವಿದ್ಯಾರ್ಥಿಗಳಿಗಿದು ಪರೀಕ್ಷಾ ಕಾಲ. ಚೆನ್ನಾಗಿ ಕಲಿತು, ಪರೀಕ್ಷೆಯನ್ನು ಉತ್ತಮವಾಗಿ ಬರೆದು, ಹೆಚ್ಚು ಅಂಕಗಳನ್ನು ಗಳಿಸುವ ವಿಧಾನಗಳ ಬಗ್ಗೆ ತಜ್ಞರು ನೀಡುವ ಟಿಪ್ಸ್‌ಗೆ ಈಗ ಹೆಚ್ಚಿನ ಬೇಡಿಕೆ. ಕಲಿಕೆಯ ಕುರಿತು ನೀಡುವ ತರಬೇತಿಗಳ ನಂತರವೂ ಕೆಲವು ವಿದ್ಯಾರ್ಥಿಗಳಿಗೆ ಕಲಿಕೆಯಲ್ಲಿ ತೊಡಗುವುದೇ ಬೇಸರದ ಸಂಗತಿ. ತಂದೆ, ತಾಯಿ, ಶಿಕ್ಷಕರ ಒತ್ತಾಯದಿಂದ ಬಲವಂತವಾಗಿ ಓದಲು ತೊಡಗುವವರ ಸಂಖ್ಯೆ ಕಡಿಮೆಯೇನಲ್ಲ.

ಪರೀಕ್ಷೆಗಾಗಿ ಓದಿ ನಂತರ ಮರೆಯುವುದನ್ನು ಎಲ್ಲರೂ ಮಾಡುತ್ತೇವೆ. ಆದರೆ ಜೀವನದ ಪಯಣದಲ್ಲಿ ನಾವೆಲ್ಲರೂ ಒಂದಲ್ಲಾ ಒಂದು ಕಲಿಕೆಯಲ್ಲಿ ತೊಡಗಲೇಬೇಕಿರುತ್ತದೆ. ನಮ್ಮ ಅಗತ್ಯಗಳಿಗೆ ತಕ್ಕಂತೆ ಹೊಸ ಜ್ಞಾನ, ಕೌಶಲಗಳನ್ನು ನಿರಂತರವಾಗಿ ಕರಗತ ಮಾಡಿಕೊಳ್ಳಬೇಕಾಗುತ್ತದೆ. ಕೆಲವರು ಅನಿವಾರ್ಯವಾಗಿ ಹೊಸ ಕಲಿಕೆಯಲ್ಲಿ ತೊಡಗಿದರೆ, ಹಲವರು ಹೊಸತನ್ನು ಕಲಿಯುವುದರಲ್ಲಿ ಮೋಜು, ಸಂತಸ ಅನುಭವಿಸುತ್ತಾರೆ. ಪರೀಕ್ಷೆ ಎಂಬ ಕಾರಣಕ್ಕಾಗಿ ಕಲಿಕೆಯಲ್ಲಿ ತೊಡಗುವುದಕ್ಕಿಂತ ಕಲಿಕೆಯ ಪ್ರಕ್ರಿಯೆಯನ್ನು ಆನಂದಿಸುತ್ತಾ, ಅದರ ಹಿಂದಿನ ಸೂಕ್ಷ್ಮಗಳನ್ನು ಅರ್ಥ ಮಾಡಿಕೊಂಡು 'ಕಲಿಯುವುದು ಹೇಗೆ' ಎಂಬುದನ್ನು ಕಲಿಯುವುದು ಅಗತ್ಯವಾದುದು.

ಬಾಲ್ಯದಲ್ಲಿ ಕಲಿಕೆ ಸಲೀಸು. ಎಲ್ಲವನ್ನೂ ಬೆರಗುಗಣ್ಣುಗಳಿಂದ ನೋಡುತ್ತಾ, ಕುತೂಹಲ, ಆಸಕ್ತಿಗಳಿಂದ ಮಕ್ಕಳು ಬೇಗ ಕಲಿಯುತ್ತಾರೆ. ಎರಡು, ಮೂರು ಭಾಷೆಗಳನ್ನು ಕಲಿಯುವುದಿರಬಹುದು, ಸೈಕಲ್ ಮತ್ತು ವಾಹನ ಸವಾರಿ, ಈಜುವುದು, ಮರ ಹತ್ತುವಂತಹ ಕೆಲಸಗಳನ್ನು ಕಲಿಯುವಾಗ ಭಯ, ಆತಂಕಗಳಿಲ್ಲದೇ ಏಳುತ್ತಾ ಬೀಳುತ್ತಲೇ ಕಲಿಕೆಯಾಗಿದ್ದು ತಿಳಿಯುವುದೇ ಇಲ್ಲ. ಆದರೆ ದೊಡ್ಡವರಾದ ಮೇಲೆ ಹೊಸ ಜ್ಞಾನ ಪಡೆಯುವುದು ಮತ್ತು ಕೌಶಲಗಳನ್ನು ಕಲಿಯುವ ವೇಗ ಕುಂಠಿತವಾಗುವುದನ್ನು ಗಮನಿಸಬಹುದು.

ಅನೇಕರು ಬೆರಗು, ಕುತೂಹಲ, ಆಸಕ್ತಿಗಳನ್ನು ಬಿಡದೇ ಹೊಸ ಹೊಸ ಕಲಿಕೆಗಳಲ್ಲಿ ತೊಡಗಿ ಯಶಸ್ವಿಯಾಗುತ್ತಾರೆ. ಹೆಚ್ಚಿನವರು ವೃತ್ತಿಯಲ್ಲಿದ್ದಾಗಲೇ ನಿವೃತ್ತಿಯಾದವರಂತೆ ಇರುತ್ತಾರೆ. ಕಚೇರಿ ಕೆಲಸಗಳಲ್ಲಿ ಅಗತ್ಯವಾದ ಕಂಪ್ಯೂಟರ್ ಬಳಕೆಯ ಕೌಶಲಗಳನ್ನು ಹೊಂದುವುದು, ಅಗತ್ಯ ಮಾಹಿತಿಗಳನ್ನು ತಿಳಿದುಕೊಳ್ಳುವುದರಿಂದ ಅನೇಕರು ದೂರ ಉಳಿಯುವುದನ್ನು ಕಾಣಬಹುದು. ಹೊಸ ಜ್ಞಾನ, ಕೌಶಲಗಳ ಕಲಿಕೆಯಲ್ಲಿ ತೊಡಗಿಸಿಕೊಂಡವರಲ್ಲಿ ಜೀವನೋತ್ಸಾಹ ಪುಟಿಯುತ್ತದೆ. ಇಂತಹವರಲ್ಲಿ ಸಂತಸ, ಸಂತೃಪ್ತಿಯ ಭಾವಗಳು ಮನೆ ಮಾಡಿರುತ್ತವೆ.

ತಮ್ಮ 89ನೇ ವಯಸ್ಸಿನಲ್ಲಿ ಮ್ಯಾರಥಾನ್ ಓಟ ಆರಂಭಿಸಿದ ಫೌಜಾಸಿಂಗ್ 101ನೇ ವಯಸ್ಸಿನಲ್ಲಿ ಲಂಡನ್ ಮ್ಯಾರಥಾನ್ ಅನ್ನು 7.49 ಗಂಟೆಯಲ್ಲಿ ಪೂರೈಸಿ, ವಿಶ್ವದ ಹಿರಿಯ ಮ್ಯಾರಥಾನ್ ಓಟಗಾರ ಎಂಬ ಹೆಗ್ಗಳಿಕೆ ಹೊಂದಿದ್ದಾರೆ. ಪಟ್ನಾದ ರಾಜ್‌ಕುಮಾರ್ ಅವರು 98ನೇ ವಯಸ್ಸಿನಲ್ಲಿ ನಳಂದ ಮುಕ್ತ ವಿಶ್ವವಿದ್ಯಾಲಯದ ಮೂಲಕ ಅರ್ಥಶಾಸ್ತ್ರದಲ್ಲಿ ಸ್ನಾತಕ ಪದವಿ ಪಡೆದರು. ಚೆನ್ನೈನ ಪ್ರೊ. ಪಾರ್ತಿಬನ್ 145 ಪದವಿಗಳನ್ನು ಪಡೆದಿದ್ದಾರೆ. ಕೇರಳದ ಚಿತ್ರನ್ ನಂಬೂದಿರಿಪಾಡ್ ತಮ್ಮ 100ನೇ ವರ್ಷದಲ್ಲಿ 30ನೇ ಬಾರಿಗೆ ಹಿಮಾಲಯದ ಚಾರಣ ಕೈಗೊಂಡರು. ಚಿಕ್ಕಪುಟ್ಟ ಬರವಣಿಗೆಯಲ್ಲಿ ತೊಡಗಿದ್ದ ಅಮೆರಿಕದ ಹ್ಯಾರಿ ಬರ್ನ್‌ಸ್ಟಿನ್ ತಮ್ಮ ಮೊದಲ ಪುಸ್ತಕ 'ದಿ ಇನ್‌ವಿಸಿಬಲ್ ವಾಲ್: ಎ ಲವ್ ಸ್ಟೋರಿ ದಟ್ ಬ್ರೋಕ್ ಬ್ಯಾರಿಯರ್ಸ್' ಅನ್ನು 96ನೇ ವಯಸ್ಸಿನಲ್ಲಿ ಪ್ರಕಟಿಸುವ ಮೂಲಕ ಯಶಸ್ವಿ ಲೇಖಕರಾಗುತ್ತಾರೆ. 92ರ ಹರೆಯದಲ್ಲಿ ಭಾನುರಾವ್ ಅವರು ಸೊಗಸಾಗಿ ಭರತನಾಟ್ಯ ಮಾಡುತ್ತಾರೆ. ಈ ಎಲ್ಲ ಉದಾಹರಣೆಗಳು ಹೊಸ ಕಲಿಕೆಯಲ್ಲಿ ತೊಡಗಿಕೊಳ್ಳಲು ನಮಗೆ ಪ್ರೇರಣೆದಾಯಕ.



ಕಲಿಕೆಯ ಯಶಸ್ಸಿನ ಬಗ್ಗೆ ತಲೆಕೆಡಿಸಿಕೊಳ್ಳದೆ ನಿರಂತರವಾಗಿ ತಣ್ಣಗೆ ಪ್ರಯತ್ನದಲ್ಲಿ ತೊಡಗುವುದು ಮುಖ್ಯವಾದುದು. ನಮಗೆ ದೊರೆಯಬಹುದಾದ ಹೊಸ ಕಲಿಕೆಯ ಅವಕಾಶಗಳಿಗೆ ಮುಕ್ತವಾಗಿ ತೆರೆದುಕೊಳ್ಳುತ್ತಾ, ತೊಡಗಿಸಿಕೊಂಡಲ್ಲಿ ಕಲಿಕೆ ಸಾಧ್ಯವಾಗುತ್ತದೆ. ಹೊಸ ಕಲಿಕೆಗಳನ್ನು ಜೀವನದ ಹೊಸ ಸನ್ನಿವೇಶಗಳಿಗೆ ಅನ್ವಯ ಮಾಡುತ್ತಾ ಸಾಗಿದಲ್ಲಿ ಯಶಸ್ಸು ಸಲೀಸು.

ಹೊಸ ಕಲಿಕೆಯಲ್ಲಿ ತೊಡಗಿದಾಗ ಎದುರಾಗುವ ಸವಾಲುಗಳ ಕಡೆ ಹೆಚ್ಚು ಗಮನ ನೀಡದೆ, ಅದರಿಂದ ನಮಗಾಗುವ ಲಾಭ, ಉಪಯೋಗಗಳ ಕಡೆ ಮನಸ್ಸು ನೆಡುವಂತೆ ನಮ್ಮ ಆಲೋಚನಾ ಲಹರಿಯನ್ನು ಬದಲಿಸಿಕೊಳ್ಳಬೇಕು. ಶಾಲೆಯಲ್ಲಿ ಅಥವಾ ಕಚೇರಿಯಲ್ಲಿ ಹೊಸ ಕಲಿಕೆಯಲ್ಲಿ ತೊಡಗಬೇಕೆಂಬ ನಿರ್ದೇಶನ ಬಂದಾಗ 'ನನಗೆ ಇದಾಗದು', 'ನನಗೆ ಸಮಯ ಇಲ್ಲ' ಎಂಬ ನೆಪಗಳನ್ನು ಹೇಳದೇ ಮುಂದಡಿ ಇಡಬೇಕು. ಇದರ ಜೊತೆ ಅನೇಕರು 'ನಮಗೆಲ್ಲಾ ತಿಳಿದಿದೆ' ಎಂಬ ಭಾವದಿಂದ ಅನೇಕ ಹೊಸ ಕಲಿಕೆಗಳಿಂದ ತಮ್ಮನ್ನು ತಾವೇ ವಂಚಿಸಿಕೊಳ್ಳುತ್ತಾರೆ. ಇಂತಹವರು ತಮ್ಮ ಕಾರ್ಯದ ಕುರಿತು ಇತರರ ಟೀಕೆ, ಸಲಹೆಗಳನ್ನು ಮುಕ್ತವಾಗಿ ಆಲಿಸಿ, ಕೌಶಲಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಮುಂದಾಗಬೇಕು.

ಆಧುನಿಕ ಜಗತ್ತಿನ ಸ್ಪರ್ಧೆಯ ಯುಗದಲ್ಲಿ ವ್ಯಕ್ತಿಗಳಾಗಲೀ ಸಂಸ್ಥೆಗಳಾಗಲೀ ನಿರಂತರವಾಗಿ ಕಲಿಕೆಯಲ್ಲಿ ತೊಡಗುವುದು ಅನಿವಾರ್ಯ. ಪ್ರತಿಷ್ಠಿತ ಹುದ್ದೆ, ದೊಡ್ಡ ಮೊತ್ತದ ವೇತನದಿಂದ ದೊರೆಯದ ಸಂತಸವು ಹೊಸ ಜ್ಞಾನ ಮತ್ತು ಕೌಶಲಗಳ ಕಲಿಕೆಯಲ್ಲಿ ತೊಡಗಿಸಿಕೊಳ್ಳುವುದರಿಂದ ದೊರೆಯಲು ಸಾಧ್ಯ.

ವಾಚಕರ ವಾಣಿ

ಪ್ಲಾಸ್ಟಿಕ್ ತ್ಯಾಜ್ಯ: ಧೋರಣೆ ಬದಲಾಗಲಿ

'ಚಾರ್ಮಾಡಿ ಘಾಟ್ ರಸ್ತೆಯಲ್ಲಿ ಪ್ರಯಾಣಿಕರು ಬಿಸಾಡಿದ್ದ ಪ್ಲಾಸ್ಟಿಕ್ ತೆರವು', 'ಮಹದೇಶ್ವರ ಬೆಟ್ಟದಲ್ಲಿ ಪ್ರಯಾಣಿಕರು ಎಸೆದಿದ್ದ ಪ್ಲಾಸ್ಟಿಕ್ ಸಂಗ್ರಹ' ಎಂಬಂತಹ ಸುದ್ದಿಗಳನ್ನು ಓದಿದಾಗ, ಉತ್ತಮ ಕಾರ್ಯದ ಬಗ್ಗೆ ಹೆಮ್ಮೆ ಮೂಡುತ್ತದಾದರೂ ಪ್ಲಾಸ್ಟಿಕ್ ಅನ್ನು ಹೀಗೆ ಎಸೆಯುವ ಜನರ ಧೋರಣೆ ಬಗ್ಗೆ ಬೇಸರ ಉಂಟಾಗುತ್ತದೆ.

ಕಠಿಣ ಕಾನೂನಿನ ಹೊರತಾಗಿಯೂ ಅದರ ಪರಿಣಾಮಕಾರಿ ಅನುಷ್ಠಾನದ ಕೊರತೆಯಿಂದ, ಈ ರೀತಿಯ ಧೋರಣೆ ಜನರಲ್ಲಿ ಹೆಚ್ಚಾಗುತ್ತಲೇ ಇದೆ. ಈ ದಿಸೆಯಲ್ಲಿ ಜನರಿಗೆ ಪರಿಸರ ಕಾಳಜಿಯ ಬಗ್ಗೆ ಅರಿವು ಮೂಡಿಸಬೇಕಾದ ಅವಶ್ಯಕತೆ ಹೆಚ್ಚಾಗಿದೆ. ಇಂತಹ ಸಕಾರಾತ್ಮಕ ಬದಲಾವಣೆ ನಮ್ಮಿಂದಲೇ ಆರಂಭವಾಗಲಿ.

ಮಧು ಎನ್.ಬಿ., ನಾರನಹಳ್ಳಿ, ದೊಡ್ಡಬಳ್ಳಾಪುರ

ವಾಹನ ಜಾಥಾಗೆ ಹಾಡೋಣ ಇತಿಶ್ರೀ

ಯಾವುದಾದರೂ ದಿನಾಚರಣೆ, ಜನಜಾಗೃತಿ, ಪ್ರತಿಭಟನೆಯಂತಹ ಕಾರಣಗಳಿಗಾಗಿ ವಾಹನ ಜಾಥಾಗಳು ನಡೆಯುತ್ತಲೇ ಇರುತ್ತವೆ. ಇವು ರಸ್ತೆಗಳ ಮೇಲೆ, ಫ್ಲೈ ಓವರ್‌ಗಳ ಮೇಲೆ ಹೆಚ್ಚಿನ ಒತ್ತಡ ಹಾಕುವುದಷ್ಟೇ ಅಲ್ಲ ಇತರ ವಾಹನಗಳ ಸುಗಮ ಸಂಚಾರಕ್ಕೂ ಅಡ್ಡಿ ಉಂಟು ಮಾಡುವುದು ಎಲ್ಲರಿಗೂ ತಿಳಿದಿರುವ ವಿಷಯ.

ಹಾಗೆಯೇ ಸದ್ಯದ ಯುದ್ಧದ ಸನ್ನಿವೇಶದಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮೇಲ್ಮುಖದಲ್ಲಿರುವ ತೈಲದ ಬೆಲೆಯು ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಮಾರಕವಾಗಿದೆ. ಇಂತಹ ಸಂದರ್ಭದಲ್ಲಿ, ದುಬಾರಿಯಾದ ವಿದೇಶಿ ವಿನಿಮಯದ ಸಂಗ್ರಹಕ್ಕೆ ನೇರ ಹೊಡೆತ ನೀಡುವ ಇಂತಹ ಜಾಥಾಗಳಿಗೆ ಇತಿಶ್ರೀ ಹಾಡುವುದು ಅತ್ಯಗತ್ಯ.

ಭರತ್ ಬಿ.ಎನ್., ಬೆಂಗಳೂರು

ಅಗ್ನಿಪರೀಕ್ಷೆಗೆ ಕಾಂಗ್ರೆಸ್ ಎದೆಯೊಡ್ಡಲಿ

ಐದು ರಾಜ್ಯಗಳ ಚುನಾವಣೆಯಲ್ಲಿ ದಯನೀಯವಾಗಿ ಸೋತ ಕೂಡಲೇ ಕಾಂಗ್ರೆಸ್ ತನ್ನ ಸಿಡಬ್ಲ್ಯುಸಿ ಸಭೆ ಕರೆಯುವುದಾಗಿ ಹೇಳಿದಾಗ, ಈ ಸಲವಾದರೂ ಈ ಪುರಾತನ ಪಕ್ಷವು ಧೈರ್ಯದಿಂದ ಒಂದು ಹೊಸ ಹೆಜ್ಜೆ ಇಡುತ್ತದೇನೋ ಎನ್ನುವ ಆಸೆ ಮನಸ್ಸಿನ ಯಾವುದೋ ಒಂದು ಮೂಲೆಯಲ್ಲಿ ಇತ್ತು. ಆದರೆ, ಯಥಾಪ್ರಕಾರ ಆ ಪಕ್ಷದ ನಾಯಕರು, ಇಡೀ ಪಕ್ಷವನ್ನೇ ಸೋನಿಯಾ ಗಾಂಧಿ ಅವರ ಪದತಲಕ್ಕೊಪ್ಪಿಸಿದ್ದಾರೆ! ಇದರಿಂದಾಗಿ, ಸೋಲಿನ ನೆಪದಲ್ಲಿ ಸೃಷ್ಟಿಯಾಗಿದ್ದ ಒಂದು ಸುವರ್ಣಾವಕಾಶವನ್ನು ಈ ನಾಯಕರು ಕೈಚೆಲ್ಲುವ ಮೂಲಕ ತಮ್ಮ ಚಿಂತನೆಗಳೂ 'ಔಟ್‌ಡೇಟೆಡ್' ಎನ್ನುವುದನ್ನು ತೋರಿಸಿಕೊಟ್ಟಿದ್ದಾರೆ.

'ಕಾಂಗ್ರೆಸ್‌ಮುಕ್ತ ಭಾರತ' ಎನ್ನುವುದು ಮೇಲ್ನೋಟಕ್ಕೆ ಬಿಜೆಪಿಯ ವಾಗ್ದಾಳಿಯಂತೆ ತೋರುತ್ತದೆ. ಆದರೆ, ಬಿಜೆಪಿಗಿಂತ ಹೆಚ್ಚಾಗಿ, ಕಾಂಗ್ರೆಸ್ ಇಡುತ್ತಿರುವ ಮಹಾಪರಾಧದ ಹೆಜ್ಜೆಗಳೇ 'ಕಾಂಗ್ರೆಸ್‌ಮುಕ್ತ ಭಾರತ'ವನ್ನು ನಿಜ ಮಾಡುತ್ತಿರುವಂತಿವೆ. ನೆಹರೂ– ಗಾಂಧಿ ಕುಟುಂಬಸ್ಥರನ್ನು ಅಲ್ಲಿ ತಳವೂರಿರುವ ಹೆಚ್ಚಿನ ನಾಯಕರೆಲ್ಲ ಯಾವ ತರ್ಕವೂ ಇಲ್ಲದೆ, ಕುರುಡರಂತೆ ಆರಾಧಿಸುತ್ತಿರುವುದೇ ಇದಕ್ಕೆ ಕಾರಣ.

ಪಕ್ಷದಲ್ಲಿ ಆಂತರಿಕ ಚುನಾವಣೆ ನಡೆಸುವ ಮಾತು ಈಗ ಕೇಳಿಬರುತ್ತಿದೆ. ವಾಸ್ತವವೆಂದರೆ, ಆ ಪಕ್ಷದಲ್ಲಿ ಇಂತಹ ಪ್ರಕ್ರಿಯೆ ನಡೆದು 30 ವರ್ಷಗಳೇ ಉರುಳಿಹೋಗಿವೆ. ಪಕ್ಷದೊಳಗೆ ಪ್ರಜಾಪ್ರಭುತ್ವವನ್ನು ಬೆಳೆಸದೆ, ಹೊರಗೆ ದೇಶದಲ್ಲಿ ಪ್ರಜಾಸತ್ತೆಯನ್ನು ಕಾಯುತ್ತೇನೆಂದು ಹೇಳುವುದು ಹಾಸ್ಯಾಸ್ಪದ. ಬಿಜೆಪಿಯಲ್ಲೂ ನರೇಂದ್ರ ಮೋದಿ ಪಕ್ಷದೊಳಗೆ ಸರ್ವಾಧಿಕಾರಿಯಂತೆ ವರ್ತಿಸುತ್ತಾರೆ ಎನ್ನುವ ಆರೋಪವಿದೆ. ಆದರೆ, ಆ ಪಕ್ಷದಲ್ಲಿ ಕನಿಷ್ಠಪಕ್ಷ ಮೂರು ವರ್ಷಕ್ಕೊಂದು ಸಲ ಹೊಸ ಅಧ್ಯಕ್ಷರಾದರೂ ಬರುತ್ತಾರೆ. ಕಾಂಗ್ರೆಸ್ಸಿನಲ್ಲಿ ಇದೂ ಸಾಧ್ಯವಾಗುತ್ತಿಲ್ಲ. ಬದಲಿಗೆ, 'ವೆಂಕ-ನಾಣಿ-ಸೀನ' ಎನ್ನುವ ನುಡಿಗಟ್ಟಿನಂತೆ, ಮತ್ತೆಮತ್ತೆ ಸೋನಿಯಾ-ರಾಹುಲ್-ಪ್ರಿಯಾಂಕಾ ಅವರಿಗೇ ಪಕ್ಷದ ನಾಯಕರು ಶರಣಾಗುತ್ತಿದ್ದಾರೆ. ಇದು ಕಾಂಗ್ರೆಸ್ ಎದುರಿಸುತ್ತಿರುವ ಅಗ್ನಿಪರೀಕ್ಷೆ. ಪಕ್ಷವು ಧೈರ್ಯದಿಂದ ಇದಕ್ಕೆ ಎದೆಯೊಡ್ಡಬೇಕು. ಇಲ್ಲದಿದ್ದರೆ, ಪಕ್ಷವನ್ನು ವಿಸರ್ಜಿಸುವುದೇ ಮೇಲು!

ಬಿ.ಎಸ್.ಜಯಪ್ರಕಾಶ ನಾರಾಯಣ, ಬೆಂಗಳೂರು

ಎಡವಾದಕ್ಕೂ ಹಿಟ್ಲರಿಗೂ ಸಂಬಂಧವಿಲ್ಲ

ಎಡ ಮತ್ತು ಬಲಪಂಥಗಳು ಹಿಟ್ಲರ್ ಪ್ರಜ್ಞೆಯಲ್ಲಿ ಮುಳುಗಿವೆ ಎಂದು ಪ್ರೊ. ಎಸ್.ಜಿ.ಸಿದ್ಧರಾಮಯ್ಯ ಹೇಳಿದ್ದಾರೆ (ಪ್ರ.ವಾ., ಮಾರ್ಚ್ 14). ಬಂಡವಾಳವಾದಿ ರಾಷ್ಟ್ರಗಳಲ್ಲಿ ತೀವ್ರ ಆರ್ಥಿಕ ಬಿಕ್ಕಟ್ಟಿನ ಭಾಗವಾಗಿ ಇಟಲಿ, ಜರ್ಮನಿ ಮುಂತಾದ ದೇಶಗಳಲ್ಲಿ ಎಲ್ಲಾ ಪ್ರಜಾಪ್ರಭುತ್ವ ಹಕ್ಕುಗಳನ್ನೂ ದಮನ ಮಾಡಿ ಮುಸೊಲಿನಿ, ಹಿಟ್ಲರ್ 'ಸರ್ವಾಧಿಕಾರಿ'ಗಳಾಗಿದ್ದು ಇತಿಹಾಸದ ಭಾಗ. ಬಂಡವಾಳಶಾಹಿ ಜಗತ್ತಿನ ರಾಷ್ಟ್ರಗಳು ಪರಸ್ಪರ ತಮ್ಮ ಆಧಿಪತ್ಯವನ್ನು ಹೆಚ್ಚಿಸಿಕೊಳ್ಳುವುದರ ಭಾಗವಾಗಿ ವಿಶ್ವಯುದ್ಧ ಸಾರಿದ ಸಂಗತಿಯೂ ಇತಿಹಾಸದ ಭಾಗವಾಗಿಯೇ ಇದೆ. ಇಲ್ಲಿ ಪರಸ್ಪರ ಯುದ್ಧ ಸಾರಿದ ದೇಶಗಳು 'ಬಲಪಂಥೀಯ'ವಾಗಿದ್ದವು, ಎಡ ಅಥವಾ ಸಮಾಜವಾದಿ ದೇಶಗಳಾಗಿರಲಿಲ್ಲ.

ಈಗಲೂ ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧ ಕೂಡ ಎರಡು ಬಲಪಂಥೀಯ ದೇಶಗಳ ನಡುವಿನ ಯುದ್ಧವೇ ಆಗಿದೆ. 1991ರಲ್ಲಿ ಅಂದಿನ ಸಮಾಜವಾದಿ ದೇಶವಾಗಿದ್ದ ಯುಎಸ್‌ಎಸ್‌ಆರ್ ವಿಘಟನೆಯಾದ ನಂತರ ರಷ್ಯಾವು ಸಮಾಜವಾದಿ ದೇಶವಾಗಿ ಉಳಿಯಲಿಲ್ಲ. ಈಗಿನ ರಷ್ಯಾ ಪಕ್ಕಾ ಬಲಪಂಥೀಯ ದೇಶವಾಗಿದೆ. ಉಕ್ರೇನಿನಲ್ಲಿ ಕೂಡ 'ನವಫ್ಯಾಸಿವಾದಿ'ಗಳು ಅಧಿಕಾರದ ಚುಕ್ಕಾಣಿ ಹಿಡಿದಿದ್ದಾರೆ. ಹಿಂದಿನ ಯುಎಸ್‌ಎಸ್‌ಆರ್‌ನ ಭಾಗವಾಗಿದ್ದ ಉಕ್ರೇನ್ ಈಗ ಅಮೆರಿಕ ನೇತೃತ್ವದ ನ್ಯಾಟೊ ಮಿತ್ರಕೂಟದ ಜತೆ ಸೇರಿಕೊಂಡು ರಷ್ಯಾದ ಗಡಿ ಪ್ರದೇಶಗಳಲ್ಲಿ ಸೇನಾ ಜಮಾವಣೆಗೆ ಮುಂದಾಗಿರುವ ಸಂಗತಿಯು ರಷ್ಯಾವನ್ನು ಕೆರಳಿಸಿದೆ. ಅಮೆರಿಕ ಮತ್ತಿತರ ಸಾಮ್ರಾಜ್ಯವಾದಿ ದೇಶಗಳು ಉಕ್ರೇನಿನ ಹಿಂದೆ ನಿಂತು ತಮ್ಮ ದೇಶದ ಭದ್ರತೆಗೆ ಅಪಾಯ ಒಡ್ಡಿವೆ ಎನ್ನುವುದು ರಷ್ಯಾದ ಅಭಿಪ್ರಾಯವಾಗಿದೆ. ಇದು ವಾಸ್ತವ.

ರಷ್ಯಾವು ಯುದ್ಧ ಸಾರಿರುವುದು ಯಾವುದೇ ಕಾರಣಕ್ಕೂ ಸಮರ್ಥನೀಯವಲ್ಲ. ಮಾತುಕತೆಯ ಮೂಲಕ ಮಾತ್ರವೇ ಪರಸ್ಪರ ಮನಸ್ತಾಪ, ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕು, ಯುದ್ಧ ಪರಿಹಾರವಲ್ಲ. ಎಡವಾದಕ್ಕೂ ಹಿಟ್ಲರಿಗೂ ಸಂಬಂಧವಿಲ್ಲ. ಹಿಟ್ಲರ್ ಅಪ್ಪಟ ಬಲಪಂಥೀಯ. ಹಾಗಾಗಿ 'ಹಿಟ್ಲರ್ ಪ್ರಜ್ಞೆಯ ಎಡ, ಬಲ ಪಂಥ' ಎನ್ನುವುದು ಸರಿಯಾಗದು.

ಟಿ.ಸುರೇಂದ್ರ ರಾವ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮೀಸಲಾತಿ: ಒಬಿಸಿ ಹಿತ ಕಾಯಲು ಕಾಲಹರಣವೇಕೆ?

• ಕೆ.ಎನ್.ಲಿಂಗಪ್ಪ



ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಿಗೆ ಸಾಂವಿಧಾನಿಕ ಮಾನ್ಯತೆ ಸಿಗಬೇಕು ಎಂಬ ಡಾ.ಎಲ್.ಎಂ ಸಿಂಗ್ವಿ ಸಮಿತಿಯ ಶಿಫಾರಸ್ಸಿಗೆ ಅನುಗುಣವಾಗಿ ಸಂವಿಧಾನ ತಿದ್ದುಪಡಿ ತರಲು ಅಂದಿನ ಪ್ರಧಾನಿ ರಾಜೀವ್ ಗಾಂಧಿ ಪ್ರಯತ್ನಿಸಿದರು. ಆದರೆ, ಗ್ರಾಮ ಸ್ವರಾಜ್ಯದ ಅವರ ಕನಸು ಮಾತ್ರ ಅವರ ಹಠಾತ್ ದುರ್ಮರಣದಿಂದಾಗಿ ಈಡೇರಲಿಲ್ಲ.

ಪಿ.ವಿ. ನರಸಿಂಹರಾವ್ ಅವರು ಪ್ರಧಾನಿಯಾಗಿದ್ದ ಅವಧಿಯಲ್ಲಿ, 1992ರಲ್ಲಿ ಸಂವಿಧಾನದ 73 ಮತ್ತು 74ನೇ ತಿದ್ದುಪಡಿಗಳು ಸಂಸತ್ತಿನಲ್ಲಿ ಅನುಮೋದನೆ ಪಡೆದವು. ತಿದ್ದುಪಡಿಯಲ್ಲಿ ಪ್ರಮುಖವಾಗಿ, ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ರಾಜಕೀಯ ಮೀಸಲಾತಿ ನೀಡಬೇಕು ಎಂಬುದೂ ಒಂದಾಗಿತ್ತು. ಆವರೆಗೆ, ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಮತ್ತು ಸಾರ್ವಜನಿಕ ವಲಯದ ಹುದ್ದೆಗಳ ನೇಮಕಾತಿಗೆ ಮಾತ್ರ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಇದ್ದದ್ದು, ಈ ತಿದ್ದುಪಡಿಗಳಿಂದಾಗಿ ಅದು ಸ್ಥಳೀಯ ಸಂಸ್ಥೆಗಳ ಚುನಾವಣೆಗಳಿಗೂ ವಿಸ್ತರಿಸಿ, ಚುನಾವಣಾ ಕಣದಲ್ಲಿ ಸ್ಪರ್ಧಿಸಲು ಹಿಂದುಳಿದ ವರ್ಗಗಳು ಅವಕಾಶ ಪಡೆದದ್ದು ಚುನಾವಣಾ ರಾಜಕೀಯ ಕ್ಷೇತ್ರದಲ್ಲಿ ಮಹತ್ವದ ಹೆಜ್ಜೆಗುರುತಾಗಿದೆ.

ಈ ದಿಸೆಯಲ್ಲಿ ಕರ್ನಾಟಕ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ, 1993 ಮತ್ತು ನಿಯಮಗಳನ್ನು ಕರ್ನಾಟಕ ಸರ್ಕಾರವು ಜಾರಿಗೆ ತಂದು ಹಿಂದುಳಿದ ವರ್ಗಗಳ ರಾಜಕೀಯ ಮೀಸಲಾತಿಗೆ ಅವಕಾಶ ಕಲ್ಪಿಸಿತು.

1986ರಲ್ಲಿ ಸಮಾಜ ಕಲ್ಯಾಣ ಇಲಾಖೆ, 'ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ' ಹಿಂದುಳಿದ ವರ್ಗಗಳನ್ನು ಗುರುತಿಸಿತು. ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಮತ್ತು ಸರ್ಕಾರದ ಹುದ್ದೆಗಳ ನೇಮಕಾತಿಗಾಗಿ ಸಿದ್ಧಪಡಿಸಿದ್ದ ಪಟ್ಟಿಯಲ್ಲಿರುವ ಜಾತಿಗಳನ್ನು 'ಎ' ಮತ್ತು 'ಬಿ' ಎಂಬ ಎರಡು ಗುಂಪುಗಳಾಗಿ ವಿಂಗಡಿಸಿತು; ಇದನ್ನು ಸ್ಥಳೀಯ ಪಂಚಾಯತ್ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳ ರಾಜಕೀಯ ಮೀಸಲಾತಿಯ ಉದ್ದೇಶಕ್ಕೆ ಪಂಚಾಯತ್ ರಾಜ್ ಇಲಾಖೆ ಅಳವಡಿಸಿಕೊಂಡಿತು. ಪರಿಶಿಷ್ಟ ವರ್ಗಗಳೂ ಸೇರಿದಂತೆ, ಒಟ್ಟಾರೆ ಮೀಸಲಾತಿ ಕೋಟಾವನ್ನು ಶೇ 56ಕ್ಕೆ ನಿಗದಿ ಮಾಡಿತ್ತು. ಸರ್ಕಾರ 1991ರ ದಶವಾರ್ಷಿಕ ಜನಗಣತಿಯ ಅಂಕಿ -ಅಂಶಗಳನ್ನು ಆಧರಿಸಿ ಕೋಟಾ ನಿಗದಿ ಮಾಡಬೇಕಿತ್ತು. ಈ ಕುರಿತು ವಿವೇಕಯುಕ್ತ ತೀರ್ಮಾನ ತೆಗೆದುಕೊಂಡಿದ್ದಲ್ಲಿ ಬಹುಶಃ ಈಗ ಎದುರಾಗಿರುವ ಸಮಸ್ಯೆ ಉದ್ಭವಿಸುತ್ತಿರಲಿಲ್ಲ!

ಮುಂದೆ, ನ್ಯಾಯಮೂರ್ತಿ ಚಿನ್ನಪ್ಪರೆಡ್ಡಿ ವರದಿ ಆಧರಿಸಿ ಸಿದ್ಧಪಡಿಸಿದ ಪಟ್ಟಿಯನ್ನು ಶಿಕ್ಷಣ ಮತ್ತು ಉದ್ಯೋಗದ ಸಲುವಾಗಿ ಸರ್ಕಾರ ಅನುಷ್ಠಾನಗೊಳಿಸಿತು. ಪಂಚಾಯತ್ ರಾಜ್ ನಿಯಮಗಳ ಅನ್ವಯ, ಅದೇ ಮೀಸಲಾತಿ ಪಟ್ಟಿಯನ್ನು ಎರಡು ಗುಂಪುಗಳಾಗಿ ಬೇರ್ಪಡಿಸಿ ಸ್ಥಳೀಯ ಸಂಸ್ಥೆಗಳ ಚುನಾವಣೆ ಉದ್ದೇಶಕ್ಕೂ ಇಲಾಖೆ ಅಳವಡಿಸಿಕೊಂಡಿತು. ಹೀಗೆ ಅಳವಡಿಸಿಕೊಳ್ಳುವ ಮುನ್ನ ಸರ್ಕಾರ ತುಸು ಎಚ್ಚರ ವಹಿಸಿ, ಹಿಂದೆ ಎಸಗಿರುವ ತಪ್ಪನ್ನು ತಿದ್ದಿಕೊಳ್ಳಬಹುದಾಗಿತ್ತು. ಆದರೆ, ಅದಾಗಲಿಲ್ಲ.

ಈ ನಡುವೆ, ಕೆ. ಕೃಷ್ಣಮೂರ್ತಿ ಎಂಬುವರು ಮೀಸಲಾತಿ ಕೋಟಾ ಮಿತಿಯ ಕುರಿತು ಸಲ್ಲಿಸಿದ ರಿಟ್ ಅರ್ಜಿ ಸಂಬಂಧ ಸುಪ್ರೀಂ ಕೋರ್ಟ್ 2010ರಲ್ಲಿ, ಮೀಸಲಾತಿ ಕೋಟಾ ಶೇ 50ರ ಮಿತಿ ಮೀರಬಾರದೆಂದು ಹೇಳಿತು. ಹಿಂದುಳಿದವರಿಗೆ ಮೀಸಲಾತಿಗಾಗಿ ಅಳವಡಿಸಿಕೊಂಡಿರುವ ವಿಧಿ-ವಿಧಾನಗಳು ರಾಜಕೀಯ ಮಾನದಂಡ ಅನುಸರಿಸಿದವುಗಳಲ್ಲ ಎಂದೂ ಅವುಗಳನ್ನು 'ತ್ರಿಸ್ತರ ಪರಿಶೀಲನೆ'ಗೆ ಒಳಪಡಿಸಲು ಪ್ರತ್ಯೇಕ ಆಯೋಗ ಕೂಡಾ ರಚಿಸಬೇಕೆಂದು ಆದೇಶಿಸಿತು.

ನ್ಯಾಯಾಲಯದ ಆದೇಶದಂತೆ ಮೀಸಲಾತಿ ಕೋಟಾವನ್ನು ಶೇ 50ರಷ್ಟಕ್ಕೆ ನಿಗದಿಗೊಳಿಸಲು ಸರ್ಕಾರವು ಕ್ರಮ ತೆಗೆದುಕೊಂಡಿತೇನೋ ಸರಿ. ಆದರೆ, 'ತ್ರಿಸ್ತರ ಪರಿಶೀಲನೆ' ಕಾರ್ಯ ಕೈಗೊಳ್ಳಲು ಮಾತ್ರ ಮುಂದಾಗಲಿಲ್ಲ. ಆದೇಶವಾಗಿ 12 ವರ್ಷಗಳೇ ಗತಿಸಿದ್ದರೂ ಅದು ಕಾರ್ಯಗತವಾಗಿಲ್ಲ. ಏತನ್ಮಧ್ಯೆ, ಮೀಸಲಾತಿ ಕೋಟಾ ಕಡಿತಗೊಳಿಸಿರುವ ಪ್ರಶ್ನೆ ಮತ್ತೊಂದು ಪ್ರಕರಣದಲ್ಲಿ ಕರ್ನಾಟಕ ಹೈಕೋರ್ಟ್‌ನ ಮುಂದೆ ಬಂತು. ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯಗಳು ಪಡೆದಿರುವ ಪ್ರಾತಿನಿಧ್ಯ, ಜನಸಂಖ್ಯಾ ಪ್ರಮಾಣಕ್ಕಿಂತ ಹೆಚ್ಚಿದ್ದು, ರಾಜಕೀಯವಾಗಿ ಅವು ಆಧಿಪತ್ಯ ಪಡೆದಿವೆ ಎಂಬ ಅಂಶವನ್ನು ಗಣನೆಗೆ ತೆಗೆದುಕೊಂಡು 'ರಾಜಕೀಯವಾಗಿ ಮುಂದುವರಿದ' ಜಾತಿಗಳನ್ನು ಪಟ್ಟಿಯಿಂದ ಹೊರಗಿಡಲು ಹೈಕೋರ್ಟ್ ಆದೇಶಿಸಿತು. ಸರ್ಕಾರ ಮಾತ್ರ ನ್ಯಾಯಾಲಯದ ಆದೇಶದಂತೆ ಯಾವುದೇ ಕ್ರಮ ಜರುಗಿಸಲು ಇಚ್ಛಿಸಲಿಲ್ಲ.

ಕಳೆದ ವರ್ಷ ಮಹಾರಾಷ್ಟ್ರ ಸರ್ಕಾರ ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ನಿಗದಿ ಮಾಡಿರುವ ಮೀಸಲಾತಿ ನೀತಿಯನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಯಿತು. 2010ರಲ್ಲಿ ಕೆ.ಕೃಷ್ಣಮೂರ್ತಿ ಪ್ರಕರಣದಲ್ಲಿ ನೀಡಿರುವ ಆದೇಶದಂತೆ 'ತ್ರಿಸ್ತರ ಪರಿಶೀಲನೆ' ಕಾರ್ಯ ಕೈಗೊಳ್ಳಿ ಅಥವಾ ಪರಿಶೀಲನಾ ಕಾರ್ಯ ಕೈಗೊಳ್ಳುವವರೆಗೆ, ಅಂತಹ ಕ್ಷೇತ್ರಗಳನ್ನು 'ಸಾಮಾನ್ಯ' ಕ್ಷೇತ್ರಗಳೆಂದೂ ಪರಿಗಣಿಸಿ ಚುನಾವಣೆಗಳನ್ನು ನಡೆಸಿ ಎಂದು ಸುಪ್ರೀಂ ಕೋರ್ಟ್ ಕಟ್ಟುನಿಟ್ಟಾಗಿ ಆದೇಶಿಸಿತು.

ಸುಪ್ರೀಂ ಕೋರ್ಟ್‌ನ 2010ರ ಆದೇಶ ಕುರಿತಂತೆ ತನ್ನ ನಿಲುವು ಏನು ಎಂಬುದನ್ನು ಕರ್ನಾಟಕ ಸರ್ಕಾರ ಈವರೆಗೂ ಸ್ಪಷ್ಟಪಡಿಸಿಲ್ಲ. ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸದೆ ಚುನಾವಣೆ ನಡೆಸುವುದು ಕಷ್ಟಸಾಧ್ಯ. ಮೀಸಲಾತಿ ನೀಡದೆಯೇ ಚುನಾವಣೆ ನಡೆಸಿದರೆ, ಹಿಂದುಳಿದ ವರ್ಗಗಳಿಗೆ ಇರುವ ಮೀಸಲಾತಿ ಅವಕಾಶ ಕೈತಪ್ಪುತ್ತದೆ. ತ್ರಿಸ್ತರ ಪರಿಶೀಲನೆಗಾಗಿ ಪ್ರತ್ಯೇಕ ಆಯೋಗವೊಂದನ್ನು ಸರ್ಕಾರವು ರಚಿಸಲೇಬೇಕಾಗಿದೆ.

ರಾಜಕೀಯವಾಗಿ ಹಿಂದುಳಿದ ವರ್ಗಗಳನ್ನು ಗುರುತಿಸಲು ಇರುವ ಮಾನದಂಡ ಏನು ಎಂಬುದನ್ನು ಈಗ ಸ್ಪಷ್ಟಪಡಿಸಿಕೊಳ್ಳಬೇಕಿದೆ. ವಾಸ್ತವಿಕ ಅಂಕಿ-ಅಂಶಗಳು ಆಗತ್ಯ ಬೇಕೇ ಬೇಕು. ಆಯೋಗವು ಸಮೀಕ್ಷೆಯ ಮೂಲಕ ಅಂಕಿ-ಅಂಶಗಳನ್ನು ಸಂಗ್ರಹಿಸಲು ಸುದೀರ್ಘ ಸಮಯ ಬೇಕು. ಹಾಗಾಗಿ, ಅದು ಕಾರ್ಯಸಾಧುವಲ್ಲ. ಸರ್ಕಾರ 2015ರಲ್ಲಿ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಿಗೆ ಅನ್ವಯಿಸುವಂತೆ ಸಮಗ್ರ ಸಮೀಕ್ಷೆ ನಡೆಸಿ ಅಂಕಿಅಂಶಗಳನ್ನು ಸಂಗ್ರಹಿಸಿದೆ. ಈ ಪರಿಶೀಲನಾ ಕಾರ್ಯಕ್ಕೆ ಅವುಗಳನ್ನು ಉಪಯೋಗಿಸಿಕೊಳ್ಳಬಹುದು. ಇವು ಪ್ರಥಮ ಮೂಲದ ಅಂಕಿ-ಅಂಶಗಳಾಗಿವೆ.

ಹಾಗೆಯೇ, ದ್ವಿತೀಯ ಮೂಲದ ಅಂಕಿ-ಅಂಶಗಳನ್ನು ಅಗತ್ಯ ಸಂಗ್ರಹಿಸಿ, ಸಮಂಜಸ ಮಾನದಂಡಗಳನ್ನು ಅನುಸರಿಸಿ, ಪರಾಮರ್ಶನ ಕಾರ್ಯ ಕೈಗೊಂಡು, ಸಕಾಲದಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಲು ಸಾಧ್ಯವಿದೆ. ಜಿಲ್ಲೆ, ತಾಲೂಕು ಪಂಚಾಯಿತಿ, ಮಹಾನಗರಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಸಂಸ್ಥೆಗಳಿಂದ ದ್ವಿತೀಯ ಮೂಲದ ಮಾಹಿತಿಗಳನ್ನು ಪಡೆಯಬಹುದು. ಆ ಸಂಸ್ಥೆಗಳಿಗೆ ಚುನಾಯಿತರಾಗಿದ್ದ ಸದಸ್ಯರ ಕನಿಷ್ಠ ಮೂರು ಅವಧಿಗಳ ಜಾತಿವಾರು ಪಟ್ಟಿಯನ್ನು ತರಿಸಿಕೊಳ್ಳಬೇಕು.

ಸ್ಥಳೀಯ ಸಂಸ್ಥೆಗಳ ಚುನಾವಣೆಗಳಿಗೆ ಸಂಬಂಧಿಸಿದಂತೆ, ಈ ವಿಷಯ ಮುನ್ನೆಲೆಗೆ ಬಂದು ಹಲವು ತಿಂಗಳು ಕಳೆದು ಹೋಗಿವೆ. ಇಷ್ಟಾದರೂ ಸರ್ಕಾರ ಮಾತ್ರ ಕ್ರಮಕ್ಕೆ ಬದಲಾಗಿ ಮೌನಕ್ಕೆ ಶರಣಾಗಿರುವುದು ಹಿಂದುಳಿದ ವರ್ಗಗಳ ಹಿತ ಕಾಯಬೇಕಾದ ಹೊಣೆ ಇರುವ ಸರ್ಕಾರಕ್ಕೆ ಗೌರವ ತರುವ ವಿಷಯವಲ್ಲ. ವೃಥಾ ಕಾಲಹರಣ ಮಾಡಿ, ಕೊನೆಗೆ ಚುನಾವಣೆ ನಡೆಸಬೇಕಾದ ಅನಿವಾರ್ಯ ಪರಿಸ್ಥಿತಿ ಉಂಟಾಗಿ ಮೀಸಲಾತಿಯನ್ನು ಬದಿಗಿಟ್ಟು ಚುನಾವಣೆ ನಡೆಸುವ ಸಂದರ್ಭ ಬಂದಲ್ಲಿ, ಆ ವರ್ಗಗಳಿಗೆ ರಾಜಕೀಯವಾಗಿ ತೀವ್ರ ಅನ್ಯಾಯವಾಗುವಾಗುವುದಂತೂ ನಿಶ್ಚಿತ.

ವಿಧಾನಮಂಡಲದ ಸಭೆಗಳು ನಡೆಯುತ್ತಿರುವ ಈ ಸಂದರ್ಭದಲ್ಲಿ ವಿರೋಧ ಪಕ್ಷಗಳು ಕೂಡ ಧ್ವನಿ ಎತ್ತಿ, ಕೂಡಲೇ ಕಾರ್ಯೋನ್ಮುಖವಾಗುವಂತೆ ಸರ್ಕಾರವನ್ನು ಒತ್ತಾಯಿಸುವ ಅವಶ್ಯಕತೆಯೂ ಇದೆ.

ಲೇಖಕ: ಮಾಜಿ ಸದಸ್ಯ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ

> ಸುಪ್ರೀಂ ಕೋರ್ಟ್‌ನ 2010ರ ಆದೇಶ ಕುರಿತಂತೆ ತನ್ನ ನಿಲುವು ಏನು ಎಂಬುದನ್ನು ಕರ್ನಾಟಕ ಸರ್ಕಾರ ಈವರೆಗೂ ಸ್ಪಷ್ಟಪಡಿಸಿಲ್ಲ. ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸದೆ ಚುನಾವಣೆ ನಡೆಸುವುದು ಕಷ್ಟಸಾಧ್ಯ. ಮೀಸಲಾತಿ ನೀಡದೆಯೇ ಚುನಾವಣೆ ನಡೆಸಿದರೆ, ಹಿಂದುಳಿದ ವರ್ಗಗಳಿಗೆ ಇರುವ ಮೀಸಲಾತಿ ಅವಕಾಶ ಕೈತಪ್ಪುತ್ತದೆ. ತ್ರಿಸ್ತರ ಪರಿಶೀಲನೆಗಾಗಿ ಪ್ರತ್ಯೇಕ ಆಯೋಗವೊಂದನ್ನು ಸರ್ಕಾರವು ರಚಿಸಲೇಬೇಕಾಗಿದೆ

'ಶೈಕ್ಷಣಿಕ, ಸಾಮಾಜಿಕ ಸಮೀಕ್ಷೆ ಆಧರಿಸಿ ಮೀಸಲಾತಿ ನಿರ್ಧರಿಸಿ'



ರಾಜ್ಯ ಸರ್ಕಾರ ನಡೆಸಿದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಆಧರಿಸಿ ಸರ್ಕಾರ ರಾಜಕೀಯ ಮೀಸಲಾತಿಯ ನಿರ್ಧಾರ ಕೈಗೊಳ್ಳುವುದೇ ಉತ್ತಮ. ಪ್ರತಿ ಮನೆಗೂ ತೆರಳಿ ನಡೆಸಿದ್ದ ಈ ಸಮೀಕ್ಷೆಯಲ್ಲಿ ಗ್ರಾಮ ಪಂಚಾಯಿತಿಯಿಂದ ಹಿಡಿದು ಲೋಕಸಭೆವರೆಗೆ ಯಾವ ಜಾತಿಗೆ ಎಷ್ಟು ರಾಜಕೀಯ ಪ್ರಾತಿನಿಧ್ಯ ಸಿಕ್ಕಿದೆ ಎಂಬ ವಿವರಗಳನ್ನೂ ಕಲೆಹಾಕಲಾಗಿತ್ತು. ಹಿಂದುಳಿದ ಜಾತಿಗಳಿಗೆ ಸಿಕ್ಕಿರುವ ರಾಜಕೀಯ ಪ್ರಾತಿನಿಧ್ಯದ ಬಗ್ಗೆ ವಿವರ ಸಂಗ್ರಹಿಸಲು ಸರ್ಕಾರ ಹೊಸ ಆಯೋಗವನ್ನು ರಚಿಸಿದರೂ ಇಷ್ಟು ನಿಖರವಾದ ಮಾಹಿತಿ ಕಲೆ ಹಾಕುವುದು ಕಷ್ಟ. ಹೊಸತಾಗಿ ಸಮೀಕ್ಷೆ ಆರಂಭಿಸಿದರೂ, ಪೂರ್ಣಗೊಳಿಸುವುದಕ್ಕೇ ಎರಡು ವರ್ಷಗಳಾದರೂ ಬೇಕು. ಅಷ್ಟರವರೆಗೆ ಸ್ಥಳೀಯ ಸಂಸ್ಥೆಗಳ ಚುನಾವಣೆ ಮುಂದೂಡುವುದು ಸರಿಯಲ್ಲ. ಹಿಂದುಳಿದ ಜಾತಿಗಳಿಗೆ ರಾಜಕೀಯ ಮೀಸಲಾತಿ ಕಲ್ಪಿಸದೆಯೇ ಚುನಾವಣೆ ನಡೆಸುವುದನ್ನು ಯಾವುದೇ ಕಾರಣಕ್ಕೂ ಒಪ್ಪಲಾಗದು. ಸ್ಥಳೀಯ ಸಂಸ್ಥೆಗಳಲ್ಲಿ ರಾಜಕೀಯ ಮೀಸಲಾತಿ ಕುರಿತು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ವಿರುದ್ಧವಾಗಿ ಕಾನೂನು ತಿದ್ದುಪಡಿ ತರಬಹುದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಬಡ್ತಿ ಮೀಸಲಾತಿ ಸಂಬಂಧ ರಾಜ್ಯ ಸರ್ಕಾರ ಈ ಹಿಂದೆ ಇಂತಹದ್ದೇ ಮಾರ್ಗವನ್ನು ಅನುಸರಿಸಿತ್ತು.

ಕೆ.ಎಂ.ರಾಮಚಂದ್ರಪ್ಪ, ಅಧ್ಯಕ್ಷ, ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ

'ಮೀಸಲಾತಿ ನಿಗದಿಗೆ ಪ್ರತ್ಯೇಕ ಸಮೀಕ್ಷೆ ನಡೆಸಲಿ'



ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ನಡೆಸಲಾದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ವೀರಶೈವ ಲಿಂಗಾಯತರಿಗೆ ಬಹಳಷ್ಟು ವಂಚನೆಗಳಾಗಿವೆ. ವೀರಶೈವ ಲಿಂಗಾಯತ ಸಮಾಜದ ಗಾಣಿಗ, ಸಾದರ, ರೆಡ್ಡಿ ಮೊದಲಾದ ಉಪಜಾತಿಯವರು ಸರ್ಕಾರದ ಸವಲತ್ತು ಸಿಗುತ್ತದೆ ಎಂಬ ಕಾರಣಕ್ಕೆ ಹಿಂದೂ ಗಾಣಿಗ, ಹಿಂದೂ ಸಾದರ, ಹಿಂದೂ ರೆಡ್ಡಿ ಎಂದು ಹೇಳಿಕೊಂಡಿದ್ದಾರೆ. ಇದರಿಂದ ಸಹಜವಾಗಿಯೇ ಈ ಸಮೀಕ್ಷೆಯಲ್ಲಿ ವೀರಶೈವ ಲಿಂಗಾಯತರ ಜನಸಂಖ್ಯೆ ವಾಸ್ತವಕ್ಕಿಂತ ಕಡಿಮೆ ಇರುವಂತೆ ಬಿಂಬಿತವಾಗಿದೆ. ಉದ್ದೇಶಪೂರ್ವಕವಾಗಿ ಈ ರೀತಿ ಮಾಡಲಾಗಿದೆ. ಹಾಗಾಗಿ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಈ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯನ್ನು ಆಧರಿಸಿ ಮೀಸಲಾತಿ ನಿಗದಿಪಡಿಸುವುದನ್ನು ನಾನು ಸ್ಪಷ್ಟವಾಗಿ ವಿರೋಧಿಸುತ್ತೇನೆ. ಯಾರೂ ಅರ್ಜಿ ಹಾಕಿ ನಿರ್ದಿಷ್ಟ ಜಾತಿಯಲ್ಲಿ ಹುಟ್ಟುವುದಿಲ್ಲ. ಸರ್ಕಾರದ ಸವಲತ್ತು ಪಡೆಯುವ ಕಾರಣಕ್ಕೆ ಜಾತಿ ತ್ಯಜಿಸುವುದನ್ನು ಒಪ್ಪಲಾಗದು. ಯಾರಿಗೋ ಸಿಗುವ ಸವಲತ್ತನ್ನು ನಾವು ಕಸಿದುಕೊಳ್ಳಬಾರದು. ಅಗತ್ಯಬಿದ್ದರೆ ಸರ್ಕಾರ ಪ್ರತ್ಯೇಕ ಸಮೀಕ್ಷೆ ನಡೆಸಿ ಮೀಸಲಾತಿಯ ಪ್ರಮಾಣವನ್ನು ನಿರ್ಧರಿಸಬೇಕು ಎಂಬುದು ನನ್ನ ಅಭಿಪ್ರಾಯ.

ಬಿ.ಎಸ್.ಪರಮಶಿವಯ್ಯ, ಅಧ್ಯಕ್ಷ, ರಾಜ್ಯ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ

'ಮೀಸಲಾತಿ ಕಲ್ಪಿಸದೆ ಚುನಾವಣೆ ನಡೆಸಬಾರದು'



ಹಿಂದುಳಿದ ವರ್ಗಗಳ ಮೀಸಲಾತಿ ಕಸಿಯುವ ಪ್ರಯತ್ನ ಸದ್ದಿಲ್ಲದೇ ನಡೆಯುತ್ತಿದೆ. ಹಿಂದುಳಿದ ವರ್ಗಗಳಿಗೆ ಸೇರಿರುವ ಎಲ್ಲ ಜಾತಿಗಳ ಮುಖಂಡರು ಸಭೆ ಸೇರಿ, ನಮ್ಮ ಹಕ್ಕನ್ನು ಯಾವುದೇ ಕಾರಣಕ್ಕೆ ಕಸಿದುಕೊಳ್ಳಲು ಅವಕಾಶ ನೀಡಬಾರದು ಎಂಬ ನಿರ್ಧಾರ ತಳೆದಿದ್ದೇವೆ. ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲೂ ಹಿಂದುಳಿದ ವರ್ಗಗಳ ಮೀಸಲಾತಿ ತಪ್ಪಿಸುವ ಹುನ್ನಾರ ನಡೆದಿದೆ. ಸರ್ಕಾರ ಈಗಾಗಲೇ ನಡೆಸಿರುವ ರಾಜ್ಯದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಅಂಕಿ ಅಂಶಗಳು ಜಾತಿ ಆಧಾರಿತ ಮೀಸಲಾತಿ ಕಲ್ಪಿಸುವುದಕ್ಕೆ ಅತ್ಯಂತ ಸೂಕ್ತವಾದ ದಾಖಲೆ. ಇವುಗಳ ಆಧಾರದಲ್ಲೇ ಸ್ಥಳೀಯ ಸಂಸ್ಥೆಗಳಲ್ಲಿ ರಾಜಕೀಯ ಪ್ರಾತಿನಿಧ್ಯ ಕಲ್ಪಿಸಬೇಕು ಎಂಬುದು ರಾಜ್ಯದ ಎಲ್ಲ ಹಿಂದುಳಿದ ಜಾತಿಗಳ ಒತ್ತಾಯ. ಸರ್ಕಾರ ಈ ಬಗ್ಗೆ ಮೀನಮೇಷ ಮಾಡುವುದು ಸರಿಯಲ್ಲ. ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ಜಾತಿಗಳಿಗೂ ಮೀಸಲಾತಿ ಕಲ್ಪಿಸುವ ಕುರಿತು ಸರ್ಕಾರ ದಿಟ್ಟ ನಿರ್ಧಾರ ತಳೆಯಬೇಕು. ಹಿಂದುಳಿದ ಜಾತಿಗಳಿಗೆ ರಾಜಕೀಯ ಮೀಸಲಾತಿ ಕಲ್ಪಿಸದೆಯೇ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವುದನ್ನು ಯಾವುದೇ ಕಾರಣಕ್ಕೆ ಒಪ್ಪಲಾಗದು.

ಎಂ.ತಿಮ್ಮೇಗೌಡ, ಅಧ್ಯಕ್ಷ, ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 68



ಶಿವಭಕ್ತರಿಗೆ ನರಕ ಇಲ್ಲ

ಸಾವಿರದನೂರು ರುದ್ರಾಕ್ಷಗಳನ್ನು ಧರಿಸುವ ಕ್ರಮವನ್ನು ಪಾರ್ವತಿದೇವಿಗೆ ಹೇಳಿದ ಮಹಾಶಿವ, ಮುಂದೆ ಅಷ್ಟು ರುದ್ರಾಕ್ಷಿಗಳು ಸಿಕ್ಕದಿದ್ದರೆ, ಬೇರೆ ಏನು ಮಾಡಬೇಕೆಂಬ ವಿವರವನ್ನು ಹೇಳತೊಡಗುತ್ತಾನೆ.

ಶಿಖೆಯಲ್ಲಿ ಒಂದು ರುದ್ರಾಕ್ಷವನ್ನೂ, ಶಿರಸ್ಸಿನಲ್ಲಿ ಮೂವತ್ತು ರುದ್ರಾಕ್ಷಗಳನ್ನೂ ಧರಿಸಬೇಕು. ಕತ್ತಿನಲ್ಲಿ ಐವತ್ತು ರುದ್ರಾಕ್ಷಗಳನ್ನೂ, ಬಾಹುಗಳೆರಡರಲ್ಲಿ ಹದಿನಾರು-ಹದಿನಾರು ರುದ್ರಾಕ್ಷಗಳನ್ನೂ ಧರಿಸಬೇಕು. ಮಣಿಕಟ್ಟಿನಲ್ಲಿ ಹನ್ನೆರಡು ಹನ್ನೆರಡು; ಭುಜಶಿರಸ್ಸಿನಲ್ಲಿ ಐನೂರು ರುದ್ರಾಕ್ಷಿಗಳನ್ನು ಧರಿಸಬೇಕು. ನೂರೆಂಟು ರುದ್ರಾಕ್ಷಗಳಿಂದ ಉಪವೀತವನ್ನು ನಿರ್ಮಿಸಬೇಕು. ಈ ರೀತಿಯಾಗಿ ಸಾವಿರ ರುದ್ರಾಕ್ಷಗಳನ್ನು ಯಾರು ದೃಢವಾದ ನಿಯಮದಿಂದ ಧರಿಸುವರೋ, ಅವರನ್ನು ರುದ್ರನನ್ನೋಪಾದಿಯಲ್ಲಿ ದೇವತೆಗಳೆಲ್ಲರೂ ನಮಸ್ಕರಿಸುವರು.

ಶಿಖೆಯಲ್ಲಿ ಒಂದು ರುದ್ರಾಕ್ಷವನ್ನೂ, ಶಿರಸ್ಸಿನಲ್ಲಿ ನಲವತ್ತು ರುದ್ರಾಕ್ಷಗಳನ್ನೂ, ಕಂಠದಲ್ಲಿ ಮೂವತ್ತೆರಡು ರುದ್ರಾಕ್ಷಗಳನ್ನೂ, ಎದೆಯಲ್ಲಿ ನೂರೆಂಟು ರುದ್ರಾಕ್ಷಗಳನ್ನೂ, ಕೈಗಳೆರಡರಲ್ಲಿ ಹದಿನಾರು–ಹದಿನಾರು ರುದ್ರಾಕ್ಷಗಳನ್ನೂ, ಕಿವಿಯಲ್ಲೊಂದೊಂದು, ಬಾಹುಗಳಲ್ಲಿ ಆರು–ಆರು ರುದ್ರಾಕ್ಷಗಳನ್ನೂ ಯಾವ ಶಿವಭಕ್ತನು ಧರಿಸುವನೋ, ಅವನನ್ನು ಶಿವನಂತೆ ಎಲ್ಲರೂ ಸದಾ ಪೂಜಿಸಬೇಕು ಮತ್ತು ನಮಸ್ಕರಿಸಬೇಕು.

ಶಿರಸ್ಸಿನಲ್ಲಿ ಈಶಾನಮಂತ್ರದಿಂದಲೂ, ಕಿವಿಗಳಲ್ಲಿ ತತ್ಪುರುಷಮಂತ್ರದಿಂದಲೂ, ಕತ್ತಿನಲ್ಲೂ ಹೃದಯದಲ್ಲೂ ಅಘೋರಮಂತ್ರದಿಂದಲೂ ರುದ್ರಾಕ್ಷಗಳನ್ನು ಧರಿಸಬೇಕು. ಅಘೋರ ಬೀಜಮಂತ್ರದಿಂದ ಕೈಗಳಲ್ಲಿ ರುದ್ರಾಕ್ಷಗಳನ್ನು ಧರಿಸಬೇಕು. ಹದಿನೈದು ರುದ್ರಾಕ್ಷಗಳಿಂದ ಪೋಣಿಸಿರುವ ಮಾಲಿಕೆಯನ್ನು ವಾಮದೇವಮಂತ್ರದಿಂದ ಉದರದಲ್ಲಿ ಧರಿಸಬೇಕು. ಪಂಚಬ್ರಹ್ಮಮಂತ್ರಗಳಿಂದ ಯಜ್ಞೋಪವೀತವನ್ನೂ ಮತ್ತು ಹನ್ನೆರಡು ರುದ್ರಾಕ್ಷಗಳನ್ನೂ ಧರಿಸಬೇಕು. ಅಥವಾ ಶಿವಮೂಲಮಂತ್ರದಿಂದ ಎಲ್ಲಾ ರುದ್ರಾಕ್ಷಗಳನ್ನೂ ಧರಿಸಬೇಕು. ಯಾವುದೇ ಸಂದರ್ಭದಲ್ಲೂ ರುದ್ರಾಕ್ಷಧಾರಿಗಳು ಹೆಂಡ, ಸಾರಾಯಿ, ಮಾಂಸ, ಬೆಳ್ಳುಳ್ಳಿ, ಈರುಳ್ಳಿ, ಶಿಗ್ರು (ನುಗ್ಗೆಕಾಯಿ), ಶ್ಲೇಷ್ಮಾತಕ(ಚಳ್ಳೆಹಣ್ಣು)ಗಳನ್ನೂ ಮತ್ತು ಹಂದಿಮಾಂಸವನ್ನು ಭಕ್ಷಿಸಬಾರದು.

ಬಿಳಿಯ ರುದ್ರಾಕ್ಷವನ್ನು ಬ್ರಾಹ್ಮಣರು ಧರಿಸಬೇಕು. ಕ್ಷತ್ರಿಯರು ಕೆಂಪು ರುದ್ರಾಕ್ಷವನ್ನು ಧರಿಸಬೇಕು. ವೈಶ್ಯರು ಹಳದಿಬಣ್ಣದ ರುದ್ರಾಕ್ಷವನ್ನು ಧರಿಸಬೇಕು. ಕಪ್ಪು ರುದ್ರಾಕ್ಷವನ್ನು ಶ್ರಮಿಕರು ಧರಿಸಬೇಕು ಎಂದು ಶ್ರುತಿಯಲ್ಲಿ ಹೇಳಲಾಗಿದೆ. ಬ್ರಹ್ಮಚಾರ, ವಾನಪ್ರಸ್ಥ, ಗೃಹಸ್ಥಯತಿಗಳು ಪರಮರಹಸ್ಯವಾದ ಈ ರುದ್ರಾಕ್ಷವನ್ನು ಅವಶ್ಯವಾಗಿ ಧರಿಸಬೇಕು. ಯಾವ ಸಂದರ್ಭದಲ್ಲು ರುದ್ರಾಕ್ಷವನ್ನು ಧರಿಸದೆ ಇರಬಾರದು. ರುದ್ರಾಕ್ಷಧಾರಣವು ಪುಣ್ಯದಿಂದಲೇ ಲಭಿಸುವಂಥದ್ದು.

ಮೊದಲು ನೆಲ್ಲಿಕಾಯಿಗಾತ್ರವಾದುದು ಒಳ್ಳೆಯದು. ಆಮೇಲೆ ಅದಕ್ಕಿಂತಲೂ ಚಿಕ್ಕದಾಗಿರುವುದು ಉತ್ತಮವಾದುದು. ತರಚು ಆಗಿರುವುದು, ಮುಳ್ಳುಗಳಿಲ್ಲದುದು, ಕ್ರಿಮಿಗಳಿಂದ ದ್ರಷ್ಟವಾದುದು, ಪೋಣಿಸಲನುಕೂಲವಾದ ರಂಧ್ರವಿಲ್ಲದಂತಹ ರುದ್ರಾಕ್ಷಗಳನ್ನು ಧರಿಸಬಾರದು. ಕಡಲೆ ಪ್ರಮಾಣವಾದ ರುದ್ರಾಕ್ಷಿಯನ್ನೂ ಧರಿಸಿದರೂ ಒಳ್ಳೆಯದು.

ಎಲ್ಲಾ ಆಶ್ರಮದವರೂ, ಸ್ತ್ರೀ-ಪುರುಷರೆನ್ನದೆ, ರುದ್ರಾಕ್ಷವನ್ನು ಸದಾ ಧರಿಸಬೇಕು. ಯತಿಗಳೂ ಓಂಕಾರಪೂರ್ವಕವಾಗಿ ಧರಿಸಬೇಕು ಎನ್ನುವುದು ಶಿವನ ಆಜ್ಞೆಯಾಗಿದೆ – ಎಂದ ಸೂತಮುನಿ, ಹಗಲು ಧರಿಸಿದರೆ ರಾತ್ರಿಯ ಪಾಪ ನಾಶವಾಗುವುದು; ರಾತ್ರಿ ರುದ್ರಾಕ್ಷಗಳನ್ನು ಧರಿಸಿದರೆ ಹಗಲು ಮಾಡಿದ ಪಾಪ ನಾಶವಾಗುವುದು. ಪ್ರಾತಃಕಾಲ, ಮಧ್ಯಾಹ್ನ, ಸಾಯಂಕಾಲಗಳಲ್ಲಿ ಧರಿಸಿದರೆ ಸರ್ವಪಾಪಗಳೂ ನಾಶವಾಗುವುವು. ಕೈಗಳು, ಬಾಹುಗಳು, ಶಿರಸ್ಸುಗಳಲ್ಲಿ ರುದ್ರಾಕ್ಷವನ್ನು ಯಾರು ಧರಿಸುವರೋ ರುದ್ರರೂಪನಾಗಿ, ಸರ್ವಪ್ರಾಣಿಗಳಿಗೂ ಅವಧ್ಯನಾಗಿ ಸಂಚರಿಸುತ್ತಾನೆ. ಅವರನ್ನು ಯಾರೂ ಹಿಂಸಿಸಲಾರರು, ಕೊಲ್ಲಲಾರರು. ಎಲ್ಲರಿಗೂ ಶಿವನಂತೆ ಪೂಜ್ಯರಾಗಿರುತ್ತಾರೆ. ಅವರ ದರ್ಶನಮಾಡಿದರೆ ಪಾಪ ನಾಶವಾಗುವುದು ಎಂದು ಶಿವನು ಪಾರ್ವತಿಗೆ ತಿಳಿಸಿದ್ದನ್ನು ಹೇಳುತ್ತಾನೆ.

ಭಸ್ಮತ್ರಿಪುಂಡ್ರವನ್ನು ಧರಿಸುವವರೂ ಜಟಾಧಾರಿಗಳೂ ರುದ್ರಾಕ್ಷವನ್ನು ಧರಿಸುವವರೂ ಎಂದಿಗೂ ಯಮಲೋಕಕ್ಕೆ ಹೋಗುವುದಿಲ್ಲ. ಯಾರು ರುದ್ರಾಕ್ಷವೊಂದನ್ನಾದರೂ ಶಿರಸ್ಸಿನಲ್ಲಿ ಧರಿಸುವರೋ, ಭಸ್ಮತ್ರಿಪುಂಡ್ರವನ್ನು ಧರಿಸುವರೋ, ಶಿವಪಂಚಾಕ್ಷರಮಂತ್ರವನ್ನು ಜಪಿಸುವರೋ, ಅವರನ್ನು ಎಲ್ಲರೂ ಪೂಜಿಸಬೇಕು. ಇಂತಹ ಶಿವಭಕ್ತರು ಸಾಧುವು ಮತ್ತು ಸತ್ಪುರುಷರೂ ಆಗಿರುತ್ತಾರೆ. ಯಾರ ಶರೀರದಲ್ಲಿ ರುದ್ರಾಕ್ಷವಿಲ್ಲವೋ, ಹಣೆಯಲ್ಲಿ ವಿಭೂತಿಯಿಲ್ಲವೋ, ಮುಖದಲ್ಲಿ ಶಿವಪಂಚಾಕ್ಷರೀ ಮಂತ್ರವಿಲ್ಲವೋ, ಅವರನ್ನು ಯಮಲೋಕಕ್ಕೆ ಕರೆ ತನ್ನಿ – ಎಂದು ಸ್ವತಃ ಯಮನೇ ತನ್ನ ಧೂತರಿಗೆ ಆಜ್ಞಾಪಿಸಿದ್ದಾನೆ.

ಅಂದಿನಿಂದ ಇಲ್ಲಿಯವರೆಗೆ ಭಸ್ಮ-ರುದ್ರಾಕ್ಷಧಾರಿಗಳು ಯಮಲೋಕಕ್ಕೆ ಹೋಗಿಲ್ಲ ಎಂದ ಸೂತಮುನಿ, ಮತ್ತೆ ಪರಶಿವ ಭಸ್ಮ-ರುದ್ರಾಕ್ಷಗಳ ಮಹಿಮೆಯನ್ನು ಪಾರ್ವತಿಗೆ ಹೇಳಿದ ಮತ್ತಷ್ಟು ವಿವರವನ್ನು ಪ್ರಯಾಗದ ಮುನಿಗಳಿಗೆ ನೀಡಲು ಉದ್ಯುಕ್ತನಾಗುತ್ತಾನೆ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ **ಟರ್ಬನ್** ಸುತ್ತಿಕೊಂಡು ಕೈಯಲ್ಲಿ ಸಿಖ್ ಧ್ವಜ ಹಿಡಿದ ಕೆಲವರು 'ಖಾಲಿಸ್ತಾನ್ ಜಿಂದಾಬಾದ್' ಎಂಬ ಘೋಷಣೆ ಕೂಗುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷವು ಜಯ ಗಳಿಸಿದ ಬಳಿಕ ರಾಜ್ಯದಲ್ಲಿ ಖಾಲಿಸ್ತಾನ್ ಚಳವಳಿಗೆ ಮರುಜೀವ ಸಿಕ್ಕಿದೆ ಎಂಬ ಅರ್ಥದಲ್ಲಿ ಚರ್ಚೆಗಳು ಶುರುವಾಗಿವೆ. 'ಎಎಪಿ ಗೆಲುವಿನೊಂದಿಗೆ ರಾಜ್ಯದಲ್ಲಿ ಬದಲಾವಣೆ ಶುರುವಾಗಿದೆ' ಎಂದು ಕೆಲವರು ಉಲ್ಲೇಖಿಸಿದ್ದಾರೆ.



✓ **ಪಂಜಾಬ್** ಚುನಾವಣೆಗೂ, ಈ ವಿಡಿಯೊಗೂ ಸಂಬಂಧವಿಲ್ಲ ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೆಬ್‌ಸೈಟ್ ತಿಳಿಸಿದೆ. ಕೆಂಪುಕೋಟೆ ಮೇಲೆ ಧ್ವಜ ಹಾರಿಸಿ ಸುದ್ದಿಯಾಗಿದ್ದ ಹಾಗೂ ಇತ್ತೀಚೆಗೆ ಅಪಘಾತದಲ್ಲಿ ಮೃತಪಟ್ಟ ದೀಪ್ ಸಿಧು ನೆನಪಿನಲ್ಲಿ ಭಟಿಂಡಾದಲ್ಲಿ ನಡೆದ ಮೆರವಣಿಗೆಯಲ್ಲಿ ಖಾಲಿಸ್ತಾನ್ ಪರ ಘೋಷಣೆ ಕೂಗಲಾಗಿತ್ತು. ಈ ವಿಡಿಯೊ ಫೆ.22ರಂದು ಯೂಟ್ಯೂಬ್‌ನಲ್ಲಿ ಅಪ್ಲೋಡ್ ಆಗಿದೆ. ಪಂಜಾಬ್ ಫಲಿತಾಂಶ ಪ್ರಕಟವಾಗಿದ್ದು ಮಾರ್ಚ್ 10ರಂದು ಎಂದು ವೆಬ್‌ಸೈಟ್ ತಿಳಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಪಾಲಿಗೆ ಬಂದ ಕರ್ತವ್ಯ

ಎಲ್ಲಕಂ ನಿನಗಿಲ್ಲ ಕರ್ತವ್ಯದಧಿಕಾರ |
ಇಲ್ಲದೆಯುಮಿಲ್ಲ ನಿನಗಾ ಹೊರೆಯ ಪಾಲು ||
ಸಲ್ಲಿಸಾದನಿತ, ಮಿಕ್ಕುದು ಪಾಲಿಗನ ಪಾಡು |
ಒಲ್ಲನವನ್ ಅರೆನಚ್ಚ – ಮಂಕುತಿಮ್ಮ || 584 ||

ಪದ-ಅರ್ಥ: ಎಲ್ಲಕಂ = ಎಲ್ಲಕ್ಕೂ, ಇಲ್ಲದೆಯುಮಿಲ್ಲ = ಇಲ್ಲವೆಂದಲ್ಲ, ಸಲ್ಲಿಸಾದನಿತ = ಸಲ್ಲಿಸು + ಆದನಿತ (ಆದಷ್ಟು), ಪಾಲಿಗ = ಪಾಲಿಸುವವನ (ಭಗವಂತನ), ಒಲ್ಲನವನ್ = ಒಲ್ಲನು (ಇಷ್ಟಪಡನು) + ಅವನ್ (ಅವನು), ಅರೆನಚ್ಚ = ಅರೆನಂಬಿಕೆ.

ವಾಚ್ಯಾರ್ಥ: ಎಲ್ಲ ಕೆಲಸಗಳಿಗೂ ನಿನಗೆ ಕರ್ತವ್ಯದ ಅಧಿಕಾರವಿಲ್ಲ. ನಿನಗೆ ಆ ಕರ್ತವ್ಯ ಭಾರದಲ್ಲಿ ಯಾವ ಜವಾಬ್ದಾರಿಯೂ ಇಲ್ಲವೆಂದಲ್ಲ. ನಿನ್ನಿಂದ ಆದಷ್ಟನ್ನು ಸಲ್ಲಿಸು ಉಳಿದದ್ದನ್ನು ಯಜಮಾನನ ತೀರ್ಮಾನಕ್ಕೆ ಬಿಡು. ಅವನು ಅರ್ಧನಂಬಿಕೆಯ ಕಾರ್ಯಗಳನ್ನು ಇಷ್ಟಪಡುವುದಿಲ್ಲ.

ವಿವರಣೆ: ಪ್ರಪಂಚದಲ್ಲಿ ನೂರಾರು ಕಾರ್ಯಗಳು ನಡೆಯುತ್ತವೆ. ಯಾರೊಬ್ಬರೂ ಎಲ್ಲ ಕೆಲಸಗಳನ್ನು ಮಾಡುವುದು ಸಾಧ್ಯವಿಲ್ಲ. ಅವುಗಳಲ್ಲಿ ಕೆಲವು ಕಣ್ಣಿಗೆ ಕಾಣುವಂಥ ದೊಡ್ಡ ಕೆಲಸಗಳಿವೆ, ಮತ್ತೆ ಕೆಲವು ಕಣ್ಣಿಗೆ ಕಾಣದಂಥ ಕೆಲಸಗಳೂ ಇವೆ. ಆದರೆ ಯಾವುದೂ ಚಿಕ್ಕದಲ್ಲ, ಯಾವುದೂ ದೊಡ್ಡದಲ್ಲ. ಪ್ರಧಾನಮಂತ್ರಿಗಳು ಕೆಂಪುಕೋಟೆಯ ಮೇಲೆ ರಾಷ್ಟ್ರಧ್ವಜವನ್ನು ಹಾರಿಸುವುದು ಇಡೀ ಪ್ರಪಂಚಕ್ಕೆ ಕಾಣುತ್ತದೆ. ಅದೊಂದು ಗೌರವದ, ಮುಖ್ಯ ಕಾರ್ಯ. ಆದರೆ ಅವರು ಬರುವುದಕ್ಕಿಂತ ಮೊದಲು, ಯಾರೂ ನೋಡದಿದ್ದಾಗ ಆ ಧ್ವಜವನ್ನು ಸರಿಯಾಗಿ ಮಡಿಚಿ, ಅದರಲ್ಲಿ ಬಣ್ಣ ಬಣ್ಣದ ಹೂವುಗಳನ್ನು ತುಂಬಿ, ಅದರ ಮಡಿಕೆಗಳ ಮೇಲೆ ಹಗ್ಗದ ಹಗುರವಾದ ಗಂಟನ್ನು ಹಾಕಿ, ಮೇಲಕ್ಕೇರಿಸಿ, ಎಳೆಯಬೇಕಾದ ಹಗ್ಗ ಸುಲಭವಾಗಿ ಪ್ರಧಾನಮಂತ್ರಿಗಳ ಕೈಗೆ ಸಿಗುವಂತೆ ಮಾಡುವುದು ಸಣ್ಣ ಕೆಲಸವೇ? ಆ ವ್ಯಕ್ತಿ ಗಂಟನ್ನು ಸರಿಯಾಗಿ ಹಾಕದಿದ್ದರೆ, ಎಳೆದಾಗ ಬಿಚ್ಚಿಕೊಳ್ಳದಿದ್ದರೆ ಬಹುದೊಡ್ಡ ಆಭಾಸ. ಪ್ರಧಾನಮಂತ್ರಿಗಳಿಗೆ, ಇಡೀ ದೇಶಕ್ಕೆ ಮುಖಭಂಗ. ಹಾಗಾದರೆ ಯಾವ ಕೆಲಸವನ್ನು ಚಿಕ್ಕದೆನ್ನುವುದು? ಧ್ವಜ ಹಾರಿಸುವ ಕೆಲಸದಲ್ಲಿ ಧ್ವಜ ಕಟ್ಟುವವನ ಕಾರ್ಯದ ಪಾಲೂ ಇದೆ. ಅದು ಜನರ ಕಣ್ಣಿಗೆ ಕಾಣಿಸಲಿಕ್ಕಿಲ್ಲ. ಆದರೆ ಸಣ್ಣದಲ್ಲ. ಯಾವುದೇ ಕೆಲಸದಲ್ಲಿ ನಮಗೆ ದೊಡ್ಡದೋ, ಸಣ್ಣದೋ ಕೆಲಸ ದೊರಕುತ್ತದೆ. ದೊಡ್ಡದೆಂದು ಹಿಗ್ಗುವುದಾಗಲಿ, ಸಣ್ಣದೆಂದು ಕುಗ್ಗುವುದಾಗಲೀ ಬೇಕಿಲ್ಲ. ಮದುವೆಯ ಮನೆಯಲ್ಲಿ ಸಾವಿರಾರು ಕೆಲಸಗಳು. ಮದುವೆಯ ಗಂಡು, ವಧು ಇಬ್ಬರೂ ಬಹಳ ಮುಖ್ಯ. ಪುರೋಹಿತರೇ ಮದುವೆಯ ಕಾರ್ಯವನ್ನು ನಡೆಸುವವರು. ಅವರೂ ಮುಖ್ಯ. ಅಡುಗೆಯವರು, ಅಲಂಕಾರದವರು, ಫೋಟೊ ತೆಗೆಯುವವರು ಎಲ್ಲರದೂ ಪ್ರಮುಖ ಕೆಲಸಗಳೇ. ಒಬ್ಬನಿಗೆ ಬಚ್ಚಲನ್ನು ಸಾಬೂನು ಹಾಕಿ ತೊಳೆಯುವ ಕೆಲಸ. ಅವನಿಗೆ ಇದು ಕೀಳು. ಅರೆಮನಸ್ಸಿನಿಂದ ತೊಳೆದ. ಮದುವೆಯ ಗಂಡು ಅಕ್ಷತೆಗಿಂತ ಮೊದಲು ಬಚ್ಚಲುಮನೆಗೆ ಬಂದ. ನೆಲಕ್ಕೆ ಹಾಕಿದ ಸಾಬೂನನ್ನು ಸರಿಯಾಗಿ ತೊಳೆದಿಲ್ಲ. ಹುಡುಗ ಜಾರಿ ಬಿದ್ದ. ತಲೆ ಒಡೆಯಿತು. ಎಚ್ಚರ ತಪ್ಪಿತು. ಅವನನ್ನು ಆಸ್ಪತ್ರೆಗೆ ದಾಖಲಿಸಿದರು. ಮದುವೆ ನಿಂತಿತು. ಯಾರ ಕೆಲಸ ಮುಖ್ಯವಾಯಿತು? ಇದೊಂದು ಅರೆಮನಸ್ಸಿನ ಕಾರ್ಯ ಮಾಡಿದ ಅನಾಹುತ.

ಕಗ್ಗ ಹೇಳುತ್ತದೆ, ನಿನಗೆ ಎಲ್ಲ ಕೆಲಸ ಮಾಡುವ ಅಧಿಕಾರವಿಲ್ಲ. ಮತ್ತೆ, ಯಾವ ಕೆಲಸವೂ ಇಲ್ಲವೆಂದಲ್ಲ. ನಿನಗೂ ಒಂದು ಕೆಲಸವಿದೆ. ಅದು ದೊಡ್ಡದೋ, ಸಣ್ಣದೋ ಎನ್ನುವುದು ನೀನು ನೊಡುವ ದೃಷ್ಟಿಯಲ್ಲಿದೆ. ನಿನ್ನ ಪಾಲಿಗೆ ಬಂದದ್ದನ್ನು ಶ್ರದ್ಧೆಯಿಂದ, ನಿನ್ನ ಶಕ್ತಿಯನ್ನು ಬಳಸಿ ಮಾಡು, ಉಳಿದದ್ದನ್ನು ಭಗವಂತನಿಗೆ ಬಿಡು, ಯಾವುದನ್ನೂ ಅರೆಮನಸ್ಸಿನಿಂದ ಮಾಡಬೇಡ. ಭಗವಂತ ಅರೆಮನಸ್ಸಿನ ಕಾರ್ಯವನ್ನು ಒಪ್ಪಲಾರ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಮಂಗಳವಾರ ಮಾರ್ಚ್ 15, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ–ಶಿಶಿರ ಋತು ಮೀನ ಮಾಸದ 01 ನೇ ದಿನ ತಿಥಿ: (ಫಾಲ್ಗುಣ ಶುಕ್ಲ) ದ್ವಾದಶಿ ಗಂ. 13-13 ನಕ್ಷತ್ರ: ಆಶ್ಲೇಷ ಗಂ. 23-33 ಯೋಗ: ಸುಕರ್ಮ ಗಂ. 27-40, ಕರಣ: ಬಾಲವ ಗಂ. 13-13. ರಾಹುಕಾಲ : ಮಧ್ಯಾಹ್ನ 03:00–04:30 ಸೂರ್ಯೋದಯ : 06-41 ಸೂರ್ಯಾಸ್ತ : 06-37 ಮುಸ್ಲಿಂ ದಿನಾಂಕ : 11 ಶಬನ್ ದಿನ ವಿಶೇಷ : ಪಕ್ಷ ಪ್ರದೋಷ
ಅದೃಷ್ಟ ಸಂಖ್ಯೆ: 6, 11

ಮೇಷ: ಶಸ್ತ್ರವೈದ್ಯರಿಗೆ ವೃತ್ತಿಗೆ ಸಂಬಂಧಿಸಿದಂತೆ ಸೌಲಭ್ಯಗಳು ಹೆಚ್ಚಲಿವೆ. ನಿರುದ್ಯೋಗಿಗಳು ಬಂದ ಅವಕಾಶವನ್ನು ಒಪ್ಪಿಕೊಳ್ಳುವುದು ಸದ್ಯದ ಪರಿಸ್ಥಿತಿಗೆ ಉತ್ತಮ. ಅದರಿಂದ ದಿನನಿತ್ಯದ ಹಣಕಾಸಿನ ಕೊರತೆ ಇರುವುದಿಲ್ಲ.

ವೃಷಭ: ರಾಜಕೀಯ ವರ್ಗದವರು ಸಾಮಾಜಿಕ ಬದುಕಿನಲ್ಲಿ ಹೊಸ ಹುರುಪು ಕಾಣಲಿದ್ದೀರಿ. ರೈತಾಪಿ ವರ್ಗದವರ ಕೆಲಸಗಳು ಸರಾಗವಾಗಿ ನೆರವೇರುವುದು. ದಿನಸಿ ವ್ಯಾಪಾರಿಗಳು ಮಾರಾಟದ ಕ್ಷೇತ್ರವನ್ನು ಹೆಚ್ಚಿಸಿಕೊಳ್ಳಬಹುದು.

ಮಿಥುನ: ಕಳೆದು ಹೋದ ಆಸ್ತಿಯ ಬಗ್ಗೆ ಯೋಚಿಸದೇ, ಶ್ರಮದಿಂದ ದುಡಿಯುವ ಬಗ್ಗೆ ಗಮನಹರಿಸಿ. ನಿಮ್ಮ ಬಾಳು ಹಸನವಾಗುವುದರೊಂದಿಗೆ ವೈವಾಹಿಕ ಜೀವನ ಸುಧಾರಿಸಲಿದೆ. ಮಕ್ಕಳ ಖರ್ಚುವೆಚ್ಚ ಸರಿದೂಗಿಸುವಿರಿ.

ಕರ್ಕಾಟಕ: ಈ ದಿನ ಎರಡನೇ ದರ್ಜೆಯ ನೌಕರರಿಗೆ ವರ್ಗಾವಣೆಯಿಂದ ಆರ್ಥಿಕವಾಗಿ ಅನುಕೂಲವಾಗುವುದು. ಇದು ನಿಮ್ಮ ಆನಂದವನ್ನು ಇಮ್ಮಡಿಗೊಳಿಸಲಿದೆ. ಹಣ್ಣು-ತರಕಾರಿಗಳ ವ್ಯಾಪಾರಿಗಳಿಗೆ ಲಾಭಾಂಶ ವೃದ್ಧಿಯಾಗುತ್ತದೆ.

ಸಿಂಹ: ಕ್ರೀಡಾಪಟುಗಳು ಅಥವಾ ಸಂಗೀತಗಾರರ ಅಭ್ಯಾಸದ ಕೊರತೆಯು ವೈಫಲ್ಯಕ್ಕೆ ಕಾರಣವಾಗುವುದು. ದಾಂಪತ್ಯ ಜೀವನ ಪರಸ್ಪರ ಸೋಲು ಗೆಲುವಿನಿಂದ ಉತ್ತಮವಾಗಿರುತ್ತದೆ. ಸಂತಾನ ಭಾಗ್ಯದ ಸುದ್ದಿ ಕೇಳುವಿರಿ.

ಕನ್ಯಾ: ಮನೆಯಲ್ಲಿ ನಡೆಯುವ ಶುಭಸಮಾರಂಭಕ್ಕೆ ಬಂಧು-ಮಿತ್ರರ ಸಹಕಾರ ನಿಮಗೆ ದೊರೆಯಲಿದೆ. ಬಂಗಾರದ ಮೇಲಿನ ಧನ ಹೂಡಿಕೆಯಲ್ಲಿ ಲಾಭ ಆಗುವುದು. ಮನಸ್ಸಿನ ನಾಗಾಲೋಟಕ್ಕೆ ಕಡಿವಾಣ ಹಾಕುವುದು ಉತ್ತಮ.

ತುಲಾ: ತಂದೆ ಅಥವಾ ಹಿರಿಯ ಸಹೋದರರಲ್ಲಿ ಸಂಯಮದ ನಡವಳಿಕೆ ಅಗತ್ಯ. ಸ್ನೇಹಿತರೊಂದಿಗಿನ ಮಾತುಕತೆ ಉಪಯುಕ್ತವೆನಿಸಲಿದೆ. ಮಗನಿಗೆ ಓದಿನಲ್ಲಿ ಸಹಾಯ ಮಾಡುವಿರಿ. ಶ್ರೀ ಕೃಷ್ಣನನ್ನು ಸ್ಮರಿಸಿ.

ವೃಶ್ಚಿಕ: ದೇಹದ ಎಲ್ಲಾ ನೋವುಗಳು ಮರೆಯಾಗುವುದು. ಗುತ್ತಿಗೆದಾರರ ಹತ್ತಿರ ಗೃಹ ನಿರ್ಮಾಣದ ವಿಚಾರದಲ್ಲಿ ಪುನಃ ಪುನಃ ಪಾಠ ಕಲಿಯುವಿರಿ. ತತ್ವ ಆದರ್ಶಗಳ ಜೊತೆಗೆ ಹಿರಿಯರ ಅನುಭವಗಳನ್ನು ಅಳವಡಿಸಿಕೊಳ್ಳಿರಿ.

ಧನು: ಮನೆಯ ಆಗು-ಹೋಗುಗಳನ್ನು ಪೂರ್ಣಗೊಳಿಸಲು ಹಣಕಾಸಿನ ಕೊರತೆ ಅಷ್ಟಾಗಿ ಕಾಡದು. ಮಗನ ಕೆಲಸ ನೆರವೇರಿದ ಕಾರಣಕ್ಕೆ ಹೇಳಿಕೊಂಡ ಹರಕೆಯನ್ನು ಪೂರ್ಣಗೊಳಿಸುವ ಬಗ್ಗೆ ಮಗನಲ್ಲಿ ಪ್ರಸ್ತಾಪಿಸಿ.

ಮಕರ: ಮಾನಸಿಕ ನೆಮ್ಮದಿ. ನಿಮ್ಮ ಆಪ್ತರು ನಿಮ್ಮ ಸಕಾಲಿಕ ನೆರವಿಗಾಗಿ ಧನ್ಯವಾದ ತಿಳಿಸುವರು. ಜೀವನದಲ್ಲಿ ನಡೆದ ಕಹಿ ಘಟನೆಗಳನ್ನು ಪಾಠದ ರೂಪದಲ್ಲಿ ನಿಮ್ಮ ಮಗನಿಗೆ ಹೇಳುವ ಅನಿವಾರ್ಯತೆ ಎದುರಾಗುವುದು.

ಕುಂಭ: ತಮ್ಮನ ಕೆಲಸಕ್ಕಾಗಿ ಉನ್ನತ ಅಧಿಕಾರಿಗಳನ್ನು ಕಾಣಲು, ಅವರಿಂದ ಸಹಾಯ ಪಡೆಯಲು ದಿನವಿಡೀ ಓಡಾಟ ನಡೆಸುವಿರಿ. ಕಣ್ಣಿನ ದೃಷ್ಟಿಯಲ್ಲಿ ಬದಲಾವಣೆಗಳು ಅನುಭವಕ್ಕೆ ಬಂದಲ್ಲಿ ತಡ ಮಾಡದೆ ವೈದ್ಯರ ಭೇಟಿ ಮಾಡಿ.


ಮೀನ: ದ್ವಿಚಕ್ರ ವಾಹನಗಳ ಮಾರಾಟಗಾರರಿಗೆ ಜೋರಿನ ವಹಿವಾಟು. ಷೇರು ಮಾರಾಟದಿಂದ ಅಧಿಕ ಲಾಭ. ನೀವು ಈ ದಿನ ಮಾಡುವ ಕೆಲಸದಿಂದ ಗುಂಪಿನಲ್ಲಿ ಗುರುತಿಸುವ ವ್ಯಕ್ತಿಯಾಗುವ ಲಕ್ಷಣ ಕಾಣುತ್ತಿದೆ.

ಪದಬಂಧ 4898

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2. ವಿವೇಚನೆಯಿಲ್ಲದ ಶ್ರದ್ಧೆ (5)
4. ಮಂದಿಯ ಹತ್ತಿರವಿರುವ ತಂದೆ (3)
5. ಆನೆಯನ್ನು ಹತೋಟಿಯಲ್ಲಿಡಲು ಬಳಸುವ ಸಾಧನ (3)
9. ತತ್ತಿಯನ್ನು ನೋಡಲು ನೆರೆದ ಸಮೂಹ! (2)
10. ಅವಳಿಗೋಸ್ಕರ ಖರೀಸಿದ ಬಟ್ಟೆ! (3)
11. ನೇಸರನ ಮತ್ತೊಂದು ಹೆಸರು (2)
12. ಈತ ಪಕ್ಕಾ ಹಳ್ಳಿಯವ! (3)
15. ಜಗಳಕ್ಕೊಂದು ಪರ್ಯಾಯ ಪದ (3)
16. ಅಸಂಬದ್ಧವಾದ ಚರ್ಚೆ (5)

ಮೇಲಿಂದ ಕೆಳಕ್ಕೆ
1. ಕೋರಿಕೆಯನ್ನು ಹೀಗೆನ್ನಿ (3)
2. ಮಾತು ಬಾರದಿರುವವನೀತ (2)
3. ಹತೋಟಿಯೇ ತಿರುವುಮುರುವಾಗಿದೆ (2)
4. ನೀರಿನ ಅಲೆಯ ಜೊತೆಗಿನ ವಾದ್ಯ (5)
6. ಮಲಗುವ ಕೋಣೆ (5)
7. ಹಳೇ ಸಾಮಾನುಗಳನ್ನು ಮಾರುವ ಅಂಗಡಿ (3)
8. ತೆಗಳಿಕೆ ಮಾಡಿದವನ ಸಂಪಾದನೆ! (3)
13. ವಿರಮಿಸುತ್ತಿರುವಾಗ ಕಾಣಿಸಿದ ಸೂರ್ಯ (2)
14. ಮಣ್ಣಿನ ಪಾತ್ರೆ (3)
15. ಕಲಾವಿದನ ಮನೆ ಬಾಗಿಲು! (2)



4897ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1. ಮೌನ 3. ಕಾತರ 5. ನಮೂನೆ 7. ದಿನಕರ 9. ಪ್ರತೀಕ 10. ಕರಣ 11. ರಸಾಭಾಸ 13. ಉಳಿವು 15. ಪರಾಕು 16. ಹಣ್ಣು

ಮೇಲಿಂದ ಕೆಳಕ್ಕೆ: 2. ನವೀನ 3. ಕಾಮನೆ 4. ರಶೀದಿ 6. ಮೂಷಿಕ 8. ರಣಪ 9. ಪ್ರಚಾರ 10. ಕದಳಿ 12. ಸಲ್ಲಾಪ 13. ಉಸುಕು 14. ವಿಗ್ರಹ

ಸುಡೊಕು 5284


	9				5		6	
2			4			8		5
	4				9		3	
4	6				7			
				4		1		6
8		7	5				4	
		4			2		1	7
7			1			6		
	8		7			2		4

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5283 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,630
ಇಂದಿನ ಅಂತ್ಯ	16,871
▲	241
ದಿನದ ಗರಿಷ್ಠ	16,887

ವಿನಿಮಯ ದರ

$ ಡಾಲರ್	76.54
£ ಪೌಂಡ್	99.65
€ ಯುರೊ	83.54
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹390
12 ಮೊಟ್ಟೆಗೆ	₹55
ಮೈಸೂರು	
100 ಮೊಟ್ಟೆಗೆ	₹390

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1630)
ಸೋಯಾ (ರಿಫೈನ್ಡ್)	₹1572 (1600)
ಸೂರ್ಯಕಾಂತಿ (ರಿಫೈನ್ಡ್)	1850 (---)
ಪಾಮೋಲಿನ್	₹1570 (1597)

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದಪ್ಪ	₹1500-2200
ಮಧ್ಯಮ	₹1000-1500
ಸಣ್ಣ	₹500-1000

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಕೆ.ಆರ್.ಪೇಟೆ	₹9600-9600
ಪುತ್ತೂರು	₹4000-10500
ತುರುವೇಕೆರೆ	₹17500-17500

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು
1ನೇ ದರ್ಜೆ
₹18000-20000
2ನೇ ದರ್ಜೆ
₹10000-16000

ಕಚ್ಚಾ ತೈಲ, ಆಹಾರೇತರ ವಸ್ತುಗಳ ಬೆಲೆ ಹೆಚ್ಚಳ ಪರಿಣಾಮ

ಸಗಟು ಹಣದುಬ್ಬರ ಶೇ 13.11

ನವದೆಹಲಿ (ಪಿಟಿಐ): ಕಚ್ಚಾ ತೈಲ ದರ ಏರಿಕೆ ಮತ್ತು ಆಹಾರೇತರ ವಸ್ತುಗಳ ಬೆಲೆ ಹೆಚ್ಚಳದಿಂದಾಗಿ ಸಗಟು ಹಣದುಬ್ಬರ ದರವು ಫೆಬ್ರುವರಿಯಲ್ಲಿ ಶೇಕಡ 13.11ಕ್ಕೆ ಏರಿಕೆ ಕಂಡಿದೆ.

ಜನವರಿಯಲ್ಲಿ ಇದು ಶೇ 12.96ರಷ್ಟು ಇತ್ತು. ಕಳೆದ ವರ್ಷದ ಫೆಬ್ರುವರಿಯಲ್ಲಿ ಶೇ 4.83ರಷ್ಟು ಇತ್ತು ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಮಾಹಿತಿ ನೀಡಿದೆ. 2021ರ ಏಪ್ರಿಲ್‌ನಿಂದ ಈಚೆಗೆ ಸಗಟು ಹಣದುಬ್ಬರ ದರವು ಸತತ 11ನೇ ತಿಂಗಳಿನಲ್ಲಿಯೂ ಎರಡಂಕಿ ಮಟ್ಟದಲ್ಲಿಯೇ ಇದೆ.

ಆಹಾರ ವಸ್ತುಗಳ ಹಣದುಬ್ಬರ ಪ್ರಮಾಣವು ಜನವರಿಯಲ್ಲಿ ಶೇ 10.33ರಷ್ಟು ಇದ್ದಿದ್ದು ಫೆಬ್ರುವರಿಯಲ್ಲಿ ಶೇ 8.19ಕ್ಕೆ ಇಳಿಕೆ ಆಗಿದೆ. ತರಕಾರಿಗಳ ಹಣದುಬ್ಬರವು ಶೇ 38.45ರಿಂದ ಶೇ 26.93ಕ್ಕೆ ಇಳಿಕೆ ಆಗಿದೆ.

ಜನವರಿಗೆ ಹೋಲಿಸಿದರೆ ಫೆಬ್ರುವರಿಯಲ್ಲಿ ಲೋಹ, ರಾಸಾಯನಿಕ



ಮತ್ತು ರಾಸಾಯನಿಕ ಉತ್ಪನ್ನಗಳು, ಕಚ್ಚಾ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಆಹಾರ ವಸ್ತುಗಳ ಮತ್ತು ಆಹಾರೇತರ ವಸ್ತುಗಳ ಬೆಲೆಯಲ್ಲಿ ಏರಿಕೆ ಆಗಿದೆ. ಹೀಗಾಗಿ ಸಗಟು ಹಣದುಬ್ಬರವು ಗರಿಷ್ಠ ಮಟ್ಟದಲ್ಲಿದೆ ಎಂದು ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ತಯಾರಿಕಾ ವಸ್ತುಗಳ ಹಣದುಬ್ಬರವು ಶೇ 9.42ರಿಂದ ಶೇ 9.84ಕ್ಕೆ ಏರಿಕೆ ಆಗಿದೆ. ಇಂಧನ ಮತ್ತು ವಿದ್ಯುತ್ ಬೆಲೆ ಏರಿಕೆಯು ಶೇ 31.50ರ ಮಟ್ಟದಲ್ಲಿ ಇದೆ. ಜಾಗತಿಕ ಮಟ್ಟದಲ್ಲಿ ಕಚ್ಚಾತೈಲ ದರ ಏರಿಕೆಯಿಂದಾಗಿ ಕಚ್ಚಾ ಪೆಟ್ರೋಲಿಯಂ ಹಣದುಬ್ಬರವು ಶೇ 39.41ರಿಂದ ಶೇ 55.17ಕ್ಕೆ ಏರಿಕೆ ಆಗಿದೆ ಎಂದು ಹೇಳಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲ ಮತ್ತು ಅಡುಗೆ ಎಣ್ಣೆ ದರ ಹೆಚ್ಚಾಗಿರುವುದೇ ಸಗಟು ಹಣದುಬ್ಬರ ಏರಿಕೆಗೆ ಪ್ರಮುಖ ಕಾರಣಗಳಾಗಿವೆ ಎಂದು ಐಸಿಆರ್‌ಎನ ಮುಖ್ಯ ಆರ್ಥಿಕ ತಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ಚಿಲ್ಲರೆ ಹಣದುಬ್ಬರ ಶೇ 6.07ಕ್ಕೆ ಏರಿಕೆ

ನವದೆಹಲಿ: ಆಹಾರ ವಸ್ತುಗಳ ಬೆಲೆ ಹೆಚ್ಚಳ ಆಗಿರುವುದರಿಂದ ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ದರವು ಫೆಬ್ರುವರಿಯಲ್ಲಿ ಶೇಕಡ 6.07ಕ್ಕೆ ಏರಿಕೆ ಆಗಿದೆ.

ಚಿಲ್ಲರೆ ಹಣದುಬ್ಬರ ಪ್ರಮಾಣವು ಜನವರಿಯಲ್ಲಿ ಶೇ 6.01ರಷ್ಟು ಇತ್ತು. ಇದಕ್ಕೆ ಹೋಲಿಸಿದರೆ ಶೇ 0.06ರಷ್ಟು ಏರಿಕೆ ಆಗಿದೆ. 2021ರ ಫೆಬ್ರುವರಿಯಲ್ಲಿ ಶೇ 5.03ರಷ್ಟು ಇತ್ತು. ಇದಕ್ಕೆ ಹೋಲಿಸಿದರೆ ಶೇ 1.04ರಷ್ಟು ಹೆಚ್ಚಾಗಿದೆ.

ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು ಬಿಡುಗಡೆ ಮಾಡಿರುವ ಮಾಹಿತಿಯ ಪ್ರಕಾರ, ಆಹಾರ ವಸ್ತುಗಳ ಹಣದುಬ್ಬರವು ಫೆಬ್ರುವರಿಯಲ್ಲಿ ಶೇ 5.89ರಷ್ಟಾಗಿದೆ. ಜನವರಿಯಲ್ಲಿ ಶೇ 5.43ರಷ್ಟು ಇತ್ತು.

ಚಿಲ್ಲರೆ ಹಣದುಬ್ಬರವನ್ನು ಶೇ 4ರಲ್ಲಿ (ಶೇ 2ರಷ್ಟು ಹೆಚ್ಚು ಅಥವಾ ಕಡಿಮೆ) ಮಿತಿಗೊಳಿಸುವಂತೆ ಕೇಂದ್ರ ಸರ್ಕಾರವು ಆರ್‌ಬಿಐಗೆ ಸೂಚನೆ ನೀಡಿದೆ. ಆದರೆ, ಫೆಬ್ರುವರಿಯ ಚಿಲ್ಲರೆ ಹಣದುಬ್ಬರವು ಶೇ 6ರ ಮಟ್ಟವನ್ನೂ ಮೀರಿದೆ.

ಸುದ್ದಿ 2 ನಿಮಿಷ

ಏರ್ ಇಂಡಿಯಾ ಕಂಪನಿಗೆ ಎನ್. ಚಂದ್ರಶೇಖರನ್ ಅಧ್ಯಕ್ಷ

ನವದೆಹಲಿ (ಪಿಟಿಐ): ಟಾಟಾ ಸನ್ಸ್‌ನ ಅಧ್ಯಕ್ಷ ಎನ್. ಚಂದ್ರಶೇಖರನ್ ಅವರನ್ನು ಏರ್ ಇಂಡಿಯಾ ಕಂಪನಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಟಾಟಾ ಸಮೂಹವು ಹಿಂದಿನ ವರ್ಷದ ಅಕ್ಟೋಬರ್‌ನಲ್ಲಿ ಏರ್ ಇಂಡಿಯಾ ಕಂಪನಿಯನ್ನು ಬಿಡ್ ಮೂಲಕ ಖರೀದಿಸಿದೆ. ಏರ್ ಇಂಡಿಯಾ ಕಂಪನಿಗೆ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಮತ್ತು ವ್ಯವಸ್ಥಾಪಕ ನಿರ್ದೇಶಕರ ನೇಮಕ ಇನ್ನೂ ಆಗಿಲ್ಲ.

ಚಂದ್ರಶೇಖರನ್ ಅವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡುವ ತೀರ್ಮಾನವನ್ನು ಏರ್ ಇಂಡಿಯಾ ಆಡಳಿತ ಮಂಡಳಿಯು ಹಿಂದಿನ ವಾರವೇ ಕೈಗೊಂಡಿದೆ ಎಂದು ಮೂಲಗಳು ಹೇಳಿವೆ.



ಜಿಎಸ್‌ಟಿ ಪರಿಹಾರ ವಿಸ್ತರಿಸಲು ರಾಜ್ಯಗಳಿಂದ ಮನವಿ

ನವದೆಹಲಿ (ಪಿಟಿಐ): 2022ರ ಜೂನ್ ಬಳಿಕವೂ ಜಿಎಸ್‌ಟಿ ಪರಿಹಾರವನ್ನು ವಿಸ್ತರಿಸಲು ಹಲವು ರಾಜ್ಯಗಳು ವಿನಂತಿ ಮಾಡಿವೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೋಮವಾರ ತಿಳಿಸಿದ್ದಾರೆ.

ಲೋಕಸಭೆಗೆ ಲಿಖಿತ ಉತ್ತರ ನೀಡಿದ ಅವರು, 'ಸಾಂವಿಧಾನಿಕ ನಿಬಂಧನೆಗಳ ಪ್ರಕಾರ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಐದು ವರ್ಷಗಳವರೆಗೆ ಜಿಎಸ್‌ಟಿ ಪರಿಹಾರ ನೀಡಲು ಕೇಂದ್ರ ಸರ್ಕಾರ ಬದ್ಧವಾಗಿದೆ' ಎಂದು ಹೇಳಿದ್ದಾರೆ. ಆದರೆ, ಮುಂದಿನ ಐದು ವರ್ಷಗಳಿಗೂ ಅದನ್ನು ವಿಸ್ತರಿಸುವ ಬಗ್ಗೆ ಯಾವುದೇ ಭರವಸೆ ನೀಡಿಲ್ಲ.

ಕೋವಿಡ್ ಪಿಡುಗಿನಿಂದ ಉಂಟಾದ ತೊಂದರೆಗಳನ್ನು ಗಮನದಲ್ಲಿ ಇರಿಸಿಕೊಂಡು, ಪರಿಹಾರವನ್ನು ಇನ್ನೂ ಐದು ವರ್ಷ ವಿಸ್ತರಿಸಲು ವಿನಂತಿಸಿ ರಾಜ್ಯ ಸರ್ಕಾರಗಳಿಂದ ಪ್ರಸ್ತಾವನೆ ಬಂದಿದೆಯೇ ಎಂಬ ಪ್ರಶ್ನೆಗೆ ನಿರ್ಮಲಾ ಅವರು, 'ಜಿಎಸ್‌ಟಿ ಮಂಡಳಿ ಮತ್ತು ಕೇಂದ್ರ ಸರ್ಕಾರಕ್ಕೆ ಬರೆದ ಪತ್ರಗಳಲ್ಲಿ ಅನೇಕ ರಾಜ್ಯಗಳು ಪರಿಹಾರದ ಅವಧಿಯನ್ನು ವಿಸ್ತರಿಸಲು ವಿನಂತಿಸಿವೆ' ಎಂದಷ್ಟೇ ತಿಳಿಸಿದ್ದಾರೆ.

ಕಡಿಮೆ ದರದಲ್ಲಿ ರಷ್ಯಾ ತೈಲ: ಪ್ರಸ್ತಾವ ಪರಿಗಣಿಸುತ್ತಿರುವ ಭಾರತ

ಒಂದನೇ ಪುಟದಿಂದ

ರಷ್ಯಾದಿಂದ ಎಷ್ಟು ತೈಲ ಸಿಗಬಹುದು, ಎಷ್ಟು ಪ್ರಮಾಣದ ರಿಯಾಯಿತಿ ನೀಡುವುದಾಗಿ ರಷ್ಯಾ ಹೇಳಿದೆ ಎಂಬ ವಿವರಗಳನ್ನು ಅಧಿಕಾರಿ ನೀಡಲಿಲ್ಲ. ಈ ಕುರಿತು ಕೇಂದ್ರ ಹಣಕಾಸು ಸಚಿವಾಲಯದಿಂದ ಪ್ರತಿಕ್ರಿಯೆ ಸಿಕ್ಕಿಲ್ಲ.

ತನ್ನ ಜೊತೆ ಸ್ನೇಹದಿಂದ ಇರುವ ರಾಷ್ಟ್ರಗಳು ವ್ಯಾಪಾರ ಮತ್ತು ಹೂಡಿಕೆ ನಂಟು ಮುಂದುವರಿಸಬೇಕು ಎಂದು ರಷ್ಯಾ ಮನವಿ ಮಾಡಿದೆ. ಭಾರತವು ರಸಗೊಬ್ಬರ ತಯಾರಿಕೆಗೆ ರಷ್ಯಾ ಮತ್ತು ಬೆಲಾರೂಸ್‌ನಿಂದ ಕಡಿಮೆ ವೆಚ್ಚದಲ್ಲಿ ಕಚ್ಚಾ ವಸ್ತುಗಳನ್ನು ತರಿಸಿಕೊಳ್ಳುವ ಬಗ್ಗೆಯೂ ಆಲೋಚಿಸುತ್ತಿದೆ.

ಐಒಸಿಯಿಂದ ಕಚ್ಚಾ ತೈಲ ಖರೀದಿ: ದೇಶದ ಅತಿದೊಡ್ಡ ತೈಲ ಸಂಸ್ಕರಣಾ ಕಂಪನಿಯಾಗಿರುವ ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ), ಮೇ ತಿಂಗಳಿನಲ್ಲಿ ಪೂರೈಕೆ ಆಗುವ 30 ಲಕ್ಷ ರಷ್ಯನ್ ಯೂರಲ್ಸ್ ಕಚ್ಚಾ ತೈಲವನ್ನು ಖರೀದಿಸಿದೆ ಎಂದು ಮೂಲಗಳು ತಿಳಿಸಿವೆ. ಉಕ್ರೇನ್ ಮೇಲೆ ರಷ್ಯಾ ಆಕ್ರಮಣ ಮಾಡಿದ ನಂತರದಲ್ಲಿ ಐಒಸಿ ಯೂರಲ್ಸ್ ಕಚ್ಚಾ ತೈಲ ಖರೀದಿ ಮಾಡಿರುವುದು ಇದೇ ಮೊದಲು.


ಐಒಸಿ ಕಂಪನಿಯು ನಿರ್ಬಂಧಕ್ಕೆ ಒಳಗಾಗಿರುವ ಯಾವುದೇ ಕಂಪನಿಯ ಜೊತೆ ವಹಿವಾಟು ನಡೆಸುತ್ತಿಲ್ಲವಾದ ಕಾರಣ, ತೈಲದ ಮೇಲೆ ನಿರ್ಬಂಧ ಇಲ್ಲದಿರುವ ಕಾರಣ ಐಒಸಿಗೆ ಯಾವುದೇ ಸಮಸ್ಯೆ ಇಲ್ಲ ಎಂದು ಮೂಲಗಳು ಹೇಳಿವೆ. ನಿರ್ದಿಷ್ಟ ದಿನಾಂಕಕ್ಕೆ ವಿತರಣೆ ಆಗುವ ಬ್ರೆಂಟ್ ಕಚ್ಚಾ ತೈಲದ ಬೆಲೆಗೆ ಹೋಲಿಸಿದರೆ, ಐಒಸಿ ಕಂಪನಿಯು ವಿಟೋಲ್ ಕಂಪನಿಯಿಂದ ಬ್ಯಾರೆಲ್‌ಗೆ ಗರಿಷ್ಠ 25 ಡಾಲರ್ ಕಡಿಮೆ ಬೆಲೆಗೆ ಯೂರಲ್ಸ್ ಕಚ್ಚಾ ತೈಲ ಖರೀದಿಸಿದೆ ಎನ್ನಲಾಗಿದೆ.

ಆಮದು ವೆಚ್ಚ ಹೆಚ್ಚಳದ ಅಪಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಚ್ಚಾ ತೈಲದ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಚ್ಚುತ್ತಲೇ ಇದ್ದರೆ ದೇಶದ ಆಮದು ವೆಚ್ಚವು ಪ್ರಸಕ್ತ ಹಣಕಾಸು ವರ್ಷದಲ್ಲಿ ₹ 7.65 ಲಕ್ಷ ಕೋಟಿ ದಾಟುವ ಸಾಧ್ಯತೆ ಇದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 75 ಡಾಲರ್ ಒಳಗೆ ಇರುತ್ತದೆ ಎಂಬ ಅಂದಾಜಿನಲ್ಲಿ 2022–23ನೇ ಸಾಲಿನ ಬಜೆಟ್ ಲೆಕ್ಕಾಚಾರ ಮಾಡಲಾಗಿದೆ.



'ರಿಯಾಯಿತಿ ದರದಲ್ಲಿ ತೈಲ ಸಿಗುತ್ತದೆ ಎಂದಾದರೆ ಅದು ಸ್ವಾಗತಾರ್ಹ. ದೇಶದ ಅರ್ಥ ವ್ಯವಸ್ಥೆ ಈಗಾಗಲೇ ಎದುರಿಸುತ್ತಿರುವ ಹಲವು ಸಮಸ್ಯೆಗಳು ಅದರಿಂದ ನಿವಾರಣೆ ಆಗುತ್ತವೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ವೆನೆಜುವೆಲಾ, ಇರಾನ್‌ನಿಂದ ತೈಲ: ಕೇಂದ್ರದ ಭರವಸೆ

ನವದೆಹಲಿ (ಪಿಟಿಐ): ವೆನೆಜುವೆಲಾ ಮತ್ತು ಇರಾನ್‌ನಿಂದ ಕಚ್ಚಾ ತೈಲ ಪೂರೈಕೆ ಮತ್ತೆ ಆರಂಭವಾಗಬಹುದು ಎಂಬ ಭರವಸೆಯನ್ನು ಕೇಂದ್ರ ಸರ್ಕಾರ ಹೊಂದಿದೆ. ಅಲ್ಲದೆ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆ ತಗ್ಗಿಸಲು ಒಪೆಕ್+ ದೇಶಗಳು ಕಚ್ಚಾ ತೈಲ ಉತ್ಪಾದನೆಯನ್ನು ಹೆಚ್ಚಿಸಬಹುದು ಎಂದೂ ಕೇಂದ್ರವು ಆಸೆ ಇರಿಸಿಕೊಂಡಿದೆ.



ಆರ್ಥಿಕ ನಿರ್ಬಂಧಗಳ ಕಾರಣದಿಂದಾಗಿ ಇರಾನ್ ಮತ್ತು ವೆನೆಜುವೆಲಾದಿಂದ ಕಚ್ಚಾ ತೈಲ ರಫ್ತು ಸ್ಥಗಿತಗೊಂಡಿದೆ ಎಂದು ಕೇಂದ್ರ ತೈಲ ಸಚಿವ ಹರದೀಪ್ ಸಿಂಗ್ ಪುರಿ ರಾಜ್ಯಸಭೆಗೆ ತಿಳಿಸಿದ್ದಾರೆ. ಅಮೆರಿಕವು ನಿರ್ಬಂಧ ಹೇರಿದ ನಂತರದಲ್ಲಿ ಈ ಎರಡು ದೇಶಗಳಿಂದ ತೈಲ ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸಲಾಗಿದೆ.

ಈ ಎರಡು ದೇಶಗಳಲ್ಲಿ ಕಚ್ಚಾ ತೈಲ ನಿಕ್ಷೇಪಗಳು ದೊಡ್ಡ ಪ್ರಮಾಣದಲ್ಲಿ ಇವೆ. ಅಮೆರಿಕವು ನಿರ್ಬಂಧ ವಿಧಿಸುವ ಮೊದಲು ಇರಾನ್ ಮತ್ತು ವೆನೆಜುವೆಲಾದಿಂದ ಭಾರತವು ಹೆಚ್ಚಿನ ಪ್ರಮಾಣದಲ್ಲಿ ತೈಲ ಆಮದು ಮಾಡಿಕೊಳ್ಳುತ್ತಿತ್ತು.

ನಿರುದ್ಯೋಗ ಪ್ರಮಾಣ ಶೇ 12.6ಕ್ಕೆ ಇಳಿಕೆ

ನವದೆಹಲಿ (ಪಿಟಿಐ): 2021ರ ಏಪ್ರಿಲ್–ಜೂನ್ ಅವಧಿಯಲ್ಲಿ ದೇಶದ ನಗರ ಪ್ರದೇಶಗಳಲ್ಲಿ 15 ವರ್ಷಕ್ಕಿಂತ ಹೆಚ್ಚು ವಯಸ್ಸಾದವರ ನಿರುದ್ಯೋಗ ಪ್ರಮಾಣ ಶೇಕಡ 12.6ಕ್ಕೆ ಇಳಿಕೆಯಾಗಿದೆ. ಇದು 2020ರ ಏಪ್ರಿಲ್–ಜೂನ್ ಅವಧಿಯಲ್ಲಿ ಶೇ 20.8ರಷ್ಟು ಇತ್ತು ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ ಕಾರ್ಮಿಕ ಸಮೀಕ್ಷೆಯು ಹೇಳಿದೆ. 2020ರ ಏಪ್ರಿಲ್–ಜೂನ್ ಅವಧಿಯಲ್ಲಿ ದೇಶದಲ್ಲಿ ನಿರುದ್ಯೋಗ ಪ್ರಮಾಣವು ದೊಡ್ಡ ಮಟ್ಟದಲ್ಲಿತ್ತು. 2021ರ ಜನವರಿಯಿಂದ ಮಾರ್ಚ್ ನಡುವಿನ ಅವಧಿಯಲ್ಲಿ ನಿರುದ್ಯೋಗ ಪ್ರಮಾಣ ಶೇ 9.3ರಷ್ಟು ಆಗಿತ್ತು.

2021ರ ಏಪ್ರಿಲ್–ಜೂನ್ ಅವಧಿಯಲ್ಲಿ ನಗರ ಪ್ರದೇಶಗಳಲ್ಲಿನ ಮಹಿಳೆಯರ ನಿರುದ್ಯೋಗ ಪ್ರಮಾಣವು ಶೇ 14.3ಕ್ಕೆ ಇಳಿಕೆಯಾಗಿದೆ. 2020ರ ಏಪ್ರಿಲ್–ಜೂನ್ ಅವಧಿಯಲ್ಲಿ ಶೇ 21.1ರಷ್ಟು ಇತ್ತು.

ಐ.ಟಿ., ಬ್ಯಾಂಕಿಂಗ್ ವಲಯದ ಷೇರುಗಳ ಮೌಲ್ಯ ಹೆಚ್ಚಳ

ಸೆನ್ಸೆಕ್ಸ್ 936 ಅಂಶ ಏರಿಕೆ

ಮುಂಬೈ (ಪಿಟಿಐ): ಬ್ಯಾಂಕಿಂಗ್ ಮತ್ತು ಐ.ಟಿ. ವಲಯದ ಷೇರುಗಳ ಉತ್ತಮ ಗಳಿಕೆಯಿಂದಾಗಿ ದೇಶದ ಷೇರುಪೇಟೆಗಳಲ್ಲಿ ಸೋಮವಾರ ಸೂಚ್ಯಂಕಗಳು ಏರಿಕೆ ಕಂಡವು. ಕದನ ವಿರಾಮ ಘೋಷಣೆ ಕುರಿತಾಗಿ ರಷ್ಯಾ ಮತ್ತು ಉಕ್ರೇನ್ ಮಧ್ಯೆ ಮತ್ತೊಂದು ಸುತ್ತಿನ ಮಾತುಕತೆ ನಡೆಯುವ ನಿರೀಕ್ಷೆಯಿಂದಾಗಿ ಕಚ್ಚಾ ತೈಲ ದರ ಇಳಿಕೆ ಕಂಡಿದೆ. ಇದು ಷೇರುಪೇಟೆಗಳಲ್ಲಿ ಸಕಾರಾತ್ಮಕ ವಹಿವಾಟಿಗೆ ಕಾರಣವಾಗಿದೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 936 ಅಂಶ ಜಿಗಿತ ಕಂಡು 56,486 ಅಂಶಗಳಿಗೆ ತಲುಪಿತು. ಬಿಎಸ್‌ಇ ಸ್ಮಾಲ್ ಕ್ಯಾಪ್ ಶೇ 0.31ರಷ್ಟು ಏರಿಕೆ ಕಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 241 ಅಂಶ ಹೆಚ್ಚಾಗಿ 16,871 ಅಂಶಗಳಿಗೆ ಏರಿಕೆ ಆಯಿತು.



ಜಾಗತಿಕ ಹೂಡಿಕೆದಾರರು ಬಡ್ಡಿದರ ಏರಿಕೆಯ ನಿರೀಕ್ಷೆಯಲ್ಲಿ ಇದ್ದಾರೆ. ದೇಶದಲ್ಲಿ ಸಗಟು ಹಣದುಬ್ಬರ ಏರಿಕೆ ಆಗಿದ್ದರೂ ಭವಿಷ್ಯದಲ್ಲಿ ಬೆಲೆಗಳು ಕಡಿಮೆ ಆಗಬಹುದು ಎನ್ನುವ ಕಾರಣಕ್ಕಾಗಿ ಮಾರುಕಟ್ಟೆಯು ಆ ಬಗ್ಗೆ ಹೆಚ್ಚಿನ ಗಮನ ಕೊಡಲಿಲ್ಲ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಪೇಟಿಎಂ ಬಂಡವಾಳ ಮೌಲ್ಯ ಇಳಿಕೆ: ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ಗೆ ಹೊಸ ಖಾತೆಗಳನ್ನು ತೆರೆಯದಂತೆ ಆರ್‌ಬಿಐ ನಿರ್ಬಂಧ ಹೇರಿದ ನಂತರ ಪೇಟಿಎಂ ಷೇರು ಮೌಲ್ಯ ಸೋಮವಾರ ಶೇ 13ರಷ್ಟು ಇಳಿಕೆ ಕಂಡಿತು.

ಬಿಎಸ್‌ಇನಲ್ಲಿ ಕಂಪನಿ ಷೇರು ಮೌಲ್ಯ ಶೇ 12.84ರಷ್ಟು ಇಳಿಕೆ ಕಂಡು ಪ್ರತಿ ಷೇರಿನ ಬೆಲೆ ₹ 675.84ಕ್ಕೆ ತಲುಪಿತು. ಎನ್‌ಎಸ್‌ಇನಲ್ಲಿ ಶೇ 12.21ರಷ್ಟು ಇಳಿಕೆ ಕಂಡು ಪ್ರತಿ ಷೇರಿನ ಬೆಲೆ ₹ 680.40ಕ್ಕೆ ತಲುಪಿತು.

ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯವು ₹ 6,429.92 ಕೋಟಿಯಷ್ಟು ಕರಗಿದೆ. ಇದರಿಂದಾಗಿ ಕಂಪನಿಯ ಒಟ್ಟಾರೆ ಬಂಡವಾಳ ಮೌಲ್ಯ ₹ 43,798 ಕೋಟಿಗೆ ಇಳಿಕೆ ಕಂಡಿದೆ.

ಕಚ್ಚಾತೈಲ ದರ ಇಳಿಕೆ: ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾತೈಲ ದರವು ಶೇ 2.97ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 109.3 ಡಾಲರ್‌ಗಳಿಗೆ ತಲುಪಿದೆ.

'ಸಣ್ಣ ಸಾಲಕ್ಕೆ ದುಬಾರಿ ಬಡ್ಡಿ ಸಲ್ಲದು'



ಮುಂಬೈ (ಪಿಟಿಐ): ಸಣ್ಣ ಪ್ರಮಾಣದಲ್ಲಿ ಸಾಲ ವಿತರಿಸುವ ಸಂಸ್ಥೆಗಳು ದುಬಾರಿ ಬಡ್ಡಿ ದರ ವಿಧಿಸುವಂತಿಲ್ಲ ಎಂದು ಆರ್‌ಬಿಐ ಸೋಮವಾರ ಎಚ್ಚರಿಕೆ ನೀಡಿದೆ. ಸಾಲದ ಮೇಲಿನ ಬಡ್ಡಿ ಹಾಗೂ ಅದಕ್ಕೆ ಸಂಬಂಧಿಸಿದ ಶುಲ್ಕಗಳ ವಿಚಾರವಾಗಿ ಮಿತಿ ನಿಗದಿ ಮಾಡುವಂತೆಯೂ ಆರ್‌ಬಿಐ ಸೂಚಿಸಿದೆ.

ವಾರ್ಷಿಕ ₹ 3 ಲಕ್ಷದವರೆಗೆ ಆದಾಯ ಇರುವ ಕುಟುಂಬಕ್ಕೆ ಅಡಮಾನ ಇಲ್ಲದೆ ನೀಡುವ ಸಾಲವನ್ನು ಸಣ್ಣ ಪ್ರಮಾಣದ ಸಾಲ ಎಂದು ವರ್ಗೀಕರಿಸಲಾಗುತ್ತದೆ. ಸಾಲ ಕೊಡಲು ಕಾನೂನು ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುವ ಸಂಸ್ಥೆಗಳು ಸಾಲದ ಮೇಲಿನ ಬಡ್ಡಿ, ಶುಲ್ಕದ ಮಾಹಿತಿಯನ್ನು ಸಾಲ ಪಡೆಯುವವರಿಗೆ ನಿರ್ದಿಷ್ಟ ರೂಪದಲ್ಲಿ, ಸರಳವಾಗಿ ತಿಳಿಸಬೇಕು ಎಂದೂ ಆರ್‌ಬಿಐ ಹೇಳಿದೆ. ಮಾಹಿತಿ ಪತ್ರದಲ್ಲಿ ಇಲ್ಲದ, ಹೆಚ್ಚುವರಿ ಶುಲ್ಕವನ್ನು ಸಂಗ್ರಹಿಸಲು ಅವಕಾಶ ಇಲ್ಲ.

ಸಣ್ಣ ಪ್ರಮಾಣದ ಸಾಲವನ್ನು ಅವಧಿಗೆ ಮುನ್ನವೇ ಹಿಂದಿರುಗಿಸಿದರೆ ಅದಕ್ಕೆ ದಂಡ ವಿಧಿಸುವಂತಿಲ್ಲ. ತಡವಾಗಿ ಪಾವತಿ ಮಾಡಿದರೆ, ಬಾಕಿ ಉಳಿದಿರುವ ಮೊತ್ತಕ್ಕೆ ಮಾತ್ರ ದಂಡ ವಿಧಿಸಬೇಕು ಎಂದು ಆರ್‌ಬಿಐ ಹೇಳಿದೆ.

ಏಪ್ರಿಲ್ ಮಧ್ಯಭಾಗದಲ್ಲಿ ಎಲ್‌ಐಸಿ ಐಪಿಒ?

ನವದೆಹಲಿ (ರಾಯಿಟರ್ಸ್): ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಐಪಿಒ ಅನ್ನು ಏಪ್ರಿಲ್ ತಿಂಗಳ ಮಧ್ಯಭಾಗದಲ್ಲಿ ನಡೆಸಲು ಕೇಂದ್ರ ಸರ್ಕಾರವು ಉದ್ದೇಶಿಸಿದೆ ಎಂದು ಸರ್ಕಾರದ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯೆ ನೀಡಲು ಹಣಕಾಸು ಸಚಿವಾಲಯ ನಿರಾಕರಿಸಿದೆ. ಮಾರುಕಟ್ಟೆಯು ಸದ್ಯ ಅಸ್ಥಿರವಾಗಿರುವುದರಿಂದ ಈ ತಿಂಗಳು ಐಪಿಒಗೆ ಬರುವುದನ್ನು ಸರ್ಕಾರ ವಿಳಂಬ ಮಾಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಮಂಗಳೂರು	
ಕೋಕ	14000-24500
ಹೊಸತು	23000-33000
ಹಳತು	31000-39000
ಕುಂದಾಪುರ	
ಹಳೆಚಾಲಿ	47000-52000
ಹೊಸಚಾಲಿ	38000-45000
ಚಿತ್ರದುರ್ಗ	
ಆಪಿ	45339-45779
ಬೆಟ್ಟೆ	36319-36759
ಕೆಂಪುಗೋಟು	30600-31000
ರಾಶಿ	44829-45269
ಕಾರ್ಕಳ	
ಹೊಸತು	40000-45000
ಹಳತು	46000-53000
ಕುಮಟ	
ಚಿಪ್ಪು	25069-28999
ಕೋಕ	14509-25969
ಫ್ಯಾಕ್ಟರಿ	13019-18899
ಹಳೆಚಾಲಿ	45019-47459
ಹೊಸಚಾಲಿ	35089-39099
ಪುತ್ತೂರು	
ಕೋಕ	11000-26000
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	22808-29809
ಚಾಲಿ	38099-40181
ಕೋಕ	21208-29312
ಹೊಸಚಾಲಿ	35599-39312
ಕೆಂಪುಗೋಟು	28899-32219
ರಾಶಿ	42689-46329
ತಟ್ಟಿಬೆಟ್ಟೆ	37009-45769
ಶಿರಸಿ	
ಬೆಟ್ಟೆ	16896-42698
ಬಿಳಿಗೋಟು	22199-31400
ಚಾಲಿ	35599-40363
ರಾಶಿ	38869-47099
ಯಲ್ಲಾಪುರ	
ಬಿಳಿಗೋಟು	26899-32612
ಚಾಲಿ	35919-40599
ಕೋಕ	18109-29060
ಕೆಂಪುಗೋಟು	26899-32612
ರಾಶಿ	46616-51599
ತಟ್ಟಿಬೆಟ್ಟೆ	37809-45460
ಶಿವಮೊಗ್ಗ	
ಬೆಟ್ಟೆ	46519-50909
ಬಿಳಿಗೋಟು	17609-33819
ರಾಶಿ	42869-45799
ಸರಕು	51069-74999
ಸಾಗರ	
ಬಿಳಿಗೋಟು	20419-27429
ಚಾಲಿ	30099-37319
ಕೋಕ	22699-29699
ಕೆಂಪುಗೋಟು	24009-37199
ರಾಶಿ	36599-46399
ಸಿಪ್ಪೆಗೋಟು	5369-20050

ಮೂಡಿಗೆರೆ ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮುದ್ರೆಮನೆ
ಎಪಿ	15750
ಎಸಿ	7560
ಆರ್‌ಪಿ	8250
ಆರ್‌ಸಿ	4000

ಮುಂಬೈ ಧಾರಣೆ

ಶೇಂಗಾ

14-3-2022

ಜಾವಾ 70/80(ಹೊಸ)	11350-11400
ಜಾವಾ 80/90(ಹೊಸ)	10550-10600
ದಪ್ಪ ಮಧ್ಯಪ್ರದೇಶ(ಹೊಸ)	10500-10600
ದಪ್ಪ ಗುಜರಾತ್(ಹೊಸ)	9200-9300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1640)
ಒಂದು ವಾರದ ಡೆಲಿವರಿ	1625 (1635)
ಸೋಯಾ ಕಚ್ಚಾ	1555 (1570)
ಪಾಮ್ ವಾರದ ಡೆಲಿವರಿ	1568 (1595)
ಸೂರ್ಯಕಾಂತಿ ಎಣ್ಣೆ ಕಚ್ಚಾ	1800 (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,650 (52,400)
ಬೆಳ್ಳಿ ಕೆ.ಜಿ 68,300 (69,900)

ಆವರಣದಲ್ಲಿ ಶನಿವಾರದ ಧಾರಣೆ



ಎರಡು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಶ್ರೀಲಂಕಾ ತಂಡವನ್ನು 2–0 ಮಣಿಸಿದ ಭಾರತ ತಂಡದ ಆಟಗಾರರು ಟ್ರೋಫಿಯೊಂದಿಗೆ ಸಂಭ್ರಮಿಸಿದರು –ಪಿಟಿಐ ಚಿತ್ರ

ರೋಹಿತ್ ಬಳಗದ ಮಡಿಲಿಗೆ ಸರಣಿ: ದಿಮುತ ಕರುಣರತ್ನೆ ಶತಕ; ಬೂಮ್ರಾ, ಅಶ್ವಿನ್ ದಾಳಿಗೆ ಕುಸಿದ ಶ್ರೀಲಂಕಾ

ಜಯದ 'ಹೊನಲು' ಹರಿಸಿದ ಭಾರತ

• ಗಿರೀಶ ದೊಡ್ಡಮನಿ

ಬೆಂಗಳೂರು: ಸೋಮವಾರ ಸಂಜೆ ಬಿಸಿಲಿನ ಕಿರಣಗಳು ಚಿನ್ನಸ್ವಾಮಿ ಕ್ರೀಡಾಂಗಣದಿಂದ ಪೂರ್ಣವಾಗಿ ಮರೆಯಾಗುವ ಮುನ್ನವೇ ಭಾರತ ತಂಡವು ಶ್ರೀಲಂಕಾ ಎದುರಿನ ಸರಣಿ ಜಯದ ಸಂಭ್ರಮ ಆಚರಿಸಿತು. ಇದೇ ಮೊದಲ ಬಾರಿ ಟೆಸ್ಟ್ ತಂಡದ ನಾಯಕತ್ವ ವಹಿಸಿದ್ದ ರೋಹಿತ್ ಶರ್ಮಾ, ಮಿರಿಮಿರಿ ಹೊಳೆಯುವ ಟ್ರೋಫಿಗೆ ಮುತ್ತಿಕ್ಕಿದರು.

ಉದ್ಯಾನನಗರಿಯಲ್ಲಿ ಆಯೋಜನೆಗೊಂಡ ಪ್ರಥಮ ಪಿಂಕ್ ಬಾಲ್ ಟೆಸ್ಟ್‌ನಲ್ಲಿ ಭಾರತ ತಂಡವು ನಿರೀಕ್ಷೆಯಂತೆಯೇ ಮೂರನೇ ದಿನದ ಊಟದ ವಿರಾಮಕ್ಕೂ ಮುಂಚೆಯೇ ಶ್ರೀಲಂಕಾ ಎದುರು 238 ರನ್‌ಗಳಿಂದ ಜಯಿಸಿತು. ಸರಣಿಯನ್ನು 2–0ಯಿಂದ ಗೆದ್ದಿತು. ತವರಿನಲ್ಲಿ ಸತತ 15ನೇ ಸರಣಿ ಜಯದ ಸಾಧನೆಯನ್ನೂ ಮಾಡಿತು.

ಲಂಕಾ ತಂಡದ ನಾಯಕ ದಿಮುತ ಕರುಣರತ್ನೆ (107; 174ಎ, 4X15) ಅವರ ದಿಟ್ಟ ಶತಕ ಕ್ರಿಕೆಟ್‌ಪ್ರೇಮಿಗಳ ನೆನಪಿನಲ್ಲಿ ಉಳಿಯಿತು. 447 ರನ್‌ಗಳ ಕಠಿಣ ಗುರಿಯನ್ನು ಬೆನ್ನತ್ತಿದ ಪ್ರವಾಸಿ ಬಳಗವು 59.3 ಓವರ್‌ಗಳಲ್ಲಿ 208 ರನ್ ಗಳಿಸಲಷ್ಟೇ ಶಕ್ತವಾಯಿತು. ಭಾರತದಲ್ಲಿ ನಡೆದ ಮೂರು ಪಿಂಕ್ ಬಾಲ್ ಟೆಸ್ಟ್‌ಗಳಲ್ಲಿಯೂ ಗೆದ್ದ ಸಾಧನೆಯನ್ನು ಭಾರತ ಮಾಡಿತು.

ದೀರ್ಘ ಅವಧಿ ನಡೆದ ಪಂದ್ಯ! ಭಾರತದಲ್ಲಿ ಆಯೋಜನೆಗೊಂಡ ಪಿಂಕ್ ಬಾಲ್ ಟೆಸ್ಟ್‌ಗಳಲ್ಲಿ ಹೆಚ್ಚು ಅವಧಿ ಆಟ ನಡೆದ ಪಂದ್ಯವಾಗಿ ಭಾರತ –ಶ್ರೀಲಂಕಾ ಹಣಾಹಣಿಯು ದಾಖಲಾಯಿತು.

2019ರಲ್ಲಿ ಕೋಲ್ಕತ್ತದಲ್ಲಿ ಬಾಂಗ್ಲಾ ಎದುರು ನಡೆದಿದ್ದ ಟೆಸ್ಟ್ ಮೂರನೇ ದಿನದಾಟದ ಮೊದಲ ಅವಧಿಯಲ್ಲಿಯೇ ಮುಕ್ತಾಯವಾಗಿತ್ತು. ಅಹಮದಾಬಾದಿನಲ್ಲಿ ಇಂಗ್ಲೆಂಡ್ ವಿರುದ್ಧ 2021ರಲ್ಲಿ ನಡೆದಿದ್ದ ಪಂದ್ಯವು ಎರಡನೇ ದಿನದಾಟದಲ್ಲಿಯೇ ಮುಗಿದಿತ್ತು. ಆದರೆ, ಬೆಂಗಳೂರು ಪಂದ್ಯವು ಮೂರನೇ ದಿನದ ಊಟದ ವಿರಾಮಕ್ಕೂ 35 ನಿಮಿಷಗಳ ಮುನ್ನ ಅಂತ್ಯವಾಯಿತು.

ಪಂದ್ಯದ ಮೊದಲ ದಿನ ಒಟ್ಟು 16 ವಿಕೆಟ್‌ಗಳು ಪತನಗೊಂಡಾಗ ಪಿಚ್ ಬಗ್ಗೆ ಬಹಳಷ್ಟು ಟೀಕೆಗಳು ವ್ಯಕ್ತವಾಗಿದ್ದವು. ಮೊದಲ ಇನಿಂಗ್ಸ್‌ನಲ್ಲಿ ಭಾರತ ತಂಡವು 252 ರನ್‌ಗಳಿಗೆ ಆಲೌಟ್ ಆಗಿತ್ತು. ಅದಕ್ಕುತ್ತರವಾಗಿ ಶ್ರೀಲಂಕಾ ತಂಡವು 109 ರನ್ ಗಳಿಸಿತ್ತು. 143 ರನ್‌ಗಳ ಹಿನ್ನಡೆ ಅನುಭವಿಸಿತ್ತು.

ಆದರೆ, ಎರಡನೇ ದಿನದಾಟದಲ್ಲಿ ಒಟ್ಟು 14 ವಿಕೆಟ್‌ಗಳು ಪತನಗೊಂಡರೂ ಬ್ಯಾಟಿಂಗ್‌ಗೂ ಪಿಚ್ ನೆರವಾಗಿತ್ತು. ರಿಷಭ್ ಮಿಂಚಿನ ಅರ್ಧಶತಕ ಮತ್ತು ಶ್ರೇಯಸ್ ಚೆಂದದ ಬ್ಯಾಟಿಂಗ್ ಗಮನ ಸೆಳೆದಿತ್ತು. ಎರಡನೇ ಇನಿಂಗ್ಸ್‌ನಲ್ಲಿ 9 ವಿಕೆಟ್‌ಗಳಿಗೆ 303 ರನ್ ಗಳಿಸಿದ್ದ ಆತಿಥೇಯ ಬಳಗವು ಡಿಕ್ಲೇರ್ ಮಾಡಿತ್ತು. ಭಾನುವಾರದ ಆಟದ ಅಂತ್ಯಕ್ಕೆ 7 ಓವರ್‌ಗಳಲ್ಲಿ 1 ವಿಕೆಟ್‌ಗೆ 28 ರನ್ ಗಳಿಸಿದ್ದ ಶ್ರೀಲಂಕಾ ತಂಡದ ದಿಮುತ ಮತ್ತು ಕುಶಾಲ ಮೆಂಡಿಸ್ ಮೂರನೇ ದಿನದಾಟದಲ್ಲಿ ಉತ್ತಮ ಬ್ಯಾಟಿಂಗ್ ಕೌಶಲ ಮೆರೆದರು. ಮೊದಲ ಒಂದು ಗಂಟೆಯಲ್ಲಿ ಭಾರತದ ಬೌಲರ್‌ಗಳಿಗೆ ದಿಟ್ಟ ಸವಾಲೊಡ್ಡಿದರು. ಮೆಂಡಿಸ್ 57 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ ಮೆಂಡಿಸ್ ಮತ್ತು ದಿಮುತ 97 ರನ್ ಸೇರಿಸಿದರು. ಈ ಹಂತದಲ್ಲಿ ಆತಿಥೇಯ ನಾಯಕ ರೋಹಿತ್, ಫೀಲ್ಡಿಂಗ್ ಮತ್ತು ಬೌಲಿಂಗ್‌ನಲ್ಲಿ ಪದೇ ಪದೇ ಮಾಡಿದ ಬದಲಾವಣೆಯನ್ನು ಇಬ್ಬರೂ ಬ್ಯಾಟರ್‌ಗಳು ಸಮರ್ಥವಾಗಿ ನಿಭಾಯಿಸಿದರು.

20ನೇ ಓವರ್‌ನಲ್ಲಿ ಅಶ್ವಿನ್ ಎಸೆತವನ್ನು ಹೊಡೆಯಲು ಮುಂದೆ ನುಗ್ಗಿ ಬಂದ ಮೆಂಡಿಸ್ ಹಿಂದೆ ತಿರುಗಿ ನೋಡುವಷ್ಟರಲ್ಲಿ ವಿಕೆಟ್‌ಕೀಪರ್ ರಿಷಭ್ ಸ್ಟಂಪಿಂಗ್ ಮಾಡಿದರು. ಇದರೊಂದಿಗೆ ಜೊತೆಯಾಟ ಮುರಿದುಬಿತ್ತು. ನಂತರದ ಆಟದಲ್ಲಿ ದಿಮುತ ಶತಕ ಪೂರೈಸಿದ್ದೊಂದೇ ಲಂಕಾ ಪಾಲಿಗೆ ಸಮಾಧಾನ ತಂದ ಸಂಗತಿ.

ಟಿಕೆಟ್ ಹಣ ಮರುಪಾವತಿ

ಟೆಸ್ಟ್ ಪಂದ್ಯವು ಮೂರು ದಿನಗಳಲ್ಲಿ ಮುಕ್ತಾಯವಾದ ಕಾರಣ, ಉಳಿದ ಎರಡು ದಿನಗಳ ಟಿಕೆಟ್ ಹಣವನ್ನು ಮರುಪಾವತಿ ಮಾಡಲಾಗುವುದು ಎಂದು ಕೆಎಸ್‌ಸಿಎ ಪ್ರಕಟಣೆಯಲ್ಲಿ ತಿಳಿಸಿದೆ.

ನಾಲ್ಕು ಮತ್ತು ಐದನೇ ದಿನದ ಟಿಕೆಟ್‌ಗಳನ್ನು ಖರೀದಿಸಿರುವವರು ಮರಳಿ ಹಣ ಪಡೆಯಬಹುದಾಗಿದೆ. ₹ 100 ಟಿಕೆಟ್‌ಗೆ ಗೇಟ್ ಸಂಖ್ಯೆ 2ರಲ್ಲಿ, ₹ 500ರ ಟಿಕೆಟ್‌ಗಳಿಗೆ ಗೇಟ್ ಸಂಖ್ಯೆ 19ರಲ್ಲಿ ಹಾಗೂ ₹ 750ಕ್ಕಿಂತ ಹೆಚ್ಚು ಬೆಲೆಯ ಟಿಕೆಟ್‌ಗಳಿಗೆ ಗೇಟ್ ಸಂಖ್ಯೆ 18ರ ಕೌಂಟರ್‌ಗಳಲ್ಲಿ ಮರಳಿ ನೀಡಲಾಗುವುದು.

ಮಾರ್ಚ್ 19 ಮತ್ತು 20ರಂದು ಬೆಳಿಗ್ಗೆ 10.30ರಿಂದ ರಾತ್ರಿ 7.30ರವರೆಗೆ ಟಿಕೆಟ್ ಮರಳಿಸಿ ಹಣ ಪಡೆಯಬೇಕು.

ಸಿ ಲೋವರ್ ಸೀಸನ್ ಟಿಕೆಟ್‌ಗಳಿಗೆ ಮಾತ್ರ ಹಣ ಮರುಪಾವತಿ ಮಾಡಲಾಗುವುದಿಲ್ಲ ಎಂದೂ ತಿಳಿಸಲಾಗಿದೆ.



ಕೊನೆಯ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯ ಆಡಿದ ಶ್ರೀಲಂಕಾದ ಸುರಂಗಾ ಲಕ್ಮಲ್ ಅವರು ಔಟಾದಾಗ ಭಾರತದ ಜಸ್‌ಪ್ರೀತ್ ಬೂಮ್ರಾ ಶುಭ ಕೋರಿ ಬೀಳ್ಕೊಟ್ಟರು. ಬೂಮ್ರಾ ಎಸೆತದಲ್ಲಿ ಲಕ್ಮಲ್ ಔಟಾದರು –ಪಿಟಿಐ ಚಿತ್ರ

ದಿಟ್ಟ ದಿಮುತಗೆ ಎರಡನೇ ಶತಕ

ಎರಡನೇ ದಿನ ರಾತ್ರಿ 10 ರನ್ ಗಳಿಸಿ ಕ್ರೀಸ್‌ನಲ್ಲಿ ಉಳಿದಿದ್ದ ದಿಮುತಗೆ ಅದೃಷ್ಟ ಜೊತೆ ನೀಡಿತು. ಸೋಮವಾರದ ಮೊದಲ ಓವರ್‌ನಲ್ಲಿಯೇ ಎಡಗೈ ಬ್ಯಾಟರ್ ದಿಮುತ ಕ್ಯಾಚ್ ಪಡೆಯುವಲ್ಲಿ ವಿರಾಟ್ ಕೊಹ್ಲಿ ವಿಫಲರಾದರು. 51ನೇ ಓವರ್‌ನಲ್ಲಿ ರೋಹಿತ್ ಕೂಡ ದಿಮುತ ಕ್ಯಾಚ್ ಪಡೆಯುವಲ್ಲಿ ಯಶಸ್ವಿಯಾಗಲಿಲ್ಲ. ಎರಡೂ ಸಲ ಜಡೇಜ ಬೌಲಿಂಗ್ ಮಾಡಿದ್ದರು.

ಈ ಜೀವದಾನಗಳ ಪ್ರಯೋಜನ ಪಡೆದ ದಿಮುತ ಹೊನಲು ಬೆಳಕಿನ ಟೆಸ್ಟ್ ಕ್ರಿಕೆಟ್‌ನಲ್ಲಿ ಎರಡು ಶತಕ ಗಳಿಸಿದವರ ಸಾಲಿಗೆ ಸೇರಿದರು. 2017ರಲ್ಲಿ ದುಬೈನಲ್ಲಿ ಪಾಕಿಸ್ತಾನ ವಿರುದ್ಧದ ಟೆಸ್ಟ್‌ನಲ್ಲಿ ದಿಮುತ 196 ರನ್ ಗಳಿಸಿದ್ದರು. ಹಗಲು–ರಾತ್ರಿ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾದ ಮಾರ್ನಸ್ ಲಾಬುಷೇನ್ ಮೂರು ಮತ್ತು ಪಾಕಿಸ್ತಾನದ ಅಸದ್ ಶಫೀಕ್ ಎರಡು ಶತಕ ಗಳಿಸಿದ್ದಾರೆ. 33 ವರ್ಷದ ದಿಮುತಗೆ ಇದು 76ನೇ ಟೆಸ್ಟ್ ಪಂದ್ಯ ಮತ್ತು 14ನೇ ಶತಕ. 57ನೇ ಓವರ್‌ನಲ್ಲಿ ಬೂಮ್ರಾ ಎಸೆತದಲ್ಲಿ ದಿಮುತ ಕ್ಲೀನ್‌ಬೌಲ್ಡ್ ಆದರು.



ಶತಕ ಸಂಭ್ರಮದಲ್ಲಿ ಶ್ರೀಲಂಕಾ ನಾಯಕ ದಿಮುತ ಕರುಣರತ್ನೆ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್ ಭಾರತ 252 (59.1 ಓವರ್)
ಶ್ರೀಲಂಕಾ 109 (35.5 ಓವರ್)
ಎರಡನೇ ಇನಿಂಗ್ಸ್ ಭಾರತ 9ಕ್ಕೆ303ಡಿಕ್ಲೇರ್ಡ್ (68.5 ಓವರ್)
ಶ್ರೀಲಂಕಾ 208 (59.3 ಓವರ್)
(ಭಾನುವಾರ 7 ಓವರ್‌ಗಳಲ್ಲಿ 28ಕ್ಕೆ 1)

ಕರುಣರತ್ನೆ ಬಿ ಬೂಮ್ರಾ 107 (174ಎ, 4X15), ಮೆಂಡಿಸ್ ಸ್ಟಂಪ್ಡ್ ಪಂತ್ ಬಿ ಅಶ್ವಿನ್ 54 (60ಎ, 4X8), ಮ್ಯಾಥ್ಯೂಸ್ ಬಿ ಜಡೇಜ 1 (5ಬಿ), ಡಿಸಿಲ್ವಾ ಸಿ ವಿಹಾರಿ ಬಿ ಅಶ್ವಿನ್ 4 (21ಎ), ಡಿಕ್ವೆಲಾ ಸ್ಟಂಪ್ಡ್ ಪಂತ್ ಬಿ ಅಕ್ಷರ್ 12 (39ಎ), ಅಸಲಂಕಾ ಸಿ ಶರ್ಮಾ ಬಿ ಅಕ್ಷರ್ 5 (20ಎ, 4X1), ಲಸಿತ್ ಎಲ್‌ಬಿಡಬ್ಲ್ಯು ಬಿ ಅಶ್ವಿನ್ 2 (22ಎ), ಲಕ್ಮಲ್ ಬಿ ಬೂಮ್ರಾ 1 (4ಎ), ಫರ್ನಾಂಡೊ ಸಿ ಶಮಿ ಬಿ ಅಶ್ವಿನ್ 2(6ಎ), ಜಯವಿಕ್ರಮ ಔಟಾಗದೆ 0 (4ಎ)

ಇತರೆ 20 (ಬೈ 16, ಲೆಗ್‌ಬೈ 3, ನೋಬಾಲ್ 1)

ವಿಕೆಟ್ ಪತನ: 2–97 (ಕುಶಾಲ ಮೆಂಡಿಸ್; 19.4), 3–98 (ಏಂಜೆಲೊ ಮ್ಯಾಥ್ಯೂಸ್; 20.4), 4–105 (ಧನಂಜಯ ಡಿಸಿಲ್ವಾ;27.5), 5–160 (ನಿರೋಷನ್ ಡಿಕ್ವೆಲಾ; 41.6), 6–180 (ಚರಿತ ಅಸಲಂಕಾ; 49.5), 7–204 (ದಿಮುತ ಕರುಣರತ್ನೆ; 56.5), 8–206 (ಲಸಿತ್ ಎಂಬುಲ್ದೆನಿಯಾ; 57.3), 9–208 (ಸುರಂಗಾ ಲಕ್ಮಲ್; 58.2), 10–208 (ವಿಶ್ವ ಫರ್ನಾಂಡೊ; 59.3)

ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 9–4–23–3, ಮೊಹಮ್ಮದ್ ಶಮಿ 6–0–26–0, ಆರ್. ಅಶ್ವಿನ್ 19.3–3–55–4, ರವೀಂದ್ರ ಜಡೇಜ 14–2–48–1, ಅಕ್ಷರ್ ಪಟೇಲ್ 11–1–37–2

ಫಲಿತಾಂಶ: ಭಾರತಕ್ಕೆ 238 ರನ್‌ಗಳ ಜಯ. ಸರಣಿಯಲ್ಲಿ 2–0ಯಿಂದ ಗೆಲುವು
ಪಂದ್ಯಶ್ರೇಷ್ಠ: ಶ್ರೇಯಸ್ ಅಯ್ಯರ್
ಸರಣಿಶ್ರೇಷ್ಠ: ರಿಷಭ್ ಪಂತ್

ಮೈದಾನಕ್ಕೆ ನುಗ್ಗಿದ ನಾಲ್ವರು ವಶಕ್ಕೆ

ಬೆಂಗಳೂರು: ಭಾರತ ಹಾಗೂ ಶ್ರೀಲಂಕಾ ನಡುವಿನ ಕ್ರಿಕೆಟ್ ಪಂದ್ಯದ ವೇಳೆ ಮೈದಾನಕ್ಕೆ ಅಕ್ರಮವಾಗಿ ನುಗ್ಗಿದ್ದ ಆರೋಪದಡಿ ನಾಲ್ವರನ್ನು ಕಬ್ಬನ್ ಪಾರ್ಕ್ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ಪಂದ್ಯ ನಡೆಯುತ್ತಿತ್ತು. ಆಟಗಾರರಿಗೆ ವೈದ್ಯಕೀಯ ವಿಶ್ರಾಂತಿ ನೀಡಿದ್ದ ವೇಳೆ, ನಾಲ್ವರು ಅಕ್ರಮವಾಗಿ ಮೈದಾನದೊಳಗೆ ನುಗ್ಗಿದ್ದರು. ಆಟಗಾರ ವಿರಾಟ್ ಕೊಹ್ಲಿ ಬಳಿ ಓಡಾಡಿ, ಸೆಲ್ಫಿ ಕ್ಲಿಕ್ಕಿಸಿಕೊಂಡಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಭದ್ರತೆಯಲ್ಲಿದ್ದ ಪೊಲೀಸರೇ ನಾಲ್ವರನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದು ವಿಚಾರಣೆ ನಡೆಸಿದ್ದರು. ಕೊಹ್ಲಿ ಜೊತೆ ಫೋಟೊ ಕ್ಲಿಕ್ಕಿಸಿಕೊಳ್ಳಲು ಮೈದಾನಕ್ಕೆ ನುಗ್ಗಿದ್ದಾಗಿ ಅವರು ಹೇಳಿಕೆ ನೀಡಿದ್ದಾರೆ. ಅವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ. ನಾಲ್ವರ ಪೈಕಿ ಇಬ್ಬರು ಬಾಲಕರಿದ್ದಾರೆ' ಎಂದೂ ತಿಳಿಸಿದರು.

ಪಂದ್ಯ ವೀಕ್ಷಿಸಿದ 57 ಸಾವಿರ ಮಂದಿ

ಬೆಂಗಳೂರು: ಇದೇ ಮೊದಲ ಸಲ ಆಯೋಜಿಸಲಾಗಿದ್ದ ಪಿಂಕ್ ಬಾಲ್ ಟೆಸ್ಟ್ ಪಂದ್ಯವನ್ನು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 57 ಸಾವಿರಕ್ಕೂ ಹೆಚ್ಚು ಜನರು ವೀಕ್ಷಿಸಿದರು.

ಕೋವಿಡ್ ಕಾರಣದಿಂದಾಗಿ ಕಳೆದ ಎರಡೂವರೆ ವರ್ಷ ಬೆಂಗಳೂರಿನಲ್ಲಿ ಯಾವುದೇ ಅಂತರರಾಷ್ಟ್ರೀಯ ಮತ್ತು ಐಪಿಎಲ್ ಪಂದ್ಯಗಳು ನಡೆದಿಲ್ಲ. ಅಲ್ಲದೇ ಹಗಲು ರಾತ್ರಿ ಟೆಸ್ಟ್ ಪಂದ್ಯವು ಇದೇ ಮೊದಲ ಸಲ ನಡೆದಿದ್ದರಿಂದಾಗಿ ದೊಡ್ಡ ಪ್ರಮಾಣದಲ್ಲಿ ಕ್ರಿಕೆಟ್ ಅಭಿಮಾನಿಗಳು ಕ್ರೀಡಾಂಗಣಕ್ಕೆ ಧಾವಿಸಿದರು. ಮೊದಲ ದಿನವಾದ ಶನಿವಾರ 20500, ಭಾನುವಾರ 23842 ಮತ್ತು ಮೂರನೇ ದಿನವಾದ ಸೋಮವಾರ 13100 ಜನರು ವೀಕ್ಷಿಸಿದರು.

'ಟೆಸ್ಟ್ ಪಂದ್ಯವೊಂದಕ್ಕೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಪ್ರೇಕ್ಷಕರು ಕ್ರೀಡಾಂಗಣಕ್ಕೆ ಬಂದು ವೀಕ್ಷಿಸಿರುವುದು ಸಂತಸದ ಸಂಗತಿ. ಪ್ರೇಕ್ಷಕರ ಗ್ಯಾಲರಿ ಸಾಮರ್ಥ್ಯದ ಶೇ 50ರಷ್ಟು ಜನರ ಪ್ರವೇಶಕ್ಕೆ ಮಾತ್ರ ಮೊದಲು ಅವಕಾಶ ನೀಡಲಾಗಿತ್ತು. ಆದರೆ, ಟಿಕೆಟ್‌ಗಳಿಗೆ ಬೇಡಿಕೆ ಹೆಚ್ಚಾದ ಕಾರಣದಿಂದ ರಾಜ್ಯ ಸರ್ಕಾರ ಹಾಗೂ ಬಿಸಿಸಿಐ ಶೇ 100ರಷ್ಟು ಆಸನ ಭರ್ತಿಗೆ ಪಂದ್ಯದ ಮುನ್ನಾದಿನ ಅನುಮತಿ ನೀಡಿದ್ದವು' ಎಂದು ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ ತಿಳಿಸಿದರು.

ಸ್ಟೇನ್ ದಾಖಲೆ ಮೀರಿದ ಅಶ್ವಿನ್
ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಮತ್ತೊಂದು ದಾಖಲೆಯನ್ನು ಮುರಿದರು. ಟೆಸ್ಟ್ ಕ್ರಿಕೆಟ್‌ನಲ್ಲಿ ಹೆಚ್ಚು ವಿಕೆಟ್ ಪಡೆದವರ ಪಟ್ಟಿಯಲ್ಲಿ ಮತ್ತೊಂದು ಮೆಟ್ಟಿಲು ಮೇಲೇರಿದರು. ಅವರು ದಕ್ಷಿಣ ಆಫ್ರಿಕಾದ ಡೆಲ್ ಸ್ಟೇನ್ ಅವರ ವಿಕೆಟ್ ಗಳಿಕೆ ದಾಖಲೆಯನ್ನು ಮುರಿದರು.

ಸ್ಟೇನ್ 439 ವಿಕೆಟ್‌ಗಳನ್ನು ಗಳಿಸಿದ್ದಾರೆ. ಇದೀಗ ಅಶ್ವಿನ್ 440 ವಿಕೆಟ್‌ಗಳನ್ನು ತಮ್ಮ ಖಾತೆಗೆ ಸೇರಿಸಿಕೊಂಡಿದ್ದಾರೆ. ಈಚೆಗೆ ಮೊಹಾಲಿ ಪಂದ್ಯದಲ್ಲಿ ವಿಕೆಟ್ ಗಳಿಸಿ,ಕಪಿಲ್ ದೇವ್ (434) ದಾಖಲೆಯನ್ನು ಮುರಿದಿದ್ದರು.

ಸ್ಥಾನ	ತಂಡ	ಪಂದ್ಯ ಜಯ	ಸೋಲು	ಡ್ರಾ	ಪಾಯಿಂಟ್	ಶೇಕಡಾ
1	ಆಸ್ಟ್ರೇಲಿಯಾ	4	0	2	56	77.77
2	ಪಾಕಿಸ್ತಾನ	3	1	1	40	66.66
3	ದ.ಆಫ್ರಿಕಾ	3	2	0	36	60
4	ಭಾರತ	6	3	2	77	58.33
5	ಶ್ರೀಲಂಕಾ	2	2	0	24	50
6	ನ್ಯೂಜಿಲೆಂಡ್	2	3	1	28	38.88
7	ಬಾಂಗ್ಲಾದೇಶ	1	3	0	12	25
8	ವೆಸ್ಟ್ ಇಂಡೀಸ್	1	3	1	16	26.67
9	ಇಂಗ್ಲೆಂಡ್	1	6	3	14	11.67

ಡಬ್ಲ್ಯುಟಿಸಿ: ನಾಲ್ಕನೇ ಸ್ಥಾನದಲ್ಲಿ ಭಾರತ

ಬೆಂಗಳೂರು: ಶ್ರೀಲಂಕಾ ವಿರುದ್ಧದ ಸರಣಿ ಜಯದಿಂದ ಒಟ್ಟು 24 ಅಂಕಗಳನ್ನು ಗಳಿಸಿದ ಭಾರತ ತಂಡವು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಪಾಯಿಂಟ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೇರಿತು.

ಡಬ್ಲ್ಯುಟಿಸಿ ನಿಯಮದ ಪ್ರಕಾರ ಒಂದು ಪಂದ್ಯದ ವಿಜಯಕ್ಕೆ 12 ಅಂಕಗಳು ಲಭಿಸುತ್ತವೆ. ಈ ಪಟ್ಟಿಯಲ್ಲಿ ಆಸ್ಟ್ರೇಲಿಯಾ ಅಗ್ರಸ್ಥಾನದಲ್ಲಿದೆ.



ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಿಂಕ್ ಬಾಲ್ ಟೆಸ್ಟ್ ವೀಕ್ಷಿಸಲು ಅನಾಥ ಮಕ್ಕಳ ಶಾಲೆಗಳ ನೂರು ವಿದ್ಯಾರ್ಥಿಗಳು ಮತ್ತು 200 ಜನ ಕೋವಿಡ್ ವಾರಿಯರ್ಸ್‌ಗಳಿಗೆ ಅವಕಾಶ ನೀಡಲಾಗಿತ್ತು. ಈ ಸಂದರ್ಭದಲ್ಲಿ ಅವರೊಂದಿಗೆ ಕ್ರಿಕೆಟ್ ದಿಗ್ಗಜ ಜಿ.ಆರ್. ವಿಶ್ವನಾಥ್, ಕೆಎಸ್‌ಸಿಎ ಅಧ್ಯಕ್ಷ ರೋಜರ್ ಬಿನ್ನಿ, ಖಜಾಂಚಿ ವಿನಯ್ ಮೃತ್ಯುಂಜಯ, ಜೆ. ಅಭಿರಾಮ್, ಶಾವೀರ್ ತಾರಾಪುರ್, ಕಾರ್ಯದರ್ಶಿ ಸಂತೋಷ್ ಮೆನನ್ ಚಿತ್ರ ತೆಗೆಸಿಕೊಂಡರು

ಮಂಜುನಾಥ 'ಬೆಸ್ಟ್ ಫಿಜಿಕ್'

ಬೆಂಗಳೂರು: ದಾವಣಗೆರೆಯ ಮಂಜುನಾಥಸ್ವಾಮಿ ಪ್ರಥಮ ದರ್ಜೆ ಕಾಲೇಜಿನ ಡಿ.ಮಂಜುನಾಥ ಅವರು ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಬೆಸ್ಟ್ ಫಿಜಿಕ್ ಸ್ಪರ್ಧೆಯ ಪ್ರಶಸ್ತಿ ಗೆದ್ದುಕೊಂಡಿದ್ದಾರೆ.



ಡಿ.ಮಂಜುನಾಥ

ಚಂಡೀಗಢದಲ್ಲಿ ಈಚೆಗೆ ನಡೆದ 60 ಕೆಜಿ ವಿಭಾಗದಲ್ಲಿ ಅವರು ಪ್ರಥಮ ಸ್ಥಾನ ಗಳಿಸಿದರು.

ಕಲಾ ವಿಭಾಗದ ಮೊದಲ ವರ್ಷದ ವಿದ್ಯಾರ್ಥಿಯಾಗಿರುವ ಅವರು ದಾವಣಗೆರೆಯ ಕೆಟಿಜೆ ನಗರದ ನಿವಾಸಿ.

ದಾವಣಗೆರೆ ವಿಶ್ವವಿದ್ಯಾಲಯ ಏರ್ಪಡಿಸಿದ್ದ ಸ್ಪರ್ಧೆಯಲ್ಲಿ ಮಂಜುನಾಥ ಅವರು ಮಿಸ್ಟರ್ ದಾವಣಗೆರೆ ಪ್ರಶಸ್ತಿ ಗೆದ್ದುಕೊಂಡಿದ್ದರು. ಇದೀಗ ಜಾಗತಿಕ ಮಟ್ಟದ ವಿಶ್ವವಿದ್ಯಾಲಯಗಳ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಅರ್ಹತೆ ಗಳಿಸಿದ್ದು ಭರವಸೆ ಮೂಡಿಸಿದ್ದಾರೆ ಎಂದು ಕಾಲೇಜಿನ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಶಂಕರಪ್ಪ ಸಿ ತಿಳಿಸಿದ್ದಾರೆ.

ಚೀನಾ: ಮತ್ತೆ ಹೆಚ್ಚಿದ ಒಮೈಕ್ರಾನ್

ಕಳೆದ 2 ವರ್ಷಗಳಲ್ಲಿ ಇದೇ ಮೊದಲಿಗೆ ಹೆಚ್ಚು ಸೋಂಕು

ತೈಪೆ(ಎಪಿ): ಸೋಂಕು ನಿಯಂತ್ರಣಕ್ಕಾಗಿ ಚೀನಾ ಹಲವು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುತ್ತಿದ್ದರೂ ಪ್ರಮುಖ ನಗರಗಳಲ್ಲಿ ಕೋವಿಡ್ ಸೋಂಕು ತೀವ್ರವಾಗಿ ವ್ಯಾಪಿಸುತ್ತಿದೆ. ವೇಗವಾಗಿ ವ್ಯಾಪಿಸುತ್ತಿರುವ ಒಮೈಕ್ರಾನ್ ತಳಿಯಿಂದಾಗಿ ದೇಶದ ಪ್ರಮುಖ ನಗರಗಳಲ್ಲಿ 1,337 ಹೊಸ ಪ್ರಕರಣಗಳು ದಾಖಲಾಗಿವೆ. ಕಳೆದ ಎರಡು ವರ್ಷಗಳಲ್ಲಿ ಇಷ್ಟು ಪ್ರಮಾಣದಲ್ಲಿ ಪ್ರಕರಣಗಳು ದಾಖಲಾಗಿದ್ದು ಇದೇ ಮೊದಲು.

ಈಶಾನ್ಯ ಭಾಗದಲ್ಲಿರುವ ಜಿಲಿನ್ ಪ್ರಾಂತ್ಯದಲ್ಲಿ 895, ಶೆನ್‌ಝೆನ್‌ನಲ್ಲಿ 75 ಹೊಸ ಪ್ರಕರಣಗಳು ಪತ್ತೆಯಾಗಿವೆ. ವೈರಸ್ ಹೆಚ್ಚಳದ ಕಾರಣಕ್ಕೆ 1.7 ಕೋಟಿ ಜನಸಂಖ್ಯೆಯ ತಾಂತ್ರಿಕ ಮತ್ತು ಹಣಕಾಸು ಹಬ್ ಖ್ಯಾತಿಯ ಶೆನ್‌ಝೆನ್ ನಗರ ಲಾಕ್‌ಡೌನ್ ಆಗಿದೆ.

ಅಲ್ಲದೆ 6 ಕೋವಿಡ್ ಪ್ರಕಣಗಳು ಪತ್ತೆಯಾದ ಬೀಜಿಂಗ್ ಮತ್ತು 41 ಪ್ರಕರಣಗಳು ದಾಖಲಾದ ಶಾಂಘೈನಲ್ಲಿ ಸೋಂಕಿತರು ಪತ್ತೆಯಾದ ನಿವಾಸಗಳು ಮತ್ತು ಕಚೇರಿ ಕಟ್ಟಡಗಳನ್ನು ಲಾಕ್‌ಡೌನ್ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚೀನಾದಲ್ಲಿ ಅಮೆರಿಕ, ಯುರೋಪ್ ಸೇರಿದಂತೆ ಇನ್ನಿತರ ದೇಶಗಳಿಗಿಂತಲೂ ಕಡಿಮೆ ಪ್ರಕರಣಗಳು ದಾಖಲಾಗುತ್ತಿವೆ. ಆದರೆ, 2020ರಲ್ಲಿ ಚೀನಾದ ವುಹಾನ್‌ನಲ್ಲಿ ಕೋವಿಡ್ ಆರಂಭವಾದ ಬಳಿಕ ಇದೀಗ ಮತ್ತೆ ಸೋಂಕು ಹೆಚ್ಚಳವಾಗುತ್ತಿರುವುದು ಆತಂಕಕ್ಕೆ ಕಾರಣವಾಗಿದೆ.

ದೇಶದಲ್ಲಿ ಕೋವಿಡ್‌ಗೆ ಬಲಿಯಾಗುವವರ ಸಂಖ್ಯೆ ಕಡಿಮೆಯಿದೆ. ಆದರೆ, ಇದರಿಂದ ವೈದ್ಯಕೀಯ ಸಂಪನ್ಮೂಲಗಳ ಮೇಲೆ ಒತ್ತಡ, ಸಾಮಾಜಿಕ ಜೀವನದ ಮೇಲೆ ಹೊಡೆತ ಹಾಗೂ ಕುಟುಂಬ ಮತ್ತು ಸಮಾಜದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಒಂದು ವೇಳೆ ನಿರ್ಬಂಧಗಳನ್ನು ಹಿಂಪಡೆದರೆ, ಅತ್ಯಂತ ಕಡಿಮೆ ಅವಧಿಯಲ್ಲಿ ಹೆಚ್ಚು ಮಂದಿಯಲ್ಲಿ ಸೋಂಕು ವ್ಯಾಪಿಸಲು ಕಾರಣವಾಗಲಿದೆ ಎಂದು ರೋಗಾಣು ತಜ್ಞ ಝೊಂಗ್ ವೆನ್‌ಹಾಂಗ್ ತಿಳಿಸಿದ್ದಾರೆ.

ಚೀನಾದ ಇನ್ನಿತರ ನಗರಗಳು ಮತ್ತು ಪ್ರಾಂತ್ಯಗಳಲ್ಲಿ ನೂರಾರು ಕೋವಿಡ್ ಪ್ರಕರಣಗಳು ಪತ್ತೆಯಾಗಿವೆ. ಏತನ್ಮಧ್ಯೆ, ಹಾಂಗ್‌ಕಾಂಗ್‌ನಲ್ಲಿ ಸೋಮವಾರ ಒಂದೇ ದಿನ 26,908 ಪ್ರಕರಣಗಳು ದಾಖಲಾಗಿದ್ದು, 249 ಮಂದಿ ಕೋವಿಡ್‌ಗೆ ಬಲಿಯಾಗಿದ್ದಾರೆ.



ಚೀನಾದ ಬೀಜಿಂಗ್‌ನಲ್ಲಿ ಕೋವಿಡ್ ಪತ್ತೆ ಪರೀಕ್ಷೆಗಾಗಿ ಸರತಿ ಸಾಲಿನಲ್ಲಿ ನಿಂತಿದ್ದ ಸಾರ್ವಜನಿಕರು – ಎಎಫ್‌ಪಿ ಚಿತ್ರ

ಅಪಘಾತ: ಐವರು ವಿದ್ಯಾರ್ಥಿಗಳ ಸಾವು

ಟೊರೊಂಟೊ (ಪಿಟಿಐ): ಕೆನಡಾದ ಒಂಟಾರಿಯಾ ಪ್ರಾಂತ್ಯದಲ್ಲಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಐವರು ಭಾರತೀಯ ವಿದ್ಯಾರ್ಥಿಗಳು ಸಾವನ್ನಪ್ಪಿದ್ದಾರೆ.

ಕ್ವಿಂಟೆ ನಗರದ ಹೆದ್ದಾರಿಯಲ್ಲಿ ಶನಿವಾರ ಭಾರತೀಯ ವಿದ್ಯಾರ್ಥಿಗಳು ಪ್ರಯಾಣಿಸುತ್ತಿದ್ದ ವ್ಯಾನ್ ಮತ್ತು ಟ್ರ್ಯಾಕ್ಟರ್ ನಡುವೆ ಅಪಘಾತ ಸಂಭವಿಸಿದ್ದು, ಹರ್‌ಪ್ರೀತ್‌ಸಿಂಗ್, ಜಾಸ್ಪಿಂಡರ್ ಸಿಂಗ್, ಕರ್ಣಪಾಲ್ ಸಿಂಗ್, ಮೋಹಿತ್ ಚೌಹಣ್ ಮತ್ತು ಪವನ್ ಕುಮಾರ್ ಮೃತಪಟ್ಟಿದ್ದಾರೆ. ಇವರೆಲ್ಲ 21ರಿಂದ 24 ವಯಸ್ಸಿನವರು ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಕೆನಡಾದಲ್ಲಿ 1.27 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಚೀನಾದಲ್ಲಿ ಭಾರತದ ನೂತನ ರಾಯಭಾರಿ ರಾವತ್

ಬೀಜಿಂಗ್(ಪಿಟಿಐ): ಚೀನಾದಲ್ಲಿ ಭಾರತದ ರಾಯಭಾರಿಯಾಗಿ 1990ನೇ ಬ್ಯಾಚ್‌ನ ಐಎಫ್‌ಎಸ್ ಅಧಿಕಾರಿ ಪ್ರದೀಪ್ ಕುಮಾರ್ ರಾವತ್ ಸೋಮವಾರ ಅಧಿಕಾರ ಸ್ವೀಕರಿಸಿದರು.



ಪ್ರದೀಪ್ ಕುಮಾರ್ ರಾವತ್

ಈ ಹಿಂದೆ ರಾಯಭಾರಿಯಾಗಿದ್ದ ವಿಕ್ರಂ ಮಿಶ್ರಿ ಅವರನ್ನು ಉಪ ರಾಷ್ಟ್ರೀಯ ಭದ್ರತಾ ಸಲಹೆಗಾರರನ್ನಾಗಿ ನೇಮಕ ಮಾಡಲಾಗಿದ್ದು, ಆ ಸ್ಥಾನಕ್ಕೆ ನೆದರ್‌ಲ್ಯಾಂಡ್‌ನಲ್ಲಿ ಭಾರತದ ರಾಯಭಾರಿಯಾಗಿದ್ದ ರಾವತ್ ಅವರನ್ನು ನೇಮಿಸಲಾಗಿದೆ.

ವಿಶ್ವಕಪ್: ದಕ್ಷಿಣ ಆಫ್ರಿಕಾಕ್ಕೆ ಜಯ

ಮೌಂಟ್ ಮಾಂಗನೂಯಿ, ನ್ಯೂಜಿಲೆಂಡ್ (ಎಎಫ್‌ಪಿ): ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡ ಮಹಿಳೆಯರ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಸತತ ಮೂರನೇ ಸೋಲನುಭವಿಸಿದ್ದು ಟೂರ್ನಿಯಿಂದ ಹೊರಬೀಳುವ ಆತಂಕಕ್ಕೆ ಸಿಲುಕಿದೆ.

ಸೋಮವಾರ ನಡೆದ ದಕ್ಷಿಣ ಆಫ್ರಿಕಾ ಎದುರಿನ ಪಂದ್ಯದಲ್ಲಿ ಹೀದರ್ ನೈಟ್ ಬಳಗ ಮೂರು ವಿಕೆಟ್‌ಗಳಿಂದ ಸೋತಿತು. ದಕ್ಷಿಣ ಆಫ್ರಿಕಾ ಗೆಲುವಿನ 'ಹ್ಯಾಟ್ರಿಕ್' ಬಾರಿಸಿತು. ಆಡಿದ ನಾಲ್ಕೂ ಪಂದ್ಯಗಳಲ್ಲಿ ನಿರಾಸೆ ಕಂಡ ಪಾಕಿಸ್ತಾನ ಕೂಡ ಟೂರ್ನಿಯಿಂದ ಹೊರಬೀಳುವುದು ಬಹುತೇಕ ಖಚಿತವಾಗಿದೆ.

ದಕ್ಷಿಣ ಆಫ್ರಿಕಾ ವಿರುದ್ಧ ಟಾಸ್ ಸೋತು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ ಆರಂಭಿಕ ಬ್ಯಾಟರ್ ಟಾಮಿ ಬ್ಯೂಮೌಂಟ್ (62; 97 ಎಸೆತ, 6 ಬೌಂಡರಿ) ಮತ್ತು ವಿಕೆಟ್ ಕೀಪರ್ ಆ್ಯಮಿ ಜೋನ್ಸ್ (53; 74 ಎ, 5 ಬೌಂಡರಿ) ಅವರ ಅರ್ಧಶತಕಗಳ ಬಲದಿಂದ 9ಕ್ಕೆ 235 ರನ್ ಗಳಿಸಿತ್ತು. ಗುರಿ ಬೆನ್ನತ್ತಿದ ದಕ್ಷಿಣ ಆಫ್ರಿಕಾ ಪರ ಲಾರಾ ವೊಲ್ವಾರ್ಟ್ (77; 101 ಎ, 8 ಬೌಂಡರಿ) ಅಮೋಘ ಬ್ಯಾಟಿಂಗ್ ಪ್ರದರ್ಶಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್ 50 ಓವರ್‌ಗಳಲ್ಲಿ 9ಕ್ಕೆ 235 (ಟಾಮಿ ಬ್ಯೂಮೌಂಟ್ 62, ಆ್ಯಮಿ ಜೋನ್ಸ್ 53, ಸೋಫಿಯಾ ಡಂಕ್ಲಿ 26; ಮರಿಜಾನ್ ಕಾಪ್ 45ಕ್ಕೆ5, ಅಯಬೊಂಗ್ ಖಾಕ 59ಕ್ಕೆ1, ಮಸಬಾಟ ಕ್ಲಾಸ್ 23ಕ್ಕೆ2); ದಕ್ಷಿಣ ಆಫ್ರಿಕಾ: 49.2 ಓವರ್‌ಗಳಲ್ಲಿ 7ಕ್ಕೆ 236 (ಲಾರಾ ವೊಲ್ವಾರ್ಟ್ 77, ತಜ್ಮಿನ್ ಬ್ರಿಟ್ಸ್ 23, ಸೂನ್ ಲೂಜ್ 36, ಮರಿಜಾನ್ ಕಾಪ್ 32; ಅನ್ಯಾ ಶ್ರಬ್‌ಸೋಲ್ 34ಕ್ಕೆ2, ಕೇಟ್ ಕ್ರಾಸ್ 40ಕ್ಕೆ1, ಸೋಫಿ ಎಕ್ಲೆಸ್ಟೋನ್ 23ಕ್ಕೆ1, ನ್ಯಾಟ್ ಶೀವರ್ 21ಕ್ಕೆ1, ಚಾರ್ಲಿ ಡೀನ್ 33ಕ್ಕೆ1).

ಟಾಮಿ ಪಾಲ್‌ಗೆ ಮಣಿದ ಜ್ವೆರೆವ್

ಇಂಡಿಯನ್ ವೆಲ್ಸ್, ಅಮೆರಿಕ (ಎಎಫ್‌ಪಿ): ವಿಶ್ವ ಕ್ರಮಾಂಕದಲ್ಲಿ ಮೂರನೆ ಸ್ಥಾನದಲ್ಲಿರುವ ಅಲೆಕ್ಸಾಂಡರ್ ಜ್ವೆರೆವ್ ಅವರು ಎಟಿಪಿ ಇಂಡಿಯನ್ ವೆಲ್ಸ್ ಮಾಸ್ಟರ್ಸ್ ಟೆನಿಸ್ ಟೂರ್ನಿಯಲ್ಲಿ ಸೋಲಿಗೆ ಶರಣಾದರು. ಭಾನುವಾರ ರಾತ್ರಿ ನಡೆದ ಪಂದ್ಯದಲ್ಲಿ ಅವರನ್ನು ಅಮೆರಿಕದ ಟಾಮಿ ಪಾಲ್ 6-2, 4-6, 7-6 (7/2)ರಲ್ಲಿ ಮಣಿಸಿದರು.



ಟಾಮಿ ಪಾಲ್

ತಾಳ್ಮೆ ಕಳೆದುಕೊಂಡು ಅಂಪೈರ್ ಕುರ್ಚಿಯ ಮೇಲೆ ಪದೇ ಪದೇ ರ‍್ಯಾಕೆಟ್‌ನಿಂದ ಬಡಿದ ಕಾರಣ ಮೆಕ್ಸಿಕೊ ಓಪನ್‌ನಿಂದ ಜ್ವೆರೆವ್ ಅವರನ್ನು ಅನರ್ಹಗೊಳಿಸಲಾಗಿತ್ತು. ಅದರ ನಂತರ ಇದೇ ಮೊದಲ ಬಾರಿ ಸ್ಪರ್ಧಾ ಕಣಕ್ಕೆ ಇಳಿದ ಅವರು ಇಲ್ಲಿ ಎರಡನೇ ಸುತ್ತಿನಲ್ಲೇ ಹೊರಬಿದ್ದರು.

ರಡುಕಾನುಗೆ ನಿರಾಸೆ; ಹಲೆಪ್‌ಗೆ ಜಯ: ಮಹಿಳಾ ವಿಭಾಗದಲ್ಲಿ ಬ್ರಿಟನ್‌ನ ಎಮಾ ರಡುಕಾನು ಅವರನ್ನು ಕ್ರೊವೇಷ್ಯಾದ ಪೆಟ್ರಾ ಮಾರ್ಟಿಕ್ 6-7 (3/7), 6-4, 7-5ರಲ್ಲಿ ಸೋಲಿಸಿದರು. ಅಮೆರಿಕದ ಕೊಕೊ ಗಫ್ ಅವರನ್ನು 6-3, 6-4ರಲ್ಲಿ ಸಿಮೋನಾ ಹಲೆಪ್ ಮಣಿಸಿದರು. ಮೂರನೇ ಶ್ರೇಯಾಂಕದ ಪೋಲೆಂಡ್ ಆಟಗಾರ್ತಿ ಇಗಾ ಸ್ವಾಟೆಕ್ ಡೆನ್ಮಾರ್ಕ್‌ನ ಕ್ಲಾರಾ ಟಾಸನ್ ವಿರುದ್ಧ 6-7 (3/7), 6-2, 6-1ರಲ್ಲಿ ಗೆದ್ದರು.

ಕೋವಿಡ್: ಪ್ರವಾಸೋದ್ಯಮದಲ್ಲೇ 2.15 ಕೋಟಿ ಉದ್ಯೋಗ ನಷ್ಟ

ನವದೆಹಲಿ (ಪಿಟಿಐ): ದೇಶದಲ್ಲಿ ಕಾಣಿಸಿಕೊಂಡ ಕೋವಿಡ್ ಮೂರು ಅಲೆಗಳಿಂದ ಪ್ರವಾಸೋದ್ಯಮ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದ ಸುಮಾರು 2.15 ಕೋಟಿ ಜನರು ಉದ್ಯೋಗ ಕಳೆದುಕೊಂಡಿದ್ದಾರೆ ಎಂದು ಕೇಂದ್ರ ಪ್ರವಾಸೋದ್ಯಮ ಸಚಿವ ಜಿ.ಕಿಶನ್ ರೆಡ್ಡಿ ಸೋಮವಾರ ಹೇಳಿದ್ದಾರೆ.

ಲೋಕಸಭೆಯ ಪ್ರಶ್ನೋತ್ತರ ಅವಧಿಯಲ್ಲಿ ಉತ್ತರ ನೀಡಿದ ಅವರು, ದೇಶದಲ್ಲಿ ಪ್ರವಾಸಿಗರ ಭೇಟಿ ಸಂಖ್ಯೆ ಇಳಿಮುಖವಾಗಿದೆ. ಮೊದಲ ಅಲೆಯಲ್ಲಿ ಶೇ 93, ಎರಡನೇ ಅಲೆಯಲ್ಲಿ ಶೇ 79 ಮತ್ತು ಮೂರನೇ ಅಲೆಯಲ್ಲಿ ಶೇ 64 ರಷ್ಟು ಪ್ರವಾಸಿಗರ ಸಂಖ್ಯೆ ಕಡಿಮೆಯಾಗಿದೆ ಎಂದು ಹೇಳಿದರು.

'ಕೋವಿಡ್‌ನಿಂದ ಪ್ರವಾಸೋದ್ಯಮದ ಮೇಲೆ ಬೀರಿದ ಪರಿಣಾಮದ ಬಗ್ಗೆ ನಾವು ಒಂದು ಅಧ್ಯಯನ ಕೈಗೊಂಡೆವು. ಅದರ ಪ್ರಕಾರ ಕೋವಿಡ್ ಮೊದಲನೇ ಅಲೆಯಲ್ಲಿ 1.45 ಕೋಟಿ, ಎರಡನೇ ಅಲೆಯಲ್ಲಿ 52 ಲಕ್ಷ ಮತ್ತು ಮೂರನೇ ಅಲೆಯಲ್ಲಿ 18 ಲಕ್ಷ ಜನರು ಉದ್ಯೋಗದಿಂದ ವಂಚಿತರಾಗಿದ್ದಾರೆ' ಎಂದು ಅವರು ಮಾಹಿತಿ ನೀಡಿದರು.

ದೇಶದಲ್ಲಿ ಕೋವಿಡ್ ಕಾಣಿಸಿಕೊಳ್ಳುವುದಕ್ಕೂ ಮುನ್ನ 3.8 ಕೋಟಿ ಜನರು ಪ್ರವಾಸೋದ್ಯಮ ಕ್ಷೇತ್ರದಲ್ಲಿ ದುಡಿಯುತ್ತಿದ್ದರು ಎಂದೂ ಅವರು ಹೇಳಿದರು.

2,503 ಹೊಸ ಪ್ರಕರಣ, 2020ರ ಮೇ ಬಳಿಕ ಕನಿಷ್ಠ

ನವದೆಹಲಿ (ಪಿಟಿಐ): ದೇಶದಲ್ಲಿ ಹೊಸದಾಗಿ 2,503 ಕೋವಿಡ್ ಪ್ರಕರಣಗಳು ವರದಿಯಾಗಿದ್ದು, 27 ಮಂದಿ ಮೃತಪಟ್ಟಿದ್ದಾರೆ. ಹೊಸ ಪ್ರಕರಣ 2020ರ ಮೇ ತಿಂಗಳಿಂದ ದೀಚೆಗೆ ದಾಖಲಾದ ಅತ್ಯಂತ ಕನಿಷ್ಠ ಪ್ರಮಾಣವಾಗಿದೆ ಎಂದು ಕೇಂದ್ರ ಆರೋಗ್ಯ ಇಲಾಖೆ ತಿಳಿಸಿದೆ.



24 ಗಂಟೆಗಳಲ್ಲಿ 4,377 ಮಂದಿ ಸೋಂಕಿನಿಂದ ಚೇತರಿಸಿಕೊಂಡಿದ್ದಾರೆ. ಸದ್ಯ ದೇಶದಲ್ಲಿ 36,168 ಸಕ್ರಿಯ ಕೋವಿಡ್ ಪ್ರಕರಣಗಳಿವೆ. ದೇಶದಲ್ಲಿ ಈ ವರೆಗೆ 4,24,41,449 ಮಂದಿ ಕೋವಿಡ್‌ನಿಂದ ಗುಣಮುಖರಾಗಿದ್ದಾರೆ. ಕೋವಿಡ್‌ನಿಂದಾಗಿ ದೇಶದಲ್ಲಿ 5,15,877 ಮಂದಿ ಮೃತಪಟ್ಟಿದ್ದಾರೆ. ದೈನಂದಿನ ಪಾಸಿಟಿವಿಟಿ ದರ ಶೇ 0.47 ರಷ್ಟಿದೆ.

ದೇಶದಲ್ಲಿ ಈ ವರೆಗೆ 179.91 ಕೋಟಿ ಡೋಸ್ ಲಸಿಕೆ ನೀಡಲಾಗಿದೆ ಎಂದು ಆರೋಗ್ಯ ಇಲಾಖೆಯು ಹೇಳಿದೆ.

ಒಬಾಮಗೆ ಕೋವಿಡ್ ದೃಢ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಮಾಜಿ ಅಧ್ಯಕ್ಷ ಬರಾಕ್ ಒಬಾಮಗೆ ಕೋವಿಡ್ ಇರುವುದು ದೃಢಪಟ್ಟಿದೆ. ಆದರೆ ಅವರ ಪತ್ನಿ ಮಿಚೆಲ್ ಒಬಾಮ ಅವರಿಗೆ ಕೋವಿಡ್ ನೆಗೆಟಿವ್ ವರದಿ ಬಂದಿದೆ.

ಗ್ರೀಕ್ ಪ್ರಧಾನಿಗೆ ಕೋವಿಡ್(ಅಥೆನ್ಸ್ ವರದಿ): ಗ್ರೀಕ್ ಪ್ರಧಾನಿ ಕಿರಿಯಾಕೋಸ್ ಮಿಟ್ಸೋಟಾಕಿಸ್ ಅವರಿಗೆ ಸೋಮವಾರ ಕೋವಿಡ್ ಸೋಂಕು ದೃಢಪಟ್ಟಿದೆ. ಟರ್ಕಿಯ ಪ್ರವಾಸದಿಂದ ಹಿಂತಿರುಗಿದ ಅವರಿಗೆ ಸೋಂಕು ಕಾಣಿಸಿಕೊಂಡಿದೆ.

ಕೊಕ್ಕೊ: ಮಂಗಳೂರು ವಿವಿ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಲ್‌ರೌಂಡ್ ಆಟದ ಮೂಲಕ ಆಳ್ವಾಸ್ ಕಾಲೇಜಿನ ಮಹೇಶ್ ಪಿ ಮಿಂಚಿದರು. ಡಿಫೆಂಡರ್ ಮರೆಪ್ಪ ಮತ್ತು ಚೇಸರ್ ದೀಕ್ಷಿತ್ ಅವರೂ ಅಮೋಘ ಆಟ ಪ್ರದರ್ಶಿಸಿದರು. ಇದರ ಫಲವಾಗಿ ಮಂಗಳೂರು ವಿಶ್ವವಿದ್ಯಾಲಯ ತಂಡ ದಕ್ಷಿಣ ವಲಯ ಅಂತರ ವಿವಿ ಕೊಕ್ಕೊ ಟೂರ್ನಿಯ ಚಾಂಪಿಯನ್ ಪಟ್ಟ ತನ್ನದಾಗಿಸಿಕೊಂಡಿತು.

ಕ್ರೈಸ್ಟ್ ಕಾಲೇಜು ಹಾಗೂ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಜಂಟಿ ಆಶ್ರಯದಲ್ಲಿ ನಡೆದ ಟೂರ್ನಿಯ ಕೊನೆಯ ಸೂಪರ್ ಲೀಗ್ ಹಣಾಹಣಿಯಲ್ಲಿ ಮಂಗಳೂರು ವಿವಿ ಕೇರಳದ ಕ್ಯಾಲಿಕಟ್ ವಿವಿಯನ್ನು 14–11ರಲ್ಲಿ ಮಣಿಸಿತು. ಮೊದಲ ಇನಿಂಗ್ಸ್‌ನಲ್ಲಿ ಮಂಗಳೂರು ವಿವಿ ಏಳು ಪಾಯಿಂಟ್ ಗಳಿಸಿದರೆ ಎದುರಾಳಿ ತಂಡಕ್ಕೆ ಐದು ಪಾಯಿಂಟ್ ಗಳಿಸಲಷ್ಟೇ ಸಾಧ್ಯವಾಯಿತು.

ಎರಡನೇ ಇನಿಂಗ್ಸ್‌ನಲ್ಲಿ ಕೂಡ ಮಂಗಳೂರು 7 ಪಾಯಿಂಟ್ಸ್ ಕಲೆ ಹಾಕಿತು. ಕ್ಯಾಲಿಕಟ್ ತಂಡ ಪ್ರಬಲ ಪೈಪೋಟಿ ಒಡ್ಡಿತು. ಆದರೆ ಮಂಗಳೂರು ತಂಡ ಆರು ಪಾಯಿಂಟ್‌ಗಳನ್ನು ಮಾತ್ರ ಬಿಟ್ಟುಕೊಟ್ಟಿತು. ಪಂದ್ಯದುದ್ದಕ್ಕೂ ಮಿಂಚಿನ ಆಟವಾಡಿದ ಮಹೇಶ್ ಮೂರು ಔಟ್ ಮಾಡಿದರು. ಮೊದಲ ಇನಿಂಗ್ಸ್‌ನಲ್ಲಿ ಎರಡು ನಿಮಿಷ ಮತ್ತು ಎರಡನೇ ಇನಿಂಗ್ಸ್‌ನಲ್ಲಿ ಎರಡೂವರೆ ನಿಮಿಷ ರಕ್ಷಣಾತ್ಮಕ ಆಟವಾಡಿದರು.

ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಜಯ ಗಳಿಸಿದ ಮಂಗಳೂರು, ಕ್ಯಾಲಿಕಟ್, ಕುವೆಂಪು ಮತ್ತು ದಾವಣಗೆರೆ ವಿವಿ ಸೂಪರ್ ಲೀಗ್‌ಗೆ ಅರ್ಹತೆ ಪಡೆದುಕೊಂಡಿದ್ದವು. ಈ ಹಂತದಲ್ಲಿ ಮೂರು ಪಂದ್ಯ ಗೆದ್ದ ಮಂಗಳೂರು ಚಾಂಪಿಯನ್ ಆದರೆ ಎರಡು ಪಂದ್ಯ ಗೆದ್ದ ಕ್ಯಾಲಿಕಟ್ ರನ್ನರ್ ಅಪ್ ಆಯಿತು. ಒಂದು ಪಂದ್ಯ ಗೆದ್ದ ಕುವೆಂಪು ವಿವಿ 3ನೇ ಸ್ಥಾನ ಗಳಿಸಿತು. ಈ ನಾಲ್ಕೂ ತಂಡಗಳು ಅಖಿಲ ಭಾರತ ಟೂರ್ನಿಗೆ ಅರ್ಹತೆ ಪಡೆದುಕೊಂಡಿವೆ.

ಜೆಇಇ: ವೇಳಾಪಟ್ಟಿ ಪರಿಷ್ಕರಣೆ

ನವದೆಹಲಿ(ಪಿಟಿಐ): ಐಐಟಿಗಳ ಪ್ರವೇಶಾತಿಗೆ ಅವಕಾಶ ಕಲ್ಪಿಸುವ 2022ನೇ ಸಾಲಿನ ಜೆಇಇ- ಮುಖ್ಯ ಪರೀಕ್ಷೆಯ ವೇಳಾಪಟ್ಟಿಯನ್ನು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ(ಎನ್‌ಟಿಎ) ಪರಿಷ್ಕರಣೆ ಮಾಡಿದೆ.

ಜೆಇಇ ಮುಖ್ಯ ಪರೀಕ್ಷೆ, ಪರಿಷ್ಕೃತ ವೇಳಾಪಟ್ಟಿ ಪ್ರಕಾರ ಏಪ್ರಿಲ್ 21ರಿಂದ 29ರವರೆಗೆ ಮತ್ತು ಮೇ 1ರಿಂದ ಮೇ 4ರವರೆಗೆ ನಡೆಯಲಿದೆ. ಈ ಮುನ್ನ ಜೆಇಇ-ಮುಖ್ಯ ಪರೀಕ್ಷೆಗಳು 12ನೇ ತರಗತಿ ಪರೀಕ್ಷೆ ನಡೆಯುವ ದಿನದಂದೇ ನಿಗದಿಯಾಗಿದ್ದವು. ಇದರಿಂದ 12ನೇ ತರಗತಿ ಅಥವಾ ಜೆಇಇ ಪೈಕಿ ಒಂದನ್ನು ತಪ್ಪಿಸಿಕೊಳ್ಳಬೇಕಾಗುತ್ತದೆ ಎಂದು ಅಭ್ಯರ್ಥಿಗಳು ಅವಲತ್ತುಕೊಂಡಿದ್ದರು.

ಕೆಎಸ್‌ಎಲ್‌ಟಿಎ ಐಟಿಎಫ್ ಟೆನಿಸ್: ರಿಷಿ ರೆಡ್ಡಿಗೆ ಜಯ

ಮುಖ್ಯ ಸುತ್ತಿಗೆ ಆದಿಲ್

ಪ್ರಜಾವಾಣಿ ವಾರ್ತೆ



ಆದಿಲ್ ಕಲ್ಯಾಣ್‌ಪುರ ಆಟದ ವೈಖರಿ – ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್

ಬೆಂಗಳೂರು: ಉತ್ತಮ ಲಯ ಮುಂದುವರಿಸಿದ ಕರ್ನಾಟಕದ ರಿಷಿ ರೆಡ್ಡಿ ಮತ್ತು ಆದಿಲ್ ಕಲ್ಯಾಣಪುರ ಅವರು ಐಟಿಎಫ್ ಓಪನ್ ಟೆನಿಸ್ ಟೂರ್ನಿಯ ಮುಖ್ಯ ಸುತ್ತಿಗೆ ಲಗ್ಗೆಯಿಟ್ಟರು.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ (ಕೆಎಸ್‌ಎಲ್‌ಟಿಎ) ಆಶ್ರಯದಲ್ಲಿ ನಡೆಯುತ್ತಿರುವ ಟೂರ್ನಿಯ ಅಂತಿಮ ಅರ್ಹತಾ ಸುತ್ತಿನಲ್ಲಿ ಸೋಮವಾರ ರಿಷಿ ರೆಡ್ಡಿ 6-4, 6-1ರಿಂದ ರಂಜೀತ್ ವಿರಾಲಿ ಮುರುಗೇಶನ್ ಅವರನ್ನು ಪರಾಭವಗೊಳಿಸಿದರು.

ಮತ್ತೊಂದು ಜಿದ್ದಾಜಿದ್ದಿನ ಪಂದ್ಯದಲ್ಲಿ ಆದಿಲ್ 6-1, 2-6, 10-8ರಿಂದ ಲೋಹಿತಾಕ್ಷ ಬದರೀನಾಥ್ ಅವರ ಸವಾಲು ಮೀರಿದರು. ಒಂದು ಸೆಟ್ ಕಳೆದುಕೊಂಡರೂ ಎದೆಗುಂದದ ಕರ್ನಾಟಕದ ಆಟಗಾರ ಜಯದ ನಗೆ ಬೀರಿದರು. ಮಂಗಳವಾರ ಆರಂಭವಾಗುವ ಮುಖ್ಯ ಸುತ್ತಿನ ಮೊದಲ ಪಂದ್ಯದಲ್ಲಿ ರಿಷಿ ಅವರು, ಅರ್ಜುನ್ ಖಾಡೆ ಅವರನ್ನು ಎದುರಿಸಲಿದ್ದರೆ, ಆದಿಲ್ ಆಸ್ಟ್ರೇಲಿಯಾದ ಲೂಕಾ ಕ್ರೇನರ್ ವಿರುದ್ಧ ಆಡಲಿದ್ದಾರೆ.

ಅರ್ಹತಾ ಸುತ್ತಿನ ಕೊನೆಯ ಪಂದ್ಯದಲ್ಲಿ ಸೂರಜ್ ಪ್ರಬೋಧ್ ಎಡವಿದರು. ಪಾರಸ್ ದಹಿಯಾ ಎದುರು 0–6, 1–6ರಿಂದ ಅವರು ನಿರಾಸೆ ಅನುಭವಿಸಿದರು.

ಅರ್ಜುನ್ ಖಾಡೆ ಆಕರ್ಷಣೆ; ಮುಕುಂದ್‌ಗೆ ಅಗ್ರಶ್ರೇಯಾಂಕ: ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಅರ್ಜುನ್ ಖಾಡೆ ಪ್ರಶಸ್ತಿ ಜಯಿಸುವ ನೆಚ್ಚಿನ ಆಟಗಾರ ಎನಿಸಿಕೊಂಡಿದ್ದು, ಮುಕುಂದ್ ಶಶಿಕುಮಾರ್ ಅವರಿಗೆ ಅಗ್ರಶ್ರೇಯಾಂಕ ಲಭಿಸಿದೆ. ಅರ್ಜುನ್ ಅವರು ಕಳೆದ ತಿಂಗಳು ಇಲ್ಲಿ ನಡೆದ ಬೆಂಗಳೂರು ಓಪನ್‌ನ ಡಬಲ್ಸ್ ವಿಭಾಗದಲ್ಲಿ ಕಿರೀಟ ಧರಿಸಿದ್ದರು. ಈ ಟೂರ್ನಿಯ ಡಬಲ್ಸ್ ವಿಭಾಗದಲ್ಲಿ ಅವರು ಇಂಗ್ಲೆಂಡ್‌ನ ಜೂಲಿಯನ್ ಕ್ಯಾಶ್ ಜೊತೆಗೂಡಿ ಕಣಕ್ಕಿಳಿಯಲಿದ್ದು, ಅಗ್ರಶ್ರೇಯಾಂಕ ಪಡೆದಿದ್ದಾರೆ. ಈ ವಿಭಾಗದ ಕಣದಲ್ಲಿ ಡೇವಿಸ್ ಕಪ್ ಟೂರ್ನಿಯಲ್ಲಿ ಆಡಿರುವ ಯೂಕಿ ಭಾಂಬ್ರಿ ಮತ್ತು ಸಾಕೇತ್ ಮೈನೇನಿ ಕೂಡ ಇದ್ದು, ಪ್ರಶಸ್ತಿಗೆ ಪೈಪೋಟಿ ನಡೆಸಲಿದ್ದಾರೆ.

ಸಿಂಗಲ್ಸ್ ವಿಭಾಗದಲ್ಲಿ ಸಿದ್ಧಾರ್ಥ್ ರಾವತ್ ಅವರಿಗೆ ಎರಡನೇ ಶ್ರೇಯಾಂಕ ನೀಡಲಾಗಿದೆ. ಲೂಕಾ ಕ್ರೇನರ್, ಭಾರತದ ಮನೀಷ್ ಸುರೇಶಕುಮಾರ್ ಅವರಿಗೆ ಕ್ರಮವಾಗಿ ಮೂರು ಮತ್ತು ನಾಲ್ಕನೇ ಶ್ರೇಯಾಂಕ ಲಭಿಸಿದೆ.


ಚೆನ್ನೈನ ಕ್ರೆಸೆಂಟ್ ವಿವಿಯಲ್ಲಿ ಸೋಮವಾರ ಮುಕ್ತಾಯಗೊಂಡ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಬಾಲ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಮೂರನೇ ಸ್ಥಾನ ಗಳಿಸಿದ ಮಂಗಳೂರು ವಿವಿ ತಂಡ. (ಎಡದಿಂದ ಬಲಕ್ಕೆ): ಚಂದ್ರಶೇಖರ್, ವಿವೇಕ್, ಸಚಿನ್, ಸಂತೋಷ್, ಮಹದೇವಸ್ವಾಮಿ, ಚೇತನ್, ಶ್ರೀನಿವಾಸ್, ಮುತ್ಯಾಲೊ, ಸಂಜಯ್, ಮುತ್ತಮಿಳರಸು

ಫುಟ್‌ಬಾಲ್: ಆ್ಯರನ್ 5 ಗೋಲು

ಬೆಂಗಳೂರು: ಆ್ಯರನ್ ಗಳಿಸಿದ ಸೊಗಸಾದ ಐದು ಗೋಲುಗಳ ನೆರವಿನಿಂದ ಮಝೂ ಎಫ್‌ಸಿ ತಂಡವು ಕೆಎಸ್‌ಎಫ್‌ಎ ಸಿ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಭರ್ಜರಿ ಗೆಲುವು ಸಾಧಿಸಿತು.

ಎಸ್‌ಯುಎಫ್‌ಸಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಎಚ್ ಗುಂಪಿನ ಪಂದ್ಯದಲ್ಲಿ ಮಝೂ 15–0ರಿಂದ ಗ್ಲೋಬಲ್ ಎಫ್‌ಸಿ ತಂಡವನ್ನು ಪರಾಭವಗೊಳಿಸಿತು. ಆ್ಯರನ್ 11, 12, 14, 17 ಮತ್ತು 25ನೇ ನಿಮಿಷಗಳಲ್ಲಿ ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಿದರು.

ಆದರ್ಶ್ ಮಂಡಲ್ (29, 33ನೇ ನಿಮಿಷ), ಸಿರಾಜುಲ್ ಮುನೀರ್ (28, 30ನೇ ನಿ.) ಮುಹಮ್ಮದ್ ದಿಲ್‌ಶಾದ್ (24ನೇ ನಿ.), ಮುಜಮಿಲ್ (5ನೇ ನಿ.), ಮುಹಮ್ಮದ್ ಶಮಿಲ್ (7ನೇ ನಿ.), ನಿತೇಶ್ ಶರ್ಮಾ (9ನೇ ನಿ.), ಆರ್ಯನ್ ಬಗ್ದಾಸ್ (37ನೇ ನಿ.) ಮತ್ತು ಉದಯ್ ನಿಧಿ (40ನೇ ನಿ.) ವಿಜೇತ ತಂಡದ ಪರ ಮಿಂಚಿದರು.

ಈ ಗುಂಪಿನ ಇನ್ನುಳಿದ ಪಂದ್ಯಗಳಲ್ಲಿ ಎನ್‌ಇವೈ ಎಫ್‌ಸಿ 2–0ಯಿಂದ ಆರ್‌ವಿ ಎಫ್‌ಸಿ ಎದುರು, ರೊನಾಲ್ಡೊ ಎಫ್‌ಸಿ 2–1ರಿಂದ ಫ್ರೀಲ್ಯಾನ್ಸ್ ಎಫ್‌ಸಿ ವಿರುದ್ಧ ಗೆದ್ದವು.

ಐ ಗುಂಪಿನ ಪಂದ್ಯಗಳಲ್ಲಿ ಗೋಲ್ಡನ್ ಎಫ್‌ಸಿ – ರಾಮಮೂರ್ತಿ ನಗರ ತಂಡದೊಂದಿಗೆ ಗೋಲು ರಹಿತ ಡ್ರಾ ಸಾಧಿಸಿದರೆ, ಕಾಫಿ ಲ್ಯಾಂಡ್ ಎಫ್‌ಸಿ 1–0ಯಿಂದ ಯಲಹಂಕ ಎಫ್‌ಸಿ ಎದುರು ಗೆದ್ದಿತು. ಬ್ಲ್ಯಾಕ್ ಪ್ಯಾಂಥರ್ಸ್ ಎಫ್‌ಸಿ 1–0ಯಿಂದ ಪ್ಲೇ 365 ತಂಡವನ್ನು ಸೋಲಿಸಿತು.

ಎ ಗುಂಪಿನ ಪಂದ್ಯಗಳಲ್ಲಿ ಎಚ್‌ಎಸ್‌ಆರ್ ಲೇಔಟ್ 1–0ಯಿಂದ ಜಯನಗರ ಎಫ್‌ಸಿ ಎದುರು, ಸಿಎಪಿ ಲೈಫ್ ಎಫ್‌ಸಿ 4–1ರಿಂದ ಪಿಕೆಆರ್ ಎಫ್‌ಸಿ ಎದುರು, ಎಸ್ವರಾಂಜ ಎಫ್‌ಸಿ 4–0ಯಿಂದ ಡಿಬಿ ಯುನೈಟೆಡ್ ತಂಡದ ವಿರುದ್ಧ ಜಯ ಸಾಧಿಸಿದವು. ಎಸ್ವರಾಂಜ ತಂಡದ ಪ್ರಸಾದ್ ಹ್ಯಾಟ್ರಿಕ್ ದಾಖಲಿಸಿದರು.

ಕಬಡ್ಡಿ ಆಟಗಾರನ ಗುಂಡಿಕ್ಕಿ ಹತ್ಯೆ


ಸಂದೀಪ್

ಬೆಂಗಳೂರು: ಅಂತರರಾಷ್ಟ್ರೀಯ ಮಟ್ಟದ ಕಬಡ್ಡಿ ಆಟಗಾರ ಸಂದೀಪ್ ಸಿಂಗ್ ನಂಗಲ್ ಅವರನ್ನು ಟೂರ್ನಿಯೊಂದರ ಸಂದರ್ಭದಲ್ಲಿ ಅಪರಿಚಿತರ ಗುಂಪೊಂದು ಗುಂಡಿಕ್ಕಿ ಕೊಲೆ ಮಾಡಿದೆ. ಪಂಜಾಬ್‌ನ ಜಲಂಧರ್ ಜಿಲ್ಲೆಯಲ್ಲಿ ಈ ಘಟನೆ ನಡೆದಿದೆ ಎಂದು ವರದಿಯಾಗಿದೆ.

ನೂರಾರು ಜನರು ಸೇರಿದ್ದ ಮೈದಾನವೊಂದರಲ್ಲಿ ಪಂದ್ಯ ನಡೆಯುತ್ತಿದ್ದಾಗ ಸಂಜೆ ವೇಳೆ ಗುಂಡಿನ ದಾಳಿ ನಡೆದಿದೆ. ಇದರ ವಿಡಿಯೊ ವೈರಲ್ ಆಗಿದೆ. ಗಂಭೀರ ಗಾಯಗೊಂಡ ಸಂದೀಪ್ ಅವರನ್ನು ತಕ್ಷಣ ಆಸ್ಪತ್ರೆಗೆ ಸಾಗಿಸಲಾಗಿದೆ. ಆದರೆ ಅಲ್ಲಿ ತಲುಪುವಷ್ಟರಲ್ಲಿ ಅವರು ಕೊನೆಯುಸಿರೆಳೆದಿದ್ದಾರೆ ಎಂದು ಶಂಕಿಸಲಾಗಿದೆ.

ಮೂಸಾ 300ರ ಮೈಲುಗಲ್ಲು



ಮೂಸಾ ಷರೀಫ್

ಬೆಂಗಳೂರು (ಪಿಟಿಐ): ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಳಲ್ಲಿ ಏಳು ಬಾರಿ ಪ್ರಶಸ್ತಿ ಗೆದ್ದಿರುವ ಮೂಸಾ ಷರೀಫ್ ಅವರು ದೇಶದ ಮೋಟರ್ ರ‍್ಯಾಲಿಯಲ್ಲಿ ಅಪೂರ್ವ ಮೈಲುಗಲ್ಲು ಸ್ಥಾಪಿಸಿದರು.

ತುಮಕೂರು ಜಿಲ್ಲೆ ಗುಬ್ಬಿಯಲ್ಲಿ ಭಾನುವಾರ ಮುಕ್ತಾಯಗೊಂಡ 'ಕರ್ನಾಟಕ 1000' ಸ್ಪರ್ಧೆಯಲ್ಲಿ ಪಾಲ್ಗೊಳ್ಳುವುದರೊಂದಿಗೆ ಸತತ 30 ವರ್ಷಗಳಲ್ಲಿ 300 ರ‍್ಯಾಲಿಗಳಲ್ಲಿ ಭಾಗಿಯಾದ ಸಾಧನೆ ಅವರದಾಯಿತು.

ಅಖಿಲ ಭಾರತ ರ‍್ಯಾಲಿ ಚಾಂಪಿಯನ್‌ಷಿಪ್‌ನ ಭಾಗವಾಗಿ 'ಕರ್ನಾಟಕ 1000' ಸ್ಪರ್ಧೆ ನಡೆದಿತ್ತು. 1993ರಲ್ಲಿ ದ್ವಿಚಕ್ರವಾಹನ ಚಾಲಕನಾಗಿ ಮೂಸಾ ವೃತ್ತಿಜೀವನ ಆರಂಭಿಸಿದ್ದರು. ಕಾಸರಗೋಡು ಮೂಲದವರಾದ ಅವರು ಈ ವರೆಗೆ 50 ಚಾಲಕರ ಜೊತೆಗೂಡಿ ಸ್ಪರ್ಧಿಸಿದ್ದು 69 ಅಂತರರಾಷ್ಟ್ರೀಯ ರ‍್ಯಾಲಿಗಳಲ್ಲಿ ಪಾಲ್ಗೊಂಡಿದ್ದಾರೆ. ಅವರ 300 ರ‍್ಯಾಲಿಗಳಲ್ಲಿ ದ್ವಿಚಕ್ರ ವಾಹನಗಳು ಮತ್ತು ಕಾರುಗಳು ಸೇರಿವೆ. ಎಲ್ಲ ಮಾದರಿಗಳಲ್ಲೂ ಅವರು ಸ್ಪರ್ಧಿಸಿದ್ದಾರೆ.

ಗೌರವ್ ಗಿಲ್ ಚಾಂಪಿಯನ್: ಬ್ರೇಕ್ ಫೇಲ್ ಒಳಗೊಂಡಂತೆ ಅನೇಕ ಸವಾಲುಗಳನ್ನು ಎದುರಿಸಿ ಮುನ್ನುಗ್ಗಿದ ಗೌರವ್ ಗಿಲ್ ಮತ್ತು ಸಹ ಚಾಲಕ ಮೂಸಾ ಷರೀಫ್ 'ಕರ್ನಾಟಕ 1000'ದ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ದೆಹಲಿ ಮೂಲದ ಗಿಲ್ ಅವರು ಮಹಿಂದ್ರಾ ಎಕ್ಸ್‌ಯುವಿ 300 ವಾಹನದಲ್ಲಿ ಸ್ಪರ್ಧಿಸಿದ್ದರು.

ಅಂಧರ ಕ್ರಿಕೆಟ್: ಭಾರತಕ್ಕೆ ಮಣಿದ ಬಾಂಗ್ಲಾದೇಶ

ದುಬೈ: ದೀಪಕ್ ಗಳಿಸಿದ ಅರ್ಧಶತಕದ (57 ರನ್) ಬಲದಿಂದ ಭಾರತ ಅಂಧರ ಕ್ರಿಕೆಟ್ ತಂಡವು ತ್ರಿಕೋನ ಟಿ20 ಸರಣಿಯ ಪಂದ್ಯದಲ್ಲಿ ಸೋಮವಾರ ಬಾಂಗ್ಲಾದೇಶ ತಂಡದ ವಿರುದ್ಧ ಜಯ ಗಳಿಸಿತು.

ಇಲ್ಲಿ ನಡೆಯುತ್ತಿರುವ ಸರಣಿಯ ಎರಡನೇ ಪಂದ್ಯದಲ್ಲಿ ಭಾರತ 58 ರನ್‌ಗಳಿಂದ ಬಾಂಗ್ಲಾ ತಂಡದ ಎದುರು ಗೆದ್ದಿತು.

ಮೊದಲು ಬ್ಯಾಟ್ ಮಾಡಿದ ಭಾರತ 20 ಓವರ್‌ಗಳಲ್ಲಿ ಐದು ವಿಕೆಟ್ ಕಳೆದುಕೊಂಡು 170 ರನ್ ಗಳಿಸಿತು. ಗುರಿ ಬೆನ್ನತ್ತಿದ ಬಾಂಗ್ಲಾದೇಶ ತಂಡಕ್ಕೆ ಏಳು ವಿಕೆಟ್‌ಗೆ 112 ರನ್ ಗಳಿಸಲಷ್ಟೇ ಸಾಧ್ಯವಾಯಿತು.

ರಾಷ್ಟ್ರೀಯ ಕುಸ್ತಿ: 18ರಂದು ಟ್ರಯಲ್ಸ್

ಬೆಂಗಳೂರು: 20 ಮತ್ತು 17 ವರ್ಷದೊಳಗಿನವರ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್‌ಗೆ ರಾಜ್ಯ ತಂಡದ ಆಯ್ಕೆಯಾಗಿ ಇದೇ 18ರಂದು ಧಾರವಾಡದಲ್ಲಿ ಟ್ರಯಲ್ಸ್ ನಡೆಯಲಿದೆ.

ಫ್ರೀಸ್ಟೈಲ್, ಗ್ರೀಕೋ ರೋಮನ್, ಮಹಿಳಾ, ಬಾಲಕ ಮತ್ತು ಬಾಲಕಿಯರ ಕುಸ್ತಿ ವಿಭಾಗಗಳಿಗೆ ಆಯ್ಕೆ ಟ್ರಯಲ್ಸ್ ನಡೆಯಲಿದೆ. 20 ವರ್ಷದೊಳಗಿನವರ ರಾಷ್ಟ್ರೀಯ ಚಾಂಪಿಯನ್‌ಷಿಪ್ ಪಟ್ನಾದಲ್ಲಿ ಇದೇ 29ರಿಂದ 31ರವರೆಗೆ ನಡೆಯಲಿದ್ದರೆ, 17 ವರ್ಷದೊಳಗಿನವರ ಚಾಂಪಿಯನ್‌ಷಿಪ್ ಏಪ್ರಿಲ್ 15ರಿಂದ ರಾಂಚಿಯಲ್ಲಿ ನಿಗದಿಯಾಗಿದೆ.

ಮಾಹಿತಿಗಾಗಿ ಕೋಚ್‌ಗಳಾದ ಶರಣ್‌ಗೌಡ ಬೇಲೇರಿ (ಮೊಬೈಲ್ ಸಂಖ್ಯೆ 9632052765), ಜಿನ್ನಪ್ಪ (9448590935), ಶಿವಪ್ಪ ಪಾಟೀಲ (9535314382) ಅವರನ್ನು ಸಂಪರ್ಕಿಸಲು ಕರ್ನಾಟಕ ಕುಸ್ತಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಎನ್.ಆರ್. ನರಸಿಂಹ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹ್ಯಾಂಡ್‌ಬಾಲ್: ಭಾರತಕ್ಕೆ ಚಿನ್ನ

ನವದೆಹಲಿ (ಪಿಟಿಐ: ಏಷ್ಯನ್ ಜೂನಿಯರ್ ಹ್ಯಾಂಡ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಭಾರತ ಮಹಿಳಾ ತಂಡವು ಮೊದಲ ಬಾರಿ ಚಿನ್ನದ ಪದಕ ಗೆದ್ದುಕೊಂಡಿದೆ.

ಕಜಕಸ್ತಾನದ ಅಲ್ಮಾಟಿಯಲ್ಲಿ ನಡೆದ ಈ ಕೂಟದಲ್ಲಿ ಪದಕ ಗೆಲ್ಲುವ ಮೂಲಕ ವಿಶ್ವ ಚಾಂಪಿಯನ್‌ಷಿಪ್‌ಗೆ ಅರ್ಹತೆ ಗಳಿಸಿತು. ಫೈನಲ್ ಪಂದ್ಯದಲ್ಲಿ ಭಾರತ ತಂಡವು 41–18ರಿಂದ ಥಾಯ್ಲೆಂಡ್ ತಂಡವನ್ನು ಸೋಲಿಸಿತು.

ಬಾಕ್ಸಿಂಗ್: ನಿವೇದಿತಾ ಶಹೀನ್‌ಗೆ ಚಿನ್ನ

ನವದೆಹಲಿ (ಪಿಟಿಐ): ತಮನ್ನಾ, ನಿವೇದಿತಾ ಸೇರಿದಂತೆ ಐವರು ಏಷ್ಯನ್ ಯೂತ್ ಮತ್ತು ಜೂನಿಯರ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸೋಮವಾರ ಚಿನ್ನ ಗೆದ್ದುಕೊಂಡರು.

ಜೋರ್ಡನ್‌ನ ಅಮ್ಮಾನ್‌ನಲ್ಲಿ ನಡೆಯುತ್ತಿರುವ ಸ್ಪರ್ಧೆಯ 50 ಕೆಜಿ ವಿಭಾಗದಲ್ಲಿ ತಮನ್ನಾ 3-2ರಲ್ಲಿ ಉಜ್ಬೆಕಿಸ್ತಾನದ ಸೈದಾಖೋನ್ ರಖ್ ಮೊನೊವಾ ಅವರನ್ನು ಮಣಿಸಿದರು. 48 ಕೆಜಿ ವಿಭಾಗದಲ್ಲಿ ನಿವೇದಿತಾ ಉಜ್ಬೆಕಿಸ್ತಾನದ ರಬಿಯಂಖೊನ್ ಭಕ್ತಿಯೊರೊವ ಅವರನ್ನು ಸೋಲಿಸಿದರು. 60 ಕೆಜಿ ವಿಭಾಗದಲ್ಲಿ ಶಹೀನ್, 63 ಕೆಜಿ ವಿಭಾಗದಲ್ಲಿ ರವಿನಾ ಮತ್ತು 75 ಕೆಜಿ ವಿಭಾಗದಲ್ಲಿ ಮುಸ್ಕಾನ್ ಚಿನ್ನ ಗೆದ್ದುಕೊಂಡರು.

ಐಎಸ್‌ಎಲ್: ಸೆಮಿಫೈನಲ್ 2ನೇ ಲೆಗ್ ಪಂದ್ಯ ಇಂದು

ವಾಸ್ಕೊ, ಗೋವಾ: ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯ ಮೊದಲ ಸೆಮಿಫೈನಲ್‌ನ ಎರಡನೇ ಲೆಗ್ ಪಂದ್ಯ ಇಲ್ಲಿನ ತಿಲಕ್ ಮೈದಾನದಲ್ಲಿ ಮಂಗಳವಾರ ನಡೆಯಲಿದೆ. ಕೇರಳ ಬ್ಲಾಸ್ಟರ್ಸ್ ಮತ್ತು ಜೆಮ್ಷೆಡ್‌ಪುರ್ ಎಫ್‌ಸಿ ತಂಡಗಳು ಮುಖಾಮುಖಿಯಾಗಲಿವೆ. ಕೇರಳ ಡ್ರಾ ಸಾಧಿಸಿದರೂ ಆ ತಂಡದ ಫೈನಲ್ ಹಾದಿ ಸುಗಮವಾಗಲಿದೆ. ಜೆಮ್ಷೆಡ್‌ಪುರ್ ಎಫ್‌ಸಿಗೆ ಜಯ ಅನಿವಾರ್ಯ.

ಪಂದ್ಯ ಆರಂಭ: ರಾತ್ರಿ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್